ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿವಾಹ ಮಹೋತ್ಸವ

ಹಿರಿಯ ನಟಿ, ರಾಜಕಾರಣಿ ಜಯಮಾಲಾ ಅವರ ಪುತ್ರಿ ಸೌಂದರ್ಯ ಮತ್ತು ರುಷಭ್ ವಿವಾಹವು ಬೆಂಗಳೂರಿನ ಅರಮನೆ ಆವರಣದಲ್ಲಿ ಶುಕ್ರವಾರ ಅದ್ಧೂರಿಯಾಗಿ ನೆರವೇರಿತು.

ಸೊಂಪಾದ ಪುಟಗಳು

ಉಕ್ರೇನ್ ನೊಂದಿಗೆ ಟ್ರಂಪ್ ಹೊಸ ಡೀಲ್

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

ಬೇಸಿಗೆಯಲ್ಲಿ ಮಜ್ಜಿಗೆ ಕುಡಿಯುವ ಅಭ್ಯಾಸವಿದೆಯಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ

ದಾರಿದೀಪೋಕ್ತಿ

ಗಾಯ, ಅವಮಾನ, ವಿಷಾದದ ಬಗ್ಗೆಯೇ ಹೆಚ್ಚು ಯೋಚಿಸಿದರೆ, ನೀವು ಇನ್ನಷ್ಟು ನೋವನ್ನು, ಸಂಕಟವನ್ನು ಅನುಭವಿಸುತ್ತೀರಿ. ಅದೇ ನೀವು ಆ ಗಾಯ, ಅವಮಾನ, ವಿಷಾದಗಳಿಂದ ಕಲಿತ ಪಾಠದ ಬಗ್ಗೆ ಯೋಚಿಸಿದರೆ, ಖಂಡಿತವಾಗಿಯೂ ಬೆಳೆಯುತ್ತೀರಿ, ಮಾಗುತ್ತೀರಿ.

ವಕ್ರತುಂಡೋಕ್ತಿ

ನೀವು ಕೇಕನ್ನು ಕತ್ತರಿಸದೇ, ಇಡಿಯಾಗಿ ತಿಂದರೆ, ಒಂದು ಪೀಸ್ ತಿಂದ ಹಾಗೆ.

ಹಾಲಿ, ಮಾಜಿ ಸಿಎಂಗೆ ರಿಲೀಫ್

ಸಿದ್ದರಾಮಯ್ಯ ವಿರುದ್ಧ ಸಿಬಿಐ ತನಿಖೆಗೆ ಕೋರಿದ್ದ ಅರ್ಜಿ ವಜಾ

ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ ರದ್ದುಗೊಳಿಸಲು ನಕಾರ

ಬೆಂಗಳೂರು/ಧಾರವಾಡ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬ ಸದಸ್ಯರ ವಿರುದ್ಧದ ಮುಡಾ ನಿವೇಶನ ಅಕ್ರಮ ಹಂಚಿಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಗೊಳಿಸಿದೆ.

ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ತಕರಾರು ಅರ್ಜಿ ವಿಚಾರಣೆ ಜನವರಿ 27ರಂದು ಪೂರ್ಣಗೊಳಿಸಿ, ಕಾಯ್ದಿರಿಸಿರುವ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಶುಕ್ರವಾರ ಪ್ರಕಟಿಸಿದೆ. ಈ ಆದೇಶದಿಂದಾಗಿ ಸಿಬಿಐ ತನಿಖೆಯಿಂದ ಸಿದ್ದರಾಮಯ್ಯ ಪಾರಾಗಿದ್ದು ಕಾನೂನು ಹೋರಾಟದಿಂದ ನಿರಾಳವಾಗಿದ್ದಾರೆ.

ಲೋಕಾಯುಕ್ತ ಸಂಸ್ಥೆಯ ಈವರೆಗಿನ ತನಿಖಾ ವರದಿ ಪರಿಶೀಲಿಸಿದರೆ ಪಕ್ಷಪಾತದಿಂದ ತನಿಖೆ ನಡೆದಿದೆ ಮತ್ತು ಕಳಪೆಯಿಂದ ಕೂಡಿದೆ ಎಂದು ತೋರುವುದಿಲ್ಲ. ಹೀಗಾಗಿ ಪ್ರಕರಣದ ಮರು ತನಿಖೆ, ಮುಂದುವರಿದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯ ಕಂಡು ಬಂದಿಲ್ಲ. ಬಾಹ್ಯ ಶಕ್ತಿಗಳಿಂದ ಲೋಕಾಯುಕ್ತ ಸಂಸ್ಥೆಯು ಪ್ರಭಾವಕ್ಕೆ ತುತ್ತಾಗುವ ಸಾಧ್ಯತೆಯ ಬಗ್ಗೆ ಈಗಾಗಲೇ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ತಮ್ಮ ತೀರ್ಪುಗಳಲ್ಲಿ ಹೇಳಿವೆ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಅರ್ಜಿ ವಜಾ ಮಾಡಲಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

ಪ್ರಕರಣದ ಹಿನ್ನೆಲೆ: ಸಿಎಂ ಪತ್ನಿಗೆ ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3 ಎಕರೆ 16 ಗುಂಟೆ ಜಮೀನಿನ ಬದಲಿಗೆ ಸುಮಾರು 56 ಕೋಟಿ ರು. ಮೌಲ್ಯದ 14 ನಿವೇಶನ ಅಕ್ರಮವಾಗಿ ನೀಡಲಾಗಿದೆ. ಇದರಲ್ಲಿ ಸಿಎಂ ಸಿದ್ದರಾಮಯ್ಯ ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದು, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ್ದ ಸ್ನೇಹಮಯಿ ಕೃಷ್ಣ ಸೇರಿದಂತೆ ಮೂವರು ಸಾಮಾಜಿಕ ಕಾರ್ಯಕರ್ತರು, ತನಿಖೆ/ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಕೋರಿ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪರಿಶೀಲನೆ ನಡೆಸಿದ್ದ ರಾಜ್ಯಪಾಲರು ಆ.17ರಂದು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಆದೇಶಿಸಿದ್ದರು.

→ 4

ನಾವು ಕೂಡ ಇದನ್ನು ನಿರೀಕ್ಷೆ ಮಾಡಿದ್ದೆವು. ಸಿಬಿಐಗೆ ಕೊಡುವ ಅಂಶ ಇಲ್ಲ ಅಂತ ಲೋಕಾಯುಕ್ತದ ಮೇಲೆ ವಿಶ್ವಾಸವಿಟ್ಟು ಕೋರ್ಟ್ ಆದೇಶಿಸಿದೆ. ಲೋಕಾಯುಕ್ತ ವರದಿ ಸರಿಯಲ್ಲ ಅಂತ ಹೇಳಲು ಬರಲ್ಲ. ಅದಕ್ಕಾಗಿ ಪೀಠ ಈ ಆದೇಶ ನೀಡಿದೆ. ಇ.ಡಿ ತನಿಖೆ ಬಗ್ಗೆ ಮುಂದೆ ನೋಡೋಣ. ಹೈಕೋರ್ಟ್, ಸುಪ್ರೀಂಕೋರ್ಟ್ ತೀರ್ಪುಗಳು ನ್ಯಾಯಯುತವಾಗಿರುತ್ತವೆ.

– **ಡಾ.ಜಿ.ಪರಮೇಶ್ವರ್** ಗೃಹ ಸಚಿವ



ಮುಡಾ ಹಾಗೂ ಸಿದ್ದರಾಮಯ್ಯ ವಿಚಾರದಲ್ಲಿ ಹೈಕೋರ್ಟ್‌ನಲ್ಲಿ ನಮಗೆ ಹಿನ್ನಡೆಯಾಗಿದೆ. ಹಾಗಂತ ನನ್ನ ಹೋರಾಟ ನಿಲ್ಲಿಸುವುದಿಲ್ಲ. ಕಾನೂನು ಪ್ರಕಾರ ನನ್ನ ಹೋರಾಟ ಮುಂದುವರಿಯಲಿದೆ.

– **ಸ್ನೇಹಮಯಿ ಕೃಷ್ಣ**, ದೂರುದಾರ

ಬಿಎಸ್‌ವೈಗೆ ನಿರೀಕ್ಷಣಾ ಜಾಮೀನು ಮಂಜೂರು

ಪೋಕ್ಸೊ ಕಾಯ್ದೆಯಡಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ಹೈಕೋರ್ಟ್, ಅಪರಾಧವನ್ನು ಪರಿಗಣಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದೆ.

ನನ್ನ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ, ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯ ಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿದರು.

ಇದೇ ವೇಳೆ ನ್ಯಾಯಪೀಠವು ಯಡಿಯೂರಪ್ಪನವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಸಂಜ್ಞೇಯ ಅಪರಾಧವನ್ನು ಪರಿಗಣಿಸಿ ಸಕ್ಷಮ ನ್ಯಾಯಾಲಯ ನೀಡಿರುವ ಆದೇಶವನ್ನು ಯಡಿಯೂರಪ್ಪ ಅವರಿಗೆ ಸೀಮಿತಗೊಳಿಸಿ ವಜಾ ಮಾಡಲಾಗಿದೆ. ಅಪರಾಧ, ತನಿಖೆ, ಅಂತಿಮ ವರದಿ ಎಲ್ಲವೂ ಹಾಗೆಯೇ ಉಳಿಯಲಿವೆ. ಯಡಿಯೂರಪ್ಪ ಅವರಿಗೆ ಸದ್ಯಕ್ಕೆ ಬಂಧನದ ಭೀತಿ ಇಲ್ಲವಾದರೂ ವಿಚಾರಣಾ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮುಂದುವರಿಯಲಿದೆ.

ಫೆ.12ರಿಂದ ಅಮೆರಿಕಕ್ಕೆ ಮೋದಿ ಭೇಟಿ

ನವದೆಹಲಿ: ಭಾರತದ ಅಕ್ರಮ ವಲಸಿಗರಿಗೆ ಕೈಕೋಳ ಹಾಕಿ ಅಮೆರಿಕ ಅಪಮಾನ ಮಾಡಿದ ಪ್ರಕರಣದಲ್ಲಿ ರಾಜಕೀಯ ವಿವಾದ ಭುಗಿಲೆದ್ದಿರುವ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿ 12ರಿಂದ ಎರಡು ದಿನ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು ಭೇಟಿ ಮಾಡಲಿದ್ದಾರೆ ಎಂದು ವಿದೇಶಾಂಗ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಶುಕ್ರವಾರ ತಿಳಿಸಿದ್ದಾರೆ.

ಆರ್‌ಬಿಐ ಶುಭ ಸುದ್ದಿ: ರೆಪೋ ದರ 0.25 ಕಡಿತ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಗೃಹಸಾಲ ಗ್ರಾಹಕರಿಗೆ ಶುಭ ಸುದ್ದಿ ನೀಡಿದ್ದಾರೆ. ರೆಪೋ ದರ ಶೇ.6.50 ರಿಂದ 6.25ಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಇದರಿಂದಾಗಿ ಗೃಹಸಾಲ ಪಾವತಿದಾರರಿಗೆ ಅನುಕೂಲವಾಗಲಿದೆ. ಮಂದಗತಿಯ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ಹಾಗೂ ಹಣದುಬ್ಬರವನ್ನು ನಿಯಂತ್ರಣದಲ್ಲಿಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಹಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿದ ರಾಜ್ಯಪಾಲರು | ಸ್ಪಷ್ಟನೆಗೆ ಸಜ್ಜಾದ ಸರಕಾರ

ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಕಡತ ಸರಕಾರಕ್ಕೆ ವಾಪಸ್

ಬೆಂಗಳೂರು: ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಅಂಕುಶ ಹಾಕುವ ಸುಗ್ರೀವಾಜ್ಞೆಗೆ ಅಂಕಿತ ಹಾಕದೇ ಹೆಚ್ಚಿನ ಸ್ಪಷ್ಟನೆ ಕೋರಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸರಕಾರಕ್ಕೆ ವಾಪಸ್ ಕಳುಹಿಸಿದ್ದಾರೆ. ಈ ಸಂಬಂಧ ಸರಕಾರ ಶೀಘ್ರವೇ ಸ್ಪಷ್ಟನೆ ನೀಡಲಿದೆ ಎನ್ನಲಾಗಿದೆ. ಕರ್ನಾಟಕ ಮೈಕ್ರೋ ಫೈನಾನ್ಸ್ (ಬಲವಂತ ಕ್ರಮಗಳ ನಿಯಂತ್ರಣ) ಸುಗ್ರೀವಾಜ್ಞೆ-2025 ಕರಡನ್ನು ಕಳೆದ ವಾರ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿ ಕೊಡಲಾಗಿತ್ತು. ಇದೀಗ ರಾಜ್ಯಪಾಲ ಗೆಹ್ಲೋಟ್ ಅವರು ಕರಡು ಸುಗ್ರೀವಾಜ್ಞೆ ಸಂಬಂಧ ಹಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿ ವಾಪಸ್ ಕಳುಹಿಸಿದ್ದಾರೆ.

ರಾಜ್ಯಪಾಲರು ಕೇಳಿದ ಸ್ಪಷ್ಟನೆ ಏನು?: ಸುಗ್ರೀವಾಜ್ಞೆಯಲ್ಲಿ ಸಾಲಗಾರರನ್ನು ಎಲ್ಲ ಸಾಲ ಹಾಗೂ ಬಡ್ಡಿ ಮೊತ್ತದಿಂದ ಮುಕ್ತಗೊಳಿಸುವ ಅಂಶ ಸೇರಿಸಲಾಗಿದೆ. ಜತೆಗೆ, ಸಿವಿಲ್ ಕೋರ್ಟ್‌ಗಳು ಸಾಲಗಾರರ ವಿರುದ್ಧ ಸಾಲ ವಸೂಲಾತಿ ಸಂಬಂಧ ಯಾವುದೇ ವ್ಯಾಜ್ಯಗಳನ್ನು ಕೈಗೆತ್ತಿಕೊಳ್ಳಬಾರದು ಎಂಬ ಅಂಶ ಪ್ರಸ್ತಾಪಿಸಲಾಗಿದೆ.

→ 4

ಸಾಲದಾತನ ಮೇಲೂ ಪರಿಣಾಮ

ಈ ಸುಗ್ರೀವಾಜ್ಞೆ ಯಾವ ರೀತಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಉಪಟಳವನ್ನು ನಿಯಂತ್ರಿಸಲು ಅನುಕೂಲಕರವಾಗಲಿದೆ ಎಂಬ ಬಗ್ಗೆ ಸ್ಪಷ್ಟೀಕರಣ, ಅಂಕಿ ಅಂಶ, ಕಾನೂನು ಸಲಹೆಗಳನ್ನು ಕಡತದಲ್ಲಿ ಲಗತ್ತಿಸಿಲ್ಲ. ಮುಖ್ಯವಾಗಿ ಈ ಸುಗ್ರೀವಾಜ್ಞೆ ಸಾಲಗಾರರಿಗೆ ಅನುಕೂಲ ಮಾಡಿಕೊಡಲಿದೆ. ಆದರೆ ಸಮಾಜದ ಭಾಗವಾದ ಸಾಲದಾತನ ಮೇಲೂ ಪರಿಣಾಮ ಬೀರಲಿದೆ. ಹೀಗಾಗಿ ಈ ಅಂಶಗಳನ್ನು ವಿಧಾನಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸುವ ಅಗತ್ಯ ಇದೆ ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಬಜೆಟ್ ಅಧಿವೇಶನ ಮುಂದಿನ ತಿಂಗಳಿನಿಂದ ಆರಂಭವಾಗಲಿದ್ದು, ತರಾತುರಿಯಲ್ಲಿ ಸುಗ್ರೀವಾಜ್ಞೆ ಜಾರಿಗೆ ತರುವ ಬದಲು, ಅಧಿವೇಶನದಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಿ, ಸಂತ್ರಸ್ತರ ಹಿತರಕ್ಷಣೆಗಾಗಿ ಪರಿಣಾಮಕಾರಿ ಕಾನೂನು ತರುವುದು ಒಳಿತು. ಹೀಗಾಗಿ ಕೋರಲಾದ ಸ್ಪಷ್ಟನೆ, ವಿವರಣೆ, ಸಲಹೆಯೊಂದಿಗೆ ಕಡತ ಮರುಸಲ್ಲಿಕೆ ಮಾಡುವಂತೆ ರಾಜ್ಯಪಾಲರು ಸೂಚನೆ ನೀಡಿ, ಸುಗ್ರೀವಾಜ್ಞೆ ಹಿಂದಿರುಗಿಸಿದ್ದಾರೆ.



ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಬಾಪೂಜಿ ಸೇವಾಕೇಂದ್ರ
ನಿಮ್ಮ ಅನುಕೂಲವೇ, ನಮ್ಮ ಆದ್ಯತೆ.

ಪ್ರಕಟಣೆ

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಇಲಾಖೆ ನಿಯಮಗಳು – 2021
(ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ನೀವಿನ್ನು ನಿಮ್ಮ ಆಸ್ತಿ ತೆರಿಗೆಯನ್ನು ಪಾವತಿಸಿಲ್ಲವೇ?

ಚಿಂತೆ ಬಿಡಿ..

ಇಂದೇ ಆಸ್ತಿ ತೆರಿಗೆ ಪಾವತಿಸಿ

- ಗ್ರಾಮ ಪಂಚಾಯಿತಿ ಆಸ್ತಿ ತೆರಿಗೆಯನ್ನು ಏಕ ಕಾಲಕ್ಕೆ ಪಾವತಿಸಿ
- **ಶೇ. 5 ರಷ್ಟು** ತೆರಿಗೆ ವಿನಾಯಿತಿ ಪಡೆಯಿರಿ!!

ಆರ್ಥಿಕ ವರ್ಷದ ಪ್ರಾರಂಭದ ಮೂರು ತಿಂಗಳ (ಏಪ್ರಿಲ್ ನಿಂದ ಜೂನ್ ಅಂತ್ಯ) ಒಳಗಾಗಿ ಪ್ರಸಕ್ತ ವರ್ಷದ ಸಂಪೂರ್ಣ ತೆರಿಗೆ ಪಾವತಿಸಿ, ವಿನಾಯಿತಿ ಪಡೆಯಿರಿ.

ತೆರಿಗೆ ತಪ್ಪಿದಲ್ಲಿ ದಂಡ !!
ತೆರಿಗೆ ಮತ್ತು ದರವನ್ನು ಸಂದಾಯ ಮಾಡಲು ಬದ್ಧನಾದ ವ್ಯಕ್ತಿಯು, ಪ್ರತಿ ವರ್ಷ ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಪಾವತಿಸದಿದ್ದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಶೇ. 5ರಷ್ಟು ದಂಡವನ್ನು ನೀಡತಕ್ಕದ್ದು.

2024-25 ಮತ್ತು ಹಿಂದಿನ ಸಾಲುಗಳ ತೆರಿಗೆಯನ್ನು **ದಿನಾಂಕ: 31.03.2025** ರೊಳಗೆ ಪಾವತಿಸಿ

ಆಸ್ತಿ ತೆರಿಗೆ ಪಾವತಿಸು ವ ಸುಲಭ ಮಾರ್ಗಗಳು

ಗ್ರಾಮ ಪಂಚಾಯಿತಿಯ ಬಾಪೂಜಿ ಸೇವಾ ಕೇಂದ್ರ **bsk.karnataka.gov.in** / BSK ಮೊಬೈಲ್ App / BHIM App, Google Pay ಮತ್ತು Paytm / ಗ್ರಾಮಪಂಚಾಯತಿಗಳಲ್ಲಿ POS ಯಂತ್ರಗಳ ಮೂಲಕವೂ ಆಸ್ತಿ ತೆರಿಗೆ ಪಾವತಿಸಬಹುದು.

BHIM Google Pay PhonePe Paytm

ಇಂದೇ ನಿಮ್ಮ ಆಸ್ತಿ ತೆರಿಗೆಯನ್ನು ಪಾವತಿಸಿ, ನಿಶ್ಚಿಂತರಾಗಿರಿ

ತಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪಿ.2 ತಂತ್ರಾಂಶದಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿಕೊಳ್ಳಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

→ 4

Leading with legacy, Growing with purpose

Aadhar Housing Finance Ltd
GHAR BANEGA, TOH DESH BANEGA.



STATEMENT OF CONSOLIDATED FINANCIAL RESULTS FOR THE QUARTER AND NINE MONTHS ENDED DECEMBER 31, 2024

(Rs. in lakhs)

Sr. No.	PARTICULARS	For the quarter ended December 31, 2024	For the quarter ended December 31, 2023	For the nine months ended December 31, 2024	For the year ended March 31, 2024
		Unaudited	Unaudited	Unaudited	Audited
1	Total Revenue from Operations	79,761	67,305	2,27,502	2,58,681
2	Net Profit / (Loss) for the period (before Tax, Exceptional and/or Extraordinary items)	30,768	26,056	85,735	95,959
3	Net Profit / (Loss) for the period before tax (after Exceptional and/or Extraordinary items)	30,768	26,056	85,735	95,959
4	Net Profit / (Loss) for the period after tax (after Exceptional and/or Extraordinary items)	23,934	20,427	66,699	74,964
5	Total Comprehensive Income for the period [Comprising Profit/ (Loss) for the period (after tax) and Other Comprehensive Income (after tax)]	23,934	20,477	66,699	75,006
6	Paid up Equity Share Capital	43,068	39,476	43,068	39,476
7	Reserves (excluding Revaluation Reserve)	5,68,356	3,85,440	5,68,356	4,05,499
8	Securities Premium Account	2,29,591	1,33,700	2,29,591	1,33,700
9	Net worth	6,11,418	4,24,910	6,11,418	4,44,969
10	Paid up Debt Capital/ Outstanding Debt	15,13,437	13,12,759	15,13,437	13,95,962
11	Outstanding Redeemable Preference Shares	NA	NA	NA	NA
12	Debt Equity Ratio	2.48	3.09	2.48	3.14
13	Earnings Per Share (not annualised for quarter and nine months ended periods)				
	1. Basic:	5.56	5.17	15.75	18.99
	2. Diluted:	5.42	5.01	15.29	18.35
14	Capital Redemption Reserve	NA	NA	NA	NA
15	Debenture Redemption Reserve	16,910	16,910	16,910	16,910
16	Total Debts to Total Assets (%)	69.79%	73.45%	69.79%	73.64%
17	Net profit Margin (%)	30.01%	30.35%	29.32%	28.98%
18	GNPA (%)	1.42%	1.44%	1.42%	1.10%
19	NNPA (%)	0.92%	0.91%	0.92%	0.65%
20	Provision Coverage Ratio (%)	35.55%	36.97%	35.55%	41.27%
21	Capital Adequacy Ratio (CRAR) (%)	46.06%	39.73%	46.06%	38.46%

Notes:

a) The above is an extract of the detailed format of quarterly results filed with the Stock Exchanges under Regulation 33 and 52 of the Listing Regulations. The full format of the quarterly financial results are available on the websites of the Stock Exchanges www.bseindia.com and www.nseindia.com and the Aadhar Housing Finance Limited www.aadharhousing.com

b) For the other line items referred in regulation 52 (4) of the Listing Regulations, pertinent disclosures have been made to the Stock Exchange BSE Limited and can be accessed on www.bseindia.com

c) Debt service coverage ratio, Interest service coverage ratio, Current ratio, Long term debt to working capital ratio, Bad debts to account receivable ratio, Current liability ratio, Debtors turnover, Inventory turnover and Operating margin (%) are not applicable.

d) Key standalone financial information :

Sr. No.	PARTICULARS	For the quarter ended December 31, 2024	For the quarter ended December 31, 2023	For the nine months ended December 31, 2024	For the year ended March 31, 2024
1	Total Revenue from Operations	78,510	65,854	2,23,270	2,52,353
2	Profit before tax & exceptional items	30,759	26,043	85,733	95,923
3	Profit before tax	30,759	26,043	85,733	95,923
4	Profit after tax	23,923	20,344	66,687	74,851

e) Previous period / year figures have been regrouped / re-classified wherever necessary in line with the financial results for the quarter and nine months ended December 31, 2024.

For and on behalf of the Board of Directors of Aadhar Housing Finance Limited

Place : Mumbai
Date : February 06, 2025

Scan QR Code for the complete financial result

Sd/-
Rishi Anand
Managing Director & CEO
DIN 02303503

OR visit: https://aadharhousing.com/disclosures-under-regulation-62-of-the-sebi-lodr-regulation-2015-pdf/financial-results

Aadhar Housing Finance Ltd., CIN: L66010KA1990PLC011409, **Registered Office:** No. 3, JVT Towers, 8th 'A' Main Road, Sampangiramanagar, Near Hudson Circle, Bengaluru- 560 027 | **Corporate Office:** Unit No. 802, Natraj Rustomjee, Western Express Highway and M.V.Road, Andheri (East), Mumbai – 400069 | Tel. No.: 022 4168 9900 | Fax: 022 4168 9934 | **Customer Care Toll Free:** 1800 3004 2020 | **E-mail:** customercare@aadharhousing.com | **Website:** www.aadharhousing.com

ನೃತ್ಯ ಸಮರ್ಪಣೆ: ಕು. ಮೇಘನಾ

ಕು. ಮೇಘನಾ ವರದರಾಜು ಶಾಸ್ತ್ರೀಯ ನೃತ್ಯದಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ್ದು, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ವಿಶ್ವವಿಖ್ಯಾತ ನೃತ್ಯಪಟುಗಳಾದ ಶ್ರೀಮತಿ ನಿರುಪಮಾ ರಾಜೇಂದ್ರ ಮತ್ತು ಟಿ.ಡಿ.ರಾಜೇಂದ್ರ ಗುರುದ್ವಯರ ಗರಡಿಯಲ್ಲಿ ಭರತನಾಟ್ಯ ಮತ್ತು ಕಥಕ್ ನೃತ್ಯಗಳ ತರಬೇತಿ ಪಡೆದಿದ್ದಾರೆ.

ಗುರುಗಳಾದ ಶ್ರೀಮತಿ ನಿರುಪಮಾ ಅವರ ಆಚಾರ್ಯತ್ವದಲ್ಲಿ ಪದ್ಮಭೂಷಣ ಡಾ॥ ಪದ್ಮಾ ಸುಬ್ರಹ್ಮಣ್ಯಂ ಆಯೋಜಿಸಿದ್ದ ನಾಟ್ಯಶಾಸ್ತ್ರದ ವಿಶೇಷ ನಡೆಗಳ ಸುಧಾರಿತ ತರಬೇತಿಯ 108 ಕರಣಗಳ ಕಮ್ಮಟದಲ್ಲಿ ಪಾಲ್ಗೊಂಡಿದ್ದಾರೆ. ಅವರು ಅಭಿನವ ಡಾನ್ಸ್ ಕಂಪನಿಯಿಂದ ಆಯೋಜಿತವಾಗಿದ್ದ ಹಲವಾರು ಕಮ್ಮಟಗಳಲ್ಲಿ ಭಾಗವಹಿಸಿ, ಹೆಸರಾಂತ ಗುರುಗಳಾದ ಪದ್ಮಭೂಷಣ ಕುಮುದಿನಿ ಲಾಖಿಯ, ನಾಹಿದ್ ಸಿದ್ದಿಕಿ ಮತ್ತು ಸುಭಾಷ್ ಚಂದ್ರ ಅವರಿಂದ ಕಥಕ್ ನೃತ್ಯದ ಉನ್ನತ ಹಂತದ ಕಲಾಪ್ರಾಕಾರಗಳನ್ನು ಅಭ್ಯಸಿಸಿದ್ದಾರೆ.

ಅವರು ಅಭಿನವ ಡಾಬ್ಸ್ ಕಂಪನಿಯಲ್ಲಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸುತ್ತಿದ್ದು, ಹಲವಾರು ಯುವ ಕಥಕ್ ಅಭ್ಯಾಸಿಗಳನ್ನು ತರಬೇತಿಗೊಳಿಸುತ್ತಿದ್ದಾರೆ.

ಮೇಘನಾ ಯುವಿಸಿಇ ಯಿಂದ ಕಂಪ್ಯೂಟರ್ ಸೈನ್ಸ್ ಪದವಿ ಮತ್ತು ಆರ್ ವಿ ಕಾಲೇಜ್ ಆಫ್ ಇಂಜಿನೀರಿಂಗ್‌ನಿಂದ ಇನ್‌ಫಾರ್ಮೇಷನ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಪ್ರಸ್ತುತ ಡೆಲ್ ಟೆಕ್ನಾಲಜೀಸ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಫೆಬ್ರವರಿ 9, 2025ರಂದು ಬೆಂಗಳೂರಿನ ಜೆಎಸ್‌ಎಸ್ ಸಭಾಂಗಣದಲ್ಲಿ ಕು. ಮೇಘನಾ ಕಥಕ್ ಏಕವ್ಯಕ್ತಿ ಪ್ರದರ್ಶನವನ್ನು ಪ್ರಸ್ತುತಿಗೊಳಿಸುತ್ತಿದ್ದಾರೆ.

ಬೆಂಗಳೂರಲ್ಲಿ ಪತ್ತೆಯಾಗಿದ್ದ ಶವ ಕೇರಳದ ಕುಖ್ಯಾತ ಕಳ್ಳನದ್ದು!

ಬೆಂಗಳೂರು: ಕೋಣನಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಿಷ್ಠಿತ ದಿನಸಿ ಮಳಿಗೆಯೊಂದರ ನೆಲಮಹಡಿಯಲ್ಲಿ ಕಳೆದ ವರ್ಷ ಡಿಸೆಂಬರ್ 24ರಂದು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಅಪರಿಚಿತ ಶವ ಕುರಿತಂತೆ ತನಿಖೆ ನಡೆಸಿದ ಪೊಲೀಸರು ಅದು ಕುಖ್ಯಾತ ಕಳ್ಳನ ಮೃತದೇಹ ಎಂಬುದನ್ನು ಪತ್ತೆ ಹಚ್ಚಿದ್ದಾರೆ.

ಹತ್ಯೆಯಾದ ರೀತಿ ಪತ್ತೆಯಾಗಿದ್ದ ಶವ ಕೇರಳದ ಖದೀಮ ಕಳ್ಳ ವಿಷ್ಣು ಪ್ರಶಾಂತ್ ಎಂಬಾತನದ್ದು ಎಂದು ಗುರುತಿಸಲಾಗಿದೆ. ಈತನ ಹಿನ್ನೆಲೆ ಕೆದಕಿದಾಗ ಆತ ಕೇರಳ, ತಮಿಳುನಾಡಿನಲ್ಲಿ 30ಕ್ಕೂ ಹೆಚ್ಚು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ಕೋಣನಕುಂಟೆ ಪೊಲೀಸರು ಕಂಡುಕೊಂಡಿದ್ದಾರೆ.

ಕೈ ಮೇಲಿದ್ದ ಟ್ಯಾಟು ನೀಡಿದ ಸುಳಿವು: ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಕೇರಳ ಪೊಲೀಸರಿಂದ ವಿಷ್ಣು ಬಂಧಿತನಾಗಿದ್ದ. ಒಂದು ವರ್ಷ ಜೈಲಿನಲ್ಲಿದ್ದು ಬಳಿಕ ಜಾಮೀನಿನ ಮೇರೆಗೆ ಹೊರ ಬಂದು ಕಳ್ಳತನ ಕಾಯಕ ಮುಂದುವರೆಸಿದ್ದ. ಬಂಧನ ಭೀತಿಯಿಂದ ಕೇರಳದಿಂದ ಬೆಂಗಳೂರಿಗೆ ಬಂದು ತಲೆಮರೆಸಿಕೊಂಡಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಳೆದ ವರ್ಷ ಡಿ.24ರಂದು ಕೋಣನಕುಂಟೆ ಕ್ರಾಸ್ ಬಳಿಯ ಬ್ರ್ಯಾಂಡ್ ಫ್ಯಾಷನ್ ಮಳಿಗೆಯ ನೆಲಮಹಡಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದ. ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿದಾಗ ಮೃತನ ಜೇಬಿನಲ್ಲಿ ಕದ್ದ ಮೊಬೈಲ್ ಪತ್ತೆಯಾಗಿತ್ತು. ಅಸಲಿ ಮಾಲೀಕರಿಗೆ ಫೋನ್ ಮಾಡಿದಾಗ ಮೊಬೈಲ್ ಕಳ್ಳತನವಾಗಿರುವ ಬಗ್ಗೆ ಹೇಳಿದ್ದರು. ಮೃತನ ಕೈಮೇಲಿದ್ದ ಟ್ಯಾಟು ಹಾಗೂ ಮೃತನ ಭಾವಚಿತ್ರ ಸಮೇತ ಕೇರಳ ಪೊಲೀಸರಿಗೆ ಕಳುಹಿಸಿದಾಗ ಕುಖ್ಯಾತ ಖದೀಮನೆಂಬುದು ಗೊತ್ತಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಎಟಿಎಂಗೆ ಹಣ ತುಂಬಿಸುವ ಸಿಬ್ಬಂದಿಯಿಂದಲೇ ಕಳ್ಳತನ

ಬೆಂಗಳೂರು: ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಟಿಎಂಗಳಿಗೆ ಹಣ ಹಾಕುವ ಸಿಬ್ಬಂದಿಯೇ ಕಳ್ಳತನಕ್ಕಿಳಿದ ಘಟನೆ ಬೆಳಕಿಗೆ ಬಂದಿದೆ. ಎಟಿಎಂ ಹಣ ಕಳ್ಳತನ ಪ್ರಕರಣ ಸಂಬಂಧ ಆರು ಮಂದಿ ಆರೋಪಿಗಳನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶಿವು, ಸಮೀರ್, ಮನೋಹರ್, ಗಿರೀಶ್, ಜಗ್ಗೇಶ್, ಜಸ್ವಂತ್ ಬಂಧಿತರು. ಇವರಿಂದ 51.76 ಲಕ್ಷ ನಗದು ಹಾಗೂ 90 ಲಕ್ಷ ಮೌಲ್ಯದ ಮೂರು ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ.

ಜ.25ರಂದು ಕೆಂಪೇಗೌಡ ಬಡಾವಣೆ ಬಳಿ ಈ ಆರು ಆರೋಪಿಗಳು ಹಣಕಾಸಿನ ವಿಚಾರವಾಗಿ ಗಲಾಟೆ ಮಾಡಿಕೊಳ್ಳುತ್ತಿದ್ದರು. ಮಾಹಿತಿ ಆಧರಿಸಿ ಸ್ಥಳಕ್ಕೆ ದೌಡಾಯಿಸಿ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ. ಸದ್ಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳೆಲ್ಲರೂ ನಂದಿನಿ ಲೇಔಟ್ ಹಾಗೂ ಲಗ್ಗೆರೆ ಸುತ್ತಮುತ್ತಲಿನ ನಿವಾಸಿಗಳಾಗಿದ್ದು, ಸೆಕ್ಯೂರ್ ವ್ಯಾಲಿ ಪ್ರೈವೇಟ್ ಏಜೆನ್ಸಿಯಲ್ಲಿ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಎಟಿಎಂಗಳಿಗೆ ಹಣ ತುಂಬಿಸುವ ಹಾಗೂ ಎಟಿಎಂ ದುರಸ್ತಿ ಕೆಲಸ ಮಾಡುತ್ತಿದ್ದರು. ಎಟಿಎಂ ರಿಪೇರಿ ಮಾಡುವಾಗ ಪಾಸ್‌ವರ್ಡ್ ಪಡೆದು, ಎಟಿಎಂನಲ್ಲಿದ್ದ ಹಣ ಕಳ್ಳತನ ಮಾಡಿ ಮೋಜು-ಮಸ್ತಿ ಮಾಡುತ್ತಿದ್ದರು. ಎಟಿಎಂಗಳ ಆಡಿಟ್ ಮಾಡುವಾಗ ಕಳವು ಮಾಡಿದ್ದ ಹಣ ಹೊಂದಿಸಲು ಮತ್ತೊಂದು ಎಟಿಎಂನಲ್ಲಿ ಹಣ ಕದಿಯುವ ಪ್ರವೃತ್ತಿ ರೂಢಿಸಿಕೊಂಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

51.76 ಲಕ್ಷ ರು. ವಶಕ್ಕೆ

ನಗರದ ವಿವಿಧ ಎಟಿಎಂಗಳಿಂದ 43.76 ಲಕ್ಷ ಹಣ ಎಗರಿಸಿದ್ದ ಆರೋಪಿಗಳು, ಕೆಂಪೇಗೌಡ ಲೇಔಟ್ ಬಳಿ ಹಣ ಹಂಚಿಕೆ ವಿಷಯದಲ್ಲಿ ಭಿನ್ನಾಭಿಪ್ರಾಯ ಮೂಡಿ ಪರಸ್ಪರ ಗಲಾಟೆ ಮಾಡಿಕೊಂಡಿದ್ದರು. ಈ ಸಂಬಂಧ ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಮಹಾಲಕ್ಷ್ಮಿ ಲೇಔಟ್ ಪೊಲೀಸರು ಪ್ರಶ್ನಿಸಿದಾಗ ಅನುಮಾನಾಸ್ಪದವಾಗಿ ಆರೋಪಿಗಳು ವರ್ತಿಸಿದ್ದರು. ಅನುಮಾನಗೊಂಡು ಪರಿಶೀಲಿಸಿದಾಗ ಕಾರಿನಲ್ಲಿ 43.76 ಲಕ್ಷ ಪತ್ತೆಯಾಗಿದೆ. ಕೂಡಲೇ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಕೃತ್ಯ ಬೆಳಕಿಗೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಆರೋಪಿಗಳು ಆರಂಭದಲ್ಲಿ ಹಣ ಕದ್ದು ಮೋಜು-ಮಸ್ತಿ ಮಾಡುತ್ತಿದ್ದರು. ಬಳಿಕ ಕದ್ದ ಹಣ ಹೆಚ್ಚಾದಂತೆ ಮನೆಯವರ ಹೆಸರಿನಲ್ಲಿ ಕಾರು ಖರೀದಿಸಿದ್ದರು. ಆರೋಪಿಗಳ ಪೈಕಿ ಓರ್ವ ಆರೋಪಿ ಮನೆಯಲ್ಲಿ 8 ಲಕ್ಷ ಬಚ್ಚಿಟ್ಟಿದ್ದ. ಸದ್ಯ ಮೂರು ಕಾರು ಹಾಗೂ 51.76 ಲಕ್ಷ ರು. ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೈಲಿನಲ್ಲಿ ಸಿಕ್ತು 500ರ ಗರಿಗರಿ ನಕಲಿ ನೋಟು

ಬೆಂಗಳೂರು: ನಕಲಿ ನೋಟು ಚಲಾವಣೆ ಮಾಡುತ್ತಿದ್ದ ಆರೋಪದಡಿ ಮೂವರನ್ನು ಆಡುಗೋಡಿ ಠಾಣೆ ಪೊಲೀಸರು ಸೆರೆ ಹಿಡಿದಿದ್ದಾರೆ. ಪಶ್ಚಿಮ ಬಂಗಾಳದ ಸುಮನ್ ಹಾಗೂ ಗುಲಾಲ್ ಸೇರಿದಂತೆ ಮತ್ತೊಬ್ಬನನ್ನು ಬಂಧಿಸಲಾಗಿದೆ. ಆಡುಗೋಡಿ ಠಾಣಾ ವ್ಯಾಪ್ತಿಯಲ್ಲಿ ಗಾರೆ ಕೆಲಸ ಮಾಡುತ್ತಿದ್ದ ಸುಮನ್ ಹಾಗೂ ಗುಲಾಲ್ ಎಂಬವರಿಗೆ ಜನವರಿ 28 ರಂದು ಪಶ್ಚಿಮ ಬಂಗಾಳದಿಂದ ಬೆಂಗಳೂರಿಗೆ ರೈಲಿನಲ್ಲಿ ಬರುತ್ತಿದ್ದಾಗ ಒಂದೂವರೆ ಲಕ್ಷ ರು. ಮೊತ್ತದ 500 ಮುಖಬೆಲೆಯ ನೋಟುಗಳು ಸಿಕ್ಕಿವೆ. ಈ ಹಣ ಕಂಡು ಖುಷಿಯಾಗಿದ್ದರು. ನಗರಕ್ಕೆ ಬಂದು ಹಣವನ್ನು ಊರಿಗೆ ಕಳುಹಿಸಲು ಮುಂದಾಗಿದ್ದರು.

KAVVERI DEFENCE & WIRELESS TECHNOLOGIES LIMITED
(Formerly Kavveri Telecom Products Limited)
CIN: L85110KA1996PLC019627
Regd. Office: Plot No 31-36, I Main, II Stage, Arekere Mico Layout, Bannerghatta Road, Bangalore - 560076
Tel: 080-41215999, Fax: 080-41215966
Email: companysecretary@kavveritelecoms.com
Website: www.kavveritelecoms.com

NOTICE TO MEMBERS OF 2nd EXTRA-ORDINARY GENERAL MEETING AND E-VOTING INFORMATION

NOTICE is hereby given to the Shareholders (the **"Shareholders" or the "Members"**) of Kavveri Defence & Wireless Technologies Limited (**"Company"**) (Formerly Kavveri Telecom Products Limited) that an Extra-Ordinary General Meeting (**"EGM"**) of the Company will be held on Friday, February 28, 2025 at 10.00 A.M. at the registered office of the company at No. 31-36, I Main, II Stage, Arekere MICO Layout, Bannerghatta Road, Bangalore 560 076. Electronic copy of the Notice of the Extra Ordinary General Meeting (EGM) along with Attendance Slip and Proxy Form were been sent to all the members whose email address is registered with the Company or with their respective Depository Participants ("Depository") and the Company's Registrar and Transfer Agent, Integrated Registry Management Services Private Limited at irg@integratedindia.in., in accordance with the MCA Circulars and the SEBI Circulars. Notice of EGM available on the website of the Company i.e., https://www.kavveritelecoms.com and the website of BSE Limited and NSE i.e., www.bseindia.com and https://www.nseindia.com/.

Pursuant to the provisions of section 108 of the Act read with Rule 20 of the Companies (Management and Administration) Rules, 2014 and Regulation 44 of SEBI Listing Regulations, Shareholders will have an opportunity to cast their vote remotely on the business as set forth in the Notice of the EGM though electronic voting system. Additionally, the Company is providing the facility of voting through e-voting system during the EGM. The manner of voting remotely for shareholders holding shares in dematerialized mode, physical mode and for shareholders who have not registered their email addresses will be provided in the Notice to the Shareholders. All the Members are hereby informed that:

1. Cut-off date is Thursday, 20th February 2025 for determining the name of members eligible for E voting EGM.
2. E-voting shall commence on Tuesday, 25th, February 2025 (09:00 a.m.) and ends Thursday, February 27, 2025, (05:00 p.m.). During this period, Members holding shares either in physical or dematerialized form as on cut-off date i.e., Thursday, 20th February 2025 may cast their vote electronically as instructed in the Notice of EGM.
3. Members who have cast their vote by remote e-voting prior to the EGM may attend the EGM at the registered office and cast their vote again. Members who have not cast their vote by remote e-voting and are present in the EGM at the registered office, shall be eligible to vote through e-voting / physical voting at the EGM.
4. Any person who acquires shares of the Company and becomes a member of the Company after the Notice of the EGM has been sent electronically by the Company, and holds shares as on the cut-off date i.e., 20th February 2025, may contact Integrated Registry Management Services Private Limited at irg@integratedindia.in and obtain a copy of the Notice. In case of any queries, the members may visit the website of Company i.e. https://www.kavveritelecoms.com.
5. The results of the remote e-voting and e-voting at the EGM along with the report of the Scrutinizer will be placed on the website of the Company and on the website of NSE and BSE limited within two working days from the conclusion of the EGM which is to be held on 28th February, 2025 for information of the members and shall also be communicated to the Stock Exchanges.

Date: 07/02/2025
Place: Bangalore

For **Kavveri Defence & Wireless Technologies Limited**
Sd/- Chennareddy Shivakumarreddy,
Managing Director
DIN: 01189348

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಶಿವಮೊಗ್ಗ
"ಸರ್ಕಾರಿ ನೌಕರರ ಭವನ", ಡಿ.ಸಿ. ಆಫೀಸ್ ಕಾಂಪೌಂಡ್, ಶಿವಮೊಗ್ಗ-577201.
ನೋಂದಣಿ ಸಂಖ್ಯೆ : ಡಿಆರ್‌ಎಸ್/40554/2014-15 ದಿನಾಂಕ: 02-02-2015

ಸಂಘದ ಸದಸ್ಯರ ಗಮನಕ್ಕೆ

ನಮೂನೆ 12
ನಿಯಮ 14(13)
ಚುನಾವಣಾ ನೋಟೀಸು

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, "ಸರ್ಕಾರಿ ನೌಕರರ ಭವನ", ಡಿ.ಸಿ. ಆಫೀಸ್ ಕಾಂಪೌಂಡ್, ಶಿವಮೊಗ್ಗ ಇದರ ಸಾಮಾನ್ಯ ಚುನಾವಣೆಯನ್ನು ಸಂಘದ ಆಡಳಿತ ಮಂಡಳಿಗೆ ಮುಂದಿನ ಐದು ವರ್ಷಗಳ ಅವಧಿಗೆ ದಿನಾಂಕ : 23-02-2025ರ ಭಾನುವಾರದಂದು ಸಂಘದ ಕಛೇರಿ ಕಟ್ಟಡದಲ್ಲಿ ನಡೆಯುವ ಚುನಾವಣೆಯಲ್ಲಿ ಸಾಮಾನ್ಯ, ಹಿಂದುಳಿದ ವರ್ಗಗಳ ಪ್ರವರ್ಗ "ಎ" ಮತ್ತು "ಬಿ, ಮಹಿಳೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಸ್ಥಾನಗಳಿಗೆ, ಒಟ್ಟು 19 ನಿರ್ದೇಶಕರುಗಳನ್ನು ಚುನಾಯಿಸುವುದಕ್ಕಾಗಿ ನಡೆಯುವ ಚುನಾವಣಾ ನೋಟೀಸು ನಾಮಪತ್ರ ಆಹ್ವಾನಿಸಿ ಹೊರಡಿಸಿದ ಅಧಿಸೂಚನೆಯ ದಿನಾಂಕ: 07-02-2025. ಸದರಿ ಚುನಾವಣೆಯ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಇರತಕ್ಕದೆಂದು ನೋಟೀಸ್ ನೀಡಲಾಗಿದೆ.

ಚುನಾವಣಾ ವೇಳಾಪಟ್ಟಿ

ಕ್ರ. ಸಂ.	ಚುನಾವಣಾ ಕಾರ್ಯಸೂಚಿ	ದಿನಾಂಕ/ವಾರ ಮತ್ತು ಸಮಯ	ವಿವರ ಮತ್ತು ಸ್ಥಳ
01	ಉಮೇದುವಾರರು ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ	07-02-2025ರ ಶುಕ್ರವಾರ ಸಮಯ: ಬೆಳಗ್ಗೆ 11-00ರಿಂದ ಮಧ್ಯಾಹ್ನ 3-00 ಗಂಟೆಯವರೆಗೆ	ರಿಟರ್ನಿಂಗ್ ಅಧಿಕಾರಿಯವರಿಗೆ ಸಂಘದ ಕಛೇರಿಯಲ್ಲಿ
02	ಉಮೇದುವಾರರು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14-ಎ)	15-02-2025ರ ಶನಿವಾರ ಸಮಯ: ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆಯವರೆಗೆ	ರಿಟರ್ನಿಂಗ್ ಅಧಿಕಾರಿಯವರಿಗೆ ಸಂಘದ ಕಛೇರಿಯಲ್ಲಿ
03	ನಾಮಪತ್ರಗಳ ಪರಿಶೀಲನೆ ಮಾಡುವುದು.(ನಿಯಮ 14-ಬಿ)	16-02-2025ರ ಭಾನುವಾರ ಬೆಳಗ್ಗೆ 11-00 ಗಂಟೆಗೆ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯಲ್ಲಿ
04	ಅರ್ಹ ಉಮೇದುವಾರರ ಪಟ್ಟಿ ಪ್ರಕಟಿಸುವುದು. (ನಿಯಮ 14-ಬಿ (4))	16-02-2025ರ ಭಾನುವಾರ ಉಮೇದುವಾರಿಕೆ ಅರ್ಜಿ ಪರಿಶೀಲನೆ ನಂತರ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯ ಸೂಚನಾ ಫಲಕದಲ್ಲಿ
05	ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನಾಂಕ (ನಿಯಮ 14-ಸಿ)	17-02-2025ರ ಸೋಮವಾರ ಮಧ್ಯಾಹ್ನ 3-00 ಗಂಟೆಯೊಳಗೆ	ರಿಟರ್ನಿಂಗ್ ಅಧಿಕಾರಿಯವರಿಗೆ ಸಂಘದ ಕಛೇರಿಯಲ್ಲಿ ಸಲ್ಲಿಸುವುದು.
06	ಸ್ಪರ್ಧೆಯಲ್ಲಿರುವ ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸುವುದು (ನಿಯಮ 14-ಡಿ)	17-02-2025ರ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯ ಸೂಚನಾ ಫಲಕದಲ್ಲಿ
07	ಸ್ಪರ್ಧೆಯಲ್ಲಿರುವ ಅರ್ಹ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ (ನಿಯಮ 14-ಇ)	17-02-2025ರ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯ ಸೂಚನಾ ಫಲಕದಲ್ಲಿ
08	ಸ್ಪರ್ಧೆಯಲ್ಲಿರುವ ಅರ್ಹ ಅಭ್ಯರ್ಥಿಗಳ ಚಿಹ್ನೆ ಸಹಿತ ಪಟ್ಟಿ ಪ್ರಕಟಿಸುವುದು(ನಿಯಮ 14-ಇ ಮತ್ತು 14-ಎಫ್)	19-02-2025ರ ಬುಧವಾರ ಬೆಳಗ್ಗೆ 11-00 ಗಂಟೆಗೆ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯ ಸೂಚನಾ ಫಲಕದಲ್ಲಿ
09	ಚುನಾವಣೆ ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ	23-02-2025ರ ಭಾನುವಾರ ಬೆಳಗ್ಗೆ 9-00 ರಿಂದ ಸಂಜೆ 4-00 ಗಂಟೆಯವರೆಗೆ	ಸಂಘದ ಕಚೇರಿ ಕಟ್ಟಡದಲ್ಲಿ
10	ಮತಗಳ ಎಣಿಕೆ	23-02-2025ರ ಭಾನುವಾರ ಮತದಾನ ಮುಗಿದ ನಂತರ	ಸಂಘದ ಕಚೇರಿ ಕಟ್ಟಡದಲ್ಲಿ
11	ಚುನಾವಣಾ ಫಲಿತಾಂಶ ಪ್ರಕಟಣೆ	23-02-2025ರ ಭಾನುವಾರ ಮತ ಎಣಿಕೆ ಮುಗಿದ ನಂತರ	ರಿಟರ್ನಿಂಗ್ ಅಧಿಕಾರಿಗಳಿಂದ ಸಂಘದ ಕಛೇರಿಯ ಕಟ್ಟಡದಲ್ಲಿ

ದಿನಾಂಕ: 07-02-2025
ಸ್ಥಳ: ಶಿವಮೊಗ್ಗ.

ಸಹಿ/-
(ಉಮಾಮಹೇಶ್ ಕೆ.ಆರ್.)
ರಿಟರ್ನಿಂಗ್ ಅಧಿಕಾರಿ,
ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಶಿವಮೊಗ್ಗ ಹಾಗೂ ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಇವರಿಗೆ,
ಸಂಘದ ಸದಸ್ಯರು

ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯಾಲಯವನ್ನು ಸಂಪರ್ಕಿಸುವುದು.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	1. ಶ್ರೀಮತಿ ನೀಲಾಂಬರಿ ಉತ್ಕರ್ಷ್ ಶೇಲಾರ್, ಕೋಂ ಶ್ರೀ ಉತ್ಕರ್ಷ್ ಸುರೇಶ್ ಶೇಲಾರ್, 2. ಶ್ರೀ ಉತ್ಕರ್ಷ್ ಸುರೇಶ್ ಶೇಲಾರ್, ಬಿನ್ ಶ್ರೀ.ಸುರೇಶ್, ಇವರಿಬ್ಬರ ವಿಳಾಸ: 15-1-36 ಫ್ಲಾಟ್ ನಂ.201, ತಾಜ್ ಹೋಟೆಲ್ ಮಹಾರಾಣಿ ಪೇಟಾ ಹಿಂಭಾಗದ ವಿನಯಘರ್ ಗ್ರ್ಯಾಂಡ್ ಅಪಾರ್ಟ್‌ಮೆಂಟ್, ವಿಶಾಖಪಟ್ಟಣಂ, ಆಂಧ್ರಪ್ರದೇಶ-530003. ಮತ್ತೊಂದು ವಿಳಾಸ: ಶ್ರೀಮತಿ ನೀಲಾಂಬರಿ ಉತ್ಕರ್ಷ್ ಶೇಲಾರ್, ಕೋಂ ಶ್ರೀ ಉತ್ಕರ್ಷ್ ಸುರೇಶ್ ಶೇಲಾರ್, 2. ಶ್ರೀ ಉತ್ಕರ್ಷ್ ಸುರೇಶ್ ಶೇಲಾರ್, ಬಿನ್ ಶ್ರೀ.ಸುರೇಶ್, ಫ್ಲಾಟ್ ನಂ.403, 4ನೇ ಮಹಡಿ, ಸ್ಟರ್ಲಿಂಗ್ ಟೆರೇಸ್ ಅಪಾರ್ಟ್‌ಮೆಂಟ್, 6ನೇ ಕ್ರಾಸ್, ಭಾಗ್ಯನಗರ, ಬೆಳಗಾವಿ-590001.	ಸಂಪೂರ್ಣ ಆಸ್ತಿಯ ವಿವರಣೆ : ಆಸ್ತಿಯು ಶ್ರೀಮತಿ ನೀಲಾಂಬರಿ ಉತ್ಕರ್ಷ್ ಶೇಲಾರ್, ಶ್ರೀ ಉತ್ಕರ್ಷ್ ಸುರೇಶ್ ಶೇಲಾರ್ ರವರಿಗೆ ಸೇರಿದೆ. ಷೆಡ್ಯೂಲ್ ಎ ಆಸ್ತಿ: ವಿಸ್ತೀರ್ಣ 400 ಚದರ ಅಡಿ ಭೂಮಿಯ ಅವಿಭಜಿತ ಪಾಲಿನಲ್ಲಿ 842.80 ಚದರ ಮೀಟರ್ ವಿಸ್ತೀರ್ಣ ಸಿ.ಟಿ.ಎಸ್. ನಂ.3357 ರಲ್ಲಿ ಒಳಗೊಂಡಿದೆ ಮತ್ತು ಮತ್ತು ಭೂಮಿಯ ವಿಸ್ತೀರ್ಣ 323.64 ಚದರ ಮೀಟರ್ ಸಿ.ಟಿ.ಎಸ್. ನಂ.3358 ರಲ್ಲಿ ಒಳಗೊಂಡಿದೆ. ಈ ಆಸ್ತಿಯು ಭಾಗ್ಯನಗರದ ಆರನೇ ಕ್ರಾಸ್, ಅಂಗೋಲ್, ಬೆಳಗಾವಿಯಲ್ಲಿದ್ದು, ಬೆಳಗಾವಿ ನಗರ ಪಾಲಿಕೆಯ ವ್ಯಾಪ್ತಿಯಲ್ಲಿದೆ. ಮತ್ತು ಚಕ್ಕುಬಮದಿ: ಪೂರ್ವಕ್ಕೆ : ಸರ್ವಿಸ್ ಪ್ಯಾಸೇಜ್, ಪಶ್ಚಿಮಕ್ಕೆ : 50 ಅಡಿ ಅಗಲದ ರಸ್ತೆ, ಉತ್ತರಕ್ಕೆ : 30 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ : ಸೆಟ್ ಬ್ಯಾಕ್ ಮತ್ತು ಸಿ.ಟಿ.ಎಸ್. ನಂ.3359. ಷೆಡ್ಯೂಲ್ ಬಿ ಆಸ್ತಿ: ವಸತಿ ಫ್ಲಾಟ್ ಸಂಖ್ಯೆ.403, ವಿಸ್ತೀರ್ಣ 2010 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ ಹೊಂದಿದ್ದು, ಈ ಆಸ್ತಿಯು ಸ್ಟರ್ಲಿಂಗ್ ಟೆರೇಸಸ್ ಅಪಾರ್ಟ್‌ಮೆಂಟ್ ಕಟ್ಟಡದ ನಾಲ್ಕನೇ ಮಹಡಿಯಲ್ಲಿದ್ದು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ಸಂಖ್ಯೆ 402, ಪಶ್ಚಿಮಕ್ಕೆ: ಫ್ಲಾಟ್ ಸಂಖ್ಯೆ 404, ಉತ್ತರಕ್ಕೆ: ಲಾಬಿ ಮತ್ತು ಲಿಫ್ಟ್, ದಕ್ಷಿಣಕ್ಕೆ: ಸೆಟ್ ಬ್ಯಾಕ್ ಏರಿಯಾ. ಯಾವುದೇ ಮಾಹಿತಿಗಾಗಿ ಶ್ರೀ ರಘುನಾಥ್ : 9886960484 ರವರನ್ನು ಸಂಪರ್ಕಿಸಿ.	21.11.2024 ಎನ್‌ಪಿಎ ದಿನಾಂಕ 10.10.2017	Loan No. POWER HOME A/c No. PHR013801340277 Rs.50,00,000/- ಒಟ್ಟು ಮೊತ್ತ ರೂ.1,10,63,452/- ದಿನಾಂಕ: 05.11.2024 ರಂದು ಇದ್ದಂತೆ
2	1. ಮೆ॥ ಪ್ರಶಾಂತ್ ಟ್ರೇಡರ್ಸ್ ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ.ಗಂಗಾದರಸ್ವಾಮಿ ಬಿಕ್ಷಾವತಿಮಠ ಮತ್ತು ಶ್ರೀಮತಿ.ಸುಧಾ ಬಿಕ್ಷವತಿಮಠ. ಸಿಟಿಎಸ್ ನಂ.1647, 5 ಕಾಟನ್ ಮಾರ್ಕೆಟ್ ರಸ್ತೆ, ಗದಗ ಕರ್ನಾಟಕ, ಬಿಂಕದಕಟ್ಟಿ, ಗದಗ-582103. 2. ಶ್ರೀ.ಗಂಗಾದರಸ್ವಾಮಿ ಬಿಕ್ಷಾವತಿಮಠ ಬಿನ್ ಶ್ರೀ.ಬಂಗಯ್ಯ, 3. ಶ್ರೀಮತಿ ಸುಧಾ ಬಿಕ್ಷಾವತಿಮಠ ಕೋಂ ಶ್ರೀ ಗಂಗಾದರಸ್ವಾಮಿ ಬಿಕ್ಷಾವತಿಮಠ ಇವರಿಬ್ಬರ ವಿಳಾಸ: ನಂ.3881/37, ಹೊಸ. ಸಿಡಿಒ ಜೈ. ಶಾಲೆ. ರಸ್ತೆ, ಎನ್‌ಆರ್ ಈಶ್ವರ ದೇವಸ್ಥಾನ, ಗದಗ-582101.	ಆಸ್ತಿಯು 1. ಶ್ರೀ ಗಂಗಾಧರಸ್ವಾಮಿ ಬಿಕ್ಷಾವಟಿಮಠ ಬಿನ್ ಶ್ರೀ ಬಂಗಯ್ಯ ಮತ್ತು 2. ಶ್ರೀಮತಿ ಸುಧಾ ಬಿಕ್ಷಾವಟಿಮಠ ಕೋಂ ಶ್ರೀ ಗಂಗಾಧರಸ್ವಾಮಿ ಬಿಕ್ಷಾವಟಿಮಠ ರವರಿಗೆ ಸೇರಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಸತಿ ಆಸ್ತಿಯ 1) ಸಿ.ಟಿ.ಎಸ್ ಸಂಖ್ಯೆ: 3881/37 ವಿಸ್ತೀರ್ಣ 122-05 ಚದರ ಮೀಟರ್. 2) ಸಿ.ಟಿ.ಎಸ್ ಸಂಖ್ಯೆ: 3881/36 ವಿಸ್ತೀರ್ಣ 122.50 ಚದರ ಮೀಟರ್ ಈ ಆಸ್ತಿಯು ಗದಗ ನಗರ, ತಾಲ್ಲೂಕು & ಜಿಲ್ಲೆ: ಗದಗನಲ್ಲಿದೆ. ಷೆಡ್ಯೂಲ್ ಆಸ್ತಿಯ ಚಕ್ಕುಬಮದಿ: (1) ಸಿ.ಟಿ.ಎಸ್ ಸಂಖ್ಯೆ: 3881/37, ಪೂರ್ವಕ್ಕೆ: ಸಿ.ಟಿ.ಎಸ್ ಸಂಖ್ಯೆ: 3881/35, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ: 9 ಮೀಟರ್ ರಸ್ತೆ, ದಕ್ಷಿಣಕ್ಕೆ: ಸಿ.ಟಿ.ಎಸ್ ಸಂಖ್ಯೆ: 3881/36. (2) ಸಿ.ಟಿ.ಎಸ್ ಸಂಖ್ಯೆ: 3881/36: ಪೂರ್ವಕ್ಕೆ : ಪ್ಲಾಟ್ ಸಂಖ್ಯೆ.35, ಪಶ್ಚಿಮಕ್ಕೆ : 9 ಮೀಟರ್ ರಸ್ತೆ, ಉತ್ತರಕ್ಕೆ : ಪ್ಲಾಟ್ ಸಂಖ್ಯೆ: 37, ದಕ್ಷಿಣಕ್ಕೆ : ಪ್ಲಾಟ್ ಸಂಖ್ಯೆ: 38. ಯಾವುದೇ ಮಾಹಿತಿಗಾಗಿ ಶ್ರೀ ಪ್ರಕಾಶ್ ಕೊಲ್ಹಾರ್ ಕಲೆಕ್ಷನ್ ಮ್ಯಾನೇಜರ್: 9986316545 ರವರನ್ನು ಸಂಪರ್ಕಿಸಿ.	21.11.2024 ಎನ್‌ಪಿಎ ದಿನಾಂಕ 29.10.2024	Loan No. SBB Overdraft BRE A/c No. 922030011199502 Rs.1,60,00,000/- ಒಟ್ಟು ಮೊತ್ತ ರೂ.1,59,82,312/- ದಿನಾಂಕ: 13.11.2024 ರಂದು ಇದ್ದಂತೆ
3	1. ಶ್ರೀ ಜೂಲಿಯಸ್ ಲಾರೆನ್ಸ್ ಲೆವಿಸ್ ಬಿನ್ ಶ್ರೀ. ಜೋಸೆಫ್ ಜಾನ್ ಲೆವಿಸ್, ವಿಲ್ಲಾ ನಂ.142, ಜೋನ್ಸ್ ಕ್ಯಾಸಿಯಾ ಫರಾನ್ಸೆ ಮುಖ್ಯ ರಸ್ತೆ, ಒಟ್ಟಿಯಂಬಾಕ್ಕಂ ಸಿರುಸೇರಿ, ಕಾಂಚೀಪುರಂ, ಚೆನ್ನೈ-600130. 2. ಶ್ರೀಮತಿ ಪ್ರಮೀಳಾ ಶಾಂತಿ ಫೆರ್ನಾಂಡಿಸ್ ಕೋಂ. ಶ್ರೀ ಜೂಲಿಯಸ್ ಲಾರೆನ್ಸ್ ಲೂಯಿಸ್ 1-86 ಎ, ಕಟ್ಟತ್ತಾರ ಹೌಸ್ ಪೆರ್ನೆ, ಬಂಟ್ವಾಳ, ಬ್ಯಾಂಕ್ ಆಫ್ ಬರೋಡಾ, ಮಂಗಳೂರು-574325. ಮತ್ತೊಂದು ವಿಳಾಸ: ಶ್ರೀ ಜೂಲಿಯಸ್ ಲಾರೆನ್ಸ್ ಲೂಯಿಸ್ ಬಿನ್ ಶ್ರೀ ಜೋಸೆಫ್ ಜಾನ್ ಲೂಯಿಸ್, ಶ್ರೀಮತಿ ಪ್ರಮೀಳಾ ಶಾಂತಿ ಫೆರ್ನಾಂಡಿಸ್ ಕೋಂ. ಶ್ರೀ ಜೂಲಿಯಸ್ ಲಾರೆನ್ಸ್ ಲೂಯಿಸ್ ಸರ್ವೆ ನಂ.60/21 ಪೆರ್ನೆ ಗ್ರಾಮ ಬಂಟ್ವಾಳ ಮಂಗಳೂರು, ದಕ್ಷಿಣ, ಕನ್ನಡ-574325.	ಆಸ್ತಿಯ ವಿವರಣೆ : ಥಾಮರ್ಸ್ ಪ್ರಮೀಳಾ ಶಾಂತಿ ಫೆರ್ನಾಂಡಿಸ್ ರವರಿಗೆ ಸೇರಿದ ಆಸ್ತಿ ಬಲಭಾಗದಲ್ಲಿ ಹೊಂದಿರುವ ಕೃಷಿಯೇತರ ಸ್ಥಿರ ಆಸ್ತಿಯು ಪೆರ್ನೆ ಬಂಟ್ವಾಳ ತಾಲ್ಲೂಕಿನ ಪೆರ್ನೆ ಗ್ರಾಮ, ವಿಟ್ಲ ಹೋಬಳಿ, ಪೆರ್ನೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ನೋಂದಣಿ ಉಪಜಿಲ್ಲೆಯ ವ್ಯಾಪ್ತಿಯಲ್ಲಿದೆ ಮತ್ತು ಇವುಗಳನ್ನು ಒಳಗೊಂಡಿದೆ: (PID No. 151100203400 120685) ಸರ್ವೆ ನಂ.60/21 [ಹಿಂದಿನ ಕ್ರಮ ಸಂಖ್ಯೆ.60/10], ಕಿಸ್ಸಾಮ್: ಪರಿವರ್ತಿತ, ವಿಸ್ತೀರ್ಣ ಎ-ಸಿ: 0-17 (687.96 ಚದರ ಮೀಟರ್), 4160 ಚದರ ಅಡಿ 17 ಸೆಂಟ್ಸ್, ಬಿಲ್ಡಪ್ ಪ್ರದೇಶ: ಜೊತೆಗೆ ಎಲ್ಲಾ ಇತರ ರಸ್ತೆ ಮತ್ತು ನೀರು ಇತ್ಯಾದಿಗಳ ಹಕ್ಕುಗಳೊಂದಿಗೆ, ಚಕ್ಕುಬಂದಿ: ಉತ್ತರಕ್ಕೆ: ಅದೇ ಸರ್ವೆ ನಂ./ಬ್ಲಾಕ್ ನಂ.1 ರ ಉಳಿದ ಭಾಗ, ದಕ್ಷಿಣಕ್ಕೆ: ಸರ್ವೆ ನಂ./ಬ್ಲಾಕ್ ನಂ.111 ರ ಉಳಿದ ಭಾಗ, ಪೂರ್ವಕ್ಕೆ: ಸರ್ವೆ ನಂ.60/20 & 60/10 ಮತ್ತು ಸಮೀಪ ರಸ್ತೆಯಲ್ಲಿರುವ ಆಸ್ತಿ. ಪಶ್ಚಿಮಕ್ಕೆ: ಸರ್ವೆ ಲೈನ್/ ಸರ್ವೆ ನಂ.60/9. ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ : ಮೊಬೈಲ್ ನಂ. 620703,999 ರವರನ್ನು ಸಂಪರ್ಕಿಸಿ.	10.01.2025 ಎನ್‌ಪಿಎ ದಿನಾಂಕ 08.01.2025	Loan No. POWER HOME BRE A/c No. PHR007708311698 Loan Amount Disbursed Rs.30,00,000/- ಒಟ್ಟು ಮೊತ್ತ ರೂ.21,37,197/- ದಿನಾಂಕ: 10.01.2025 ರಂದು ಇದ್ದಂತೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 06.02.2025

ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

PUBLIC NOTICE

My Client, **SMT. RATHNAMMA,** W/o Sheshappa, No.222, Janatha Colony, Muttanalluru, Sarjapura, Bangalore-560 099 is creating equitable mortgage by Deposit of Title Deeds in favour of REPCO HOME FINANCE LIMITED, Banashankari Branch, Bangalore, as security for the loan to be availed by her, in respect of the Schedule Property. If anybody has any claims, rights, title, interest, demand, or any objection, in the Schedule Property, may be sent to my following address within 7 days from today.

SCHEDULE PROPERTY

All that piece and parcel of the property bearing Southern Portion of Site No.157 and Northern Portion of Site No.158, Khatha No.157/10 and 158/10, new BBMP Khatha No.420, formed in Sy.No.10 measuring 1 Acre 07 Guntas duly converted for non- agricultural residential purposes vide conversion order bearing No.ALN(KH-3)SR17/2014-15 dated 15-06-2018, issued by Deputy Commissioner, Bangalore District, Bangalore, situated Varahaasandra Village, Kengeri Hobli, Bangalore South Taluk, presently property comes under the limits of Bruhat Bangalore Mahanagara Palike, PID No.10/157&158, Ward No.198-Hemmigepura, measuring East to West 30-0 feet and North to South 20-0 feet, in all measuring 600 Sq. feet, and bounded on East by Road, West by Site No.155 and 156, North by Remaining Northern Portion of Site No.157 and South by Remaining Southern Portion of Site No.158.

B. SUBRAYA KHARVI, ADVOCATE,
No: 231, 11th Main, 37th cross, 4th T Block, Jayanagar, Bangalore-41.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ.46/2025

ಅರ್ಜಿದಾರರು: 1. ಮಹದೇವಮ್ಮ ಕೋಂ ಲೇಟ್। ರುದ್ರಪ್ಪ.ಎಸ್ ಸುಮಾರು 60 ವರ್ಷ 2. ಪ್ರೇಮ ಬಿನ್ ಲೇಟ್। ರುದ್ರಪ್ಪ.ಎಸ್ ಸುಮಾರು 32 ವರ್ಷ ಅರ್ಜಿದಾರ 1 ಮತ್ತು 2ರವರ ವಾಸ: ನಂ-21/ಬಿ, ಲಕ್ಕನದೊಡ್ಡಿ ಗ್ರಾಮ, ಮಾಯಾಗಾನಹಳ್ಳಿ ಅಂಚೆ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು. 3. ನೀಲಮ್ಮ.ಎಸ್ [illegible]

...

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ
ವಾದಿ ಪರ ವಕೀಲರು.
ಆರ್.ಶಿವಕುಮಾರ್, ಮೋಹನ್.ಎಂ.ಆರ್
ವಕೀಲರು, ರಾಮನಗರ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ.43/2025

ಅರ್ಜಿದಾರರು: 1.ರತ್ನಮ್ಮ ಕೋಂ ಲೇಟ್. ನಾಗರಾಜು @ ನಾಗರಾಜಯ್ಯ ಸುಮಾರು 70 ವರ್ಷ 2. ವೀರಭದ್ರಯ್ಯ ಬಿನ್ ಲೇಟ್. ನಾಗರಾಜು @ ನಾಗರಾಜಯ್ಯ ಸುಮಾರು 38 ವರ್ಷ 3. ಪಾರ್ವತಮ್ಮ ಕೋಂ. ಲೇಟ್ ಮಹದೇವಯ್ಯ ಸುಮಾರು 65 ವರ್ಷ 4. [illegible]

...

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ)ರಾಮನಗರ
ವಾದಿ ಪರ ವಕೀಲರು.
ಆರ್.ಶಿವಕುಮಾರ್, ಮೋಹನ್.ಎಂ.ಆರ್
ವಕೀಲರು, ರಾಮನಗರ

KAVVERI DEFENCE & WIRELESS TECHNOLOGIES LIMITED
(Formerly Kavveri Telecom Products Limited)
Regd. Office: Plot No 31-36, I Main, II Stage, Arekere Mico Layout, Bannerghatta Road, Bangalore - 560076
Tel: 080-41215999, Website: www.kavveritelecoms.com
Email: companysecretary@kavveritelecoms.com CIN: L85110KA1996PLC019627

EXTRACT OF UNAUDITED FINANCIAL RESULTS FOR THE QUARTER ENDED DECEMBER 31, 2024 (Rs. In Lakhs)

PARTICULARS	STANDALONE				CONSOLIDATED			
	Quarter ended 31.12.2024 (Unaudited)	Quarter ended 30.09.2024 (Unaudited)	Corresponding 3 months in the previous quarter ended on 31.12.2023 (Unaudited)	Year to date figures for year ended 31.03.2024 (Audited)	Quarter ended 31.12.2024 (Unaudited)	Quarter ended 30.09.2024 (Unaudited)	Corresponding 3 months in the previous quarter ended on 31.12.2023 (Unaudited)	Year to date figures for year ended 31.03.2024 (Audited)
Total income from operations	677.01	-	-	-	701.45	129.81	73.57	158.57
Net Profit / (Loss) for the period (before finance cost tax, exceptional and/ extraordinary Items)	224.27	(15.54)	(4.72)	(41.45)	233.45	53.06	(24.22)	(84.55)
Net Profit / (Loss) for the period before tax (after finance cost, Exceptional and/or Extraordinary items)	212.20	(20.42)	(9.54)	(85.73)	221.38	48.16	(30.03)	(134.30)
Net Profit / (Loss) for the period after tax (after Exceptional and/or Extraordinary items)	212.20	(20.42)	(9.54)	(84.92)	221.38	48.16	(30.03)	(133.50)
Total Comprehensive Income for the period [Comprising profit/ (loss) for the period (after tax) and Other Comprehensive Income (after tax)	212.20	(20.42)	(9.54)	(84.92)	221.38	48.16	(30.03)	(133.50)
Paid up Equity Share Capital (Face Value- Rs.10 per share)	2012.426	2012.426	2012.426	2012.426	2012.426	2012.426	2012.426	2012.426
Earnings Per Share Basic:	1.05	(0.10)	(0.05)	(0.42)	1.10	0.24	(0.15)	(0.66)
Diluted:	1.05	(0.10)	(0.05)	(0.42)	1.10	0.24	(0.15)	(0.66)

Notes: 1) The above results have been reviewed by the Audit Committee. The Board of Directors at its meeting held on February 05, 2025 approved the above results.
Note: The above is an extract of the detailed format of Quarterly Financial Results filed with the Stock Exchange under Regulation 33 of the SEBI (Listing and Other Disclosure Requirements) Regulations, 2015. The full format of the Quarterly and Yearly Financial Results is available on the Stock Exchange website.

Date: 07.02.2025
Place: Bengaluru

For KAVVERI DEFENCE & WIRELESS TECHNOLOGIES LIMITED
Sd/- Chennareddy Shivakumarreddy, Managing Director, DIN: 01189348

ಸಾರ್ವಜನಿಕ ಪ್ರಕಟಣೆ

[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ.38/2025

[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ.39/2025

[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ. 42/2025

[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ. 41/2025

[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಮನಗರ
ಸಿ.ಮಿಸ್ ನಂ.40/2025

[illegible]

CHANGE OF NAME

I, RAMACHANDRA Pare, (DOB 01.06.1965), S/o Late Muttappa Pare, R/at Village Babalad, Taluk Indi, District Vijayapura 586209 state that in Military documents my name is wrongly entered as Ramachandra instead of Ramachandra Pare vide affidavitdtd 06.02.25 sworn before Notary C.V.Earappa, Bangalore

CHANGE OF NAME

I, MAHADEVI Ramachandra Pare, (DOB 01.01.1970), W/o Ramachandra Pare, R/at Village Babalad, Taluk Indi, District Vijayapura 586209 state that in Military documents my name is wrongly entered as Mahadevi instead of Mahadevi Ramachandra Pare vide affidavit dtd 06.02.25 sworn before Notary C.V.Earappa, BANGALORE

PUBLIC NOTICE

Public are informed that our client **Mrs.Nisha Harlalka wife of Mr.Kamal Kumar Harlalka,** being the absolute owner of residential **Site bearing No. 1466,** Panchayath Khata No. 404/1466 formed in Nos.15 and 24/1, in the layout Known as **"MAHAVEER PALATIUM",** measuring East - 30 Ft, West - 30 Ft, North - 40 Ft & South - 40 Ft totally measuring 1200 Sq Ft, situated at **Giddenahalli Village and Mahanthalingapura Village, Jigani Hobli, Anekal Taluk, Bangalore Urban District,** and bounded on the;

East by : Road
West by : Plot No. 1510
North by : Plot No. 1465
South by : Plot No. 1467

states that the Original Sale Deed dated 25. 01.2016 executed by **M/s.Reddy Structures Private Limited,** in favour of **Mrs.Nisha Harlalka wife of Mr.Kamal Kumar Harlalka,** registered as Document No.CMP-1-08711-2015-16, stored in CD No.CMPD152 of Book-I before the Office of the Sub-Registrar Chamarajapete, Bangalore, has been lost/ misplaced and has not been mortgaged/ pledged as collateral security and is not in a position to trace the said original document. My client has had also lodged a Complaint **on 21.01.2025, bearing E-Lost Report No. 1439372/2025,** before the Bangalore City Police regards the aforesaid loss.

Any person/s in possession of the aforesaid document may return the same to us or anyone having any sort of claim over the said Property may lodge their objections in writing within 10 **days** from this day to the undersigned.

K. V. Narendra & Associates, Advocates,
No.557, 2nd Floor, 9th A Main, Indiranagar, Bangalore-560038.
Ph: 95910 67392.

ದೇಶ, ವಿದೇಶಗಳಿಂದ ಗಣ್ಯರ ಆಗಮನ | ಕಾಮಗಾರಿ ಶೀಘ್ರ ಮುಗಿಸಿ: ತುಷಾರ್

ಏರ್ ಶೋ, ಇನ್ವೆಸ್ಟ್ ಕರ್ನಾಟಕ ಸಮಾವೇಶಕ್ಕೆ ಸಿದ್ಧತೆ

ಬೆಂಗಳೂರು: ಏರ್ ಶೋ 2025 ಹಾಗೂ ಜಾಗತಿಕ ಹೂಡಿಕೆ ದಾರರ ಸಮಾ ವೇಶಕ್ಕಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾಡಿಕೊಂಡಿರುವ ಸಿದ್ಧತೆಗಳ ಕುರಿತು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಫೆ.10 ರಿಂದ 14 ರವರೆಗೆ ಏರ್ ಶೋ 2025 ಹಾಗೂ ಫೆ.11ರಿಂದ 14ರ ವರೆಗೆ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ದೇಶ ಹಾಗೂ ವಿದೇಶಗಳಿಂದ ಗಣ್ಯರು, ಹೂಡಿಕೆದಾರರು ಆಗಮಿಸುತ್ತಿದ್ದಾರೆ. ಅದಕ್ಕಾಗಿ ಪಾಲಿಕೆ ವತಿ ಯಿಂದ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಬೆಂಗಳೂರು ನಗರ ಆಕರ್ಷಣೀಯವಾಗಿ ಕಾಣುವ ದೃಷ್ಟಿಯಿಂದ ಆಯ್ದ ಪ್ರಮುಖ ಜಂಕ್ಷನ್ ಗಳ ಸುಂದರೀಕರಣ, ಥರ್ಮೋಪ್ಲಾಸ್ಟಿಕ್ ಲೇನ್ ಮಾರ್ಕಿಂಗ್, ಝೀರೋ ಟಾಲರೆನ್ಸ್ ವಲಯಗಳು, ಕ್ಯಾಟ್ ಐಸ್ ಅಳವಡಿಕೆ, ಅಪಾಯ ಫಲಕ ಅಳವಡಿಕೆ, ಮೀಡಿಯನ್ಸ್ ಎತ್ತರಿಸುವಿಕೆ, ಕಬ್ಬಿಣದ ಗ್ರಿಲ್‌ಗಳ ಅಳವಡಿಕೆ, ಅತ್ಯಾಧುನಿಕ ಕೋಲ್ಡ್ ಮಿಕ್ಸ್ ವಿನ್ಯಾಸಗಳ ಪೇಂಟಿಂಗ್, ಪಾದಚಾರಿ ದಾಟುವಿಕೆ ಮಾರ್ಕಿಂಗ್ ಸೇರಿದಂತೆ ಇನ್ನಿತರೆ ಕಾರ್ಯ ಕೈಗೊಳ್ಳಲಾಗಿದೆ.

ಮುಖ್ಯ ಆಯುಕ್ತರು ಹಡ್ಸನ್ ವೃತ್ತ, ಶಾಸಕರ ಭವನ ವೃತ್ತ, ಕಲ್ಪನಾ ಜಂಕ್ಷನ್, ಮೌಂಟ್ ಕಾರ್ಮಲ್ ಕಾಲೇಜು ವೃತ್ತ, ಗುಟ್ಟಹಳ್ಳಿ ಬಸ್ ನಿಲ್ದಾಣ, ಮೇಕ್ರಿ ವೃತ್ತ, ಮೇಕ್ರಿ ಬಸ್ ನಿಲ್ದಾಣ, ಜಿಕೆವಿಕೆ ಪಾರ್ಕಿಂಗ್ ಸ್ಥಳ ಹಾಗೂ ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಹಡ್ಸನ್ ವೃತ್ತದ ಬಳಿಯ ವೃತ್ತದ ಬಳಿ ಎಲ್‌ಇಡಿ ಕರ್ಬ್ ಕಾಮಗಾರಿ, ಲ್ಯಾಂಡ್ ಸ್ಕೇಪ್, ಫೌಂಟೇನ್, ಲೈಟಿಂಗ್ ಹಾಗೂ ಜಂಕ್ಷನ್ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿ ಶೀಘ್ರ ಪೂರ್ಣಗೊಳಿಸಲು ತಿಳಿಸಿದರು.

ಈ ವೇಳೆ ಅನಧಿಕೃತವಾಗಿ ಅಳವಡಿಸಿದ್ದ ಓಎಫ್‌ಸಿ ಕೇಬಲ್ ತೆರವುಗೊಳಿಸಲು ಸೂಚನೆ ನೀಡಿದರು. ರಾಜಭವನದ ಬಳಿ ಮಾರ್ಕಿಂಗ್ ಗೋಸ್ಟ್ ಐಲ್ಯಾಂಡ್ ಹಾಗು ಝೀರೋ ಟಾಲರೆನ್ಸ್ ಮಾಡಿರುವುದನ್ನು ಪರಿಶೀಲಿಸಿದರು. ಆ ಬಳಿಕ ಕಲ್ಪನಾ ಜಂಕ್ಷನ್ ಬಳಿ ಝೀರೋ ಟಾಲರೆನ್ಸ್ ಹಾಗೂ ಫೆಡೆಸ್ಟ್ರಿಯನ್ ಕ್ರಾಸಿಂಗ್ಸ್ ಮಾರ್ಕಿಂಗ್ ಪರಿಶೀಲಿಸಿದರು.

ಮೌಂಟ್ ಕಾರ್ಮೆಲ್ ಕಾಲೇಜಿನ ಬಳಿಯಿರುವ ಜಂಕ್ಷನ್ ಬಳಿ ಝೀರೋ ಟಾಲರೆನ್ಸ್ ಮಾರ್ಕಿಂಗ್, ಎಲ್‌ಇಡಿ ಕರ್ಬ್ ಪರಿಶೀಲಿಸಿದರು. ಈ ವೇಳೆ ರಸ್ತೆಯ ಸೈಡ್ ಮಾರ್ಕಿಂಗ್ ಮಾಡಲು ಸೂಚಿಸಿ ಆಳಾಗಿದ್ದ ಸ್ಲ್ಯಾಬ್ ಕೂಡಲೆ ಬದಲಾಯಿಸಲು ಸೂಚನೆ ನೀಡಿದರು. ಗುಟ್ಟಹಳ್ಳಿ ಬಸ್ ನಿಲ್ದಾಣದ ಬಳಿ ಜಟಕಾ ಸ್ಟಾಂಡ್ ಕಡೆಯಿಂದ ಬರುವ ರಸ್ತೆಗೆ ಕೂಡಲೆ ಡಾಂಬರೀಕರಣ ಮಾಡಲು ಸೂಚನೆ ನೀಡಿದರು. ಆ ಬಳಿಕ ಮೇಕ್ರಿ ಬಸ್ ನಿಲ್ದಾಣ ಬಳಿ ಸ್ವಚ್ಛತೆ ಕಾಪಾಡಲು ತಿಳಿಸಿದರು. ಅನಂತರ ಬ್ಯಾಪ್ಟಿಸ್ಟ್ ಆಸ್ಪತ್ರೆ ಮುಂಭಾಗ ಸೈಡ್ ಗ್ರಿಲ್ ಕಾಮಗಾರಿ ನಡೆಯುತ್ತಿದ್ದು, ಅದನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ ನೀಡಿದರು.

ಈ ವೇಳೆ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತ ಕರೀಗೌಡ, ಪ್ರಧಾನ ಅಭಿಯಂತರರಾದ ಪ್ರಹ್ಲಾದ್, ಬಿಎಸ್ ಡಬ್ಲ್ಯುಎಂಎಲ್ ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ್ ಕಬಾಡೆ, ಮುಖ್ಯ ಅಭಿಯಂತರರು ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದಲ್ಲಿ ಮೊದಲಬಾರಿಗೆ ಎಲ್‌ಇಡಿ ಕರ್ಬ್ಸ್ ಅಳವಡಿಕೆ

ವಾಹನ ಸಂಚಾರದ ವೇಳೆ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಆಕರ್ಷಕವಾಗಿ ಕಾಣುವ ದೃಷ್ಟಿಯಿಂದ ನಗರದಲ್ಲಿ ಇದೇ ಮೊದಲಬಾರಿಗೆ ಪೊಲೀಸ್ ವೃತ್ತ, ವಿಧಾನಸೌಧದ ಶಾಸಕರ ಭವನದ ಬಳಿಯ ವೃತ್ತ ಹಾಗೂ ಮೌಂಟ್ ಕಾರ್ಮಲ್ ಕಾಲೇಜು ಬಳಿಯ ವೃತ್ತದ ಬಳಿಕ ಎಲ್‌ಇಡಿ ಕರ್ಬ್ಸ್ ಅಳವಡಿಕೆ ಮಾಡಲಾಗುತ್ತಿದೆ.

ಅಭಿವೃದ್ಧಿಗೊಳಿಸುತ್ತಿರುವ ಜಂಕ್ಷನ್‌ಗಳ ವಿವರ

- ಪೊಲೀಸ್ ವೃತ್ತ(ಹಡ್ಸನ್ ವೃತ್ತ)
- ಮೇಕ್ ಇನ್ ಇಂಡಿಯಾ ವೃತ್ತ(ವಿಂಡ್ಸರ್ ಹೋಟೆಲ್ ಜಂಕ್ಷನ್)
- ಮೇಖ್ರಿ ವೃತ್ತ
- ಹೈಗ್ರೌಂಡ್ಸ್ ವೃತ್ತ
- ವಿಧಾನಸೌಧ ಜಂಕ್ಷನ್ (ಶಾಸಕರ ಭವನದ ಬಳಿ)
- ಸದಾಶಿವ ನಗರ ಪೊಲೀಸ್ ಠಾಣೆ ಜಂಕ್ಷನ್
- ಶಾಂಗ್ರಿಲಾ ಹೋಟೆಲ್ ಬಳಿಯ ಕಲ್ಪನಾ ಜಂಕ್ಷನ್

21 ಕೆರೆಗಳಲ್ಲಿ ಮೀನುಗಾರಿಕೆ ನಿಷೇಧ

ಬೆಂಗಳೂರು: 2025ನೇ ಸಾಲಿನ ಏರ್ ಶೋಗೆ ದಿನಗಣನೆ ಆರಂಭವಾಗಿದೆ. ಇದೇ ಫೆ.10 ರಿಂದ 14ರ ವರೆಗೆ ನಡೆಯಲಿರುವ ವೈಮಾನಿಕ ಪ್ರದರ್ಶನದಲ್ಲಿ ದೇಶಿಯ ಹಾಗೂ ವಿದೇಶಿ ವಿಮಾನಗಳು ಪ್ರದರ್ಶನಗೊಳ್ಳುತ್ತಿವೆ. ವಿಮಾನಗಳ ಸುರಕ್ಷತೆಯ ಹಿನ್ನೆಲೆ ಹಲವಾರು ಸುರಕ್ಷತಾ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ. ಅದರಂತೆ ರಾಜ್ಯ ಮೀನುಗಾರಿಕೆ ಇಲಾಖೆ ಕಳೆದ ಜ.23 ರಿಂದ ಫೆ.17ರ ವರೆಗೆ, ಬೆಂಗಳೂರು ಉತ್ತರ, ಯಲಹಂಕ ಸುತ್ತಮುತ್ತಲಿನ 21 ಕರೆಗಳಲ್ಲಿ ಮೀನುಗಾರಿಕೆ ನಿಷೇಧಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ್ ಕುಮಾರ್ ತಿಳಿಸಿದ್ದಾರೆ. ಮೀನುಗಳು ಹೊರಗೆ ಬಂದರೆ, ಪಕ್ಷಿಗಳ ಹಾರಾಟ ಹೆಚ್ಚಾಗಲಿದೆ. ಹೀಗಾಗಿ ವಿಮಾನಗಳ ಹಾರಾಟಕ್ಕೆ ತೊಂದರೆಯಾಗಲಿದೆ. ಆದ್ದರಿಂದ ಯಲಹಂಕ ವಾಯುನೆಲೆಯ ಸುತ್ತಮುತ್ತ ಹಾಗೂ ದೇವನಹಳ್ಳಿ ವ್ಯಾಪ್ತಿಗೆ ಬರುವ ಎಲ್ಲಾ ಕೆರೆಗಳಲ್ಲಿ ಮೀನು ಹಿಡುವಳಿ ಹಾಗೂ ಮಾರಾಟವನ್ನು ಸ್ಥಗಿತಗೊಳಿಸಲು ಇಲಾಖೆ ಸೂಚಿಸಿದೆ.

ಬಳ್ಳಾರಿ ರಸ್ತೆಯಲ್ಲಿ ಸರಕು ಸಾಗಣೆಗೆ ತಡೆ

ಬೆಂಗಳೂರು: ಫೆ.10ರಿಂದ 14 ರವರೆಗೆ ನಡೆಯಲಿರುವ ಏರ್ ಶೋ ಸಂಬಂಧ ಯಲಹಂಕ ವ್ಯಾಪ್ತಿಯಲ್ಲಿ ವೀಕ್ಷಣೆಗೆ ಆಗಮಿಸುವ ಗಣ್ಯರಿಗೆ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಬೆಂಗಳೂರು ನಗರ ಪೊಲೀಸರು ಹಲವು ಕ್ರಮ ಕೈಗೊಂಡಿದ್ದಾರೆ. ಬಳ್ಳಾರಿ ರಸ್ತೆಯಲ್ಲಿ ಸರಕು ಸಾಗಣೆ ವಾಹನ ಸಂಚಾರ ನಿಷೇಧಿಸಲಾಗಿದ್ದು, ಪ್ರದರ್ಶನ ನಡೆ ಯುವ ನಾಲ್ಕು ದಿನಗಳು ಏರ್‌ಪೋರ್ಟ್‌ಗೆ ಹೋಗುವ ವರು ಕೂಡ ಬಾಗಲೂರು ಮಾರ್ಗದ ರಸ್ತೆ ಉಪಯೋಗಿ ಸುವಂತೆ ನಗರ ಪೊಲೀಸ್ ಆಯುಕ್ತ ದಯಾನಂದ ಮನವಿ ಮಾಡಿದ್ದಾರೆ. ಭಾರತೀಯ ವಾಯುಪಡೆ 500 ಕ್ಕೂ ಹೆಚ್ಚು ಬಿಎಂಟಿಸಿ ಬಸ್‌ಗಳನ್ನು ಬಾಡಿಗೆಗೆ ಪಡೆದಿದೆ. ಏರ್ ಶೋ ವೀಕ್ಷಿಸಲು ಬರುವ ಸಾರ್ವಜನಿಕರು ಹೆಚ್ಚಾಗಿ ಬಿಎಂಟಿಸಿ ಬಸ್ ಬಳಸುವಂತೆ ತಿಳಿಸಲಾಗಿದೆ.

ಸ್ವಂತ ವಾಹನದಲ್ಲಿ ಬರುವವರು ಉಚಿತವಾಗಿ ಜಿಕೆವಿಕೆ ಪಾರ್ಕಿಂಗ್ ಏರ್ ಡಿಸ್‌ಪ್ಲೇ ಏರಿಯಾ, ಡೊಮೆಸ್ಟಿಕ್ ಪಾರ್ಕಿಂಗ್ ಸ್ಥಳಕ್ಕೆ ತೆರಳಲು ಹಾಗೂ ವಾಪಸ್ ಜಿಕೆವಿಕೆ ಪಾರ್ಕಿಂಗ್ ಸ್ಥಳಕ್ಕೆ ಬರಲು ಬಿಎಂಟಿಸಿ ವತಿಯಿಂದ ಉಚಿತ ಎಸಿ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ವೀಕ್ಷಣೆಗೆ ನೀಡಿರುವ ಟಿಕೆಟ್ ಮತ್ತು ಪಾಸ್‌ಗಳಿಗೆ ಕ್ಯೂ ಆರ್‌ಕ್ಯೂಡ್ ನಮೂದಿಸಲಾಗಿದ್ದು, ಅದನ್ನು ಸ್ಕ್ಯಾನ್ ಮಾಡಿ ನೋಡಿದಾಗ ತಮಗೆ ನಿಗದಿ ಪಡಿಸಿರುವ ಸ್ಥಳ ಪರಿಶೀಲಿಸಬಹುದಾಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ಮೊಣಕಾಲು ಬದಲಿ ಯಶಸ್ವಿ ಶಸ್ತ್ರಚಿಕಿತ್ಸೆ

ಬೆಂಗಳೂರು: ತೀವ್ರವಾದ ಮೊಣಕಾಲು ಸಂಧಿವಾತದಿಂದ ಬಳಲುತ್ತಿದ್ದ 40 ವರ್ಷದ ಹುಬ್ಬಳ್ಳಿ ಮೂಲದ ಮಹಿಳೆಗೆ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯಲ್ಲಿ ರೋಬೋಟ್ ನೆರವಿನ ಮೂಲಕ ಭಾಗಶಃ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಲಾಯಿತು. ಫೋರ್ಟಿಸ್ ಆಸ್ಪತ್ರೆಯ ಮೂಳೆಚಿಕಿತ್ಸಾ ವಿಭಾಗದ ಪ್ರಧಾನ ನಿರ್ದೇಶಕ ನಾರಾಯಣ್ ಹುಲ್ಸೆ ಅವರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದ್ದು, ಅದರ ಬಳಿಕವೇ ರೋಗಿ ನಡೆಯಲು ಸಶಕ್ತರಾಗಿದ್ದರು. ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ, ಚುಚ್ಚುಮದ್ದಿನ ಹೊರತಾಗಿಯೂ ರೋಗಿ 2-3 ವರ್ಷಗಳ ಕಾಲ ನೋವನ್ನು ಅನುಭವಿಸಿದ್ದರು. ಸಾಂಪ್ರದಾಯಿಕ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗೆ ಅವರ ವಯಸ್ಸಿನ ಕಾರಣದಿಂದಾಗಿ ಸೂಕ್ತವಲ್ಲ ಎಂದು ಪರಿಗಣಿಸಲಾಗಿತ್ತು. ಫೋರ್ಟಿಸ್ ಆಸ್ಪತ್ರೆಯ ಪ್ರಧಾನ ನಿರ್ದೇಶಕ ನಾರಾಯಣ್ ಹುಲ್ಸೆ ಅವರು ರೋಗಿಯ ಸಂಪೂರ್ಣ ಮೌಲ್ಯಮಾಪನ ಮಾಡಿದ ಬಳಿಕ ರೋಬೋಟ್ ನೆರವಿನಿಂದ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿದರು, ಈ ವಿಧಾನವನ್ನುಮೊಣಕಾಲಿನ ಹಾನಿಗೊಳಗಾದ ಭಾಗವನ್ನು ಮಾತ್ರ ಬದಲಾಯಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಲೈಂಗಿಕ ಕಿರುಕುಳ: ಸೆರೆ

ಬೆಂಗಳೂರು: ಕಾನೂನು ಕಾಲೇಜು ವಿದ್ಯಾರ್ಥಿನಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮೂವರು ವಿದ್ಯಾರ್ಥಿಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸಂತ್ರಸ್ತೆ ದೂರು ಆಧರಿಸಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ರಿಶವ್, ವೆಂಕಟರೆಡ್ಡಿ, ಸೌರವ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ಎರಡು ದಿನದ ಹಿಂದೆ ಠಾಣಾ ವ್ಯಾಪ್ತಿಯಲ್ಲಿರುವ, ಪೇಯಿಂಗ್ ಗೆಸ್ಟ್‌ನಲ್ಲಿ ಸ್ನೇಹಿತರು ಪಾರ್ಟಿ ಮಾಡಿದ್ದಾರೆ. ಈ ವೇಳೆ ವಿದ್ಯಾರ್ಥಿನಿಗೆ ಪಾನೀಯದಲ್ಲಿ ಮತ್ತು ಬರಿಸುವ ಪುಡಿ ಸೇರಿಸಿ ಕೊಟ್ಟಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಭಾನುವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ 66/11ಕೆ.ವಿ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕೆಲಸ ನಿರ್ವಹಿಸುವುದರಿಂದ ಕೆಲ ಕಡೆಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಬ್ರಾಡ್‌ವೇ ರಸ್ತೆ, ಸ್ಟೇಷನ್ ರಸ್ತೆ, ತಿಮ್ಮಯ್ಯರಸ್ತೆ, ಸ್ಲಾಟರ್ ಹೌಸ್, ಕನ್ನಿಂಗ್ ಹ್ಯಾಮ್ ರಸ್ತೆ, ಅಲಿ ಆಸ್ಕರ್ ರಸ್ತೆ, ಚಿಕ್ಕ ಬಜಾರ್ ರಸ್ತೆ, ವೆಂಕಟಪ್ಪ ರಸ್ತೆ, ಮುನಿಸ್ವಾಮಿ ರಸ್ತೆ, ಸಿಮೆಂಟ್ರಿ ರಸ್ತೆ, ಪಾಯಪ್ಪ ಗಾರ್ಡನ್, ಪಾರ್ಕ್ ರಸ್ತೆ, ನಳ ರಸ್ತೆ, ಜಸ್ಮಾಭವನ ರಸ್ತೆ, ಸುಲ್ತಾನ್ ಗುಂಟ ರಸ್ತೆ, ಬಂಬೂಬಜಾರ್, ಧನಕೋಟಿ ಲೇನ್, ನೆಹರು ಪುರಂ, ಮುತ್ಯಾಲಮ್ಮ ಕೋಯಿಲ್ ಸ್ಟ್ರೀಟ್, ಬ್ರಾಡ್ ಶಾ ಸ್ಟ್ರೀಟ್, ಪ್ಯಾಲೇಸ್ ಟಾಕೀಸ್, ಬೌರಿಂಗ್ ಹಾಸ್ಪಿಟಲ್, ಎಡ್ವರ್ಡ್ ರಸ್ತೆ, ಜೈನ ದೇವಸ್ಥಾನ ರಸ್ತೆ, ಕ್ವೀನ್ಸ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ವಿಶ್ವೇಶ್ವರಯ್ಯ ಟವರ್, ಬಾಗಲೂರು ಲೇಔಟ್, ಬಿದರಹಳ್ಳಿ, ಹೊಯ್ಸಳ ಅಪಾರ್ಟ್‌ಮೆಂಟ್, ಆರ್ ಬಿಐ ಕ್ವಾಟ್ರಸ್, ಕಾಂಗ್ರೆಸ್ ಆಫೀಸ್, ಬೆನ್ಸನ್ ರಸ್ತೆ, ಕಾರ್ಪೋರೇಟ್ ಆಫೀಸ್, ಕೆಪಿಎಸ್‌ಸಿ, ಸಿಓಡಿ ಚೀಫ್ ಜಸ್ಟೀಸ್ ಹೌಸ್, ವಸಂತನಗರ, ದಾಬಸ್‌ಪೇಟೆ, ಕಲ್ಲಹಳ್ಳಿ, ಬಿಡಿಎ ಕ್ವಾಟ್ರಸ್, ಎಮ್‌ಇಜಿ ಸೆಂಟರ್, ಇಂಡಿಯನ್ ಎಕ್ಸ್‌ಪ್ರೆಸ್ ರಸ್ತೆ ಸೇರಿದಂತೆ ಹಲವು ಕಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

{ ಚಲುವರಾಯಸ್ವಾಮಿ } ಸಚಿವ

ದೇವೇಗೌಡರು ತಮ್ಮ ಮಕ್ಕಳ ಬಗ್ಗೆ ಮಾತನಾಡಿದ್ದು ನನಗೆ ಗೊತ್ತಿದೆ. ಅವರು ಹಿರಿಯರು, ಅವರ ಬಗ್ಗೆ ಅಪಾರ ಗೌರವವಿದೆ. ಅವರಿಗೆ ದೇವರು ಇನ್ನೂ ಹತ್ತಾರು ವರ್ಷಗಳ ಆಯುಷ್ಯ ನೀಡಿ ಆಶೀರ್ವದಿಸಲಿ. ರಾಜ್ಯದ ಜನ ತಮ್ಮನ್ನು ಆಶೀರ್ವದಿಸುತ್ತಿದ್ದಾರೆ, ಇಳಿವಯಸ್ಸಿನಲ್ಲಿರುವ ದೇವೇಗೌಡರ ಬಗ್ಗೆ ಮಾತಾಡೋದು ಸರಿಯಲ್ಲ, ಹಾಗೆ ನೋಡಿದರೆ ಮಾತಾಡಲು ಬೇಕಾದಷ್ಟಿದೆ.

ಹುಸ್ಕೂರಿನ ಎಸ್‌ಎಂಆರ್‌ಟಿಐ ಸಂಸ್ಥೆ ಹಾಗೂ ಇ.ವಿದ್ಯಾಲೋಕದ ಸ್ಟೀಮ್ ಲ್ಯಾಬ್ ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ ಪ್ರಾತ್ಯಕ್ಷಿಕೆ ಪ್ರದರ್ಶನ ಮಾಡಿದರು.

ಕೃತಕ ಬುದ್ಧಿಮತ್ತೆ ಬಗ್ಗೆ ಸರಕಾರಿ ಶಾಲಾ ಮಕ್ಕಳಿಗೆ ಅರಿವು

ಆನೇಕಲ್: ಸರಕಾರಿ ಶಾಲೆಯಲ್ಲಿ ಕಲಿಯುವ ಮಕ್ಕಳಲ್ಲೂ ಅಪಾರ ಬುದ್ಧಿಶಕ್ತಿ ಮತ್ತು ಪ್ರತಿಭೆಯಿದ್ದು ಉತ್ತಮ ಕಲಿಕಾ ವಾತಾವರಣ, ಆಧುನಿಕ ತಂತ್ರಜ್ಞಾನ ಒಳಗೊಂಡ ವ್ಯವಸ್ಥೆಯನ್ನು ಸರಕಾರ ಮತ್ತು ಸಮಾಜ ಒದಗಿಸಬೇಕಿದೆ ಎಂದು ಐ.ಆರ್.ಎಸ್. ಅಧಿಕಾರಿ ನೇತ್ರಪಾಲ ಹೇಳಿದರು.

ಹುಸ್ಕೂರಿನ ಎಸ್‌ಎಂಆರ್ ಟಿಐ ಸಂಸ್ಥೆ ಹಾಗೂ ಇ.ವಿದ್ಯಾಲೋಕ ಸಹಯೋಗದಲ್ಲಿ ಸ್ಟೀಮ್ ಲ್ಯಾಬ್‌ಗೆ ಚಾಲನೆ ನೀಡಿ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ನಗರ - ಗ್ರಾಮೀಣ ಎಂಬ ತಾರತಮ್ಯ ಇರುವುದಿಲ್ಲ. ನುರಿತ ಶಿಕ್ಷಕರಿಂದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯಕ್ಕೆ ಅನುಗುಣ ವಾಗಿ, ಆಸಕ್ತಿಯನ್ನು ಗುರ್ತಿಸಿ ಪ್ರೋತ್ಸಾಹ ನೀಡಬೇಕಿದೆ.

ಕೃತಕ ಬುದ್ಧಿಮತ್ತೆ, ಕೋಡಿಂಗ್, ರೋಬೋ ಟಿಕ್ಸ್ ಬಳಕೆ, ಅಂತರ್ಜಾಲ ಬಳಕೆ ಮುಂತಾದವು ಗಳನ್ನು ಈಗಿನಿಂದಲೇ ಎರಕ ಹುಯ್ಯ ಬೇಕೆಂದು ಸಲಹೆ ನೀಡಿದರು. ನೂತನ ಪ್ರಯೋಗಾಲಯಕ್ಕೆ ಆರ್ಥಿಕ ಬೆಂಬಲ ನೀಡಿದ ಸ್ನೋ ಫ್ಲೇಕ್ ಸಂವಹನಾಧಿಕಾರಿ ಧರಿತ್ರಿ, ಬ್ರಿಲಿಯೊ ಎಂಡಿ ಕ್ಯಾತೆಲಿನ್ ಅಲ್ಬರಿಚ್, ಸಿಇಒ ಬೃಂದಾ ಪೂರ್ಣ ಪ್ರಜ್ಞಾ, ರವಿ ರಾಮಚಂದ್ರನ್, ಬಿಇಒ ವೆಂಕಟೇಶ್ ಹಾಗೂ ದಾನಿಗಳಿದ್ದರು.

ಆನೇಕಲ್ ತಾಲೂಕಿನ 20 ಸರಕಾರಿ ಶಾಲೆಗಳ 2000 ವಿದ್ಯಾರ್ಥಿಗಳಿಗೆ ವರ್ಷವಿಡೀ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ ಹಾಗೂ ಗಣಿತ ವಿಷಯಗಳನ್ನು ಪ್ರಯೋಗ ಶಾಲೆಯಲ್ಲಿ ಹೇಳಿ ಕೊಡಲಾಗು ವುದು. ಶಾಲೆಯಲ್ಲಿ ಶ್ರದ್ಧೆಯಿಂದ ಆಲಿಸಿ ತಿಳಿಯುವುದನ್ನು ನಮ್ಮಲ್ಲಿ ಸ್ಪರ್ಶ, ಸ್ವತಃ ಮಾಡಿ ನೋಡಿ ಕಲಿಯಬಹುದು. ಗ್ರಾಮೀಣ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿ ಕಲಿಕೆಯ ಉತ್ತುಂಗಕ್ಕೆ ಕರೆದೊಯ್ಯುವ ಪ್ರಯತ್ನ ಸತತವಾಗಿ ಮುಂದುವರಿದಿದೆ.
-ರವಿ ಚಂದ್ರನ್, ಇ.ವಿದ್ಯಾಲೋಕ, ಸ್ಮೃತಿ ಅಕಾಡೆಮಿ ಅಧ್ಯಕ್ಷ

ಬಣ ಬಡಿದಾಟಕ್ಕೆ ಬಿಜೆಪಿ ವರಿಷ್ಠರ ವಾರ್ನಿಂಗ್

ಬೆಂಗಳೂರು: ಬಿಜೆಪಿಯ ಬಣ ಬಡಿದಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವರಿಷ್ಠರಿಂದ ರಾಜ್ಯ ನಾಯಕರಿಗೆ ಕಠಿಣ ಸಂದೇಶ ರವಾನೆಯಾಗಿದ್ದು, ಎಲ್ಲರೂ ಬಾಯಿ ಮುಚ್ಚಿಕೊಂಡು ಇರುವಂತೆ ಎಚ್ಚರಿಕೆ ನೀಡಲಾಗಿದೆ.

ಬಿಜೆಪಿ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ ಮೂಲಕ ಹೈಕಮಾಂಡ್ ಆರ್. ಅಶೋಕ ಸೇರಿದಂತೆ ರಾಜ್ಯ ನಾಯಕರಿಗೆ ಸಂದೇಶ ರವಾನೆ ಮಾಡಿದೆ. ಪ್ರತಿಪಕ್ಷ ನಾಯಕರು ಸೇರಿದಂತೆ ಪ್ರಮುಖರೊಂದಿಗೆ ಚರ್ಚಿಸಿರುವ ಸಹ ಉಸ್ತುವಾರಿ, ಯಾವುದೇ ನಾಯಕರು ಬಹಿರಂಗವಾಗಿ ಮಾತಾಡಬಾರದು. ಪಕ್ಷದ ಆಂತರಿಕ ವಿಚಾರ ಚರ್ಚೆ ಮಾಡಬೇಕಾದರೂ ಪಕ್ಷದ ವೇದಿಕೆಯಲ್ಲಿ ಮಾತನಾಡಬೇಕು. ಹಾದಿ-ಬೀದಿಯಲ್ಲಿ ಯಾವುದೇ ನಾಯಕರು ಪ್ರತಿಕ್ರಿಯೆ ಕೊಡಬಾರದು. ಇದನ್ನು ಎಲ್ಲ ನಾಯಕರಿಗೆ ಸ್ಪಷ್ಟವಾಗಿ ಹೇಳುವಂತೆ ಸೂಚಿಸಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಪಕ್ಷವನ್ನು ಸದೃಢಪಡಿಸಲು ನಿರಂತರ ಶ್ರಮಿಸುತ್ತಿರುವ ಲಕ್ಷಾಂತರ ಕಾರ್ಯಕರ್ತರಿಗೆ ಪಕ್ಷದೊಳಗಿನ ಕೆಲವು ನಾಯಕರ ಬಹಿರಂಗ ಹೇಳಿಕೆಗಳಿಂದ ನೋವಾಗುತ್ತಿದೆ.

ಕೆಲವರು ಪಕ್ಷದ ಬಗ್ಗೆ ತಮ್ಮ ಹೇಳಿಕೆಗಳನ್ನು ಮಾಧ್ಯಮಗಳ ಮೂಲಕ ನೀಡುತ್ತಿರುವುದನ್ನು ಗಮನಿಸಿದ್ದೇನೆ. ಮೋದಿಜೀ ಅವರ ನಾಯಕತ್ವದಲ್ಲಿ ಪಕ್ಷವನ್ನು ದೃಢಪಡಿಸಲು ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಸಿದ್ದರಾಮಯ್ಯರ ನೇತೃತ್ವದ ಕಾಂಗ್ರೆಸ್ಸಿನ ಸರಕಾರದ ಜನವಿರೋಧಿ ನೀತಿಗಳು, ಅಸಮರ್ಪಕ ಆಡಳಿತದ ವಿರುದ್ಧ ಹೋರಾಟಗಳನ್ನು ನಡೆಸಲಾಗುತ್ತಿದೆ ಎಂದರು.

ಹೆಚ್ಚಿದ ಹೃದಯಾಘಾತ: ಸಮಿತಿ ರಚನೆಗೆ ಸಿಎಂ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಯುವಜನರು ಹೃದಯಾಘಾತದಿಂದಾಗಿ ಸಾವನ್ನಪ್ಪುತ್ತಿರುವ ಪ್ರಕರಣ ಹೆಚ್ಚುತ್ತಿದ್ದು, ಈ ಸಾವು ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರಕಾರ ತನಿಖೆ ನಡೆಸುವುದಕ್ಕೆ ತಜ್ಞರ ಸಮಿತಿ ರಚಿಸಲು ಮುಂದಾಗಿದೆ.

ಹಿರಿಯ ಪತ್ರಕರ್ತ ರಾಜಾರಾಂ ತಲ್ಲೂರು ಅವರು, ಇ-ಮೇಲ್ ಮೂಲಕ ರಾಜ್ಯದಲ್ಲಿ ಹೃದಯಾಘಾತ, ಹೃದಯಸ್ತಂಭನ, ಮೆದುಳು ಸಂಬಂಧಿ, ನರ ಸಂಬಂಧಿ ಮತ್ತಿತರ ಕಾರಣಗಳಿಂದಾಗಿ ಯುವಜನರು ಹಠಾತ್ ಸಾವಿಗೀಡಾಗುತ್ತಿರುವರು. ಪ್ರತಿ ಸಾವು ಅವರ ಕುಟುಂಬಗಳನ್ನು ಆರ್ಥಿಕ, ಸಾಮಾಜಿಕ ಸಮಸ್ಯೆಗೆ ತಳ್ಳುತ್ತಿದೆ. ಈ ಸಾವುಗಳು ಕೋವಿಡ್ ಅಥವಾ ಕೋವಿಡ್ ಲಸಿಕೆಯ ಅಡ್ಡಪರಿಣಾಮಗಳ ಕಾರಣಕ್ಕೆ ಸಂಭವಿಸುತ್ತಿರಬಹುದೆಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಆದ್ದರಿಂದ, ಕೋವಿಡ್ ಅಥವಾ ಕೋವಿಡ್ ಲಸಿಕೆಯ ಅಡ್ಡ ಪರಿಣಾಮಗಳಿಂದ ಹಠಾತ್ ಸಾವಿಗೀಡಾದವರ ಬಗ್ಗೆ ಅಧ್ಯಯನ ನಡೆಸಿ, ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ಕೋರಿದ್ದರು. ಇದಕ್ಕೆ ಸ್ಪಂದಿಸಿರುವ ಸಿಎಂ ಸಿದ್ದರಾಮಯ್ಯ, ಹಠಾತ್ ಸಾವುಗಳ ಕುರಿತು ಹಾಗೂ ಮುಂದೆ ಈ ರೀತಿಯ ಸಾವುಗಳು ಸಂಭವಿಸದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಮರ್ಪಕ ಸಂಶೋಧನೆ ನಡೆಸಲು ಒಂದು ತಜ್ಞರ ಸಮಿತಿ ರಚಿಸಿ, ವರದಿ ಪಡೆದು, ಕ್ರಮ ತೆಗೆದುಕೊಳ್ಳಲು ರಾಜ್ಯ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ಕಠಿಣ ಷರತ್ತು ಸಡಿಲಿಕೆಗೆ ಆಗ್ರಹ



ಬೆಂಗಳೂರು: ಗ್ರಾಮೀಣ ಪತ್ರಕರ್ತರಿಗೆ ಉಚಿತವಾಗಿ ಬಸ್ ಪಾಸ್ ನೀಡಲು ಹಾಕಿರುವ ಕೆಲ ಕಠಿಣ ಷರತ್ತುಗಳನ್ನು ಸಡಿಲಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ)ದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಒತ್ತಾಯಿಸಿದ್ದಾರೆ. ಮೂರು ದಶಕಗಳ ಕೆಯುಡಬ್ಲ್ಯೂಜೆ ಬೇಡಿಕೆಗೆ ಮನ್ನಣೆ ನೀಡಿ, ಬಸ್‌ಪಾಸ್ ಜಾರಿ ನೀಡಿದ್ದನ್ನು ಸ್ವಾಗತಿಸಿ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ನುಡಿದಂತೆ ನಡೆದುಕೊಂಡಿರುವುದಕ್ಕಾಗಿ ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದ್ದಾರೆ.

ತಾಲೂಕು/ಹೋಬಳಿ ಪತ್ರಕರ್ತರನ್ನೂ ಪರಿಗಣಿಸಿ: ತಾಲೂಕು ಮತ್ತು ಹೋಬಳಿ ಹಂತದಲ್ಲಿ ಕೆಲಸ ಮಾಡುವ ಗ್ರಾಮೀಣ ಪತ್ರಕರ್ತರಿಗೆ ಯಾವ ಮಾಧ್ಯಮ ಸಂಸ್ಥೆಗಳು ಪೂರ್ಣಾವಧಿ ನೇಮಕಾತಿ ಪತ್ರ ನೀಡುವುದಿಲ್ಲ. ಆದ್ದರಿಂದ ಈ ವಿಷಯ ಗಂಭೀರವಾಗಿ ಪರಿಗಣಿಸಿ, ಪೂರ್ಣಾವಧಿ ನೇಮಕ ಎನ್ನುವುದನ್ನು ಕೈಬಿಡಬೇಕು ಎಂದು ಮನವಿ ಮಾಡಿದ್ದಾರೆ. ಮಾನ್ಯತೆ ಪಡೆದ ಪತ್ರಿಕೆಯಲ್ಲಿ ಕೆಲಸ ಮಾಡುವ ಎಲ್ಲ ಪತ್ರಕರ್ತರನ್ನು ಯೋಜನೆ ವ್ಯಾಪ್ತಿಗೆ ಒಳಪಡಿಸಬೇಕು. ಜಿಲ್ಲಾಮಟ್ಟದ ಪತ್ರಿಕೆಗಳಿಗೆ ತಾಲೂಕು ಮಟ್ಟದ ವರದಿಗಾರರಿಗೂ ಬಸ್‌ಪಾಸ್ ನೀಡಬೇಕು. ಹೋಬಳಿ ಹಂತದಲ್ಲಿಯೂ ಹಲವು ಪತ್ರಿಕೆಗಳಿಗೆ ವರದಿಗಾರರಿರುವ ಕಾರಣ ಈ ಸೌಲಭ್ಯ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ. ಜಿಲ್ಲಾಮಟ್ಟದಲ್ಲಿಯೇ ಬಸ್‌ಪಾಸ್‌ಗಾಗಿ ಪತ್ರಕರ್ತರ ಆಯ್ಕೆ ಪ್ರಕ್ರಿಯೆ ಸುಗಮವಾಗಿ ನಡೆಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಕೆಯುಡಬ್ಲ್ಯೂಜೆ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಹಿರಿಯ ಪತ್ರಕರ್ತರೊಬ್ಬರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು ಎಂದು ಶಿವಾನಂದ ತಗಡೂರು ಮನವಿ ಮಾಡಿದ್ದಾರೆ.

ಬೆಂಗಳೂರು ಯುವತಿಗೆ ಆರ್ಕಿಟೆಕ್ಚರ್‌ನಲ್ಲಿ ರ್‍ಯಾಂಕ್

ಬೆಂಗಳೂರು: ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಪ್ಲಾನಿಂಗ್‌ನ ಮಾಸ್ಟರ್ ಆಫ್ ಆರ್ಕಿಟೆಕ್ಚರ್‌ನಲ್ಲಿ ವಿದ್ಯಾರ್ಥಿನಿ ಮೆರಿನ್ ಮ್ಯಾಥ್ಯೂ ಅವರು ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಡಿಯಲ್ಲಿ 9.76 ಸಿಜಿಪಿಎ ಅಂಕಗಳೊಂದಿಗೆ ಮಾಸ್ಟರ್ ಆಫ್ ಆರ್ಕಿಟೆಕ್ಚರ್‌ನ ಕನ್‌ಸ್ಟ್ರಕ್ಷನ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್‌ನಲ್ಲಿ ಮಹತ್ತರ ಸಾಧನೆ ಗೈದಿರುವುದು ಹೆಮ್ಮೆಯ ಸಂಗತಿ. ಈ ಕುರಿತು ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಅಂಡ್ ಪ್ಲಾನಿಂಗ್‌ನ ಪ್ರಾಂಶುಪಾಲರಾದ ಡಾ. ವಿಮಲಾ ಸ್ವಾಮಿ ಮಾತನಾಡಿ, ಮೆರಿನ್ ಸಾಧನೆ ನಿಜಕ್ಕೂ ಪ್ರಶಂಸನೀಯ. ಆಕೆಯ ಅಧ್ಯಯನವು ಇಂದಿನ ಅಗತ್ಯಕ್ಕೆ ಪೂರಕವಾಗಿದೆ. ಶ್ರಮ ಮತ್ತು ಸೃಜನಶೀಲನೆಯಿಂದ ಅದ್ವಿತೀಯ ಸಾಧನೆ ತೋರಿದ್ದಾಳೆ. ಅಧ್ಯಯನದ ಅವಧಿಯಲ್ಲಿ ವಿವಿಧ ಪ್ರಾಜೆಕ್ಟ್‌ಗಳು, ಸಂಶೋಧನೆ ಮತ್ತು ವಿನ್ಯಾಸ ಕಲಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದುದು ಕೂಡ ಈ ಯಶಸ್ಸಿಗೆ ಕಾರಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗ, ಉದ್ಯಮಿ ಡಾ.ಬಾಬು ಕೀಲಾರ ಅವರಿಗೆ ಮೈಸೂರು ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್ ಅನ್ನು ರಾಜ್ಯಪಾಲ ಥಾವರುಚಂದ್ ಗೆಹ್ಲೋಟ್ ಅವರು ರಾಜಭವನದಲ್ಲಿ ಪ್ರದಾನ ಮಾಡಿದರು. ಮೈಸೂರಿನಲ್ಲಿ ಹಿಂದೆ ನಡೆದ ನಡೆದ 105 ನೇ ಘಟಿಕೋತ್ಸವದಲ್ಲಿ ಡಾ. ಬಾಬು ಕೀಲಾರ ಅವರು ಈ ಗೌರವ ಸ್ವೀಕರಿಸಲು ಆಗಿರಲಿಲ್ಲ. ರಾಜಭವನದಲ್ಲಿ ವಿಶೇಷವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲಾಂಛನ ಬಿಡುಗಡೆ

ಮಾರ್ಚ್ 1 ರಿಂದ 8ರ ವರೆಗೆ ನಡೆಯಲಿರುವ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅಧಿಕೃತ ಲಾಂಛನವನ್ನು ಸಿಎಂ ಸಿದ್ದರಾಮಯ್ಯ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ಮೇಲ್ಮನೆ ಸದಸ್ಯ ನಸೀರ್ ಅಹ್ಮದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಡಾ.ಪಿ.ಸಿ. ಜಾಫರ್, ವಾರ್ತಾ ಇಲಾಖೆ ಕಾರ್ಯದರ್ಶಿ ಬಿ.ಬಿ.ಕಾವೇರಿ, ಆಯುಕ್ತ ಹೇಮಂತ್ ನಿಂಬಾಳ್ಕರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಡಾ.ಸಾಧು ಕೋಕಿಲ ಇದ್ದರು.

ಆಂಬ್ಯುಲೆನ್ಸ್ ಅವಧಿ ಕಡಿತ: ಆಕ್ಷೇಪಣೆ ಸಲ್ಲಿಸಿ

ಬೆಂಗಳೂರು: ಆರೋಗ್ಯ ಕವಚ 108 ಆಂಬ್ಯುಲೆನ್ಸ್‌ಗಳ ಕಾರ್ಯಾಚರಣೆಯ ಅವಧಿ ದಿನಕ್ಕೆ 12 ಗಂಟೆಯ ಬದಲು 8 ಗಂಟೆಗೆ ಇಳಿಕೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರಕಾರ ಹಾಗೂ 108 ಆಂಬ್ಯುಲೆನ್ಸ್ ಸೇವೆ ಒದಗಿಸುವ ಖಾಸಗಿ ಸಂಸ್ಥೆ ಜಿವಿಕೆ-ಇಎಂಆರ್‌ಐಗೆ ಹೈಕೋರ್ಟ್ ಎರಡು ವಾರಗಳ ಕಾಲಾವಕಾಶ ನೀಡಿದೆ. ಆರೋಗ್ಯ ಕವಚ-108 ನೌಕರರ ಪರವಾಗಿ ಅಖಿಲ ಕರ್ನಾಟಕ 108 ಆಂಬ್ಯುಲೆನ್ಸ್ ನೌಕರರ ಹಿತರಕ್ಷಣಾ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಕವಚ-108 ಆಂಬ್ಯುಲೆನ್ಸ್ ನೌಕರರ ಸಂಘ, ಸುವರ್ಣ ಕರ್ನಾಟಕ ಆರೋಗ್ಯ ಕವಚ -108 ಆಂಬ್ಯುಲೆನ್ಸ್ ನೌಕರರ ಸಂಘ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಆಶಾ ರಘು ಅವರ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಶ್ರೀನಿವಾಸ ಪ್ರಭು ಅಭಿಮತ

ಪುಸ್ತಕ ಸಂಸ್ಕೃತಿ ವ್ಯಾಪಕವಾದರೆ ಮಾನವ ಸಂಸ್ಕೃತಿ ವೃದ್ಧಿ

ಬೆಂಗಳೂರು: ಪುಸ್ತಕ ಸಂಸ್ಕೃತಿ ವ್ಯಾಪಕವಾಗಿ ಬೆಳೆದಷ್ಟು ಮಾನವ ಸಂಸ್ಕೃತಿ ಬೆಳೆಯುತ್ತದೆ. ಆ ನಿಟ್ಟಿನಲ್ಲಿ ಆಶಾ ರಘು ಅವರು ಒಂದು ಮಹತ್ವದ ಹೆಜ್ಜೆ ಇಟ್ಟಿದ್ದಾರೆ ಎಂದು ನಟ, ರಂಗ ನಿರ್ದೇಶಕ ಶ್ರೀನಿವಾಸ ಪ್ರಭು ಅಭಿಪ್ರಾಯಪಟ್ಟರು.

ಆಶಾರಘು ಅವರು ಆರಂಭಿಸಿರುವ ಉಪಾಸನ ಬುಕ್ಸ್ ಆರಂಭೋತ್ಸವದಲ್ಲಿ ಎರಡು ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಕಲ್ಪನೆ- ಅತಿಂದ್ರೀಯ-ದೈವೀಕ ಎಲ್ಲ ನೆಲೆಗಳ ಚಿತ್ರಣ ವನ್ನೂ ಏಕತ್ರಗೊಳಿಸಿ ಪ್ರತಿಮಾತ್ಮಕವಾಗಿ ಕಟ್ಟಿಕೊಡು ವಲ್ಲಿ ಆಶಾ ರಘು ಯಶಸ್ವಿಯಾಗಿದ್ದಾರೆ. ಸ್ವಾರಸ್ಯ ಕರವಾಗಿ ಕಥಾನಕ ಕಟ್ಟಿಕೊಡುವುದರಲ್ಲಿ, ಭಾಷೆ ಸಮರ್ಥವಾದ ವಾಹಕವಾಗಿಸುವಲ್ಲಿ ಆಶಾ ಸಿದ್ಧ ಹಸ್ತರು ಎಂದು ರಂಜಿನಿ ಪ್ರಭು ಅವರು ಆಶಾ ರಘು ಅವರ ವಕ್ಷಸ್ಥಲ ಕಾದಂಬರಿ ಮತ್ತು ಕೆಂಪು ದಾಸವಾಳ ಕಥಾ ಸಂಕಲನದ ಲೋಕಾರ್ಪಣೆ ವೇಳೆ ಅಭಿಪ್ರಾಯಪಟ್ಟರು.

ಯುವ ಬರಹಗಾರರನ್ನು ಪ್ರೋತ್ಸಾಹಿಸಿ: ಪ್ರಕಾಶನ ಸಂಸ್ಥೆಗಳು ಯುವ ಬರಹಗಾರರ ಕೃತಿಗಳನ್ನು ಪ್ರಕಟಿಸಬೇಕು ಮತ್ತು ಪುಸ್ತಕ ಮಳಿಗೆಗಳಲ್ಲಿ ಯುವ ಬರಹಗಾರರ ಕೃತಿಗಳಿಗೆ ಯೋಗ್ಯ ಸ್ಥಳಾವಕಾಶ ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಬೇಕು. ಅಂತಹ ಕೆಲಸವನ್ನು ಉಪಾಸನ ಬುಕ್ಸ್ ಮಾಡುತ್ತದೆ ಎಂಬ ಭರವಸೆ ಇದೆ ಎಂದು ಪತ್ತೇದಾರಿ ಕಾದಂಬರಿಕಾರ ಕೌಶಿಕ್ ಕೂಡುರಸ್ತೆಯವರು ಪುಸ್ತಕ ಮಳಿಗೆಯ ಆರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು. ದೊಡ್ಡ ಜಾಗದಲ್ಲಿ ಅರ್ಥವಿಲ್ಲದ ಕಾರ್ಯಕ್ರಮಕ್ಕಿಂತ ಸಣ್ಣ ಜಾಗದಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಮೌಲಿಕವಾದದ್ದು. ಸ್ಥಳ ಚಿಕ್ಕದು,ದೊಡ್ಡದು ಎನ್ನುವುದಕ್ಕಿಂತ ಅವರ ಹಿಂದೆ ಇರುವ ವ್ಯಕ್ತಿ ಯಾರು ಎನ್ನುವುದು ಮುಖ್ಯ ಎಂದು ಮುಖ್ಯ ಅತಿಥಿಯಾಗಿದ್ದ ಕವಿ ವಾಸುದೇವ ನಾಡಿಗ್ ಅಭಿಪ್ರಾಯಪಟ್ಟರು.

ಆಶಾ ರಘು ಅವರ ಕೃತಿಗಳನ್ನು ನಟ, ರಂಗ ನಿರ್ದೇಶಕ ಶ್ರೀನಿವಾಸ ಪ್ರಭು ಶುಕ್ರವಾರ ಬಿಡುಗಡೆ ಮಾಡಿದರು. ರಂಜಿನಿ ಪ್ರಭು, ಕೌಶಿಕ್ ಕೂಡುರಸ್ತೆ, ವಾಸುದೇವ ನಾಡಿಗ್ ಇದ್ದರು.

ಸಿಎಂ ವಿರುದ್ಧ ಕಾನೂನು ಹೋರಾಟ ನಿಲ್ಲದು

ಬೆಂಗಳೂರು: ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಾನೂನು ಹೋರಾಟ ಮುಂದುವರಿಸುತ್ತೇವೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಕರಣವನ್ನು ಲೋಕಾಯುಕ್ತ ಮತ್ತು ಇಡಿ ತನಿಖೆ ನಡೆಯುತ್ತಿದ್ದು, ಸದ್ಯಕ್ಕೆ ಸಿದ್ದರಾಮಯ್ಯನವರಿಗೂ ಸ್ವಲ್ಪ ರಿಲೀಫ್ ಸಿಕ್ಕಿದೆ. ಅಲ್ಲದೇ ಲೂಟಿಯಾಗಿರುವ ರಾಜ್ಯದ ಜನತೆಯ ದುಡ್ಡು ಮತ್ತೆ ಖಜಾನೆಗೆ ವಾಪಸ್ ಬರುತ್ತದೆ ಎಂಬ ವಿಶ್ವಾಸ ಇದೆ. ಸಿದ್ದರಾಮಯ್ಯ ವಿಚಾರದಲ್ಲಿ ಕಾನೂನು ಹೋರಾಟ ಮುಂದುವರಿಸುತ್ತೇವೆ ಎಂದರು. ಕಾಂಗ್ರೆಸ್ ಆಡಳಿತದ 20 ತಿಂಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಇದನ್ನು ಕಾಂಗ್ರೆಸ್ ಶಾಸಕರೇ ಒಪ್ಪಿಕೊಂಡಿದ್ದಾರೆ. ರಾಜ್ಯ ಸುಭದ್ರವಾಗಿರಬೇಕಾದರೆ ಕಾನೂನು ಸುವ್ಯವಸ್ಥೆ ಸರಿಯಾಗಿರಬೇಕು ಎಂದರು.

ಶಾಸಕ ಕೃಷ್ಣಮೂರ್ತಿಗೆ ಮಾತೃ ವಿಯೋಗ

ಮೈಸೂರು: ಕೇರಳದ ರಾಜ್ಯಪಾಲರಾಗಿದ್ದ ದಿವಂಗತ ಬಿ. ರಾಚಯ್ಯ ಅವರ ಪತ್ನಿ ಗೌರಮ್ಮ (88) ಶುಕ್ರವಾರ ಬೆಳಗ್ಗೆ ವಿಧಿವಶರಾಗಿದ್ದಾರೆ. ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದ ಗೌರಮ್ಮನವ ರನ್ನು ಕೆಲ ದಿನಗಳ ಹಿಂದೆಯಷ್ಟೇ ಮೈಸೂರಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆ ದಿದ್ದಾರೆ. ದಿವಂಗತರಿಗೆ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಐವರು ಪುತ್ರಿಯರು ಇದ್ದಾರೆ. ಸ್ವಗ್ರಾಮ ಚಾಮರಾಜ ನಗರದ ಆಲೂರಿನಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ರೇನ್ ಬಕೆಟ್ ಮುರಿದು ಒಬ್ಬನ ಸಾವು

ಹಾವೇರಿ: ಗಂಗಾ ಪರಮೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ (ಫೆ.07) ಕಳಸಾರೋಹಣದ ಸಂದರ್ಭದಲ್ಲಿ ಅವಘಡ ಸಂಭವಿಸಿ ಓರ್ವ ಯುವಕ ಮೃತಪಟ್ಟು, ಮತ್ತೋರ್ವ ತೀವ್ರವಾಗಿ ಗಾಯಗೊಂಡಿದ್ದಾರೆ. ಗ್ರಾಮದ ಮಂಜುನಾಥ ಪಾಟೀಲ (48) ಮೃತಪಟ್ಟವ.

ಕುಂಭಮೇಳದಿಂದ ವಾಪಸಾಗುತ್ತಿದ್ದ ವಾಹನ ಟ್ರಕ್‌ಗೆ ಡಿಕ್ಕಿ, 17 ಮಂದಿಗೆ ಗಾಯ | ಮಧ್ಯಪ್ರದೇಶದ ಇಬ್ಬರು ಸಾವು

ಇಂದೋರ್ ಬಳಿ ಅಪಘಾತ: ಬೆಳಗಾವಿಯ ನಾಲ್ವರ ದುರ್ಮರಣ

ಬೆಳಗಾವಿ: ಪ್ರಯಾಗರಾಜ್‌ನಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ ಬೆಳಗಾವಿ ಮೂಲದ ನಾಲ್ವರು ಮೃತಪಟ್ಟ ಘಟನೆ ಮಾಸುವ ಮುನ್ನವೇ ಮತ್ತೊಂದು ಅವಘಡ ಜರುಗಿದ್ದು, ಮಧ್ಯ ಪ್ರದೇಶದ ಇಂದೋರ್ ನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಜಿಲ್ಲೆಯ ನಾಲ್ವರು ಮೃತಪಟ್ಟಿದ್ದು 17 ಜನರು ಗಂಭೀರವಾಗಿ ಗಾಯಗೊಂಡ ಘಟನೆ ಶುಕ್ರವಾರ ಬೆಳಗಿನಜಾವ ಸಂಭವಿಸಿದೆ.

ಉಜ್ಜಯಿನಿಯಿಂದ ತೆರಳುತ್ತಿದ್ದಾಗ ಅಪಘಾತ: ಮಹಾ ಕುಂಭಮೇಳದಲ್ಲಿ ಪಾಲ್ಗೊಂಡ ಬಳಿಕ ಉಜ್ಜಯಿನಿಯ ಮಹಾಕಾಳೇಶ್ವರ ದರ್ಶನ ಪಡೆದು ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಇಂದೋರ್ ಜಿಲ್ಲೆಯ ಮನ್ಪುರ್ ಬಳಿ ಬೆಳಗಾವಿಯಿಂದ ತೆರಳಿದ್ದ ಟಿಟಿ ವಾಹನ ಹಾಗೂ ಬೈಕ್ ಸೇರಿ ಟ್ರಕ್ ಗೆ ಡಿಕ್ಕಿ ಹೊಡೆದಿದೆ. ಈ ದುರ್ಘಟನೆಯಲ್ಲಿ ಬೆಳಗಾವಿಯ ಕ್ರಾಂತಿ ನಗರದ ನಿತಾ ಬಡಮಂಜಿ (45), ಬಸವನ ಗಲ್ಲಿಯ ಸಾಗರ್ ಶಾಪುರಕರ್ (55), ಜ್ಯೋತಿ ಖಂಡೇಕರ್, ಹಾಗೂ ಶಿವಾಜಿನಗರದ ಸಂಗೀತಾ ಎಂಬುವವರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಘಾತಕ್ಕೂ ಮುನ್ನ ತೀರ್ಥಯಾತ್ರೆ ನಡೆಸಿದ್ದ ಮಹಿಳೆಯರ ಚಿತ್ರ.

> **ಮಹಾಕುಂಭಮೇಳದಿಂದ ವಾಪಸಾಗುವ ವೇಳೆ ಭೀಕರ ರಸ್ತೆ ಅಪಘಾತದಲ್ಲಿ ಬೆಳಗಾವಿಯ ನಾಲ್ವರು ಮೃತಪಟ್ಟಿರುವುದು ತಿಳಿದು ದುಃಖಿತನಾಗಿದ್ದೇನೆ. ಆ ದೇವರು ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ. ಮೃತರ ಆತ್ಮಕ್ಕೆ ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.**
> **-ಸತೀಶ್ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಕುಂಭಮೇಳಕ್ಕಾಗಿ ತೆರಳಿದ್ದ ಭಕ್ತರು: ಪ್ರಯಾಗರಾಜ್ ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳ ಸೇರಿದಂತೆ ಉತ್ತರ ಭಾರತ ಪ್ರವಾಸಕ್ಕೆಂದು 20 ಭಕ್ತರಿದ್ದ ತಂಡ ಕಳೆದ ಜ. 24ರಂದು ತೆರಳಿದ್ದರು. ಉಜ್ಜಯಿನಿ ಮಹಾಕಾಳೇಶ್ವರ ದರ್ಶನದ ಬಳಿಕ ಶುಕ್ರವಾರ ಬೆಳಗಿನ ಜಾವ ಇಂದೋರ್ ಜಿಲ್ಲೆಯಲ್ಲಿ ಸಂಚರಿಸುವ ವೇಳೆ ದ್ವಿಚಕ್ರ ವಾಹನ ಅಡ್ಡ ಬಂದಿದ್ದು ಇದನ್ನು ತಪ್ಪಿಸುವ ಪ್ರಯತ್ನದಲ್ಲಿ ಅಚಾನಕ್ಕಾಗಿ ಟಿಟಿ ವಾಹನ ಹಾಗೂ ಬೈಕ್ ಎರಡು ಸೇರಿ ಲಾರಿ ಹಿಂಬದಿಗೆ ಡಿಕ್ಕಿಯಾಗಿವೆ.

ಈ ಸಂದರ್ಭದಲ್ಲಿ ಇಂದೋರ್ ಮೂಲದ ಇಬ್ಬರು ಬೈಕ್ ಸವಾರರು ಸೇರಿ ಆರು ಜನ ಮೃತಪಟ್ಟಿದ್ದು, ನಾಲ್ವರು ಬೆಳಗಾವಿಯ ಭಕ್ತರು. ಗಂಭೀರವಾಗಿ ಗಾಯ ಗೊಂಡ 17 ಜನರನ್ನು ಇಂದೋರ್ ಸರಕಾರಿ ಎಂವೈ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗು ತ್ತಿದೆ. ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಇಂದೋರ್ ಐಜಿಪಿ ಉಮಾಶಂಕರ ಚೌಧರಿ ಮಾಹಿತಿ ನೀಡಿದ್ದಾರೆ.

ಈ ಭೀಕರ ಅಪಘಾತ ಸುದ್ದಿ ತಿಳಿಯುತ್ತಿದ್ದಂತೆ ಬೆಳಗಾವಿಯ ಕುಟುಂಬಸ್ಥರು ಸಂಸದ ಜಗದೀಶ್ ಶೆಟ್ಟರ್ ಅವರ ಕಚೇರಿಗೆ ಧಾವಿಸಿ ಘಟನೆ ಕುರಿತು ಮಾಹಿತಿ ಪಡೆದರು. ಕೂಡಲೇ ಜಿಲ್ಲಾಧಿಕಾರಿ ಜೊತೆ ಮಾತನಾಡಿದ ಸಂಸದ ಶೆಟ್ಟರ್ ಬೆಳಗಾವಿಯ ಯಾತ್ರಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಹಾಗೂ ಮೃತ ದೇಹಗಳನ್ನು ತರುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

> **ಬೆಳಗಾವಿ ಗ್ರಾಮೀಣ ಕ್ಷೇತ್ರದಿಂದ 50 ಜನ ಪ್ರಯಾಗ್‌ರಾಜ್ ಮಹಾಕುಂಭ ಮೇಳಕ್ಕೆ ತೆರಳಿದ್ದರು. ಈ ಪೈಕಿ ಒಂದು ವಾಹನ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದು, 17 ಮಂದಿಗೆ ಗಾಯಗಳಾಗಿವೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಈ ಬಗ್ಗೆ ಸ್ಪಂದಿಸಿದ್ದು, ಅವರ ಸೂಚನೆಗೆ ಮೇರೆಗೆ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿರುವೆ.**
> **ಮೃಣಾಲ್ ಹೆಬ್ಬಾಳ್ಕರ್,** ಯುವ ಮುಖಂಡ

46 ವರ್ಷದ ಬಳಿಕ ಆರಿದ ಮುಂಡಗೋಡದ ಚಿಗಳ್ಳಿ ದೀಪ

ಕಾರವಾರ: ಯಾವುದೇ ಎಣ್ಣೆ, ಬತ್ತಿ ಇಲ್ಲದೇ ಸತತ 46 ವರ್ಷಗಳಿಂದ ಉರಿಯುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲೂಕಿನ ಚಿಗಳ್ಳಿಯ ಪ್ರತಿಷ್ಠಿತ ದೀಪನಾಥೇಶ್ವರ ದೇವಾಲಯದ ಮೂರು ದೀಪಗಳು ನಂದಿ ಹೋಗಿವೆ. 1979 ರಲ್ಲಿ ದೈವಜ್ಞ ಶಾರದಮ್ಮ ಎಂಬವರು ಸೀಮೆ ಎಣ್ಣೆ ಹಾಕಿ ಈ ದೀಪವನ್ನು ಬೆಳಗಿಸಿದ್ದರು. ಅಲ್ಲಿಂದ ಈವರೆಗೂ ಈ ದೀಪ ಎಣ್ಣೆ, ಬತ್ತಿಯಿಲ್ಲದೇ ಬೆಳಗುತ್ತಿತ್ತು. ಈ ಹಿನ್ನೆಲೆಯಲ್ಲಿ ಇಲ್ಲಿಗೆ ನೂರಾರು ಜನರು ಭೇಟಿ ನೀಡಿ ಈ ವಿಸ್ಮಯವನ್ನು ಕಣ್ತುಂಬಿ ಕೊಳ್ಳುತ್ತಿದ್ದು, ದೀಪನಾಥೇಶ್ವರ ಎಂಬ ಹೆಸರಿನಲ್ಲಿ ಆಸ್ತಿಕರು ಪೂಜೆಗಳನ್ನು ನಡೆಸುತ್ತಿ ದ್ದರು ಎಂಬುದು ಸ್ಥಳೀಯರ ಅಭಿಪ್ರಾಯ. ಕಳೆದ 14 ದಿನದ ಹಿಂದೆ ದೀಪದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ವೆಂಕಟೇಶ್ ಎಂಬವರು ಮೃತರಾಗಿದ್ದು, ಸೂತಕದ ಹಿನ್ನೆಲೆಯಲ್ಲಿ ದೇವಸ್ಥಾನದ ಗರ್ಭಗುಡಿ ಮುಚ್ಚಲಾಗಿತ್ತು. ಆದರೆ, ಬುಧವಾರ ದೇವಸ್ಥಾನದ ಗರ್ಭಗುಡಿ ಯನ್ನು ಸ್ವಚ್ಛ ಮಾಡಲು ಕುಟುಂಬಸ್ಥರು ತೆರಳಿದಾಗ ದೀಪ ಆರಿರುವುದು ಬೆಳಕಿಗೆ ಬಂದಿದೆ.

ಹಾಲಿ, ಮಾಜಿ ಸಿಎಂಗೆ ರಿಲೀಫ್

← ಮೊದಲಪುಟದಿಂದ

ರಾಜ್ಯಪಾಲರ ಆದೇಶ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ.19ರಂದು ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದರು. ಸೆ.24ರಂದು ಹೈಕೋರ್ಟ್ ಸಿಎಂ ಅರ್ಜಿ ತಿರಸ್ಕರಿಸಿತ್ತು. ಈ ಆದೇಶ ಹೊರಬಿದ್ದ ಬೆನ್ನಲ್ಲೇ ಮುಡಾ ಪ್ರಕರಣ ಸಂಬಂಧ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಎಫ್‌ಐಆರ್ ದಾಖಲಾದ ದಿನವೇ (ಸೆ.27) ಇಡೀ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಬಿಎಸ್‌ವೈ ಪ್ರಕರಣದ ಹಿನ್ನೆಲೆ: ಪೋಕ್ಸೋ ಪ್ರಕರಣ ಕುರಿತು ಸದಾಶಿವನಗರ ಠಾಣಾ ಪೊಲೀಸರು 2024ರ ಮಾರ್ಚ್ 14ರಂದು ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಅದನ್ನು ರದ್ದುಪಡಿಸಲು ಕೋರಿ ಯಡಿಯೂರಪ್ಪ ಅವರು 2024ರ ಜೂನ್ 13ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಜೂನ್ 14ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಪ್ರಕರಣದ ತನಿಖೆ ತಡೆ ನೀಡಲು ನಿರಾಕರಿಸಿತ್ತಾದರೂ ಬಿಎಸ್‌ವೈ ಅವರನ್ನು ಬಂಧಿಸದಂತೆ ಸಿಐಡಿ ತನಿಖಾಧಿಕಾರಿಗಳಿಗೆ ಸೂಚಿಸಿತ್ತು. ನಂತರ ಪ್ರಕರಣದ ಕುರಿತು ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ಖುದ್ದು ಹಾಜರಾಗುವುದರಿಂದ ಯಡಿಯೂರಪ್ಪ ಅವರಿಗೆ ವಿನಾಯಿತಿ ನೀಡಿ, 2024ರ ಜುಲೈ 12ರಂದು ಹೈಕೋರ್ಟ್ ಮತ್ತೊಂದು ಆದೇಶ ಮಾಡಿತ್ತು. ಅಂತಿಮವಾಗಿ 2025ರ ಜನವರಿ 17ರಂದು ಅರ್ಜಿ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿತ್ತು.

> **ನಾವು ಕಾನೂನನ್ನು ಗೌರವಿಸುತ್ತೇವೆ. ಆದರೆ, ಈ ಕೇಸ್‌ನಲ್ಲಿ ರಾಜಕೀಯ ಮಾಡುವುದೇ ಅವರ ಗುರಿಯಾಗಿತ್ತು. ಆದರೀಗ ಹೈಕೋರ್ಟ್ ಎಲ್ಲ ಅಂಶಗಳನ್ನು ಪರಾಮರ್ಶಿಸಿ ಅರ್ಜಿ ವಜಾಗೊಳಿಸಿದೆ. ನಾವು ಲೋಕಾಯುಕ್ತಕ್ಕೆ ಗೌರವ ನೀಡಬೇಕು. ಅದೊಂದು ಸ್ವತಂತ್ರ ಸಂಸ್ಥೆ. ಇದನ್ನು ರಾಜಕೀಯ ಉದ್ದೇಶದಿಂದ ವಿರೋಧ ಮಾಡು ತ್ತಲೇ ಬಂದಿದ್ದಾರೆ. ಇದು ಸಿಎಂ ಅವರ ಚಾರಿತ್ರ್ಯ ಹರಣಗೊಳಿಸುವ ಪ್ರತಿಪಕ್ಷಗಳ ಷಡ್ಯಂತ್ರ ಅಷ್ಟೇ.**
> **-ಎಚ್.ಸಿ.ಮಹದೇವಪ್ಪ,** ಸಚಿವ

> **ತೀರ್ಪು ಬಂದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಮುಡಾ ಹಗರಣದಲ್ಲಿ ನ್ಯಾಯಾಲಯ ಮೂರು ಅಂಶ ಉಲ್ಲೇಖಿಸಿದೆ. ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸುತ್ತಿರುವಾಗ ಸಿಬಿಐಗೆ ಹಸ್ತಾಂತರ ಮಾಡುವಂತಹ ಅಂಶಗಳು ಪ್ರಕರಣದಲ್ಲಿ ಕಂಡುಬಂದಿಲ್ಲ ಎಂದು ಅಭಿಪ್ರಾಯಪಟ್ಟಿದೆ.**
> **-ಎ.ಎಸ್.ಪೊನ್ನಣ್ಣ,** ಸಿಎಂ ಕಾನೂನು ಸಲಹೆಗಾರ

> **ಸಿಎಂ ಸಿದ್ದರಾಮಯ್ಯನವರು ನಿರಪರಾಧಿ ಎಂಬುದಾಗಿ ಹೈಕೋರ್ಟ್ ಹೇಳಿಲ್ಲ. ಮುಡಾ ಹಗರಣದ ವಿಷಯದಲ್ಲಿ ಬಿಜೆಪಿ ಹೋರಾಟ ಮತ್ತು ಪಾದಯಾತ್ರೆಗೆ ಹಿನ್ನಡೆ ಆಗಿಲ್ಲ. ಲೋಕಾಯುಕ್ತ ಮತ್ತು ಇ.ಡಿ. ತನಿಖೆ ನಡೆಯುತ್ತಿದೆ. ಮುಂದೇನಾಗುತ್ತದೆ ಕಾದು ನೋಡೋಣ. ನಮ್ಮ ಆರೋಪಕ್ಕೆ ಇವತ್ತಿಗೂ ಬದ್ಧರಾಗಿದ್ದೇವೆ.**
> **-ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಕಡತ ಸರಕಾರಕ್ಕೆ ವಾಪಸ್

← ಮೊದಲಪುಟದಿಂದ

ಮೈಕ್ರೋ ಫೈನಾನ್ಸ್ ಕಿರುಕುಳ ನೀಡಿದರೆ ಸಂತ್ರಸ್ತರನ್ನು ರಕ್ಷಿಸುವುದು ರಾಜ್ಯ ಸರಕಾರದ ಕರ್ತವ್ಯ. ಅದರ ಜತೆಗೆ ಅಗತ್ಯ ಇರುವ ವ್ಯಕ್ತಿಗೆ ಕಾನೂನಾತ್ಮಕವಾಗಿ ನಿಯಮದಂತೆ ಸಾಲ ನೀಡಿದ ಸಾಲದಾತನನ್ನೂ ರಕ್ಷಿಸುವುದು ಅಗತ್ಯ ಎಂದು ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

ಸಹಜ ನ್ಯಾಯಕ್ಕೆ ವ್ಯತಿರಿಕ್ತ: ಪಡೆದ ಸಾಲದಿಂದ ಮುಕ್ತ ಗೊಳಿಸಿದರೆ ಕಾನೂನುಬದ್ಧವಾಗಿ ಸಾಲ ನೀಡಿದ ಸಂಸ್ಥೆಗಳು ಸಮಸ್ಯೆ ಎದುರಿಸುವ ಸಾಧ್ಯತೆ ಇದೆ. ಅವರ ಮುಂದೆ ತಾವು ನೀಡಿರುವ ಸಾಲವನ್ನು ವಸೂಲಿ ಮಾಡುವ ಯಾವುದೇ ಆಯ್ಕೆಗಳಿರದೇ ಕಾನೂನು ಹೋರಾಟಕ್ಕೆ ಅನುವು ಮಾಡಿಕೊಡಲಿದೆ. ಇದು ಸಹಜ ನ್ಯಾಯಕ್ಕೆ ವ್ಯತಿರಿಕ್ತವಾಗುವ ಸಾಧ್ಯತೆ ಇದ್ದು, ಮೂಲಭೂತ ಹಕ್ಕಿನ ಉಲ್ಲಂಘನೆಯಾಗುವ ಸಾಧ್ಯತೆ ಬಗ್ಗೆ ರಾಜ್ಯಪಾಲರು ಸ್ಪಷ್ಟನೆ ಕೇಳಿದ್ದಾರೆ.

ಕಾನೂನು ತತ್ವದ ಉಲ್ಲಂಘನೆ: ಸುಗ್ರೀವಾಜ್ಞೆಯಲ್ಲಿ ನಿಯಮ ಉಲ್ಲಂಘಿಸಿದವರ ವಿರುದ್ಧ ಗರಿಷ್ಠ 10 ವರ್ಷ ಸೆರೆಮನೆವಾಸ ಹಾಗೂ 5 ಲಕ್ಷ ರು. ದಂಡ ವಿಧಿಸುವ ಅಂಶ ಸೇರಿಸಲಾಗಿದೆ. ಮೈಕ್ರೋ ಫೈನಾನ್ಸ್‌ನಿಂದ ಗರಿಷ್ಠ 3 ಲಕ್ಷ ಸಾಲ ಪಡೆಯುವ ಮಿತಿ ಇರುವಾಗ, 5 ಲಕ್ಷ ದಂಡ ವಿಧಿಸುವುದು ಸಹಜ ಕಾನೂನು ತತ್ವದ ಉಲ್ಲಂಘನೆಯಾಗುವ ಸಾಧ್ಯತೆ ಇದೆ. ಜತೆಗೆ ಕರಡು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿತ ದಂಡದ ಮೊತ್ತವನ್ನು ಇದೇ ರೀತಿಯ ಅಪರಾಧಗಳಿಗೆ ಹಾಲಿ ಕಾನೂನಿನಡಿ ವಿಧಿಸುವ ದಂಡದ ಮೊತ್ತಕ್ಕೆ ಹೋಲಿಸಿದರೆ ಅಸಮಂಜಸದಿಂದ ಕೂಡಿದೆ. ಇದು ಸಹಜ ನ್ಯಾಯದ ತತ್ವಕ್ಕೆ ವ್ಯತಿರಿಕ್ತ ಎಂದು ಉಲ್ಲೇಖಿಸಿದ್ದಾರೆ.

ಸ್ವಸಹಾಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ: ಈ ಸುಗ್ರೀವಾಜ್ಞೆ ಕಟ್ಟಕಡೆಯ ಬಡವರಿಗೆ ಸಾಲ ನೀಡುವ ಸ್ವಸಹಾಯ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗೂ ರಾಜ್ಯದಲ್ಲಿನ ಸ್ವಸಹಾಯ ಸಂಘಗಳ ವಹಿವಾಟು ಮೇಲೆ ಪರಿಣಾಮ ಬೀರಲಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸುಗ್ರೀವಾಜ್ಞೆ ಆರ್‌ಬಿಐಯಡಿ ನೋಂದಾಯಿತ ಬ್ಯಾಂಕುಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ. ಹಾಗಾಗಿ ಬಹುತೇಕ ಸಾಲ ನೀಡುವ ಸಂಸ್ಥೆಗಳು ಇದರಿಂದ ಹೊರಗುಳಿಯಲಿವೆ.

ಈ ಸುಗ್ರೀವಾಜ್ಞೆ ಕೇವಲ ನೋಂದಣಿಯಾಗದ ಹಾಗೂ ಪರವಾನಗಿ ಇಲ್ಲದ ಸಂಸ್ಥೆಗಳಿಗೆ ಅನ್ವಯವಾಗಲಿದೆ. ಇಂತಹ ಹಣಕಾಸು ಏಜೆನ್ಸಿಗಳ ಕಿರುಕುಳದ ಮೇಲೆ ನಿಯಂತ್ರಣ ಹಾಕಲು ಈಗಾಗಲೇ ಹಲವು ಕಾನೂನು ಜಾರಿಯಲ್ಲಿವೆ. ಕರ್ನಾಟಕ ಲೇವಾದೇವಿಗಾರರ ಕಾಯ್ದೆ-1961, ಎನ್‌ಐಎ ಕಾಯ್ದೆ, ಕರ್ನಾಟಕ ಋಣಮುಕ್ತ ಕಾಯ್ದೆ, ಐಪಿಸಿ ಕಾಯ್ದೆಯಡಿ ಈ ಸಂಬಂಧ ನಿಯಂತ್ರಣ ಹೇರಲು ಹಲವು ನಿಯಮಾವಳಿಗಳು ಇವೆ. ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ಇದಕ್ಕೆ ನಿಯಂತ್ರಣ ಹಾಕಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಶಾದ್ಯಂತ ರಾಜ್ಯಾಧ್ಯಕ್ಷರ ಬದಲಾವಣೆ

ಬಾಗಲಕೋಟೆ: ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ದೇಶಾದ್ಯಂತ ಆಗುತ್ತಿದೆ. ಪಕ್ಷದಲ್ಲಿ ಪ್ರತೀ ಮೂರು ವರ್ಷಕ್ಕೊಮ್ಮೆ ಮಂಡಲ ಅಧ್ಯಕ್ಷರಿಂದ ರಾಷ್ಟ್ರೀಯ ಅಧ್ಯಕ್ಷರವರೆಗೆ ಬದಲಾವಣೆ ಆಗುತ್ತದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತ ನಾಡಿ, ಮಂಡ್ಯದಲ್ಲಿ ನೂತನವಾಗಿ ಪ್ರಾರಂಭಿಸಲಾಗುತ್ತಿರುವ ಕೃಷಿ ಮತ್ತು ತೋಟಗಾರಿಕೆ ವಿವಿಯಲ್ಲಿ ಬಾಗಲಕೋಟೆಯ ತೋವಿವಿಗೆ ಸೇರಿರುವ ಜಿಲ್ಲೆಗಳನ್ನು ಸೇರಿಸಲು ನಮ್ಮ ವಿರೋಧವಿದೆ. ಅನೇಕ ತೊಂದರೆಗಳೊಂದಿಗೆ ಬಾಗಲಕೋಟೆಯಲ್ಲಿ ವಿವಿ ಸ್ಥಾಪಿಸಲಾಗಿದ್ದು, ಈ ವಿವಿ 24 ಜಿಲ್ಲೆಗಳಲ್ಲಿ ಕಾರ್ಯವ್ಯಾಪಿ ಹೊಂದಿದೆ. ಇಂತಹ ಸಂದರ್ಭದಲ್ಲಿ ಇದಕ್ಕೆ ಅನುದಾನ ನೀಡಿ, ಪ್ರೋತ್ಸಾಹಿಸುವುದನ್ನು ಬಿಟ್ಟು, ಇದರ ಸಾಮರ್ಥ್ಯ ಕುಗ್ಗಿಸಲು ಹೊರಟಿರುವುದು ಸರಿಯಲ್ಲ. ಇದರ ವಿರುದ್ಧ ಹೋರಾಟದ ಎಚ್ಚರಿಕೆ ನೀಡಿದರು.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/44/2024-25 ದಿನಾಂಕ: 06-02-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಅರ್ಜಿದಾರರಾದ **ಶ್ರೀ ರಾಮಯ್ಯ, ಶ್ರೀ ಮುನಿರಾಜು ಜೆ.ಆರ್. ಬಾಬು, ಶ್ರೀ ವೆಂಕಟೇಶ್. ಆರ್ ಮತ್ತು ಶ್ರೀ ನಾಗರಾಜು. ಆರ್** ಇವರುಗಳು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. 135/5 ರಲ್ಲಿನ 01 ಎಕರೆ 01 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/4920/ಅಡ್ವರ್ಟೋರ್/2024-25

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2024-25/6341 ದಿನಾಂಕ:.06.02.2025

-: ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಕೆ.ಪಿ.ಪಿ.ಪಿ.ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ : 5054 ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ, 5054 ರಾಜ್ಯ ಹೆದ್ದಾರಿ ರಸ್ತೆಗಳ ನವೀಕರಣ, 5054 ಜಿಲ್ಲಾ ಮುಖ್ಯ ರಸ್ತೆಗಳ ಸುಧರಣೆ, 5054 ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ ಮತ್ತು 5054 ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳ ಸುಧರಣೆ ಅಡಿಯಲ್ಲಿ ಸೇರಿ ಒಟ್ಟು 45 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 399.27 ಲಕ್ಷಗಳು ಹಾಗೂ ರೂ. 20.03 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಗರಿಷ್ಠ ಹಾಗೂ ಕನಿಷ್ಠ ಅನುಕ್ರಮವಾಗಿ ರೂ. 5,99,000/- ಹಾಗೂ ರೂ. 25,000/- ಇರುತ್ತದೆ. ಟೆಂಡರ ಸ್ವೀಕರಿಸುವ ದಿನಾಂಕ 27.02.2025 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 28.06.2024 ರ ಸಂಜೆ 4.45 ಘಂಟೆ ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 07.02.2025 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1627/KSMCA/2024-25

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವಿ:ಕಇಂ-3:ಟೆಂಡರ್39/2024-25
ದಿನಾಂಕ : 04.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.39/2024-25
ದಿನಾಂಕ: 04.02.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 39/2024-25:ದಿನಾಂಕ 04-02-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 3054-ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳು-ನಿರ್ವಹಣಾ ವೆಚ್ಚ ಹಾಗೂ 3054-ರಾಜ್ಯ ಹೆದ್ದಾರಿಗಳ ನಿರ್ವಹಣೆ-ನಿರ್ವಹಣಾ ವೆಚ್ಚ ಯೋಜನೆ ಅಡಿಯಲ್ಲಿ 2 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ:81.86 ಲಕ್ಷಗಳು ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ: 40.82 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ. 1,63,724/- ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ ರೂ. 81,645/-, ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 1 ಮತ್ತು 6 ತಿಂಗಳುಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 12-02-2025 ರ 17-00 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 05-02-2025 ರಿಂದ 13-02-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 13-02-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 14-02-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 15-02-2025 ರ 17-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/620/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ
ಸಂಖ್ಯೆ:26/2024-25/3282-85 ದಿನಾಂಕ:05-02-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3ರನ್ವಯ ದ್ವಿ ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಯಡಿಯ 2 ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ:18177, 18636) ಹಾಗೂ ಲೆಕ್ಕಶೀರ್ಷಿಕೆ: 5054-ಜಿಲ್ಲಾ ಮುಖ್ಯ ರಸ್ತೆ ನವೀಕರಣರಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ:18167) ಒಟ್ಟು 3 ಕಾಮಗಾರಿಗಳಿಗೆ ಇ-ಸಂಗ್ರಹಣಾ ವೇದಿಕೆ ಮೂಲಕ 1ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.80.38 ಲಕ್ಷ ಮತ್ತು ಗರಿಷ್ಠ ರೂ.83.85 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13-02-2025 ಸಂಜೆ 5.00 ಗಂಟೆಯಾಗಿರುತ್ತದೆ. ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ-ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ,

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ನಗರ, ಧಾರವಾಡ-580005,
ಮಿಂಚಂಚೆ : spo@uasd.in ದೂರವಾಣಿ ಸಂಖ್ಯೆ: 0836-2214384 / 231
ನಂ. ನಿ.ಅ/ಆಅ/ಟೆಂಡರ್.ಇಪ್ರೋಕ್-08/2024-25 ದಿನಾಂಕ : 01.02.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಲ್ಯಾಪಟಾಪಗಳ ಖರೀದಿಗಾಗಿ ಟೆಂಡರನ್ನು ಆಹ್ವಾನಿಸಿದ್ದು ನೋಂದಾಯಿತ ಅಧಿಕೃತ ಸರಬರಾಜುದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು http://kppp.karnataka.gov.in ಹಾಗೂ ಟೆಂಡರ ದಸ್ತಾವೇಜುಗಳನ್ನು ಡೌನಲೋಡ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **24.02.2025** (ಸೋಮವಾರ) ಸಾಯಂಕಾಲ 04.00 ಗಂಟೆಯವರೆಗೆ. ಟೆಂಡರ ವೇಳಾಪಟ್ಟಿಯ ಇತರ ಮಾಹಿತಿಯನ್ನು ಇ-ಪೋರ್ಟಲ್‌ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ **0836-2214231** ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಟೆಂಡರಿನಲ್ಲಿ ಭಾಗವಹಿಸಲಿಚ್ಚಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: **080-46010000**. ಭಾಗವಹಿಸುವ ಸರಬರಾಜುದಾರರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ **http://kppp.karnataka.gov.in** ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ಸಹಿ/- ಆಸ್ತಿ ಅಧಿಕಾರಿಗಳು,
ಕೃ.ವಿ.ವಿ. ಧಾರವಾಡ.
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/941/2024-25

ಪುರಸಭಾ ಕಾರ್ಯಾಲಯ ಅಂಕೋಲಾ (ಉ.ಕ) 581314
TOWN MUNICIPAL COUNCIL ANKOLA, UTTARA KANNADA DISTRICT, KARWAR -581314
ದೂರವಾಣಿ: 08388-230268 Website: www.ankolatown.gov.in Email: itstaff_ulb_ankola@yahoo.com co_ankola@yahoo.in
ಕ್ರ.ಪು.ಸ.ಅಂ.ಕಂ.ವಿಭಾಗವಿ.ವ/2024-25 ದಿನಾಂಕ: 03-02-2025

ಜಾಹೀರು ಪ್ರಕಟಣೆ (ಟೆಂಡರ್ ಕಮ್ ಆಕ್ಷನ್)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅಂಕೋಲಾ ಪುರಸಭೆ ಮಾಲೀಕತ್ವದ ತರಕಾರಿ ಮಾರುಕಟ್ಟೆ, ಸಂತೆ ಮಾರುಕಟ್ಟೆ, ರಸ್ತೆ ಬದಿ ವ್ಯಾಪಾರ ಮಾಡುವ ಹಬ್ಬ ಹರಿದಿನಗಳಲ್ಲಿ ಬರುವ ಕಬ್ಬು,ಹೂವು,ಹಣ್ಣು ಇತರೇ ವ್ಯಾಪಾರದ ಸ್ಟಾಲ್‌ಗಳಿಗೆ ಪ್ರತಿದಿನ ಫೀ ವಸೂಲಿ ಮಾಡುವುದು, ಮತ್ತು ಮೀನು ಮಾರುಕಟ್ಟೆ ಗುತ್ತಿಗೆ ಫೀ ವಸೂಲಿ ಹಾಗೂ ಮಿನು ಮಾರುಕಟ್ಟೆ ಒಳಗಡೆ ಇರುವ ಮೂರು ಮಟನ್ ಸ್ಟಾಲ್‌ಗಳಿಗೆ ಪ್ರತ್ಯೇಕವಾಗಿ ಹೀಗೆ ಇವೆಲ್ಲವುಗಳಿಗೆ ಸನ್ 2025-26 ನೇ ಸಾಲಿಗೆ ಅಂದರೆ ದಿನಾಂಕ: 01-04-2025 ರಿಂದ 31-03-2026 ರ ಅವಧಿಗೆ ಗುತ್ತಿಗೆ ನಾತೆಯಿಂದ ನೀಡುವ ಕುರಿತು ದಿನಾಂಕ: 18/02/2025 ರಂದು ಮಂಗಳವಾರ ಮುಂಜಾನೆ 11:00 ಗಂಟೆಗೆ ಪುರಸಭಾ ಸಭಾಭವನದಲ್ಲಿ ಪುರಸಭೆ ವಿಧಿಸಿದ ಶರ್ತಿಗೊಳಪಟ್ಟು ಟೆಂಡರ್ ಕಮ್ ಆಕ್ಷನ್ ಮಾಡಲಾಗುವುದು. ಆಸಕ್ತ ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸಿ ಪಡೆಯಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪುರಸಭೆಯ ವೆಬ್‌ಸೈಟ್ www.ankolatown.mrc.gov.in ನಲ್ಲಿ ಮತ್ತು ಕಂದಾಯ ವಿಭಾಗದಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14/02/2025 ಸಂಜೆ 4:00 ಗಂಟೆ ಯವರೆಗೆ ಇದ್ದು, ನಿಗದಿಪಡಿಸಿದ ಠೇವಣಿ ಹಣವನ್ನು ಅರ್ಜಿಯ ಜೊತೆ ಡಿ.ಡಿ ಲಗ್ತ ಇಟ್ಟು ಟೆಂಡರ್ ಫಾರ್ಮಗಳನ್ನು ಪಡೆಯಬಹುದಾಗಿದೆ. ಅರ್ಜಿಯ ಜೊತೆ ಡಿ.ಡಿ ಇಡದೆ ಇದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರಲಾರದು. ಟೆಂಡರ್ ಫಾರ್ಮಗಳನ್ನು ದಿನಾಂಕ: 15-02-2025 ರಂದು ಕಛೇರಿಯ ವೇಳೆಯಲ್ಲಿ ನೀಡಲಾಗುವುದು. ಟೆಂಡರ್ ಫಾರ್ಮಗಳನ್ನು ದಿನಾಂಕ: 17/02/2025 ರಂದು ಸಾಯಂಕಾಲ 4:00 ಗಂಟೆ ಒಳಗೆ ಟೆಂಡರ್ ದರ ನಮೂದಿಸಿ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು. ಅದರ ನಂತರದಲ್ಲಿ ಬಂದ ಟೆಂಡರ್‌ಗಳನ್ನು ಗಣನೆಗೆ ತೆಗೆದುಕೊಳ್ಳಲು ಬರಲಾರದು. ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ಶರ್ತುಗಳನ್ನು ಹರಾಜು ಪ್ರಕ್ರಿಯೆ ದಿನ ಓದಿ ಹೇಳಲಾಗುವುದು. ಟೆಂಡರ್ ಕಮ್ ಜಾಹೀರ ಲೀಲಾವಿನಲ್ಲಿ ವಿಜೇತ ಗುತ್ತಿಗೆದಾರರು ಟೆಂಡರ್ ರಖಂ ನ ಪೂರ್ತಿ ಹಣವನ್ನು ದಿನಾಂಕ: 20/02/2025 ರಂದು ಅಪರಾಹ್ನ 1:00 ಗಂಟೆ ಒಳಗೆ ಡಿ.ಡಿ ಮುಖಾಂತರ ನೀಡದೆ ಇದ್ದಲ್ಲಿ ಠೇವಣಿ ಹಣವನ್ನು ಮುಟ್ಟಗೋಲು ಹಾಕಿ ನಿಯಮಾನುಸಾರ ಕ್ರಮ ವಹಿಸಲಾಗುವುದು. ಮತ್ತು ಮುಂದೆ ಬಿಡ್‌ದಾರರಿಗೆ ಯಾವುದೇ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ ಹಾಗೂ ಹರಾಜಿಗೆ ಸಂಬಂಧಿಸಿದ ಠೇವಣಿಗಳು ಈ ಕೆಳಗಿನಂತೆ ಇರುತ್ತದೆ.

ಅ. ನಂ.	ಸ್ಥಳ	ಪ್ರಾರಂಭಿಕ ಠೇವಣಿ	ಅವಧಿ	ಬಹಿರಂಗ ಹರಾಜು ಜರಗುವ ದಿನಾಂಕ ಮತ್ತು ಸಮಯ
1	ತರಕಾರಿ ಮಾರ್ಕೆಟ ಫೀ ವಸೂಲೀ ಗುತ್ತಿಗೆ	4.00 ಲಕ್ಷ	ದಿನಾಂಕ: 01-04-2025 ರಿಂದ 31-03-2026	18-02-2025 ಮುಂಜಾನೆ 11.:00 ಗಂಟೆ
2	ಮೀನು ಮಾರ್ಕೆಟ ಫೀ ವಸೂಲೀ ಗುತ್ತಿಗೆ	3.00 ಲಕ್ಷ		
3	ಮಟನ್ ಸ್ಟಾಲ್ ನಂ. 1	50,000/-		
	ಮಟನ್ ಸ್ಟಾಲ್ ನಂ. 2	50,000/-		
	ಮಟನ್ ಸ್ಟಾಲ್ ನಂ. 3	50,000/-		

ಸಹಿ/-, ಮುಖ್ಯಾಧಿಕಾರಿ, ಪುರಸಭೆ ಅಂಕೋಲಾ
ಸಹಿ/-, ಅಧ್ಯಕ್ಷರು, ಪುರಸಭೆ ಅಂಕೋಲಾ
DIPR/KWR/KSMCA/854/24-25 dt.07.02.25

ಸಮಗ್ರ ಶಿಕ್ಷಣ ಕರ್ನಾಟಕ ದಾವಣಗೆರೆ
ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ದಾವಣಗೆರೆ.
ಸಂಖ್ಯೆ:ಸಶಿಕ/ಯೋ-01/ICT DT/STL/2024-25 ದಿನಾಂಕ:07/02/2025

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

2021-22ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಅನುಷ್ಠಾನಕ್ಕಾಗಿ ICT ಮತ್ತು DIGITAL INITIATIVES (SECONDARY) ಚಟುವಟಿಕೆಯಡಿ ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಮತ್ತು ಪ್ರೌಢಶಾಲೆಗಳಿಗೆ ಸೃಷ್ಟಿ ಟಿಂಕರಿಂಗ್ ಲ್ಯಾಬ್ ಸ್ಥಾಪಿಸಲು ಆಸಕ್ತ ಅರ್ಹ ನೊಂದಾಯಿತ ಏಜೆನ್ಸಿ/ಸಂಸ್ಥೆ/ಉತ್ಪಾದಕರಿಂದ ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

Particulars:- **(1)** TENDER FOR PURCHASE, SUPPLY AND INSTALLATION OF THE LAPTOP, AIO, UPS-2KV&1KV TO 03 GOVT HIGH SCHOOL IN THE DAVANAGERE DISTRICT.
Tender Approximate Amount:- Rs.15,60,000/-
(1) TENDER FOR PURCHASE OF SUPPLY AND INSTALLATION OF LAB MATERIAL & EQUIPMENT'S TO SRISHTI TINKERING LABS FOR 05 GOVERNMENT HIGH SCHOOLS IN DAVANAGERE DISTRICT/ CALL-2. Tender Approximate Amount:- Rs.39,25,000/-
ದಿನಾಂಕ:07/02/2025 ರಿಂದ ದಿನಾಂಕ:15/02/2025ರ ಸಂಜೆ:5.30ರವರೆಗೆ www.kppp.karnataka.gov.in ಜಾಲತಾಣದಲ್ಲಿ ಅಳವಡಿಸುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17/02/2025ರ ಬೆಳಿಗ್ಗೆ 11.00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ:19/02/2025ರ ಬೆಳಗ್ಗೆ 11.00 ಗಂಟೆ.
ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:-9448999394, 9480886935

ವಾಸಾಇ/ದಾವಣಗೆರೆ/729/ಕೆಎಸ್‌ಎಂಸಿಎ/2024-25
ಸಹಿ/- ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ, ಶಾ.ಶಿ.ಇಲಾಖೆ, ದಾವಣಗೆರೆ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105, ದೂ: 08472-220817,
E-mail ID : kwbceklb14@gmail.com
ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಒಳಚರಂಡಿ/ಶಹಾಪೂರ/2024-25/1358 ದಿನಾಂಕ: 07-02-2025

:: ಟೆಂಡರ್ ಆಹ್ವಾನಿಸುವ ಸೂಚನೆ ::

1) ಕಾಮಗಾರಿ ವಿವರ: ಯಾದಗಿರಿ ಜಿಲ್ಲೆಯ ಶಹಾಪೂರ ನಗರಕ್ಕೆ ಒಳಚರಂಡಿ ಯೋಜನೆ ಕಲ್ಪಿಸುವ ಜೊತೆಗೆ 05 ವರ್ಷದ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ (01 ವರ್ಷದ ಡಿಫೆಕ್ಟ್ ಲಿಯಬಾಲಿಟಿ ಅವಧಿ ಸೇರಿಸಿ) ಡಿಸೈನ್, ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್ಪರ್ (DBOT) ಮುಖಾಂತರ ವೇರಿಯೇಷನ್ ಇರುವುದಿಲ್ಲ. (ವರ್ಕ ಇಂಡೆಂಟ್ ಸಂಖ್ಯೆ : **ಕೆಯುಡಬ್ಲ್ಯೂಎಸ್.ಡಿ.ಬಿ/2024-25/ಡಬ್ಲ್ಯೂ.ಎಸ್/ವರ್ಕ_ಇಂಡೆಂಟ್307**), 2) ಕಾಮಗಾರಿ ಅಂದಾಜು ಮೊತ್ತ: **ರೂ. 19683.19 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ)**, 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: **ರೂ. 1,96,83,000/-**, 5) ಕಾಮಗಾರಿಯ ಅವಧಿ : 36 ತಿಂಗಳು (ಮಳೆಗಾಲ ಸೇರಿ), 6) ಇ-ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ : **11-02-2025 ಸಮಯ: 17:00 ಗಂಟೆಯ ನಂತರ,** 7) ಪೂರ್ವ ಟೆಂಡರ್ ಸಭೆ ದಿನಾಂಕ: **25-02-2025 ಸಮಯ 11:30 ಗಂಟೆಯುವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **12-03-2025 ಸಮಯ 16:30 ಗಂಟೆಯವರೆಗೆ,** 9) ಟೆಂಡರ್ ತೆರೆಯುವ ದಿನಾಂಕ: **13-03-2025 ಸಮಯ 17:00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ-585105 ದೂ: 08472-220817 E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/- ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/933/ಕೆ.ಎಸ್.ಎಂ.ಸಿ.&ಎ/2024-25

ಟ್ವೀಟೂ-ಖಾರಾ

ಜಾತ್ಯತೀತ ಜನತಾ ದಳ, ಕರ್ನಾಟಕ

ಕಮೀಷನ್ ಕಾಂಗ್ರೆಸ್ ಸರಕಾರದ ದುರಾಡಳಿತ ಎಂದರೇ ಇದೆ ನೋಡಿ. ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ಕಳಸ ತಹಸೀಲ್ದಾರ್ ನೀಡಿದ್ದ ಚೆಕ್ ಬೌನ್ಸ್ ಆಗಿದೆ. ಕಾಂಗ್ರೆಸ್ ಸರಕಾರದಲ್ಲಿ ಪರ್ಸಂಟೇಜ್ ಕೊಡದಿದ್ದರೆ ಯಾವುದೇ ಕೆಲಸ ಆಗುವುದಿಲ್ಲ ಎನ್ನುವುದು ಮಾತ್ರ ಗ್ಯಾರಂಟಿ.

ಮಂಜುನಾಥ್ ಎಚ್.ಪಿ., ಬೆಂಗಳೂರು

ಸೂಪರ್ ಕಾಂಗ್ರೆಸ್ ಸರಕಾರ..!

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಮೈಸೂರು

ಸಮಸ್ಯೆಯೇನು..?

- ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ನಿವೇಶನ ಸಂಖ್ಯೆ 3363 ರಲ್ಲಿ ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ ನಿರ್ಮಾಣ ಮಾಡಿರುವ ಮಹಡಿಯ ಬಗ್ಗೆ.
- **ಪರಿಹಾರ:** ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ನಿವೇಶನ ಸಂಖ್ಯೆ 3363 ರಲ್ಲಿ ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ ನಿರ್ಮಾಣ ಮಾಡಿರುವ ಮಹಡಿಯ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದರು. ಈ ಮಹಡಿಯನ್ನು ತೆರವುಗೊಳಿಸಿ ಕ್ರಮಕೈಗೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

ನ್ಯಾಕ್ ಲಂಚ ಪ್ರಕರಣ ಪ್ರಾಧ್ಯಾಪಕಿ ಅಮಾನತು

ದಾವಣಗೆರೆ: ನ್ಯಾಕ್ ಪರಿಶೀಲನಾ ಸಮಿತಿಯ ಲಂಚ ಪ್ರಕರಣದಲ್ಲಿ ಸಿಬಿಐನಿಂದ ಬಂಧನಕ್ಕೆ ಒಳಗಾಗಿರುವ ದಾವಣಗೆರೆ ವಿಶ್ವವಿದ್ಯಾಲಯದ ಮೈಕ್ರೊ ಬಯಾಲಜಿ ವಿಭಾಗದ ಪ್ರೊ.ಗಾಯತ್ರಿ ದೇವರಾಜ ಅವರನ್ನು ಅಮಾನತು ಮಾಡಲಾಗಿದೆ. ಗುರುವಾರ ನಡೆದ ದಾವಣಗೆರೆ ವಿಶ್ವವಿದ್ಯಾಲ ಯದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ನ್ಯಾಕ್ ಪ್ರಕರಣದ ಬಗ್ಗೆ ಚರ್ಚಿಸಿ, ಗಾಯತ್ರಿ ಅವರನ್ನು 6 ತಿಂಗಳ ಅವಧಿಗೆ ಅಮಾನತು ಮಾಡಿ ನಿರ್ಣಯ ಕೈಗೊಳ್ಳಲಾಗಿದೆ. ಕೆಸಿಎಸ್‌ಆರ್ ನಿಯಮಗಳ ಪ್ರಕಾರ ಪ್ರೊ. ಗಾಯತ್ರಿ ದೇವರಾಜ ಅವರನ್ನು ಅಮಾನತು ಗೊಳಿಸಲಾಗಿದೆ. ಆದೇಶದ ಪ್ರತಿಯನ್ನು ರಾಜ್ಯ ಪಾಲರು ಹಾಗೂ ಸರಕಾರಕ್ಕೆ ಕಳುಹಿಸಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ತಿಳಿಸಿದ್ದಾರೆ. ನ್ಯಾಕ್ ತಪಾಸಣಾ ಸಮಿತಿಯ ಸದಸ್ಯರೂ ಆಗಿದ್ದ ಗಾಯತ್ರಿ ಅವರನ್ನು ಲಂಚ ಪಡೆದ ಆರೋಪದಲ್ಲಿ ಸಿಬಿಐ ಅಧಿಕಾರಿಗಳು ಇತ್ತೀಚೆಗೆ ವಿಚಾರಣೆ ನಡೆಸಿ ಬಂಧಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವೆ ಯಾಗಿಯೂ ಕಾರ್ಯ ನಿರ್ವಹಿಸಿದ್ದ ಅವರ ನಿವಾಸಕ್ಕೂ ಭೇಟಿ ನೀಡಿ ಪರಿಶೀಲಿಸಿದ್ದರು.

ಟಿಪ್ಪರ್ ಹರಿದು ಬಾಲಕ ಸ್ಥಳದಲ್ಲೇ ಸಾವು

ಗದಗ: ಟಿಪ್ಪರ್ ಹರಿದು ಆರು ವರ್ಷದ ಬಾಲಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಶುಕ್ರವಾರ ಮಧ್ಯಾಹ್ನ ಗದಗ ತಾಲೂಕಿನ ಹರ್ತಿ ಗ್ರಾಮದಲ್ಲಿ ನಡೆದಿದೆ. ಪ್ರೀತಮ್ ಹರಿಜನ (6) ವರ್ಷದ ಬಾಲಕ ಅಪಘಾತದಲ್ಲಿ ಕೊನೆಯುಸಿ ರುಳೆದಿದ್ದಾನೆ. ಹರ್ತಿ

ಗ್ರಾಮದ ಬಸ್ ನಿಲ್ದಾಣದ ಮುಂದೆ ಈ ದುರ್ಘಟನೆ ನಡೆದಿದ್ದು, ಸಾವನ್ನಪ್ಪಿ ರುವ ಬಾಲಕ ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಹಿಂಡಸಗೇರಿ ಗ್ರಾಮದವನು ಎನ್ನಲಾಗಿದೆ. ಬಾಲಕ ಪ್ರೀತಮ್ ತಾಯಿಯೊಂದಿಗೆ ಯತ್ನಳ್ಳಿ ಗ್ರಾಮಕ್ಕೆ ಆಗಮಿಸಿದ್ದರು ಎನ್ನಲಾಗಿದೆ. ಬಸ್ ನಿಲ್ದಾಣದ ಬಳಿ ವೇಗವಾಗಿ ಬಂದ್ ಟಿಪ್ಪರ್ ಬಾಲಕನಿಗೆ ಡಿಕ್ಕಿಯಾಗಿ ಉಸಿರು ಚೆಲ್ಲಿದ್ದಾನೆ. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಟೈಯರ್‌ಗೆ ಬೆಂಕಿ ಹಚ್ಚಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದಾರೆ. ಗದಗ-ಲಕ್ಷ್ಮೇಶ್ವರ ಹೆದ್ದಾರಿ ಬಂದ್ ಮಾಡಿ ಆರ್‌ಟಿ ಓ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರತಿಭಟನೆಯಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದು, ಪ್ರಯಾಣಿಕರು ಪರದಾಟ ನಡೆಸುವಂತಾ ಯಿತು. ಇತ್ತ ಬಾಲಕನನ್ನು ಕಳೆದುಕೊಂಡ ಪೋಷ ಕರು ಕಣ್ಣೀರು ಹಾಕಿದ್ದಾರೆ. ಗದಗ ಗ್ರಾಮೀಣ ಪೊಲೀ ಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ಜರುಗಿದೆ.

ವಿರಾಮ
ಪ್ರತಿ ಭಾನುವಾರ

ದೇವೇಗೌಡರು ಹಿರಿತನಕ್ಕಿರುವ ಗೌರವವನ್ನು ಉಳಿಸಿಕೊಳ್ಳಲಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಚಾರಕ್ಕೆ ಮಾತನಾಡದೆ ಬದ್ಧತೆ ತೋರಿಸಿ: ಡಿಸಿಎಂ

ರಾಮನಗರ: ಪ್ರಧಾನಿ ಮೋದಿ ಅವರ ಕೈ ಹಿಡಿದು ಮೇಕೆದಾಟು ಅಣೆಕಟ್ಟೆ ಯೋಜನೆಗೆ ಸಹಿ ಹಾಕಿಸುವೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಹೇಳಿದ್ದರು. ಇನ್ನೂ ಯಾಕೆ ಸಹಿ ಹಾಕಿಸಿಲ್ಲ? ಕೇವಲ ಪ್ರಚಾರಕ್ಕೆ ಮಾತನಾಡದೆ, ರಾಜಕೀಯ ಬದ್ಧತೆ ಪ್ರದರ್ಶಿಸಬೇಕು. ಅವರ ಹಿರಿತನಕ್ಕಿರುವ ಗೌರವವನ್ನು ಉಳಿಸಿಕೊಳ್ಳಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿಗೆ ನೀರು ಕೊಡಿಸುವುದೇ ನನ್ನ ಕೊನೆಯ ಆಸೆ' ಎಂಬ ದೇವೇಗೌಡರ ಹೇಳಿಕೆ ಕುರಿತು ತಾಲೂಕಿನ ಶಿವನಹಳ್ಳಿಯಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನಾವು ಮೇಕೆದಾಟು ಪಾದಯಾತ್ರೆ ಮಾಡಿದಾಗ ಇವರೇ ಟೀಕಿಸಿದ್ದರು. ಈಗ ಅವರ ಮೈತ್ರಿಕೂಟವೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಯಾಕೆ ಅನುಮತಿ ಕೊಡಿಸಿಲ್ಲ?' ಎಂದು ಪ್ರಶ್ನಿಸಿದರು.

ಹಳ್ಳಿ ಹಳ್ಳಿಗೂ ನೀರು: ಈ ಡಿ.ಕೆ. ಶಿವಕುಮಾರ್ ಬೆಂಗಳೂರಿನ ಚರಿತ್ರೆಗೆ ಸೇರುವಂತಹ ಕೆಲಸ ಮಾಡಿದ್ದಾನೆ. ನಾನು ಡಿಸಿಎಂ ಆದ ತಕ್ಷಣ ಎಲ್ಲಾ ಕಡೆ ಕುಡಿಯುವ ನೀರನ್ನು ಮೀಸಲಿಟ್ಟಿದ್ದು, ಹಳ್ಳಿಗಳಿಗೂ ನೀರು ಕೊಡಲಾಗುತ್ತಿದೆ. ತೊರೆಕಾಡನಹಳ್ಳಿ ಮತ್ತು ಎತ್ತಿನಹೊಳೆಯಿಂದ ನೀರು ತಂದಿದ್ದೇವೆ. ತುಮಕೂರಿನವರೆಗೂ ನೀರು ಕೊಡಲಿದ್ದೇವೆ. ಹಿಂದಿನ ಬಿಜೆಪಿ ಅಥವಾ ಜೆಡಿಎಸ್ ಸರಕಾರ ಈ ಕೆಲಸ ಮಾಡಲಿಲ್ಲ. ಇದು ಕಾಂಗ್ರೆಸ್ ಸಂಕಲ್ಪ' ಎಂದರು.

ಆಡಳಿತ ಪಕ್ಷದ ಸಂಸದರು ದನಿ ಎತ್ತಿಲ್ಲ: ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಏನೂ ಸಿಕ್ಕಿಲ್ಲ. ರಾಜ್ಯದ ಪರವಾಗಿ ದೇವೇಗೌಡರು, ಕುಮಾರಸ್ವಾಮಿ, ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ಆಡಳಿತ ಪಕ್ಷದ ಸಂಸದರು ದನಿ ಎತ್ತಿಲ್ಲ. ಯಾವ ಯೋಜನೆಗೂ ಅನುಮತಿ ಕೊಡಿಸದಿದ್ದರೂ ದೊಡ್ಡ

ರಾಜ್ಯಕ್ಕೆ ಕೇಂದ್ರದಿಂದ ಅನುದಾನ ತರುವ ಕುರಿತು, ರಾಜ್ಯದ ಯಾವ ಸಚಿವರೂ ನನ್ನೊಂದಿಗೆ ಚರ್ಚಿಸಿಲ್ಲ ಎಂದಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಹಾಸ್ಯಾಸ್ಪದ. ಅವರ ಜತೆ ಯಾಕೆ ಚರ್ಚಿಸಬೇಕು? ರಾಜ್ಯಕ್ಕೇನು ಕೊಡಿಸಬೇಕು ಎಂಬ ಜವಾಬ್ದಾರಿ ಅವರಿಗಿಲ್ಲವೇ?.

ಡಿ.ಕೆ.ಶಿವಕುಮಾರ್, ಡಿಸಿಎಂ

ಮಾತುಗಳನ್ನಾಡುತ್ತಾರೆ. ನಮ್ಮನ್ನು ಟೀಕೆ ಮಾಡುವುದರಿಂದ ಅವರಿಗೆ ಸಂತೋಷವಾಗುತ್ತಿದೆ. ಆಗಲಿ, ಅವರ ಸಂತೋಷವೇ ನಮ್ಮ ಸಂತೋಷ' ಎಂದು ವ್ಯಂಗ್ಯವಾಡಿದರು.

ವೈಯಕ್ತಿಕ ಹಿತಾಸಕ್ತಿಯೇ ಹೆಚ್ಚು: ಬಜೆಟ್‌ಗೆ ಮುಂಚೆ ನಮ್ಮ ಸಚಿವರು ಪ್ರಧಾನಿಯನ್ನು ಭೇಟಿಯಾಗಿದ್ದಾರೆ. ಇಷ್ಟಕ್ಕೂ ಕುಮಾರಸ್ವಾಮಿ ಅವರೇನು ಹಣಕಾಸು ಸಚಿವರಾ? ಅವರಿಗೆ ರಾಜ್ಯದ ಕುರಿತು ಕಾಳಜಿ ಇದ್ದರೆ ಕೆಲಸ ಮಾಡಬೇಕು. ಆದರೆ, ಅವರಿಗೆ ರಾಜ್ಯ ಮತ್ತು ದೇಶದ ಕುರಿತ ಕಾಳಜಿಗಿಂತ ವೈಯಕ್ತಿಕ ಹಿತಾಸಕ್ತಿಯೇ ಹೆಚ್ಚು' ಎಂದು ವಾಗ್ದಾಳಿ ನಡೆಸಿದರು. ಪ್ರತಿಪಕ್ಷದ ನಾಯಕ ಆರ್. ಅಶೋಕ ಅವರು ಜೋತಿಷ್ಯ ಕಲಿಯುತ್ತಿದ್ದಾರೆಂದು ತಿಳಿದು ಸಂತೋಷವಾಯಿತು. ನನಗೂ ಈ ಜ್ಯೋತಿಷ್ಯದ ಚಟವಿದೆ. ಸಮಯ ಕೊಟ್ಟರೆ ನಾನೂ ಅವರ ಬಳಿಗೆ ಹೋಗಿ ಜ್ಯೋತಿಷ್ಯ ಕೇಳಿಕೊಂಡು ಬರುತ್ತೇನೆ ಎಂದು ನವೆಂಬರ್‌ನಲ್ಲಿ ಸಿದ್ದರಾಮಯ್ಯ ಅವರು ಸಿ.ಎಂ ಕುರ್ಚಿಯಲ್ಲಿ ಇರಲ್ಲ' ಎಂಬ ಆರ್. ಅಶೋಕ ಮಾತಿಗೆ ವ್ಯಂಗ್ಯವಾಡಿದರು.

ಎರಡು ದಿನಗಳಲ್ಲಿ ಬಜೆಟ್ ದಿನಾಂಕ ಘೋಷಣೆ

ಇನ್ನೆರಡು ದಿನಗಳಲ್ಲಿ ಬಜೆಟ್ ದಿನಾಂಕ ಘೋಷಣೆಯಾಗಲಿದೆ. ಮುಖ್ಯಮಂತ್ರಿ ಕೂಡ ಮುಂದಿನ ತಿಂಗಳ ಮೊದಲ ವಾರದಲ್ಲಿ ಬಜೆಟ್ ಮುಂಡಿಸಲು ತಯಾರಿ ಮಾಡಿಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗಳು ಜನರಿಗೆ ನಾವು ಕೊಟ್ಟಿರುವ ಆರ್ಥಿಕ ಶಕ್ತಿ. ವರ್ಷಕ್ಕೆ 56 ಸಾವಿರ ಕೋಟಿ ಮೊತ್ತವು ಜನರನ್ನು ತಲುಪುತ್ತಿದೆ. ಬದುಕಿನ ಸುಧಾರಣೆ ಹಾಗೂ ಸ್ವಾವಲಂಬನೆಗಾಗಿ ಈ ಯೋಜನೆ ಜಾರಿಗೆ ತಂದಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

- ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಏನೂ ಸಿಕ್ಕಿಲ್ಲ.
- ರಾಜ್ಯದ ಪರವಾಗಿ ದೇವೇಗೌಡರು, ಕುಮಾರಸ್ವಾಮಿ ಸೇರಿದಂತೆ ಆಡಳಿತ ಪಕ್ಷದ ಸಂಸದರು ದನಿ ಎತ್ತಿಲ್ಲ.
- ಯಾವ ಯೋಜನೆಗೂ ಅನುಮತಿ ಕೊಡಿಸದಿದ್ದರೂ ದೊಡ್ಡ ಮಾತುಗಳನ್ನಾಡುತ್ತಾರೆ.
- ಜೆಡಿಎಸ್, ಬಿಜೆಪಿ ನಾಯಕರ ವಿರುದ್ಧ ಡಿಸಿಎಂ ಡಿಕೆಶಿ ಕಿಡಿ

ಮೈಕ್ರೋಫೈನಾನ್ಸ್ ಸುಗ್ರೀವಾಜ್ಞೆ ಮರು ಅನುಮೋದನೆಗೆ ರಾಜ್ಯ ಸರಕಾರ ಮನವಿ

ರಾಜ್ಯಪಾಲರ ತಪ್ಪು ಗ್ರಹಿಕೆಯಿಂದ ಸುಗ್ರೀವಾಜ್ಞೆ ತಿರಸ್ಕಾರ: ಎಚ್‌ಕೆಪಿ

ವಿಜಯಪುರ: ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಹೊರಡಿಸಿರುವ ಸರಕಾರದ ಉದ್ದೇಶವನ್ನು ರಾಜ್ಯಪಾಲರು ಸಂಪೂರ್ಣ ವಾಗಿ ಅರ್ಥೈಸಿಕೊಂಡಿಲ್ಲ, ತಪ್ಪು ಗ್ರಹಿಕೆ, ಮಾಹಿತಿ ಕೊರತೆಯಿಂದ ತಿರಸ್ಕರಿಸಿದ್ದಾರೆ ಎಂದು ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸುಗ್ರೀವಾಜ್ಞೆಯನ್ನು ತಿರಸ್ಕರಿಸಲು ರಾಜ್ಯಪಾಲರು ನೀಡಿರುವ ಕಾರಣಗಳ ಬಗ್ಗೆ ಸೂಕ್ತ ವಿವರವನ್ನು ನೀಡುವ ಮೂಲಕ ಅನುಮೋದಿಸುವಂತೆ ಮರು ಮನವಿ ಮಾಡಲಾಗುವುದು ಎಂದು ಹೇಳಿದರು.

ಕಾನೂನಾತ್ಮಕವಾಗಿ ನೋಂದಾಯಿತ ಸಂಸ್ಥೆ ಅಥವಾ ವ್ಯಕ್ತಿಗಳು ನಿಯಮಾನುಸಾರ ನೈಜ ಸಾಲ ನೀಡಿದವರು ವಸೂಲಿ ಮಾಡಬಾರ ದೆಂದು ಅಥವಾ ಅಂತಹ ಸಾಲಗಳು ವಸೂಲಿಗೆ ಅರ್ಹವಿಲ್ಲ ಎಂದು ಸರಕಾರ ರಾಜ್ಯಪಾಲರಿಗೆ ಸಲ್ಲಿಸಿರುವ ಸುಗ್ರೀವಾಜ್ಞೆಯಲ್ಲಿ ಎಲ್ಲಿಯೂ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇವಲ ಸಾಲ ವಸೂಲಾತಿಗೆ ಕಾನೂನು ಬಾಹಿರ ಕ್ರಮಗಳನ್ನು ಕೈಗೊಳ್ಳುವುದು, ಹಿಂಸೆ ಮಾಡುವುದು ಮತ್ತು ಒತ್ತಡ ತಂತ್ರ ಹೇರುವುದು ಹಾಗೂ ಕಿರುಕುಳಕ್ಕೆ ಕಾರಣವಾಗು ವುದನ್ನು ತಡೆಯಲು ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿಸಲಾಗಿದೆ. ನೈಸರ್ಗಿಕ ನ್ಯಾಯ ಮತ್ತು ಯಾವುದೇ ವ್ಯಕ್ತಿಯ ಹಕ್ಕುಗಳಿಗೆ ಮತ್ತು ಕಾನೂನಾತ್ಮಕ ಹೋರಾಟಕ್ಕೆ, ಮೂಲಭೂತ ಹಕ್ಕುಗಳಿಗೆ ಧಕ್ಕೆ ತರುವಂತಹ ಯಾವುದೇ ಕ್ರಮ ಸುಗ್ರೀವಾಜ್ಞೆಯಲ್ಲಿ ಪ್ರಸ್ತಾಪಿಸಿಲ್ಲ ಎಂದರು.

ಸುಗ್ರೀವಾಜ್ಞೆಯಲ್ಲಿ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು 5 ಲಕ್ಷದವರೆಗೆ



ಕಾನೂನು ಪ್ರಕಾರ ನೀಡಿದ ಸಾಲ ಮಾತ್ರ ವಸೂಲಿಗೆ ಅರ್ಹ. ರಾಜ್ಯಪಾಲರು ಕಾನೂನು ಉಲ್ಲಂಘಿಸಿ ಸಾಲ ನೀಡುವವರಿಗೆ ಹಕ್ಕುಗಳ ಬಗ್ಗೆ ಮಾತನಾಡಿದ್ದಾರೆ. ಒತ್ತಾಯ ಪೂರ್ವಕವಾಗಿ ಸಾಲ ವಸೂಲಿ ಮಾಡುವುದು ಕಾನೂನು ಬಾಹಿರ ಎಂಬುದು ಸರಕಾರದ ನಡೆಯಾಗಿದೆ. ಸುಗ್ರೀವಾಜ್ಞೆ ಬಗ್ಗೆ ರಾಜ್ಯಪಾಲರು ತಪ್ಪು ಗ್ರಹಿಕೆ ಹೊಂದಿದ್ದಾರೆ.

-ಎಚ್.ಕೆ.ಪಾಟೀಲ , ಕಾನೂನು ಸಚಿವ

ವಿಸ್ತರಿಸಬಹುದಾದ ದಂಡ ವಿಧಿಸಲು ಮುಂದಾಗಿರುವುದು ಹಾಗೂ ಜಾಮೀನು ರಹಿತ ಶಿಕ್ಷೆ ವಿಧಿಸುವುದು ನೈಸರ್ಗಿಕ ನ್ಯಾಯಕ್ಕೆ ವಿರುದ್ಧವಾಗಿದೆ ಎಂಬ ರಾಜ್ಯಪಾಲರ ಆಕ್ಷೇಪ ಸರಿಯಲ್ಲ. ಸಾಲ ಕೊಟ್ಟಿರುವ ಮೊತ್ತ ಪರಿಗಣಿಸಿ ದಂಡ ಅಥವಾ ಶಿಕ್ಷೆ ವಿಧಿಸಿಲ್ಲ. ಸಾಲ ವಸೂಲಾತಿ ಪ್ರಕ್ರಿಯೆ ಸಂದರ್ಭದಲ್ಲಿ ಕಿರುಕುಳ, ಒತ್ತಡ ತಂತ್ರ, ಹಿಂಸೆ ಮಾಡುವ ಮೂಲಕ ವಸೂಲಾತಿಯ ಕ್ರಮಗಳಿಗೆ ದಂಡ ಮತ್ತು ಶಿಕ್ಷೆಯನ್ನು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ನೋಂದಾಯಿತ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಸಾಲ ನೀಡುವಿಕೆ ,ವಸೂಲಾತಿ ಪ್ರಕ್ರಿಯೆ ಬಗ್ಗೆ ಸುಗ್ರೀವಾಜ್ಞೆಯಲ್ಲಿ ಉಲ್ಲೇಖಿಸಿಲ್ಲ ಎಂದರು.

ನಟಿ ಜಯಮಾಲಾ ಪುತ್ರಿ ವಿವಾಹಕ್ಕೆ ಗಣ್ಯಾತಿಗಣ್ಯರ ದಂಡು, ಚಿತ್ರೋದ್ಯಮದ ಕಲಾವಿದರ ಮೆರಗು

ನಟಿ ಜಯಮಾಲಾ ಪುತ್ರಿ ಸೌಂದರ್ಯ- ಅಳಿಯ ರುಷಭ್‌ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಭ ಕೋರಿದರು.

ಜಯಮಾಲಾ ಪುತ್ರಿ ಸೌಂದರ್ಯ- ರುಷಭ್‌ಗೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸುಷ್ಮಾ ಭಟ್ ಶುಭ ಹಾರೈಸಿದರು.

ಪದ್ಮಭೂಷಣ, ಹಿರಿಯ ನಟ ಅನಂತನಾಗ್ ಅವರಿಂದ ನೂತನ ವಧು-ವರರಿಗೆ ಶುಭ ಕಾಮನೆಗಳು.

ಜಯಮಾಲಾ ಪುತ್ರಿ ಸೌಂದರ್ಯ ಮತ್ತು ಅಳಿಯ ರುಷಭ್ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಂದ ಶುಭ ಹಾರೈಕೆ.

ಕಾನೂನು ಪ್ರಕಾರವಾಗಿ ನನ್ನ ಹೋರಾಟ ಮುಂದುವರಿಯಲಿದೆ

ಮುಡಾ ಪ್ರಕರಣ: ಹೈಕೋರ್ಟ್ ತೀರ್ಪು ಪ್ರಶ್ನಿಸಿ ಮೇಲ್ಮನವಿ

ಮೈಸೂರು: ಮುಡಾ ಹಾಗೂ ಸಿದ್ದರಾಮಯ್ಯ ವಿಚಾರದಲ್ಲಿ ಕಾನೂನು ಪ್ರಕಾರವಾಗಿ ನನ್ನ ಹೋರಾಟ ಮುಂದುವರಿಯಲಿದೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಹೈಕೋರ್ಟ್ ನಲ್ಲಿ ನಮಗೆ

ಹಿನ್ನಡೆಯಾಗಿದೆ. ಹಾಗಂತ ನನ್ನ ಹೋರಾಟ ನಿಲ್ಲಿಸುವುದಿಲ್ಲ. ಕಾನೂನು ಪ್ರಕಾರವಾಗಿ ನನ್ನ ಹೋರಾಟ ಮುಂದುವರಿಯಲಿದೆ ಎಂದರು.

ಹೈಕೋರ್ಟ್ ಆದೇಶವನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಮೇಲ್ಮನವಿ ಸಲ್ಲಿಸುತ್ತೇನೆ. ಮುಡಾದಲ್ಲಿ ಸಿಎಂ ಸಿದ್ದರಾಮಯ್ಯ ಪತ್ನಿ ಪಾರ್ವತಿ ಹೆಸರಲ್ಲಿ ಅಕ್ರಮವಾಗಿ 14 ನಿವೇಶನಗಳನ್ನು ಪಡೆದಿರುವುದು ನಿಜ. ಸಿದ್ದರಾಮಯ್ಯನವರು ಸಿಎಂ ಆಗಿರುವುದರಿಂದ ಲೋಕಾಯುಕ್ತ ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಹಾಗಾಗಿ ಸಿಬಿಐ ತನಿಖೆಗೆ ಕೋರಿದ್ದೇನೆ. ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸುತ್ತೇನೆ ಎಂದರು.

ನಮ್ಮ ಹೋರಾಟಕ್ಕೆ ಒಂದು ಸಣ್ಣ ಹಿನ್ನಡೆಯಾಗಿದೆ. ಇದರಿಂದ ನಾನು ನನ್ನ ಹೋರಾಟದಿಂದ ಹಿಂದೆ ಸರಿಯುವುದಿಲ್ಲ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೇನೆ. ಯಾವ ವಿಚಾರವನ್ನು ಇಟ್ಟುಕೊಂಡು ವಜಾ ಮಾಡಿದೆ ಗೊತ್ತಿಲ್ಲ. ಆ ಅಂಶಗಳನ್ನು ನೋಡಿ ನಮ್ಮ ವಕೀಲರ ಜತೆ ಮಾತಾಡುತ್ತೇನೆ. ಬಳಿಕ ನಾವು ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೇವೆ. ಲೋಕಾಯುಕ್ತ ತನಿಖೆ ಮೇಲೆ ನಮಗೆ ನಂಬಿಕೆ ಇಲ್ಲ. ಮುಂದಿನ ವಾರ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುತ್ತೇವೆ. ಸಿಬಿಐಗೆ ನೀಡುವಂತೆ ನಾವು ಹೋರಾಟ ಮಾಡುತ್ತೇವೆ. ಸರ್ವೋಚ್ಚ ನ್ಯಾಯಾಲಯ ಸಿಬಿಐಗೆ ನೀಡುತ್ತದೆ ಎಂಬ ನಂಬಿಕೆ ಇದೆ ಎಂದರು.

ಯುದ್ಧದಲ್ಲಿ ಸೋಲು ಗೆಲುವು ಸಹಜ. ಇದುವರೆಗೆ ನಾವು ಗೆದ್ದಿದ್ದು, ಈಗ ಸಣ್ಣ ಹಿನ್ನಡೆಯಾಗಿದೆ ಅಷ್ಟೇ. ಇದರಿಂದ ನಾನು ವ್ಯತಿರಿಕ್ತವಾಗುವುದಿಲ್ಲ. ಈಗಲೂ ನನಗೆ ಲೋಕಾಯುಕ್ತದ ತನಿಖೆ ಮೇಲೆ ನಂಬಿಕೆ ಇಲ್ಲ ಎಂದರು.

ಕೊಡವ ಭಾಷಿಕರ ಮಹಾಸಂಗಮ | ಮುಗಿಲು ಮುಟ್ಟಿದ 'ಕೊಡವಾಮೆ ಬಾಳೋ' ಘೋಷಣೆ

ಕೊಡವರ ಪಾದಯಾತ್ರೆ ಶಾಂತಿಯುತ

ಮಡಿಕೇರಿ: ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಆಯೋಜಿಸಲಾಗಿದ್ದ 'ಕೊಡವಾಮೆ ಬಾಳೋ' ಕೊಡವರ ಬೃಹತ್ ಪಾದಯಾತ್ರೆ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಕೊಡವರು ಹಾಗೂ ಕೊಡವ ಭಾಷಿಕರ ಮಹಾಸಂಗಮದೊಂದಿಗೆ ಶಾಂತಿಯುತವಾಗಿ ಸಮಾರೋಪಗೊಂಡಿತು.

ಶಾಂತಿಯುತ ಪಾದಯಾತ್ರೆಯ ಮೂಲಕ ಕೊಡವ ಸಮುದಾಯದ ಕೂಗನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಮುಟ್ಟಿಸಲಾಯಿತು. ದಕ್ಷಿಣ ಕೊಡಗಿನ ಕುಟ್ಟದಿಂದ ಕಳೆದ ಭಾನುವಾರದಂದು ಆರಂಭಗೊಂಡ ಪಾದಯಾತ್ರೆ ಸತತ ಆರು ದಿನಗಳ ಕಾಲ 84 ಕಿ.ಮೀ. ದೂರವನ್ನು ಕ್ರಮಿಸಿತು. ಮಡಿಕೇರಿಯ ಜನರಲ್ ಕೆ.ಎಸ್ .ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದ ಬಳಿಯ ಕೊಡವ ಸಮಾಜದ ಮಂದ್‌ನಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನೆರೆದಿದ್ದ ಕೊಡವ ಸಮುದಾಯದ ಬಾಂಧವರು ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಹಸ್ತಾಂತರಿಸುವ ಮೂಲಕ ಪಾದ ಯಾತ್ರೆಯನ್ನು ಅಂತಿಮಗೊಳಿಸಿದರು.

ಭಾಗಮಂಡಲ, ತಾಳತ್ತಮನೆ ವಿಭಾಗ ಗಳಿಂದ ಆಗಮಿಸಿದ ಒಂದು ತಂಡ ವೃತ್ತಕ್ಕೆ ಆಗಮಿಸಿ, ಮುಖ್ಯ ಪಾದಯಾತ್ರೆಯನ್ನು ಸೇರ್ಪಡೆಗೊಂಡರೆ, ಮತ್ತೊಂದು ತಂಡ ಕುಶಾಲನಗರ, ಸಿದ್ದಾಪುರ ವಿಭಾಗದಿಂದ ಫೀ.ಕಾರ್ಯಪ್ಪ ವೃತ್ತದ ಬಳಿ ಸಮಾವೇಶಗೊಂಡು ಬಳಿಕ ಜನರಲ್ ತಿಮ್ಮಯ್ಯ ವೃತ್ತಕ್ಕೆ ಆಗಮಿಸಿ ಮುಖ್ಯ ಜಾಥಾದೊಂದಿಗೆ ಸೇರಿಕೊಂಡಿತು. ಗಾಳಿಬೀಡು ವಿಭಾಗದಿಂದ ಆಗಮಿಸಿದ ತಂಡ ಹಳೇ ಖಾಸಗಿ ಬಸ್ ನಿಲ್ದಾಣ ಬಳಿ ಪಾದಯಾತ್ರೆಯೊಂದಿಗೆ ಸೇರ್ಪಡೆಯಾಯಿತು.

ಇದೇ ಸಂದರ್ಭ ಕೊಡವ ಸಂಘಟನೆಗಳ ಪ್ರಮುಖರು ನಗರದಲ್ಲಿರುವ ವೀರಸೇನಾನಿಗಳ ಪ್ರತಿಮೆಗಳಿಗೆ ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಿದರು. ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಅವರು ಕೊಡಗಿನ ಕೊಡವರ ಮತ್ತು ಕೊಡವ ಭಾಷಿಕರ ಪ್ರಮುಖ ಹಕ್ಕೊತ್ತಾಯಗಳನ್ನು ಮಂಡಿಸಿ, ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರಿಗೆ ಮನವಿ ಸಲ್ಲಿಸಿದರು.

ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಆಯೋಜಿಸಲಾಗಿದ್ದ 'ಕೊಡವಾಮೆ ಬಾಳೋ' ಕೊಡವರ ಬೃಹತ್ ಪಾದಯಾತ್ರೆ ಮಡಿಕೇರಿಯಲ್ಲಿ ಕೊಡವರು ಹಾಗೂ ಕೊಡವ ಭಾಷಿಕರ ಮಹಾಸಂಗಮದೊಂದಿಗೆ ಶಾಂತಿಯುತವಾಗಿ ಸಮಾರೋಪಗೊಂಡಿತು.

ಸಹಸ್ರಾರು ಸಂಖ್ಯೆಯಲ್ಲಿ ಭಾಗಿ

ಪಾದಯಾತ್ರೆಯ ಕೊನೆಯ ದಿನವಾದ ಶುಕ್ರವಾರ ಬೆಳಗ್ಗೆ ಕೊಡವಾಮೆ ಬಾಳೋ' ಪಾದಯಾತ್ರೆ ಕಗ್ಗೋಡ್ಲುವಿನ ಶ್ರೀಭಗವತಿ ದೇವಸ್ಥಾನದ ಬಳಿಯಿಂದ ಬೆಳಗ್ಗೆ 10.30 ರ ಸುಮಾರಿಗೆ ಆರಂಭಗೊಂಡಿತು. ಸಾಂಪ್ರದಾಯಿಕ ಉಡುಪಿನೊಂದಿಗೆ ನಾಡಿನಾದ್ಯಂತದಿಂದ ಹರಿದು ಬಂದಿದ್ದ ಕೊಡವ ಸಮುದಾಯ ಬಾಂಧವರು ಅತ್ಯಂತ ಶಿಸ್ತಿನಿಂದ ಒಗ್ಗೂಡಿ ಹೆಜ್ಜೆ ಹಾಕಿದರು. ಮಧ್ಯಾಹ್ನ ಮಡಿಕೇರಿಯ ಜ.ತಿಮ್ಮಯ್ಯ ವೃತ್ತದಲ್ಲಿ ದುಡಿಕೊಟ್ಟ್ ಪಾಟ್, ಕೊಂಬು ಕಹಳೆಯೊಂದಿಗೆ, ತಳಿಯತಕ್ಕಿ ಬೊಳ್ಚ ಹಿಡಿದ ಕೊಡವ ಮಹಿಳೆಯರು ಮಡಿಕೇರಿ ಕೊಡವ ಸಮಾಜ ಮತ್ತು ಪೊಮ್ಮಕ್ಕಡ ಕೂಟದ ನೇತೃತ್ವದಲ್ಲಿ ಪಾದಯಾತ್ರೆಯನ್ನು ಸ್ವಾಗತಿಸಿದರು.

ಸಿಎಂಗೆ ರಿಲೀಫ್ ತೀರ್ಪು ಸ್ವಾಗತಾರ್ಹ

ಕಲಬುರಗಿ: ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯಗೆ ಬಿಗ್ ರಿಲೀಫ್ ಸಿಕ್ಕಿರುವುದಕ್ಕೆ ನ್ಯಾಯಾಲಯದ ತೀರ್ಪನ್ನು ಸ್ವಾಗತ ಮಾಡುತ್ತೇನೆ ಎಂದು ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ವಿರೋಧ ಪಕ್ಷಗಳು ಉದ್ದೇಶಪೂರ್ವಕವಾಗಿ ಆಡಳಿತವನ್ನ ಬುಡಮೇಲು ಮಾಡೋದಕ್ಕೆ ಮುಂದಾಗಿದ್ದವು. ಹೊಟ್ಟೆ ಕಿಚ್ಚಿನಿಂದ ವಿಪಕ್ಷಗಳು ಆರೋಪ ಮಾಡ್ತಿದ್ದವು. ಇದೀಗ ಹೈಕೋರ್ಟ್ ಸಿಎಂ ಅವರಿಗೆ ರಿಲೀಫ್ ನೀಡಿದೆ, ಅದರ ತೀರ್ಪು ಸ್ವಾಗತಿಸುತ್ತೇನೆ, ಇದು ಸತ್ಯ ಮೇವ ಜಯತೆ ಎಂದರು.

ಯತ್ನಾಳ ಒಡೆತನದ ಸಿದ್ದಸಿರಿ ಫ್ಯಾಕ್ಟರಿಯನ್ನು ಬಂದ್ ಮಾಡಲು ಖಂಡ್ರೆ ಕೈವಾಡ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಯತ್ನಾಳ ಸುಪ್ರಿಂ ಕೋರ್ಟ್, ಹೈಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂಕೋರ್ಟ್ ಆದೇಶವನ್ನು ನಾವು ಪಾಲನೆ ಮಾಡುತ್ತಿದ್ದೇವೆ, ದ್ವೇಷ ರಾಜಕಾರಣ ಮಾಡೋರು ನಾವು ಅಲ್ಲ, ವಾಯು ಮಾಲಿನ್ಯ ಉಲ್ಲಂಘಿಸಿದ್ದಾರೆ, ಅದಕ್ಕಾಗಿ ಕಾರ್ಖಾನೆ ಬಂದ್ ಆಗಿದೆ ಎಂದು ತಿಳಿಸಿದರು.

ರಾಮನಗರದಲ್ಲಿ ಜೆಡಿಎಸ್ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷಕ್ಕೆ ಬುಲಾವ್ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಅಲ್ಲಿ ಯಾವುದೇ ರೀತಿಯ ಆಪರೇಷನ್ ಹಸ್ತ ನಡೆದಿಲ್ಲ, ಜೆಡಿಎಸ್ ಸೇರಿ ಬೇರೆ ಪಕ್ಷದಿಂದ ಅವರೇ ಬರುತ್ತಾರೆ ಎಂದರು.

ಸುಮ್ಮನಿರಲು ಖರ್ಗೆ ಹೇಳಿದ್ದಾರೆ: ಮಧು ಬಂಗಾರಪ್ಪ

ಕಾಂಗ್ರೆಸ್ ವಿದ್ಯಮಾನಗಳ ಬಗ್ಗೆ ನಾನು ಮಾತನಾಡಲ್ಲ

ದಾವಣಗೆರೆ: ಮಲ್ಲಿಕಾರ್ಜುನ ಖರ್ಗೆ ಅವರು ನನಗೆ ಸುಮ್ಮನಿರಲು ತಿಳಿಸಿದ್ದಾರೆ ನಾನು ಅವರ ಸೂಚನೆಯನ್ನು ಪಾಲಿಸುತ್ತೇನೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಪರೇಷನ್ ಹಸ್ತದ ಕುರಿತು ಸ್ಪಷ್ಟನೆ ಕೊಟ್ಟಿದ್ದಾರೆ.

ಜಗಳೂರು ತಾಲೂಕಿನ ಹುಚ್ಚಂಗಿಪುರ ಗ್ರಾಮದಲ್ಲಿ ಆಪರೇಷನ್ ಹಸ್ತ ಆಗಲಿದೆಯೇ, ಸಿಎಂ ಬದಲಾವಣೆ ಆಗಲಿದೆಯೇ ಎಂಬ ಮಾಧ್ಯಮದವರ ಪ್ರಶ್ನೆಗಳಿಗೆ ಸಿಡಿಮಿಡಿಗೊಂಡ ಸಚಿವರು, ಇವುಗಳಿಗೆ ನಾನು ಉತ್ತರ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಡಾ ತೀರ್ಪಿಗೆ ಸ್ವಾಗತ: ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಸಿಬಿಐ ತನಿಖೆಗೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವ ಮಧು ಬಂಗಾರಪ್ಪ, ಕೋರ್ಟ್ ತೀರ್ಪು ಕೊಟ್ಟಿದೆ. ಮತ್ತೇನ್ ಬೇಕು?. ಸುಪ್ರೀಂ ಕೋರ್ಟ್‌ಗೆ ಹೋಗುವ ಕಾನೂನು ಇದೆ. ಆದರೆ ಹೋಗಬೇಡಿ ಎನ್ನಲು ಬರಲ್ಲ. ಇದು ಅನಾವಶ್ಯವಾಗಿ ಭುಗಿಲೆದ್ದ ವಿಚಾರ. 13 ವರ್ಷದ ಹಿಂದಿನ ವಿಚಾರವನ್ನು ಆಗ ಕೆದಕಿದ್ರೆ ಏನಾಗುತ್ತೆ ಹೇಳಿ ಎಂದು ಪ್ರಶ್ನಿಸಿದರು.

ಶಿಕ್ಷಣ ಇಲಾಖೆಯಲ್ಲಿ 53 ಸಾವಿರ ಹುದ್ದೆಗಳು ಖಾಲಿ ಇದ್ದವು. ಹಿಂದಿನ ಸರಕಾರದ ವರು 5000 ಹುದ್ದೆ ತುಂಬಿದ್ದರು. ನಾನು ಬಂದ ಮೇಲೆ 13 ಸಾವಿರ ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಕಳಿಸಿ ದ್ದೇನೆ. ಈಗ ಶಿಕ್ಷಕರನ್ನು ತೆಗೆದುಕೊಳ್ಳಿ ಎಂದು ಬೇಡಿಕೆ ಇಟ್ಟಿದ್ದಾರೆ. ಅನುದಾನಿತ ಶಾಲೆಗೆ 9 ವರ್ಷದಿಂದ ಶಿಕ್ಷಕರನ್ನು ತೆಗೆದು ಕೊಂಡಿರಲಿಲ್ಲ. ಆದರೆ ನಾನು ಕ್ರಮ ಕೈಗೊಂಡಿದ್ದೇನೆ. ಇದು ಬೆಳವಣಿಗೆ ತಾನೇ? ಒಂದೇ ಸಲ ಭರ್ತಿ ಮಾಡಲು ಆಗಲ್ಲ .

ಮಧು ಬಂಗಾರಪ್ಪ, ಶಿಕ್ಷಣ ಸಚಿವ

ಬಿಜೆಪಿ ವರಿಷ್ಠರ ತೀರ್ಮಾನಕ್ಕೆ ಬದ್ಧ: ಶ್ರೀರಾಮುಲು

ಯಡಿಯೂರಪ್ಪ ಅವರೇ ನಮ್ಮ ಹೈ ಕಮಾಂಡ್

ಹಗರಿಬೊಮ್ಮನಹಳ್ಳಿ: ಮಾಜಿ ಸಿಎಂ ಬಿ. ಎಸ್.ಯಡಿಯೂರಪ್ಪ ಅವರೇ ಹೈಕಮಾಂಡ್, ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಬಿಜೆಪಿ ಅಧ್ಯಕ್ಷರನ್ನು ಬದಲಿಸುವುದಾದರೆ ನನಗೆ ಅವಕಾಶ ನೀಡುವಂತೆ ಹೈಕಮಾಂಡ್ ಬಳಿ ವಿನಂತಿಸಿಕೊಂಡಿದ್ದೇನೆ, ಅಂತಿಮವಾಗಿ ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ. ದೆಹಲಿ ಯಲ್ಲಿ ಪಕ್ಷದ ಹೈಕಮಾಂಡ್ ಅವ ರೊಂದಿಗೆ ಅಸಮಾಧಾನಿತರೆಲ್ಲಾ ಮಾತುಕತೆ ನಡೆಸಿದ್ದಾರೆ, ಎಲ್ಲ ಬಗೆಹರಿಯುವ ವಿಶ್ವಾಸ ವಿದೆ ಎಂದರು. ಶಾಸಕ ಜನಾರ್ದನ ರೆಡ್ಡಿ ಅವರೊಂದಿಗೆ ಮತ್ತೆ ಒಂದಾಗಲು ಸಾಧ್ಯವಿಲ್ಲ, ಬೇರೆ ವಿಷಯಗಳಾಗಿದ್ದರೆ ಸಂಧಾನವಾಗಬಹುದಿ ತ್ತೇನೊ, ಇದು ಬೇರೆ ಏನೋ ಇದೆ ಎಂದರು. ರಾಜ್ಯದ ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲುವು ಸಾಧಿಸುತ್ತೇನೆ, ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಸಂಘಟನೆಗಾಗಿ ಪ್ರವಾಸ ಮಾಡುತ್ತಿದ್ದೇನೆ, ಕೂಡ್ಲಿಗಿಯಲ್ಲಿ ಸ್ಪರ್ಧಿಸುವ ಕುರಿತು ಮುಂದೆ ನಿರ್ಧಾರ ತೆಗೆದು ಕೊಳ್ಳುವುದಾಗಿ ತಿಳಿಸಿದರು.

ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುವಂತೆ ಡಿ.ಕೆ. ಶಿವಕುಮಾರ್ ಆದಿಯಾಗಿ ಎಲ್ಲರೂ ಪ್ರಯತ್ನಿಸಿದ್ದಾರೆ, ನಾನು ರಾಷ್ಟ್ರೀಯ ಪಕ್ಷದಲ್ಲಿದ್ದೇನೆ, ಅನ್ಯ ಪಕ್ಷ ಸೇರುವುದಿಲ್ಲ, ಮುಂದಿನ ದಿನಗಳಲ್ಲಿ ರಾಜ್ಯದೆಲ್ಲೆಡೆ ಪ್ರವಾಸ ಮಾಡಿ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವುದು ನನ್ನ ಗುರಿಯಾಗಿದೆ, 160 ಸ್ಥಾನಗಳನ್ನು ಗೆಲ್ಲಿಸಲಿದ್ದೇನೆ.

-ಬಿ.ಶ್ರೀರಾಮುಲು, ಮಾಜಿ ಸಚಿವ

ವಿಶ್ವವಾಣಿ

ಸಂಪಾದಕೀಯ

ಶಿಲಾಯುಗದತ್ತ ಅಮೆರಿಕದ ಆಳುಗರು?

ಇದು ಗೆಲುವಿನ ಅಮಲು ತಂದಿತ್ತ ಧಾರ್ಷ್ಟ್ಯವೇ ಅಥವಾ ಅಸಹಿಷ್ಣುತೆಯ ಪರಮಾವಧಿಯೇ? ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಳ್ಳುವ ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೇ ಈ ಪ್ರಶ್ನೆಗೆ ಉತ್ತರಿಸಬೇಕು. ಕರೋನಾ ಮಹಾಮಾರಿಯು ಅಪ್ಪಳಿಸಿದ ನಂತರ ಪರಸ್ಪರ ಸಹಾಯದ ನೆಲೆಯಲ್ಲಿ ಒಂದಿಡೀ ವಿಶ್ವವೇ ಸೌಹಾರ್ದಮಂತ್ರ ಜಪಿಸುವ ಚಿತ್ತಸ್ಥಿತಿಯಲ್ಲಿರುವಾಗ ಅಮೆರಿಕದ ಆಳುಗ ವ್ಯವಸ್ಥೆಯು ತೀರಾ ಅನಾಗರಿಕ ರೀತಿಯಲ್ಲಿ ನಡೆದುಕೊಂಡಿದೆ. ನಿಜ, ಅಕ್ರಮ ವಲಸೆಗಾರಿಕೆಯನ್ನು ಯಾವ ದೇಶವೂ ಸಹಿಸಲಾಗದು ಮತ್ತು ಅಕ್ರಮ ವಲಸಿಗರು ತಂದಿಕ್ಕುವ ಸಮಸ್ಯೆಗಳನ್ನು ಅಷ್ಟು ಸುಲಭಕ್ಕೆ ನೀಗಿಕೊಳ್ಳಲಾಗದು. ಈ ಹಿನ್ನೆಲೆಯಲ್ಲಿ, ಅಧ್ಯಕ್ಷೀಯ ಚುನಾವಣೆಗೆ ಪೂರ್ವಭಾವಿಯಾಗಿ ತಾವು ನೀಡಿದ್ದ ಆಶ್ವಾಸನೆಯಂತೆ ಅಕ್ರಮ ವಲಸಿಗರನ್ನು ತಮ್ಮ ನೆಲದಿಂದ ಗಡಿಪಾರು ಮಾಡುವ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ನಿಲುವು ಸಮರ್ಥನೀಯವೇ ಇರಬಹುದು; ಆದರೆ ಅದಕ್ಕಾಗಿ ಅನುಸರಿಸಲಾದ ಮಾರ್ಗವಿದೆಯಲ್ಲಾ, ಅದನ್ನು ನಾಗರಿಕ ಸಮಾಜ ಖಂಡಿತ ಒಪ್ಪುವುದಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ, ಅಮೆರಿಕದೊಂದಿಗೆ ಸೌಹಾರ್ದಯುತ ಒಡನಾಟ ಮತ್ತು ವಾಣಿಜ್ಯಿಕ ಬಾಂಧವ್ಯಗಳನ್ನು ಹೊಂದಿರುವ ಭಾರತದ ವಿಷಯದಲ್ಲೂ ಅಮೆರಿಕದ ಆಳುಗ ವ್ಯವಸ್ಥೆ ತೋರಿದ ಧಾರ್ಷ್ಟ್ಯವನ್ನು ಖಂಡಿಸಲೇಬೇಕಿದೆ. 103 ಮಂದಿ ಅಕ್ರಮ ಭಾರತೀಯ ವಲಸಿಗರನ್ನು ಗಡಿಪಾರು ಮಾಡುವ ಕಸರತ್ತಿನ ಭಾಗವಾಗಿ ಅವರಿಗೆ ಕೈಕೋಳ ತೊಡಿಸಿದ್ದು ಎಷ್ಟರ ಮಟ್ಟಿಗೆ ಸರಿ? ಎಂಬುದು ಕೇವಲ ಭಾರತೀಯರ ಪ್ರಶ್ನೆಯಲ್ಲ, ಅದು ಪ್ರತಿಯೊಬ್ಬ ಸಹೃದಯಿ ಮತ್ತು ಮಾನವತಾವಾದಿಯ ಆಕ್ಷೇಪವೂ ಹೌದು. ಇಂಥದೊಂದು ವಿಲಕ್ಷಣ ಕ್ರಮಕ್ಕೆ ಮುಂದಾಗುವುದಕ್ಕೂ ಮೊದಲು, ಅಮೆರಿಕದ ಆಳುಗ ವ್ಯವಸ್ಥೆಗೆ ಭಾರತೀಯರ ಸಂಸ್ಕಾರ ಮತ್ತು ಶ್ರೇಷ್ಠ ಪರಂಪರೆಯ ನೆನಪು ಒಂದಿನಿತೂ ಬರಲಿಲ್ಲವೇ? 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಎಂದು ಶುರುವಿನಿಂದಲೂ ಹೇಳಿಕೊಂಡೇ ಬಂದ ಟ್ರಂಪ್‌ರಿಗೆ ಎಲ್ಲಕ್ಕಿಂತ ಮೊದಲಿಗೆ ಅಮೆರಿಕನ್ನರ ವಿಶ್ವಾಸ ಗಳಿಸಿ 'ಹವಾ' ಸೃಷ್ಟಿಸಬೇಕಾದ ಅನಿವಾರ್ಯತೆಯಿದೆ. ಹೀಗಾಗಿ ಇಂಥ ಅತಿರೇಕಗಳು ಹೊಮ್ಮಿರಬಹುದು. ಆದರೆ ಇದೇ ನಡೆಯೇ ಅವರಿಗೆ ದುಬಾರಿಯಾಗಿ ಪರಿಣಮಿಸಿದರೆ ಅಚ್ಚರಿಯಿಲ್ಲ!

ಸೊಂಪಾದಕೀಯ

ಕ್ಯಾಬ್ ಗ್ರಾಹಕರ ಓಲಾಟ

ಬಸ್ ಪ್ರಯಾಣದ ಕಿರಿಕಿರಿ ಮತ್ತು ಆಟೋಗಳ ಮೇಲಿನ ಅಪನಂಬಿಕೆಗಳ ಕಾರಣಕ್ಕೆ ಓಲಾ, ಉಬರ್ ಟ್ಯಾಕ್ಸಿಗಳು ಜನರಿಗೆ ಹತ್ತಿರ ಆಗಿದ್ದವು. ಆದರೆ ಈಗ ಈ ಕಂಪನಿಗಳ ಕ್ಯಾಬ್‌ಗಳ ವಿಷಯದಲ್ಲಿ ಜನರಿಂದ ಅಸಮಾಧಾನ ವ್ಯಕ್ತವಾಗುತ್ತಿದೆ. ಅದರಲ್ಲೂ ಮಳೆಗಾಲ ಶುರು ಆದ್ರೆ, ಈ ಕ್ಯಾಬ್ ಚಾಲಕರು ಮಾಮೂಲಿ ಆಟೋ ಚಾಲಕರಿಗಿಂತ ಏನೂ ಕಮ್ಮಿ ಇಲ್ಲ. ನೀವು ಎಷ್ಟೇ ಹೆಚ್ಚು ಹಣ ಕೊಡಿ, ಕೊನೆಗೂ ಆ ಕ್ಯಾಬ್ ಡ್ರೈವರ್‌ಗೆ ಬರೋಕೆ ಇಷ್ಟ ಇದೆಯೋ ಇಲ್ಲವೋ ಎಂಬುದರ ಮೇಲೆ ನಿಮ್ಮ ಪ್ರಯಾಣ ಅವಲಂಬಿತವಾಗಿರುತ್ತದೆ. ಈ ಕ್ಯಾಬ್‌ಗಳ ವಿಷಯದಲ್ಲಿ ಕ್ಯಾನ್ಸಲ್ ಮಾಡುವ ಪರಮಾಧಿಕಾರವನ್ನು ಇತ್ತೀಚೆಗೆ ಡ್ರೈವರ್‌ಗಳು ತುಂಬಾನೇ ಬಳಸುತ್ತಿದ್ದಾರೆ. ಏನಿದ್ದರೂ ಬೆಳಗ್ಗೆ ಪೀಕ್ ಅವರ್ ನಂತರ ಮತ್ತು ಸಂಜೆ ಮಳೆ ಆಗೋದ್ರೊಳಗೆ ಮಾತ್ರ ನಿಮಗೆ ಕ್ಯಾಬ್ ಭಾಗ್ಯ ಸಿಗೋ ಎಲ್ಲಾ ಸಾಧ್ಯತೆಗಳು ಇರುತ್ತವೆ. ಇವರದ್ದೊಂಥರಾ ವಿಚಿತ್ರ ಖಯಾಲಿ. ಪ್ರಯಾಣದ ಅವಧಿ ಮೇಲೆ ಇವರ ಆಟಗಳು ನಡೆಯುತ್ತವೆ. ಇತ್ಲಾಗೆ ಜಾಸ್ತಿ ಹತ್ರ ಇದ್ರೂ ಬರಲ್ಲ, ಅತ್ಲಾಗೆ ತುಂಬಾ ದೂರ ಆದ್ರೂ ಬರಲ್ಲ. ಏನಿದ್ರೂ ಇವರ ಏರಿಯಾ ಸುತ್ತಮುತ್ತ ಆದ್ರೆ ಮಾತ್ರ ಗ್ರಾಹಕರ ಮೇಲೆ ಇವರು ದೊಡ್ಡ ಮನಸ್ಸು ಮಾಡುತ್ತಾರೆ. ಈ ಕ್ಯಾಬ್ ಮತ್ತು ಆಟೋ ಸೇವೆ ಒದಗಿಸುವ ಕಂಪನಿ ಡ್ರೈವರ್‌ಗಳ ಇನ್ನೊಂದು ಸಮಸ್ಯೆ ಅಂದ್ರೆ, ಬುಕ್ ಮಾಡಿದ ಕೂಡಲೇ ಎಲ್ಲಿಗೆ ಅಂತ ಫೋನ್ ಮಾಡ್ತಾರೆ, ಕ್ಯಾಷಾ ಅಂತ ಕೇಳ್ತಾರೆ ನೀವು ಓಲಾ, ಉಬರ್ ಕಂಪನಿಗೆ ನೇರಪಾವತಿ ಮಾಡ್ತಾ ಇದ್ದೀರ ಅಂತ ಗೊತ್ತಾದ್ರೆ, ಅಷ್ಟೇ, ಬರಲ್ಲ. ಹಾಗಾಗಿ ಪೇಮೆಂಟ್ ಮೋಡ್ ಕೂಡಾ ಇಲ್ಲಿ ಮುಖ್ಯ. ಕ್ಯಾಷ್ ಇದ್ರೆ ಮಾತ್ರ ಕ್ಯಾಬ್ ಭಾಗ್ಯ. ಇನ್ನು ಕೆಲವು ಕಿಲಾಡಿ ಡ್ರೈವರ್‌ಗಳು ದೂರದ ಪ್ರಯಾಣ ಮಾಡುವ ಪ್ರಯಾಣಿಕರನ್ನು ಬೆಳಗ್ಗೆ ಎಲ್ಲಾದರೂ ಡ್ರಾಪ್ ಮಾಡಿದರೆ, 'ಸರ್ ಮತ್ತೆ ಸಂಜೆ ಎಷ್ಟೊತ್ತಿಗೆ ಹೊರಡ್ತೀರ, ಡೈರೆಕ್ಟಾಗಿ ನಂಗೇ ಕಾಲ್ ಮಾಡಿಬಿಡಿ. ಬುಕ್ ಮಾಡಬೇಡಿ' ಅಂತಾರೆ. ಇದು ಕಂಪನಿ ಮತ್ತು ಡ್ರೈವರ್‌ಗಳ ನಡುವೆ ಎಲ್ಲವೂ ಸರಿ ಇಲ್ಲ ಅನ್ನೋದನ್ನ ತೋರಿಸುತ್ತದೆ. ಇದಕ್ಕೆ ಪರಿಹಾರ ಹೇಗೋ ಏನೋ.. ಸ್ವಿಗ್ಗಿ, ಜೊಮ್ಯಾಟೋ ಕಂಪನಿಗಳೇ ಬಲ್ಲವು..!

ಸಂಪಾದಕರ ಸದ್ಯಶೋಧನೆ

ಸುಶಿ ಕುರಿತು ಒಂದಿಷ್ಟು...

ಜಪಾನ್ ಬಗ್ಗೆ ಎಷ್ಟೆಲ್ಲ ಬರೆದು, ಸುಶಿ ಬಗ್ಗೆ ಬರೆಯದಿದ್ದರೆ, ಅದು ಅಪೂರ್ಣವಷ್ಟೇ ಅಲ್ಲ, ಅಪಚಾರವೂ ಹೌದು. ಜಪಾನ್ ತನ್ನ ವಿಶಿಷ್ಟ ಸಂಸ್ಕೃತಿ, ಪರಂಪರೆ ಮತ್ತು ಅಡುಗೆ ಶೈಲಿಗಳಿಗಾಗಿ ವಿಶ್ವದಾದ್ಯಂತ ಪ್ರಖ್ಯಾತವಾಗಿದೆ. ಈ ಅಡುಗೆ ಶೈಲಿಗಳಲ್ಲಿ ಸುಶಿ ಕೂಡ ಒಂದು. ಅದು ಪ್ರಪಂಚದಾದ್ಯಂತ ಜನಪ್ರಿಯತೆ ಪಡೆದಿರುವ ಖಾದ್ಯ. ಸುಶಿ ಅಂದರೆ ಕೇವಲ ಒಂದು ಆಹಾರವಷ್ಟೇ ಅಲ್ಲ, ಇದು ಜಪಾನಿಯರ ಬದುಕಿನ ಭಾಗ. ಅಷ್ಟೇ ಅಲ್ಲ, ಶಿಸ್ತಿನ ಸಂಸ್ಕೃತಿ ಮತ್ತು ನಿಖರತೆಯ ನಿದರ್ಶನ ಕೂಡ. Sushi is not just food; it's an art form, an experience ಎಂಬ ಮಾತು ಜನಜನಿತ. Sometimes all you need is more Sushi ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಸುಶಿ ಬಿಟ್ಟು ಜಪಾನ್ ಇಲ್ಲ. ಸುಶಿ ಅಂದ್ರೆ ಸಾಕು, ಆ ಎರಡಕ್ಷರಗಳಲ್ಲಿಯೇ ಜಪಾನಿನ ಅಂತಃಸತ್ವವಿದೆ. ಸುಶಿಯ ಇತಿಹಾಸ ಸುಮಾರು 2000 ವರ್ಷಗಳ ಹಿಂದಕ್ಕೆ ಹೋಗುತ್ತದೆ. ತಮಾಷೆಯೆಂದರೆ, ಇದು ಆರಂಭದಲ್ಲಿ ಆಹಾರವನ್ನು ಸಂರಕ್ಷಿಸಲು ಬಳಸುವ ವಿಧಾನವಾಗಿತ್ತು. ಪ್ರಾಚೀನ ಚೀನಾದಲ್ಲಿ, ಮೀನನ್ನು ಆಹಾರ ಪದಾರ್ಥವಾಗಿ ಹೆಚ್ಚು ಕಾಲ ಉಳಿಸಲು ಅಕ್ಕಿಯನ್ನು ಮೀನಿನ ಸುತ್ತಲೂ ಹಾಕಿ ಪ್ಲಾಸ್ಟರ್ ಪದ್ಧತಿಯಲ್ಲಿ ಸಂರಕ್ಷಿಸಲಾಗುತ್ತಿತ್ತು. ಆದರೆ, 8ನೇ ಶತಮಾನದಲ್ಲಿ ಜಪಾನಿನಲ್ಲಿ ಸುಶಿ ವಿಭಿನ್ನ ರೂಪವನ್ನು ಪಡೆಯಿತು. ಇಲ್ಲಿಗೆ ಬಂದಾಗ, ಅಕ್ಕಿ ಮತ್ತು ಮೀನುಗಳ ಶುದ್ಧ ರುಚಿಗೆ ಪ್ರಾಮುಖ್ಯ ನೀಡಲಾಯಿತು. 19ನೇ ಶತಮಾನದಲ್ಲಿ, ಹನಾಯಾ ಯೋಹೆ ಎಂಬಾತ 'ನಿಗಿರಿ-ಸುಶಿ' ಎಂಬ ಹೊಸ ರೀತಿಯ ಸುಶಿಯನ್ನು ಪರಿಚಯಿಸಿದ. ಇದು ಟೋಕಿಯೋದಲ್ಲಿ ಜನಪ್ರಿಯತೆಯನ್ನು ಗಳಿಸಿತು ಮತ್ತು ಅದೇ ಇಂದು ಜಗತ್ತಿನಾದ್ಯಂತ ಬೆಳೆದಿರುವ ಸುಶಿಯ ಮೂಲವಾಗಿದೆ. ಸುಶಿ ಹಲವಾರು ವಿಧಗಳಲ್ಲಿ ಲಭ್ಯವಿದ್ದು, ಪ್ರತಿ ರೀತಿಯಲ್ಲೂ ವಿಭಿನ್ನ ತಯಾರಿಕಾ ಶೈಲಿ ಮತ್ತು ರುಚಿಯನ್ನು ಕಾಣಬಹುದು. ನಿಗಿರಿ-ಸುಶಿ, ಮಕಿ-ಸುಶಿ, ಸಶಿಮಿ, ಟೆಮಾಕಿ ಸುಶಿ ಹೀಗೆ ಸುಶಿಯಲ್ಲಿ ಹಲವು ವಿಧ. ಉದಾಹರಣೆಗೆ, ಸಶಿಮಿ, ಸುಶಿಯ ಒಂದು ಭಾಗವಾಗಿದ್ದು, ಇದರಲ್ಲಿ ತಾಜಾ ಮೀನು ಅಥವಾ ಸಮುದ್ರ ಆಹಾರ (ಸೀಫುಡ್)ವನ್ನು ಸಿಹಿ ರುಚಿ ನೀಡುವ ರೀತಿಯಲ್ಲಿ ತಯಾರಿಸಲಾಗುತ್ತದೆ. ಇದರ ಜತೆಯಲ್ಲಿ ಸಾಮಾನ್ಯವಾಗಿ ಡಿಪಿಂಗ್ ಸಾಸ್ ಅನ್ನು ನೀಡಲಾಗುತ್ತದೆ. ಸುಶಿಯ ತಯಾರಿಕೆ ಅಷ್ಟು ಸುಲಭವಾದ ಕಲೆಯಲ್ಲ. ಸುಶಿ ತಯಾರಿಕೆಯಲ್ಲಿ ಅತಿ ಶ್ರದ್ಧೆ ಮತ್ತು ನಿಖರತೆ ಬೇಕು. ಮೇಲ್ನೋಟಕ್ಕೆ ಅದನ್ನು ತಯಾರಿಸುವುದು ಸುಲಭ ಎನಿಸಿದರೂ, ಅಷ್ಟು ಸುಲಭವಲ್ಲ. ಸುಶಿ ತಯಾರಿಕೆಯಲ್ಲಿ ಅಕ್ಕಿ ಮತ್ತು ಮೀನು ಪ್ರಮುಖ ಪಾತ್ರ ವಹಿಸುತ್ತವೆ. ಅಕ್ಕಿಯನ್ನು ಹೆಚ್ಚು ಬಿಸಿ ನೀರಿನಲ್ಲಿ ಕುದಿಸಲಾಗುತ್ತದೆ. ನಂತರ ವಿನಿಗರ್, ಸಕ್ಕರೆ ಮತ್ತು ಉಪ್ಪಿನ ಮಿಶ್ರಣವನ್ನು ಸೇರಿಸಲಾಗುತ್ತದೆ. ಅಕ್ಕಿಯ ಸ್ವಾದ ಮತ್ತು ತಾಜಾ ಮೀನುಗಳ ರುಚಿಯ ನಡುವಿನ ಸಮತೋಲನವೇ ಸುಶಿಯ ಆಕರ್ಷಣೆ. ತಾಜಾ ಮೀನುಗಳೊಂದಿಗೆ ಸಿದ್ಧವಾಗುವುದು ಸುಶಿಯ ವಿಶಿಷ್ಟ ಗುಣ. ಟುನಾ, ಸಾಲ್ಮನ್ ಮೀನುಗಳ ಜತೆಗೆ ಮೊಟ್ಟೆ, ಆವಕಾಡೋ ಹಾಗೂ ಅಣಬೆಗಳನ್ನು ಸಹ ಬಳಸಲಾಗುತ್ತವೆ. ಸುಶಿಯ ಪಾಕಪ್ರಕ್ರಿಯೆ ಸರಳವಾಗಿದ್ದರೂ ಅದರಲ್ಲಿ ಶಿಸ್ತಿನ ಸಂಸ್ಕೃತಿ ಅಡಗಿದೆ. ನೈಪುಣ್ಯದಿಂದ ಕೈಯಲ್ಲಿ ಮಾಡಿದ ರೋಲ್‌ಗಳು, ಕತ್ತರಿಸಲು ಬಳಸುವ ಚಾಕು ಮತ್ತು ಕತ್ತರಿಸುವ ಕಲೆ ಹಾಗೂ ತಾಜಾ ಪದಾರ್ಥಗಳ ಸಮತೋಲನವು ಸುಶಿಯ ಯಶಸ್ಸಿನ ಕೀಲಿ. ಜಪಾನಿನ ಸಂಸ್ಕೃತಿಯಲ್ಲಿ ಸುಶಿಯನ್ನು ಸವಿಯುವ ಶೈಲಿಯೂ ವಿಶೇಷವಾಗಿದೆ. ಡಿಪಿಂಗ್ ಸಾಸ್ ಬಳಸುವ ವಿಧಾನ, ಅದನ್ನು ಸೇವಿಸುವ ಶಿಸ್ತಿನ ನಿಯಮಗಳು ಮತ್ತು ರೋಲ್‌ಗಳನ್ನು ಬಾಯಿಗೆ ಹಾಕುವ ರೀತಿಯೂ ವಿಭಿನ್ನವೇ. ಇಂದು ಸುಶಿ ಜಪಾನಿನ ಗಡಿಗಳನ್ನು ದಾಟಿ ಜಗತ್ತಿನಾದ್ಯಂತ ತನ್ನ ಸ್ಥಾನವನ್ನು ಕಂಡುಕೊಂಡಿದೆ. ಯೂರೋಪ್, ಅಮೆರಿಕ ಮತ್ತು ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ಸುಶಿ ರೆಸ್ಟೋರೆಂಟ್‌ಗಳು ತಲೆಯೆತ್ತಿವೆ. ಇದಕ್ಕೆ ಸುಶಿಯಲ್ಲಿನ ವೈಶಿಷ್ಟ್ಯ ಮತ್ತು ಆರೋಗ್ಯಕರ ಅಂಶಗಳೂ ಕಾರಣ. ಸುಶಿಯ ಮಹತ್ವ ಇನ್ನಷ್ಟು ಹೆಚ್ಚಲು ಅದರ ಪೌಷ್ಟಿಕಾಂಶ ಸಹ ಕಾರಣ. ಪ್ರತಿ ಸಲ ಸುಶಿಯನ್ನು ಸವಿಯುವಾಗ, ಜಪಾನಿನ ಅನನ್ಯ ಸಂಸ್ಕೃತಿಯ ಸವಿಯನ್ನು ಅನುಭವಿಸುವ ಭಾವನೆ ಮೂಡುತ್ತದೆ.

ಉಕ್ರೇನ್‌ನೊಂದಿಗೆ ಟ್ರಂಪ್ ಹೊಸ ಡೀಲ್

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ದಿನ ಹಲವು ಕಡತಗಳಿಗೆ ಸಹಿಹಾಕಿ, ಚುನಾವಣಾ ಪ್ರಚಾರದ ವೇಳೆ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತಿರುವೆನೆಂಬ ಸಂದೇಶವನ್ನು ಅಮೆರಿಕದ ಜನತೆಗೆ ರವಾನಿಸಿದ್ದಾರೆ. ರಾಷ್ಟ್ರೀಯತೆಯ ವಿಷಯದ ಮೇಲೆ ಚುನಾವಣೆಯಲ್ಲಿ ಸೆಣಸಿದ ಟ್ರಂಪ್, ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠ ದೇಶವನ್ನಾಗಿ ಮಾಡುತ್ತೇನೆಂದು ಹೇಳುವ ಮೂಲಕ ಹಲವು ನಿಷ್ಠುರ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ.

ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸಿರುವವರನ್ನು ಗಡಿಪಾರು ಮಾಡುವ ಪ್ರಕ್ರಿಯೆ ಆರಂಭವಾಗಿದೆ. ವಲಸಿಗರಿಗೆ ಅಮೆರಿಕದಲ್ಲಿ ಹುಟ್ಟುವ ಮಕ್ಕಳಿಗೆ ಹುಟ್ಟಿನಿಂದಲೇ ಸಿಗುತ್ತಿದ್ದಂಥ ಪೌರತ್ವವನ್ನು ರದ್ದುಗೊಳಿಸುವ ಆದೇಶಕ್ಕೆ ಟ್ರಂಪ್ ಸಹಿ ಹಾಕಿದ್ದಾರೆ. ಈ ಆದೇಶ ಜಾರಿಗೆ ಬರಲು 30 ದಿನದ ಕಾಲಾವಧಿಯಿರುವ ಕಾರಣ, ಅಮೆರಿಕದಲ್ಲಿ ನೆಲೆಸಿರುವ ವಲಸಿಗ ಗರ್ಭಿಣಿಯರು, ಗರ್ಭಾವಸ್ಥೆಯ ಅವಧಿ ಸಂಪನ್ನಗೊಳ್ಳುವ ಮುನ್ನವೇ ಶಸ್ತ್ರಚಿಕಿತ್ಸೆಯ ಮೂಲಕ ತಮ್ಮ ಮಗುವಿನ ಹೆರಿಗೆ ಮಾಡುವಂತೆ ವೈದ್ಯರನ್ನು ಒತ್ತಾಯಿಸುತ್ತಿದ್ದಾರೆ.

ಅಧಿಕಾರಕ್ಕೆ ಬರುತ್ತಿದ್ದಂತೆ ಟ್ರಂಪ್ ತೆಗೆದುಕೊಳ್ಳುತ್ತಿರುವ ಹಲವು ನಿರ್ಧಾರಗಳು ಹೊರಜಗತ್ತಿಗೆ ಕಿರಿಕಿರಿ ಉಂಟುಮಾಡುತ್ತಿರಬಹುದು. ಆದರೆ ಟ್ರಂಪ್ ಒಬ್ಬ ವ್ಯವಹಾರಸ್ಥರಾದ ಕಾರಣ, ತಮ್ಮ ದೇಶಕ್ಕೆ ಆಗಬಹುದಾದ ಉಪಯೋಗಗಳ ಬಗ್ಗೆ ಮಾತ್ರ ಆಲೋಚಿಸಿ ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಆದರೆ ಇಂಥ ನಿರ್ಧಾರಗಳಿಂದ ಅಮೆರಿಕಕ್ಕೆ ಸದಾ ಉಪಯೋಗವಾಗುತ್ತದೆಂಬುದು ಸುಳ್ಳು. ಅವರ ನಿರ್ಧಾರಗಳು ಭವಿಷ್ಯತ್ತಿನಲ್ಲಿ ಅಮೆರಿಕಕ್ಕೆ ಸಮಸ್ಯೆಯನ್ನೂ ತಂದೊಡ್ಡಬಹುದು ಎಂಬ ಚರ್ಚೆಗಳು ಜಾಗತಿಕ ಮಟ್ಟದಲ್ಲಿ ನಡೆಯುತ್ತಿವೆ.

ಟ್ರಂಪ್ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ 'ಕೃತಕ ಬುದ್ಧಿಮತ್ತೆ' (ಎಐ) ಬಗ್ಗೆ ಬಹಳಷ್ಟು ಚರ್ಚೆಗಳಾದವು. ಮೈಕ್ರೋಸಾಫ್ಟ್ ಸಂಸ್ಥೆಯ ಸತ್ಯ ನಾಡೆಲ್ಲಾ ಮತ್ತು 'ಓಪನ್ ಎಐ' ಕಂಪನಿಯ ಸಂಸ್ಥಾಪಕರು ಈ ವಲಯದಲ್ಲಿ ಬಿಲಿಯನ್ ಗಟ್ಟಲೆ ಹಣವನ್ನು ಹೂಡಿಕೆ ಮಾಡುವುದಾಗಿ ಘೋಷಿಸಿದರು. ಇದಾದ ಕೆಲವೇ ಗಂಟೆಗಳಲ್ಲಿ ಚೀನಾ ದೇಶದ 'ಡೀಪ್ ಸೀಕ್' ಕೃತಕ ಬುದ್ಧಿಮತ್ತೆ ತಂತ್ರಾಂಶವು ನೂರಾರು ಕೋಟಿ ಜನರ ಮೊಬೈಲ್ ಫೋನಿನಲ್ಲಿ ಬಂದು ಕುಳಿತಿತ್ತು. ಅಮೆರಿಕನ್ನರ ಖರ್ಚಿನ ಶೇ.4ರಷ್ಟು ಹಣವನ್ನು ಖರ್ಚುಮಾಡಿ ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಮೂಲಕ ಚೀನಾ ದೇಶವು ಅಮೆರಿಕದ ಷೇರು ಮಾರುಕಟ್ಟೆಯನ್ನು ಅಲ್ಲೋಲ ಕಲ್ಲೋಲ ಮಾಡಿತ್ತು.

ಟ್ರಂಪ್ ಅಧಿಕಾರಕ್ಕೆ ಬಂದ ನಂತರ ಕೆನಡಾ, ಮೆಕ್ಸಿಕೋ ಮತ್ತು ಚೀನಾ ದೇಶಗಳಿಂದ ಆಮದಾಗುವ ವಸ್ತುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿ ಬಿಸಿ ಮುಟ್ಟಿಸುವ ಕೆಲಸ ಮಾಡಿದರು. ಮೆಕ್ಸಿಕೋ ದೇಶವು ಟ್ರಂಪ್ ನಿರ್ಧಾರವನ್ನು ಮೊದಲು ಖಂಡಿಸಿ, ನಂತರ ಅಮೆರಿಕದ ಜತೆ ಮಾತುಕತೆ ನಡೆಸಿ, ತನ್ನ ಗಡಿಯ ಮೂಲಕ ಅಮೆರಿಕ ತಲುಪುವವರನ್ನು ತಡೆಯಲು 15,000 ಮಂದಿಯ ಭದ್ರತಾ ಪಡೆಯನ್ನು ನಿಯೋಜಿಸಲು ನಿರ್ಧರಿಸಿತು. ಈ ನಿರ್ಧಾರವನ್ನು ಸ್ವಾಗತಿಸಿದ ಟ್ರಂಪ್, ತಾವು ವಿಧಿಸಿದ್ದ ಆಮದು ಸುಂಕದ ಅವಧಿಯನ್ನು ಒಂದು ತಿಂಗಳವರೆಗೆ ತಡೆದಿದ್ದಾರೆ. ಅತ್ತ ಕೆನಡಾ ಕೂಡ ಟ್ರಂಪ್‌ರೊಂದಿಗೆ ಮಾತುಕತೆ ನಡೆಸಿ ತನ್ನ ಗಡಿಯನ್ನು ಭದ್ರ ಪಡಿಸುವುದಾಗಿ ಹೇಳುವ ಮೂಲಕ ಟ್ರಂಪ್ ವಿಧಿಸಿದ ಹೆಚ್ಚಿನ ಸುಂಕದಿಂದ ತಾತ್ಕಾಲಿಕವಾಗಿ ಪಾರಾಗಿದೆ. ಆದರೆ ಚೀನಾ ದೇಶವು ಟ್ರಂಪ್ ವಿಧಿಸಿರುವ ಆಮದು ಸುಂಕದ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಬದಲಾಗಿ ಅಮೆರಿಕದಿಂದ ತನ್ನಲ್ಲಿಗೆ ಆಮದಾಗುವ ಕಲ್ಲಿದ್ದಲು, ಟ್ರ್ಯಾಕ್ಟರ್, ಕೃಷಿ ಉಪಕರಣಗಳ ಮೇಲಿನ ಸುಂಕವನ್ನು ಹೆಚ್ಚಿಸುವ ಮೂಲಕ ತಿರುಗೇಟು ನೀಡಿದೆ ಹಾಗೂ ಅಮೆರಿಕಕ್ಕೆ ಒಂದು ವಾರದ ಕಾಲಾವಕಾಶ ನೀಡಿ, ಹೆಚ್ಚಿನ ಆಮದು ಸುಂಕವನ್ನು ವಾಪಸ್ ಪಡೆಯದಿದ್ದರೆ ತಾನು ವಿಧಿಸಿರುವ ಸುಂಕವನ್ನು ಮುಂದುವರಿಸುವುದಾಗಿ ಹೇಳಿದೆ. ಮತ್ತೊಂದೆಡೆ ಐರೋಪ್ಯ ಒಕ್ಕೂಟದ ದೇಶಗಳು, ಅಮೆರಿಕವು ಮುಂದಿನ ದಿನಗಳಲ್ಲಿ ತಮ್ಮ ಮೇಲೆ ತೆಗೆದುಕೊಳ್ಳುವ ನಿರ್ಧಾರವನ್ನು ನೋಡಿಕೊಂಡು ಸುಮ್ಮನೇ ಕೂರುವುದಿಲ್ಲ, ಬದಲಾಗಿ ತಾವೂ ಕಠಿಣ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿವೆ. ಕೆನಡಾ ಮತ್ತು ಮೆಕ್ಸಿಕೋ ದೇಶಗಳ ನಡೆಯಿಂದ, ತಾವು ಗೆದ್ದಿರುವುದಾಗಿ ಟ್ರಂಪ್ ತಾತ್ಕಾಲಿಕವಾಗಿ ಜನರ ಬಳಿ ಹೇಳಬಹುದು. ಆದರೆ ಚೀನಾ ಮತ್ತು ಐರೋಪ್ಯ ದೇಶಗಳ ವಿಷಯದಲ್ಲಿ ಹಾಗೆ ಹೇಳಲು ಸಾಧ್ಯವಿಲ್ಲ.

ತಾವು ಅಧಿಕಾರಕ್ಕೆ ಬಂದರೆ ಯುದ್ಧ ಮಾಡುವುದಿಲ್ಲ, ಆದರೆ ಒಂದು ಯುದ್ಧವನ್ನು ನಿಲ್ಲಿಸುವ ಪ್ರಯತ್ನವನ್ನು ಖಂಡಿತ ಮಾಡುವುದಾಗಿ ಟ್ರಂಪ್ ತಮ್ಮ ಚುನಾವಣಾ ಪ್ರಚಾರದಲ್ಲಿ ಹೇಳಿದ್ದರು. ಟ್ರಂಪ್ ತಮ್ಮ ಮೊದಲ ಅಧ್ಯಕ್ಷೀಯ ಅವಧಿಯಲ್ಲಿ ಯುದ್ಧ ಮಾಡಿರಲಿಲ್ಲ; ಅಮೆರಿಕ ಅಧ್ಯಕ್ಷರ ಇತಿಹಾಸದಲ್ಲಿ ಯುದ್ಧ ನಡೆಸದ ಏಕೈಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಶಾಂತಿ ಒಪ್ಪಂದಕ್ಕೆ ಮುದ್ರೆ ಬಿದ್ದಾಗಿದೆ, ಆದರೆ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಕೊನೆಗೊಂಡಿಲ್ಲ. ಉಕ್ರೇನ್ ಯುದ್ಧದ ವಿಚಾರದಲ್ಲಿ ಟ್ರಂಪ್ ಯೋಚನೆ ಬೇರೆ ರೀತಿಯದ್ದಾಗಿದೆ. ರಷ್ಯಾ ವಿರುದ್ಧದ ಯುದ್ಧದಲ್ಲಿ ಉಕ್ರೇನ್‌ಗೆ 175 ಬಿಲಿಯನ್ ಡಾಲರ್‌ನಷ್ಟು ಆರ್ಥಿಕ ಸಹಾಯ ನೀಡುವ ಮೂಲಕ, ನ್ಯಾಟೋ ಸದಸ್ಯ ದೇಶಗಳ ಪೈಕಿ ಅತಿ ಹೆಚ್ಚು ನೆರವು ನೀಡಿದ ದೇಶ ಎನಿಸಿಕೊಂಡಿತು ಅಮೆರಿಕ. ಜೋ ಬೈಡನ್ ಅವಧಿಯಲ್ಲಿ ಈ ಮಟ್ಟದ ಆರ್ಥಿಕ ನೆರವು ನೀಡಿದ ಅಮೆರಿಕಕ್ಕೆ



ಸಿಕ್ಕಿದ್ದಾದರೂ ಏನು? ಎಂಬುದು ಡೊನಾಲ್ಡ್ ಟ್ರಂಪ್‌ರ ಪ್ರಶ್ನೆ.

ಟ್ರಂಪ್ ಒಬ್ಬ ವ್ಯವಹಾರಸ್ಥರಾಗಿರುವ ಕಾರಣ, ತಮ್ಮ ದೇಶವು ಇತರರಿಗೆ ಮಾಡುವ ಸಹಾಯಕ್ಕೆ ಪ್ರತಿಯಾಗಿ ದೇಶಕ್ಕೆ ಆಗುವ ಲಾಭದ ಬಗ್ಗೆ ಯೋಚಿಸುತ್ತಾರೆ. ಉಕ್ರೇನ್ ದೇಶದಲ್ಲಿರುವ ಅಪಾರ ಖನಿಜ ಸಂಪತ್ತಿನ ಮೇಲೆ ಟ್ರಂಪ್ ಕಣ್ಣು ಬಿದ್ದಿದೆ. ಉಕ್ರೇನ್‌ನಲ್ಲಿ ಅಪಾರ ಪ್ರಮಾಣದ ಲೀಥಿಯಂ ಮತ್ತು ಗ್ಯಾಲಿಯಂ ಇದೆ. ಭೂಮಿಯಲ್ಲಿ ಸಿಗುವ ಈ ಅಪರೂಪದ ಖನಿಜಗಳು, ವಿದ್ಯುತ್ ಚಾಲಿತ ವಾಹನಗಳಿಗೆ ಬೇಕಿರುವ ಬ್ಯಾಟರಿ ಮತ್ತು ಸೋಲಾರ್ ಪ್ಯಾನೆಲ್‌ಗಳ ತಯಾರಿಕೆಯಲ್ಲಿ ಪ್ರಮುಖ ಕಚ್ಚಾವಸ್ತುಗಳಾಗಿವೆ. ಬ್ಯಾಟರಿ ತಯಾರಿಕೆಗೆ ಜಾಗತಿಕ ಮಟ್ಟದಲ್ಲಿ ದೊಡ್ಡ ಬೇಡಿಕೆಯಿದ್ದು, ಇದರ ಶೇ.90ರಷ್ಟು ಭಾಗದ ಅಪರೂಪದ ಖನಿಜ ಸಂಪತ್ತನ್ನು ಚೀನಾ ಪೂರೈಕೆ ಮಾಡುತ್ತಿದೆ. ಚೀನಾ ತನ್ನ 'ಬೆಲ್ಟ್ ಆ್ಯಂಡ್ ರೋಡ್' ಯೋಜನೆಯ ಮೂಲಕ, ಖನಿಜ ಸಂಪತ್ತಿರುವ ಅನೇಕ ದೇಶಗಳ ಜತೆ ಒಪ್ಪಂದ ಮಾಡಿಕೊಂಡು ಜಗತ್ತಿನ ದೊಡ್ಡ ಪೂರೈಕೆದಾರನಾಗಿದೆ. ಕಚ್ಚಾತೈಲಕ್ಕಾಗಿ ಕೊಲ್ಲಿ ರಾಷ್ಟ್ರಗಳ ಮೇಲೆ ಅವಲಂಬಿತರಾಗುವ ಪರಿಸ್ಥಿತಿ ಎದುರಾದಂತೆ, ಮುಂದಿನ ದಿನಗಳಲ್ಲಿ ಬ್ಯಾಟರಿಗಳ ಉತ್ಪಾದನೆಗಾಗಿ ಚೀನಾವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಬರಬಹುದೆಂಬ ಆತಂಕ ಎಲ್ಲರಲ್ಲೂ ಇದೆ.

ಈ ವಿಷಯದಲ್ಲಿ ಚೀನಾದ ಏಕಸ್ವಾಮ್ಯತೆಯನ್ನು ಮುರಿಯಲು ಹೊರಟಿರುವ ಟ್ರಂಪ್, ಉಕ್ರೇನ್ ಅಧ್ಯಕ್ಷರ ಜತೆ ಮಾತುಕತೆ ನಡೆಸಿದ್ದಾರೆ. ಅಮೆರಿಕವು ಮುಂದಿನ ದಿನಗಳಲ್ಲಿ ಉಕ್ರೇನ್‌ಗೆ ನೆರವಾಗಬೇಕೆಂದರೆ, ಅಲ್ಲಿರುವ ಅಪರೂಪದ ಖನಿಜ ಸಂಪತ್ತಿನ ಗಣಿಗಾರಿಕೆ ಹಕ್ಕನ್ನು ಅಮೆರಿಕಕ್ಕೆ ನೀಡಬೇಕೆಂಬುದು ಟ್ರಂಪ್ ನಿರೀಕ್ಷೆ. ರಷ್ಯಾ ಅಧ್ಯಕ್ಷರ ಜತೆ ಟ್ರಂಪ್ ಮಾತುಕತೆ ನಡೆಸಿ ಯುದ್ಧವನ್ನು ನಿಲ್ಲಿಸಬಹುದು ಅಥವಾ ಯುದ್ಧ ಮುಂದುವರಿದರೆ ಅಮೆರಿಕದ ನೆರವನ್ನು ಉಕ್ರೇನ್‌ಗೆ ನೀಡಬಹುದು. ಆದರೆ ಟ್ರಂಪ್ ಎಣಿಸಿದಷ್ಟು ಸುಲಭವಾಗಿ ಉಕ್ರೇನ್‌ನಿಂದ ಅಪರೂಪದ ಖನಿಜ ಸಂಪತ್ತನ್ನು ಹೊರತರಲಾಗುವುದಿಲ್ಲ. ಕಾರಣ, ಉಕ್ರೇನ್ ಒಂದು ಕಾಲಕ್ಕೆ ಸೋವಿಯತ್ ಒಕ್ಕೂಟದ ಭಾಗವಾಗಿತ್ತೆಂಬುದನ್ನು ಮರೆಯುವ ಹಾಗಿಲ್ಲ. ರಷ್ಯಾ ಅಧ್ಯಕ್ಷ ಪುಟಿನ್‌ರಿಗೆ ಕೂಡ ಉಕ್ರೇನ್‌ನಲ್ಲಿರುವ ಅಪರೂಪದ ಖನಿಜ ಸಂಪತ್ತಿನ ಬಗ್ಗೆ ಅರಿವಿದೆ. ಈಗಾಗಲೇ ಎರಡೂ ದೇಶಗಳ ನಡುವೆ ಯುದ್ಧ ನಡೆಯುತ್ತಿರುವುದರಿಂದ, ಯುದ್ಧಭೂಮಿಯಲ್ಲಿರುವ ಖನಿಜ ಸಂಪತ್ತನ್ನು ಅಮೆರಿಕ ಹೇಗೆ ತಾನೇ ಹೊರತೆಗೆಯಲಾದೀತು?

ಅಮೆರಿಕವು ಉಕ್ರೇನ್‌ನಲ್ಲಿ ಗಣಿಗಾರಿಕೆಗೆ ಮುಂದಾದರೆ ರಷ್ಯಾ ಅಷ್ಟು ಸುಲಭವಾಗಿ ಬಿಟ್ಟುಕೊಡುವುದೇ? ಅಮೆರಿಕವು ಉಕ್ರೇನ್‌ಗೆ ನೀಡುವ ನೆರವಿನಿಂದ ಹೆಚ್ಚಿನ ನಷ್ಟವಾಗುವುದು ರಷ್ಯಾಕ್ಕೆ, ಹೀಗಾಗಿ ಪುಟಿನ್ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಯುದ್ಧ ನಿಂತರೆ ಉಕ್ರೇನ್ ಅಧ್ಯಕ್ಷ ಅಮೆರಿಕಕ್ಕೆ ಗಣಿಗಾರಿಕೆಗೆ ಅವಕಾಶ ಮಾಡಿಕೊಡಬೇಕು, ಅದನ್ನೂ ಪುಟಿನ್ ಒಪ್ಪುವುದು ಅನುಮಾನ. ಉಕ್ರೇನ್‌ನಿಂದ ಅಮೆರಿಕಕ್ಕೆ ಅನುಕೂಲವಾಗದಿದ್ದರೆ ಹಣ ಮತ್ತು ಮಿಲಿಟರಿ ನೆರವನ್ನು ನೀಡುವುದಿಲ್ಲ ಎಂಬ ಸುಳಿವನ್ನು ನೀಡಿದ್ದಾರೆ ಟ್ರಂಪ್. ಇವೆಲ್ಲವನ್ನೂ ನೋಡಿದರೆ, ಉಕ್ರೇನ್ ಅಧ್ಯಕ್ಷ ರಷ್ಯಾ ವಿರುದ್ಧ ಯುದ್ಧ ನಡೆಸುವುದು ಮುಂದಿನ ದಿನಗಳಲ್ಲಿ ಸಾಧ್ಯವಿಲ್ಲ. ಜೋ ಬೈಡನ್ ಅವಧಿಯಲ್ಲಿ ಅಮೆರಿಕವು ಉಕ್ರೇನ್‌ಗೆ ಭರಪೂರ ನೆರವನ್ನು ನೀಡಿತ್ತು. ಆದರೆ ಪರಿಸ್ಥಿತಿ ಈಗ ಬದಲಾಗಿದೆ. ಅಮೆರಿಕಕ್ಕೆ ಲಾಭವಾಗದೆ ಟ್ರಂಪ್ ನೆರವು ನೀಡುವುದಿಲ್ಲ. ಅಫ್ಘಾನಿಸ್ತಾನದಲ್ಲಿ ಅಮೆರಿಕ ಪಡೆಗಳು ಬಿಟ್ಟುಬಂದಿರುವ ಬಿಲಿಯನ್‌ಗಟ್ಟಲೆ ಮೌಲ್ಯದ ಸೆಕೆಂಡ್ ಹ್ಯಾಂಡ್ ಮಿಲಿಟರಿ ಉಪಕರಣಗಳನ್ನು ಹಿಂದಿರುಗಿಸುವಂತೆ ತಾಲಿಬಾನಿಗಳಿಗೆ ಎಚ್ಚರಿಕೆ ನೀಡಿದಂಥವರು ಟ್ರಂಪ್. ಅಂತಹುದರಲ್ಲಿ ಅಮೆರಿಕಕ್ಕೆ ಲಾಭವಿಲ್ಲದಿದ್ದರೆ ಅವರು ಉಕ್ರೇನ್‌ಗೆ ನೆರವಾಗುವುದಿಲ್ಲ.

ಉಕ್ರೇನ್‌ನ ಪೂರ್ವಭಾಗದಲ್ಲಿರುವ ಅಪರೂಪದ ಖನಿಜ ಸಂಪತ್ತಿನ ಭೂಭಾಗವನ್ನು ರಷ್ಯಾ ವಶಪಡಿಸಿಕೊಳ್ಳಬಹುದೆಂಬ ಭಯದಿಂದ ಅಮೆರಿಕದ ಕಂಪನಿಗಳಿಗೆ ತಮ್ಮ ದೇಶದಲ್ಲಿ ಗಣಿಗಾರಿಕೆ ಮಾಡಲು ಅವಕಾಶ ನೀಡುವುದಾಗಿ ಉಕ್ರೇನ್ ಅಧ್ಯಕ್ಷ ಈಗಾಗಲೇ ಹೇಳಿದ್ದಾರೆ. ಆದರೆ, ಯುದ್ಧ ನಿಲ್ಲಿಸುವ ನಿಟ್ಟಿನಲ್ಲಿ ಟ್ರಂಪ್ ಮತ್ತು ಪುಟಿನ್ ನಡುವೆ ಯಾವುದೇ ರೀತಿಯ ಮಾತುಕತೆಗಳು ದೊಡ್ಡಮಟ್ಟದಲ್ಲಿ ನಡೆದಿಲ್ಲ, ಯುದ್ಧ ನಿಲ್ಲಿಸುವುದಾಗಿ ಟ್ರಂಪ್ ಬಹಿರಂಗವಾಗಿ ಹೇಳಿರಬಹುದು. ಆದರೆ ಅದರಿಂದ ತಮಗಾಗುವ ಲಾಭ ಮತ್ತು ನಷ್ಟವನ್ನು ಅಳೆದು ತೂಗಿ, ಪುಟಿನ್ ಜತೆ ಅವರು ಮಾತನಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.

ಜಗತ್ತಿನಲ್ಲಿ ಅತಿಹೆಚ್ಚು ಗೋಧಿ ಉತ್ಪಾದಿಸುವ ದೇಶವಾದ ಉಕ್ರೇನ್, ಇದರ ಜತೆಗೆ ಇತರ ಕೃಷಿ ಉತ್ಪನ್ನಗಳನ್ನು ಅನೇಕ ದೇಶಗಳಿಗೆ ರಫ್ತು ಮಾಡುತ್ತದೆ. ರಷ್ಯಾ ಅಧ್ಯಕ್ಷ ಪುಟಿನ್ ಜತೆಗೆ ಟ್ರಂಪ್ ಮಾತುಕತೆ ನಡೆಸಿ ಯುದ್ಧವನ್ನೇನಾದರೂ ನಿಲ್ಲಿಸಿದರೆ, ಐರೋಪ್ಯ ಒಕ್ಕೂಟಕ್ಕೆ ಭಾರಿ ಹಿನ್ನಡೆಯಾಗಲಿದೆ. ಜೋ ಬೈಡನ್ ನೇತೃತ್ವದ ಪಶ್ಚಿಮದ ನ್ಯಾಟೋ ದೇಶಗಳ ಒಕ್ಕೂಟವು ಉಕ್ರೇನ್ ದೇಶವನ್ನು ರಷ್ಯಾ ವಿರುದ್ಧದ ಯುದ್ಧದಲ್ಲಿ ಬೆಂಬಲಿಸುತ್ತಾ ಬಂದಿದ್ದರೆ, ಟ್ರಂಪ್ ಅಧಿಕಾರಕ್ಕೆ ಬಂದ ನಂತರ ಪುಟಿನ್ ಪರವಾಗಿ ನಿಂತು ಯುದ್ಧ ನಿಲ್ಲಿಸುವತ್ತ ಯೋಚಿಸುತ್ತಿದ್ದಾರೆ. ಉಕ್ರೇನ್‌ನ ಜನರಿಗೆ ಐರೋಪ್ಯ ಒಕ್ಕೂಟದ ದೇಶಗಳಿಗಿಂತಲೂ ಟ್ರಂಪ್ ಮೇಲೆ ವಿಶ್ವಾಸ ಹೆಚ್ಚಾಗಿದೆಯೆಂದು ಅಲ್ಲಿನ ಸಂಸ್ಥೆಯೊಂದು ವರದಿ ಮಾಡಿದೆ. ಮತ್ತೊಂದೆಡೆ, ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಲ್ಲಿ ನಾಮಾವಶೇಷಗೊಂಡಿರುವ ಗಾಜಾ ಪಟ್ಟಿಯನ್ನು ಅಮೆರಿಕ ವಶಪಡಿಸಿಕೊಳ್ಳಲಿದೆಯೆಂದು ಟ್ರಂಪ್ ಹೇಳಿದ್ದಾರೆ. ಗಾಜಾ ಪಟ್ಟಿಯಲ್ಲಿ ದಶಕಗಳಿಂದ ನಡೆಯುತ್ತಿದ್ದಂಥ ಯುದ್ಧಕ್ಕೆ ಪೂರ್ಣವಿರಾಮ ಹಾಕುವ ನಿಟ್ಟಿನಲ್ಲಿ ಟ್ರಂಪ್ ಯೋಚಿಸುತ್ತಿರುವಂತೆ ಕಾಣುತ್ತಿದೆ. ಗಾಜಾಪಟ್ಟಿಯನ್ನು ವಶಪಡಿಸಿಕೊಂಡ ನಂತರ ಅಮೆರಿಕ ಏನು ಮಾಡುತ್ತದೆ ಎಂಬುದರ ಬಗ್ಗೆ ಯಾರಿಗೂ ಸ್ಪಷ್ಟತೆಯಿಲ್ಲ, ಟ್ರಂಪ್ ಹಾಗೂ ಉಕ್ರೇನ್ ನಡುವಿನ ಒಪ್ಪಂದವು ನ್ಯಾಟೋ ಒಕ್ಕೂಟವನ್ನೇ ಇಲ್ಲದಂತಾಗಿಸಬಹುದು. ಏಷ್ಯಾ ಖಂಡದ ದೇಶಗಳೊಂದಿಗೂ ಟ್ರಂಪ್ ವ್ಯಾವಹಾರಿಕ ಸಂಬಂಧವನ್ನು ನೋಡುತ್ತಿರುವುದನ್ನು ಕಾಣಬಹುದಾಗಿದೆ. ಟ್ರಂಪ್ ಅವರಿಗೊಂದು ಸ್ಪಷ್ಟತೆಯಿದೆ. ಚೀನಾ, ಮೆಕ್ಸಿಕೋ ಮತ್ತು ಕೆನಡಾ ದೇಶಗಳ ಮೇಲೆ ಹೇರಿದ ಆಮದು ಸುಂಕವನ್ನು ಅವರು ಭಾರತದ ಮೇಲೆ ಹೇರಲಿಲ್ಲ, ನರೇಂದ್ರ ಮೋದಿಯವರ ಗಟ್ಟಿ ನಾಯಕತ್ವ, ಟ್ರಂಪ್ ತಂಡದಲ್ಲಿರುವ ಭಾರತೀಯರು ಮತ್ತು ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳನ್ನು ಮುನ್ನಡೆಸುತ್ತಿರುವ ಭಾರತೀಯರ ನೆರವು ಅಮೆರಿಕಕ್ಕೆ ಹಿಂದೆಯೂ ಬೇಕಿತ್ತು, ಮುಂದೆಯೂ ಬೇಕಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಎಂಥಾ ದೇಶವಯ್ಯಾ?!

ಹೊರಗಿನಿಂದ ಬಂದವರು ಸ್ಥಳೀಯರನ್ನು ಹಿಂಸಿಸಿ, ಗುಲಾಮರನ್ನಾಗಿಸಿಕೊಂಡು, ವಧಿಸಿ, ಅವರ ನೆಲದಲ್ಲಿ ಬೇರೂರಿದ್ದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಕ್ಷಿಪ್ತ ಇತಿಹಾಸ. ತನ್ನ ಪ್ರತಿಭೆಯ ಗರಿಷ್ಠ ಲಾಭ ಪಡೆಯುವುದರ ಜತೆಗೆ ಪ್ರತಿಭಾಶಾಲಿ ಹೊರದೇಶಗಳವರನ್ನು ತನಗಾಗಿ ದುಡಿಸಿಕೊಳ್ಳುತ್ತ, ತಾನು ಕುಳಿತು ತಿನ್ನುತ್ತಿರುವುದು ಅಮೆರಿಕ ದೇಶದ ವರ್ತಮಾನ.

ಹೇಳದೆ ಕೇಳದೆ ಬಂದವರೆಂಬ ಒಂದೇ ಕಾರಣದಿಂದ ಹೊರಗಿನವರ ಕೈಗೆ ಕೋಳ ತೊಡಿಸಿ ಅವಮಾನಿಸಿ ಗಡಿಪಾರು ಮಾಡುತ್ತಿರುವುದು ಅನ್ಯ ದೇಶಗಳೆಡೆಗಿನ ಅಮೆರಿಕದ ತುಚ್ಛ ಭಾವ ಮತ್ತು ಸೊಕ್ಕಿನ ನಡೆಯ ಭವಿಷ್ಯತ್ತಿನ ಸೂಚನೆ. ಭವ್ಯ ಇತಿಹಾಸ ಹೊಂದಿರುವ, ತಥಾಕಥಿತ ವಿಕಸಿತ ಘಟ್ಟ ತಲುಪುತ್ತಿರುವ, ಅನತಿ ಕಾಲಾಂತರದಲ್ಲಿ ಜಗತ್ತಿನ ನಂಬರ್ ಒನ್ ದೇಶ ಆಗುವುದಾಗಿ ಹೇಳಿಕೊಳ್ಳುತ್ತಿರುವ ಭಾರತವೂ ಅಮೆರಿಕದ ಈ ಅವಮಾನಕ್ಕೆ ಈಡಾಗಿದೆ!

ವಿಶ್ವದ ಅತಿ ದೊಡ್ಡ ಜನಸಂಖ್ಯೆ ಮತ್ತು ಅತಿ ದೊಡ್ಡ ಪ್ರಜಾಪ್ರಭುತ್ವ ಆಗಿರುವ ನಮಗೆ ಇಂಥ ಒಂದು ಘೋರ ಅವಮಾನವನ್ನು ಅತ್ಯಂತ ಗಂಭೀರವಾಗಿ ಪ್ರತಿಭಟಿಸುವ 'ಎದೆ'ಗಾರಿಕೆ ಏಕಿಲ್ಲ? 140 ಕೋಟಿ ಭಾರತೀಯರು ಈ ಅವಮಾನವನ್ನು ಸಹಿಸಿಕೊಂಡು ಸುಮ್ಮನಿರಬೇಕೇ? ನಮ್ಮನ್ನು ಆಳುತ್ತಿರುವ ಸರಕಾರಕ್ಕೆ ಅಮೆರಿಕದ ಮುಲಾಜೇ? ಸ್ನೇಹದ ಅನಗತ್ಯ ಹಪಾಹಪಿಯೇ? ಒಣ ಪ್ರತಿಷ್ಠೆಯೇ? ಕೀಳರಿಮೆಯೇ? ನಮ್ಮವರು ಇನ್ನೂ, ಅಮೆರಿಕವನ್ನು ವೀಸಾಕ್ಕಾಗಿ ಅಂಗಲಾಚಿ, ಅಲ್ಲಿಗೆ ಹೋಗಿ ಅವರ ಸೇವೆ ಮಾಡಿಕೊಂಡೇ ಇರಬೇಕೇ?

ಅಂದಹಾಗೆ, 'ಮೇಕ್ ಇನ್ ಇಂಡಿಯಾ' ಎಲ್ಲಿಗೆ ಬಂತು?

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಒಳ್ಳೆಯ ಲೇಖನ

ಶಿಶಿರ್ ಹೆಗಡೆ ಅವರ 'ಕ್ಷಮಿಸುವುದು ಎಂದರೆ ಆಲೂಗಡ್ಡೆ ಚೀಲ ಕೆಳಕ್ಕಿಟ್ಟಂತೆ!' ಎಂಬ ಲೇಖನ (ವಿಶ್ವವಾಣಿ ಫೆ.7) ತುಂಬಾ ಚೆನ್ನಾಗಿತ್ತು. ಜೀವನ ಎನ್ನುವುದು ಅತಿ ಅಮೂಲ್ಯವಾದುದು ಮತ್ತು ಅತಿ ಕಡಿಮೆ ಅವಧಿಯದು. ಇದರಲ್ಲೇ ದ್ವೇಷ, ಅಸೂಯೆಗಳನ್ನು ಮಾಡಿಕೊಳ್ಳುತ್ತಾ ಕುಳಿತರೆ ಬದುಕು ಸಾರ್ಥಕ ಎನಿಸಿಕೊಳ್ಳುವುದಿಲ್ಲ. ಯಾರಿಂದಲಾದರೂ ನೋವಾಗಿದ್ದರೆ, ತೊಂದರೆಯಾಗಿದ್ದರೆ ಅವರನ್ನು ಪ್ರೀತಿಸಲಾಗುವುದಿಲ್ಲ ನಿಜ. ಕಡೇ ಪಕ್ಷ ದ್ವೇಷ ಮಾಡಿ ಹಗೆ ಸಾಧಿಸದೆ ಅವರಿಂದ ದೂರ ಉಳಿದು ಬಿಟ್ಟರೂ ಸಾಕು ಅಷ್ಟರಮಟ್ಟಿಗೆ ನೆಮ್ಮದಿಯ ಜೀವನ ಸಾಗಿಸಬಹುದು. ಒಟ್ಟಾರೆಯಾಗಿ, ಅದ್ಭುತವಾದ ಸಂದೇಶವುಳ್ಳ ಲೇಖನ.

- ರಾಘವೇಂದ್ರ ಜೋಯಿಸ್, ಮೈಸೂರು

ಅಕ್ರಮ ವಲಸೆ ನಿಲ್ಲಲಿ

ದೇಶದ ಅಭಿವೃದ್ಧಿ ದೃಷ್ಟಿಯಿಂದ ಮಾರಕ ಎನಿಸಿಕೊಳ್ಳುವ ಅಕ್ರಮ ವಲಸಿಗರ ವಿರುದ್ಧ ಅಮೆರಿಕ ಕೈಗೊಂಡ ನಿರ್ಧಾರಗಳು ಶ್ಲಾಘನೀಯ. ದೇಶದ ಮೂಲ ನಿವಾಸಿಗಳ ಹಿತದೃಷ್ಟಿಯಿಂದ ಪ್ರತಿಯೊಂದು ರಾಷ್ಟ್ರವೂ ಇಂಥ ನಿಷ್ಠುರ ಕ್ರಮಗಳನ್ನು ಕೈಗೊಳ್ಳಬೇಕಿದೆ. ಆಂತರಿಕ ಯುದ್ಧ, ಬಡತನ, ನಿರುದ್ಯೋಗದಂಥ ಕಾರಣದಿಂದಾಗಿ ವಾರ್ಷಿಕ ಲಕ್ಷಾಂತರ ಜನರು ವಲಸೆ ನೀತಿ-ನಿಯಮಗಳನ್ನು ಉಲ್ಲಂಘಿಸಿ, ಗಡಿದಾಟಿ ಇತರ ರಾಷ್ಟ್ರಗಳಲ್ಲಿ ವಾಸಿಸುವುದು ಸಾಮಾನ್ಯವಾಗಿದೆ. ಅಮೆರಿಕದ ವಲಸೆ ನೀತಿಯನ್ನು ಅನಗತ್ಯವಾಗಿ ಪ್ರಶ್ನಿಸುವುದರ ಬದಲು, ಜನರಿಗೆ ತಾಯ್ನೆಲದಲ್ಲಿಯೇ ನೆಮ್ಮದಿಯ ಜೀವನವನ್ನು ಕಲ್ಪಿಸಿಕೊಡುವತ್ತ ಎಲ್ಲ ರಾಷ್ಟ್ರಗಳೂ ಯತ್ನಿಸಬೇಕಿದೆ.

ಇನ್ನು, ಪಾಪ್‌ಕಾರ್ನ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದು, ಅದರ ಮೇಲೆ 3 ಭಿನ್ನ ರೀತಿಯ ತೆರಿಗೆ ವಿಧಿಸುವ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲಿ ಜೋಕುಗಳು, ಮೀಮ್‌ಗಳು ಮತ್ತು ಟ್ರೋಲ್‌ಗಳಿಗೆ ವಿತ್ತ ಸಚಿವೆ ಗುರಿಯಾಗಿದ್ದರು. ಮಾತ್ರವಲ್ಲದೆ, ಸಚಿವೆ ತಮ್ಮ ಕಳೆದ 7 ಬಜೆಟ್‌ಗಳಲ್ಲಿಯೂ ಮಧ್ಯಮ ವರ್ಗದವರಿಗಾಗಿ ಹೇಳಿಕೊಳ್ಳುವಂಥ ವಿನಾಯಿತಿ ನೀಡದ ಪರಿಣಾಮವಾಗಿ ಹಾಗೂ ನಿರಂತರ ಬೆಲೆಯೇರಿಕೆಯಿಂದಾಗಿ ಜೀವನ ನಿರ್ವಹಣೆಯಲ್ಲಿ ತೊಂದರೆ ಅನುಭವಿಸುತ್ತಿದ್ದ ಈ ವರ್ಗದವರ ನೈಜ ಚಿತ್ರಣವನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ನೆಟ್ಟಿಗರು ತೆರೆದಿಟ್ಟಿದ್ದರು. ಈಗ ಯಾರೂ ನಿರೀಕ್ಷಿಸಿರದ ರೀತಿಯಲ್ಲಿ ಈ ವರ್ಗದ ಜನರಿಗೆ ಬಜೆಟ್‌ನಲ್ಲಿ ಸಾಕಷ್ಟು ಅನುಕೂಲವನ್ನೇ ಕಲ್ಪಿಸಲಾಗಿದೆ. ನೆಟ್ಟಿಗರ ಯತ್ನಕ್ಕೆ ಕೊನೆಗೂ ಜಯ ಸಿಕ್ಕಂತಾಗಿದೆ.

- ಸುರೇಂದ್ರ ಪೈ, ಭಟ್ಕಳ

ಚೀನಾದೊಂದಿಗೆ ಭಾರತವನ್ನೇಕೆ ಹೋಲಿಸಬೇಕು?

ನೆರೆಹೊರೆ

ಗಣೇಶ್‌ಭಟ್ ವಾರಾಣಸಿ
vveditoped@gmail.com

ಚೀನಾ ದೇಶವು ಇತ್ತೀಚೆಗೆ 6ನೇ ತಲೆಮಾರಿನ ಯುದ್ಧವಿಮಾನವನ್ನು ಹಾರಿಸಿದ್ದನ್ನು ಕಂಡು, ''ಭಾರತವು 5ನೇ ತಲೆಮಾರಿನ ತಂತ್ರಜ್ಞಾನದ ಯುದ್ಧವಿಮಾನವನ್ನೂ ತಯಾರಿಸಿಲ್ಲ'' ಎಂದು ತೆಗಳಲಾಯಿತು. ಅಮೆರಿಕದ ಕೃತಕ ಬುದ್ಧಿಮತ್ತೆ ಸಂಸ್ಥೆ 'ಓಪನ್ ಎಐ' ಹೊರತಂದಿದ್ದ 'ಚ್ಯಾಟ್ ಜಿಪಿಟಿ'ಗೆ ಪ್ರತಿಯಾಗಿ ಚೀನಾ ಇತ್ತೀಚೆಗೆ 'ಡೀಪ್ ಸೀಕ್' ತಂತ್ರಾಂಶವನ್ನು ಬಿಡುಗಡೆ ಮಾಡುತ್ತಿದ್ದಂತೆ, ''ಅಮೆರಿಕದಲ್ಲಿ ಚ್ಯಾಟ್ ಜಿಪಿಟಿ ಇದೆ, ಚೀನಾದಲ್ಲಿ ಡೀಪ್ ಸೀಕ್ ಇದೆ, ಭಾರತದಲ್ಲೇನಿದೆ?!'' ಎಂದು ಕಟಕಿಯಾಡಿ, ''ಕೃತಕ ಬುದ್ಧಿಮತ್ತೆ ವಿಷಯದಲ್ಲಿ ಭಾರತವಿನ್ನೂ ಹಿಂದುಳಿದಿದೆ'' ಎಂದು ಕಾಲೆಳೆಯಲಾಯಿತು. ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ''ಚೀನಾದಲ್ಲಿ 11,000 ಕಿ.ಮೀ. ಉದ್ದದ ಮೆಟ್ರೋ ರೈಲು ಸಂಪರ್ಕವಿದೆ, ಭಾರತದಲ್ಲಿ ಮೆಟ್ರೋ ಕೇವಲ 1,000 ಕಿ.ಮೀ. ಉದ್ದವಿದೆ; ಚೀನಾದಲ್ಲಿ 48,000 ಕಿ.ಮೀ. ಉದ್ದದ ಬುಲೆಟ್ ಟ್ರೇನ್ ಸಂಪರ್ಕವಿದೆ, ಭಾರತದಲ್ಲಿ ಬುಲೆಟ್ ಟ್ರೇನು ಶುರುವಾಗೋದು ಯಾವಾಗಲೋ?!'' ಹೀಗೆ ಕೆಲವರ ಟೀಕಾಸರಣಿ ಬೆಳೆಯುತ್ತಲೇ ಹೋಗುತ್ತದೆ.

ಹೀಗೆ, ಚೀನಾ ಯಾವುದೋ ಒಂದು ಸಾಧನೆ ಮಾಡಿದಾಗ ಅದರೊಂದಿಗೆ ಭಾರತದ ಕ್ಷಮತೆಯನ್ನು ಹೋಲಿಸಿ ನಮ್ಮ ದೇಶವನ್ನು ಕೆಟ್ಟದಾಗಿ ಬಿಂಬಿಸಿ ಸಂತಸ ಪಡುವವರು ನಮ್ಮಲ್ಲಿ ಸಾಕಷ್ಟಿದ್ದಾರೆ. ಗುಣಮಟ್ಟವನ್ನು ಕಾಪಿಟ್ಟುಕೊಳ್ಳಲು, ಸಾಧನೆ ಮೆರೆಯಲು ಹೋಲಿಕೆಯು ಅಗತ್ಯವೇ; ಆದರೆ ಭಾರತವನ್ನು ಕೆಟ್ಟದಾಗಿ ಬಿಂಬಿಸುವ ಉದ್ದೇಶದಿಂದಲೇ ಹೋಲಿಸುವುದು ತರವಲ್ಲ. 'ಎಲ್‌ಸಿಎ ತೇಜಸ್' ಲಘು ಯುದ್ಧವಿಮಾನ ನಿರ್ಮಾಣದ ಯೋಜನೆಯು ಕಳೆದ 3 ದಶಕಗಳಲ್ಲಿ ಎದುರಿಸಿದ ಅಡೆತಡೆಗಳನ್ನು ಅಧ್ಯಯನ ಮಾಡಿದರೆ, ಭಾರತವೇಕೆ ಆಧುನಿಕ ಯುದ್ಧವಿಮಾನಗಳ ತಯಾರಿಯಲ್ಲಿ ಹಿಂದುಳಿದಿದೆ ಎಂಬುದರ ಅರಿವಾಗುತ್ತದೆ. 'ಎಲ್‌ಸಿಎ' ತಯಾರಿಯ ಪ್ರಸ್ತಾವನೆ 80ರ ದಶಕದಲ್ಲೇ ಆಗಿತ್ತು. ಆದರೆ ಸರಕಾರಗಳ ನಿರ್ಲಕ್ಷ್ಯ, ಅಧಿಕಾರಿಗಳ ಉದಾಸೀನತೆಯಿಂದಾಗಿ ಈ ಯೋಜನೆ ಮುಂದಿನ 20 ವರ್ಷಗಳವರೆಗೆ ಕಡತಗಳಲ್ಲೇ ಉಳಿಯುವಂತಾಯಿತು. ಅಟಲ್ ಬಿಹಾರಿ ವಾಜಪೇಯಿ ಸರಕಾರದ ಅವಧಿಯಲ್ಲಿ ದೇಶೀಯ ಯುದ್ಧವಿಮಾನ ನಿರ್ಮಾಣದ ಯೋಜನೆಗೆ ವೇಗವು ದಕ್ಕಿ, 'ತೇಜಸ್' ಲಘು ಯುದ್ಧವಿಮಾನವು 2001ರಲ್ಲಿ ಯಶಸ್ವಿ ಹಾರಾಟವನ್ನು ನಡೆಸಿತು. ಆದರೆ, 2004ರಲ್ಲಿ ಅಧಿಕಾರಕ್ಕೆ ಬಂದ ಮನಮೋಹನ್ ಸಿಂಗ್ ಸರಕಾರವು ಸ್ವದೇಶಿ ಯುದ್ಧವಿಮಾನ ಯೋಜನೆಯನ್ನು ಸಂಪೂರ್ಣ ನಿರ್ಲಕ್ಷಿಸಿ, ಅದರ ಹಿನ್ನಡೆಗೆ ಕಾರಣವಾಯಿತು. ಆದರೆ 2014ರಲ್ಲಿ ಅಧಿಕಾರಕ್ಕೆ ಬಂದ ಮೋದಿ ಸರಕಾರವು ಎಲ್‌ಸಿಎ ತೇಜಸ್ ಯೋಜನೆಗೆ ಮರುಜೀವ ನೀಡಿ ಆ ವಿಮಾನವನ್ನು ವಾಯುಪಡೆಗೆ ಸೇರಿಸಿತು. ಈ ಯುದ್ಧ ವಿಮಾನವು ಸಂಪೂರ್ಣ ದೇಶೀಯ ಉತ್ಪನ್ನವಾದರೂ ಎಂಜಿನ್‌ಗಾಗಿ ಅಮೆರಿಕದ ಜನರಲ್ ಇಲೆಕ್ಟ್ರಿಕ್ ಸಂಸ್ಥೆಯನ್ನು ನೆಚ್ಚಬೇಕಾಗಿದೆ.

ನಮ್ಮಲ್ಲೇ ಅಭಿವೃದ್ಧಿಪಡಿಸಲಾದ ಎಂಜಿನ್ 'ಕಾವೇರಿ'ಯು ಯುದ್ಧವಿಮಾನಕ್ಕೆ ಅಪೇಕ್ಷಿತ 'ಥ್ರಸ್ಟ್' (ಒತ್ತಡ) ತಂದುಕೊಡಲು ವಿಫಲವಾಯಿತು. ಯುದ್ಧವಿಮಾನದ ಎಂಜಿನ್‌ನ ತಂತ್ರಜ್ಞಾನವು ಅತ್ಯಂತ ಕ್ಲಿಷ್ಟಕರವಾದುದು. 'ಡಿಆರ್‌ಡಿಒ' ಸಂಸ್ಥೆಯ 'ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್' (ಜಿಟಿಆರ್‌ಇ) ಯೋಜನೆಯಡಿ ಮುಂದೆ ಮೇಲ್ದರ್ಜೆಗೇರಿಸಲಾಗುವ ಕಾವೇರಿ ಎಂಜಿನ್, ಯುದ್ಧವಿಮಾನಕ್ಕೆ ಅಗತ್ಯವಿರುವ 90 ಕೆಎನ್ ಥ್ರಸ್ಟ್ ಒತ್ತಡವನ್ನು ಕೊಡಲಿದೆ ಎಂದು ಅಂದಾಜಿಸಲಾಗಿದೆ. ಸದ್ಯದ ಸ್ಥಿತಿಯ ಕಾವೇರಿ ಎಂಜಿನ್ ಅನ್ನು ದೇಶದ ಮಾನವರಹಿತ ಯುದ್ಧವಿಮಾನ 'ಘಾತಕ್'ಗೆ ಬಳಸುವುದೆಂದು ತೀರ್ಮಾನಿಸಲಾಗಿದೆ. ಮುಂದಿನ ಹಂತದ ಆಧುನಿಕ ಮಧ್ಯಮಗತಿಯ ಯುದ್ಧವಿಮಾನದಲ್ಲಿ (ಎಎಂಸಿಎ) ಭಾರತವು ಫ್ರಾನ್ಸ್‌ನ 'ಸಾಫ್ರಾನ್' ಸಹಯೋಗದಲ್ಲಿ ನಿರ್ಮಿಸುವ ಎಂಜಿನ್ ಅನ್ನು ಬಳಸಲಿದೆ.

ಟೀಕಾಕಾರರು ಇದಾವುದನ್ನೂ ಗಮನಿಸುವುದೇ ಇಲ್ಲ. ಯುದ್ಧವಿಮಾನದ ಎಂಜಿನ್ ತಯಾರಿಯಲ್ಲಿ ಭಾರತ ವಿಫಲವಾಗಿರುವುದೇಕೆ ಎಂದು ಪ್ರಶ್ನಿಸುವ ಇದೇ ರಾಜಕೀಯ ಪಕ್ಷಗಳು ದಶಕದ ಹಿಂದೆ ತಾವು ಅಧಿಕಾರದಲ್ಲಿದ್ದಾಗ ಕಮಿಷನ್ ಆಸೆಗೆ ವಿದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸುತ್ತಾ, ಸ್ವದೇಶಿ ತಂತ್ರಜ್ಞಾನದ ಅಭಿವೃದ್ಧಿಗೆ ತಣ್ಣೀರೆರಚಿದ್ದವು. ಚೀನಾ ಇಂದು 'ಚೆಂಗ್ಡು ಜೆ-20'ರಂಥ ಯುದ್ಧವಿಮಾನಗಳ ಎಂಜಿನ್ ಅನ್ನು ತಯಾರಿಸುತ್ತಿರುವುದರ ಹಿಂದೆ 30-40 ವರ್ಷಗಳ ನಿರಂತರ ಯತ್ನವಿದೆ. ಜತೆಗೆ, ಅಮೆರಿಕ-ರಷ್ಯಾಗಳ ವೈಮಾನಿಕ ತಂತ್ರಜ್ಞಾನವನ್ನು ನಕಲು ಮಾಡುವಲ್ಲಿ ಅಥವಾ ರಿವರ್ಸ್ ಎಂಜಿನಿಯರಿಂಗ್ ಮಾಡುವ ಬಗ್ಗೆ (ಎಂಜಿನ್ ಅನ್ನು ಕಳಚಿ, ಬಿಡಿಭಾಗಗಳನ್ನು ಅಧ್ಯಯನ ಮಾಡಿ, ಅಂಥದೇ ಎಂಜಿನ್‌ಗಳನ್ನು ರೂಪಿಸುವಿಕೆ) ಚೀನಾಕ್ಕೆ ಯಾವುದೇ ನಾಚಿಕೆಯಿಲ್ಲ. 2011ರಲ್ಲಿ ಪಾಕಿಸ್ತಾನದ ಅಬೋಟಾಬಾದ್‌ನಲ್ಲಿ ಅಡಗಿದ್ದ ಒಸಾಮಾ ಬಿನ್ ಲಾಡೆನ್‌ನನ್ನು ಅಮೆರಿಕ ಪಡೆಯು ಹತ್ಯೆಮಾಡಿ ಹಿಂದಿರುಗುವ ವೇಳೆ, ಅದರ ಒಂದು ಯುದ್ಧ ಹೆಲಿಕಾಪ್ಟರ್ ತಾಂತ್ರಿಕ ದೋಷದಿಂದ ಅಲ್ಲೇ ಉಳಿದಿತ್ತು. ಈ ಸಂದರ್ಭದ ದುರುಪಯೋಗಕ್ಕೆ ಮುಂದಾದ ಚೀನಾ, ಹೆಲಿಕಾಪ್ಟರ್‌ನ ರಚನೆಯ ಬಗ್ಗೆ ಅಧ್ಯಯನ ಮಾಡಲು ತನ್ನ ತಂತ್ರಜ್ಞರನ್ನು ಕಳಿಸಿತ್ತು. ಹೀಗಾಗಿ ಡೀಪ್ ಸೀಕ್ ರಚನೆಯಲ್ಲೂ ಚೀನಾ ವಾಮಮಾರ್ಗ ಹಿಡಿದಿರುವ ಸಾಧ್ಯತೆಯಿದೆ ಎಂದು ಅಮೆರಿಕ ಗುಮಾನಿ ವ್ಯಕ್ತಪಡಿಸಿದೆ.

ಭಾರತದಲ್ಲಿ ಬುಲೆಟ್ ರೈಲು ಅಥವಾ ಮೆಟ್ರೋ ರೈಲು ಯೋಜನೆಗಳು ಚೀನಾದಷ್ಟು ಕ್ಷಿಪ್ರವಾಗಿ ಕಾರ್ಯಗತವಾಗದಿರುವುದಕ್ಕೆ, ನಮ್ಮ ರಾಜ್ಯಗಳ ರಾಜಕೀಯ ಪ್ರತಿರೋಧ ವ್ಯವಸ್ಥೆ ಮತ್ತು ಯೋಜನೆಗೆ ಅಗತ್ಯವಿರುವ ಭೂಮಿಯನ್ನು ವಶಪಡಿಸಿಕೊಳ್ಳುವಲ್ಲಿನ ಕಾನೂನು ತೊಡಕುಗಳು ಕಾರಣವಾಗಿವೆ. ಮಹಾರಾಷ್ಟ್ರದಲ್ಲಿ 2019ರಿಂದ 2022ರವರೆಗೆ ಅಧಿಕಾರದಲ್ಲಿದ್ದ ಉದ್ಧವ್ ಠಾಕ್ರೆ ನೇತೃತ್ವದ ಸರಕಾರವು ಅಹ್ಮದಾಬಾದ್-ಮುಂಬೈ ನಡುವಿನ ಬುಲೆಟ್ ಟ್ರೇನ್ ಯೋಜನೆಗೆ ಬೇಕಾದ ಭೂಮಿಯನ್ನು ಒದಗಿಸದೆ ಸಾಕಷ್ಟು ತೊಂದರೆಗಳನ್ನೊಡ್ಡಿತ್ತು. ಇದರಿಂದಾಗಿ ಸದರಿ ಯೋಜನೆ 3 ವರ್ಷಗಳ ಕಾಲ ಹಿಂದೆ ಬಿತ್ತು. ಆದರೆ ಅಲ್ಲೀಗ ಬದಲಾದ ರಾಜಕೀಯ ವಾತಾವರಣದಿಂದಾಗಿ ಯೋಜನೆಯು ಪುನಃ ಹಳಿಗೆ ಬಂದು ವೇಗವನ್ನು ಪಡೆದುಕೊಂಡಿದೆ, 2008ರೊಳಗಾಗಿ ಬುಲೆಟ್ ಟ್ರೇನ್ ಸೇವೆ ಆರಂಭವಾಗಲಿದೆ. ಮುಂಬೈ ಮೆಟ್ರೋ ಯೋಜನೆಗೂ ಅಡ್ಡಗಾಲು ಹಾಕಿದ್ದ ಉದ್ಧವ್ ಸರಕಾರ, ಅರಣ್ಯನಾಶವಾಗುತ್ತದೆ ಎಂಬ ನೆಪವೊಡ್ಡಿ ಮೆಟ್ರೋ ಕಾರು ಶೆಡ್ ನಿರ್ಮಾಣಕ್ಕೂ ತಡೆಯೊಡ್ಡಿತ್ತು.

ಕಮ್ಯುನಿಸ್ಟ್ ಸರ್ವಾಧಿಕಾರಿ ಆಡಳಿತ ವ್ಯವಸ್ಥೆಯಿರುವ ಚೀನಾದಲ್ಲಿ ಬುಲೆಟ್ ರೈಲು, ಮೆಟ್ರೋ, ವಿಮಾನ ನಿಲ್ದಾಣ, ಹೆದ್ದಾರಿಗಳಂಥ ಯೋಜನೆಗಳನ್ನು ಕಾರ್ಯಗತಗೊಳಿಸುವ ವಿಚಾರದಲ್ಲಿ ರಾಜಕೀಯ ಪ್ರತಿರೋಧವಿಲ್ಲ. ಯೋಜನೆಗಳಿಗೆ ಅಗತ್ಯವಿರುವ ಭೂಮಿಯನ್ನು ಅಲ್ಲಿಯ ಸರಕಾರ ಜನರಿಂದ ನಿರ್ದಾಕ್ಷಿಣ್ಯವಾಗಿ ವಶಪಡಿಸಿಕೊಳ್ಳುತ್ತದೆ. ಬೀಜಿಂಗ್ ವಿಮಾನ ನಿಲ್ದಾಣ ವಿಸ್ತರಣೆಯ ವೇಳೆ 10,000 ಮನೆಗಳನ್ನು ರಾತ್ರೋರಾತ್ರಿ ಕೆಡವಲಾಗಿತ್ತು. ಅಲ್ಲಿ ಜನರ ಪರವಾಗಿ ಮಾತನಾಡುವ ಮಾನವಹಕ್ಕುಗಳ ಸಂಘಟನೆಗಳಿಲ್ಲ, ಕೋರ್ಟ್‌ಗಳೂ ಕಮ್ಯುನಿಸ್ಟ್ ಸರಕಾರದ ಅಡಿಯಲ್ಲಿ ಬರುವುದರಿಂದ, ಅವಕ್ಕೆ ಸರಕಾರವನ್ನು ವಿಮರ್ಶಿಸುವ ಸ್ವಾಯತ್ತತೆ ಇಲ್ಲ. ಭಾರತ ಸೇರಿದಂತೆ ಜಾಗತಿಕವಾಗಿ ಉಪಯೋಗಿಸಲ್ಪಡುತ್ತಿರುವ ವಾಟ್ಸಾಪ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಯೂಟ್ಯೂಬ್, ಎಕ್ಸ್ (ಟ್ವಿಟರ್), ಗೂಗಲ್ ಈ ಎಲ್ಲ ಸಾಮಾಜಿಕ ಮಾಧ್ಯಮಗಳ ಮೇಲೆ ನಿಷೇಧ ಹೇರಿರುವ ಚೀನಾ, ತನ್ನ ಪ್ರಜೆಗಳ ಬಳಕೆಗಾಗಿ ಪ್ರತ್ಯೇಕ ಸಾಮಾಜಿಕ ಮಾಧ್ಯಮಗಳನ್ನು ರೂಪಿಸಿದೆ. ಸರಕಾರದ ವಿರುದ್ಧ ಯಾವುದೇ ಅಪಸ್ವರಗಳು ಅಥವಾ ವರದಿಗಳು ಅಲ್ಲಿ ಪ್ರಕಟವಾಗದಂತೆ ಕಣ್ಣಿಡಲಾಗುತ್ತದೆ. ಸರ್ವಾಧಿಕಾರಿ ಕಮ್ಯುನಿಸ್ಟ್ ಸರಕಾರದ ವಿರುದ್ಧ ಜನರು ತಿರುಗಿಬೀಳಬಾರದೆಂಬುದೇ ಇದರ ಹಿಂದಿನ ಉದ್ದೇಶ. ಒಟ್ಟಾರೆ, ಅಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೇ ಇಲ್ಲ. ಜನರ ಚಲನವಲನಗಳ ಮೇಲೆ ನಿಗಾ ಇಡಲು ಚೀನಾ ಸರಕಾರವು ದೇಶಾದ್ಯಂತ 70 ಕೋಟಿಯಷ್ಟು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದೆ. ಜನರು ಸರಕಾರದ ವಿರುದ್ಧ ದನಿಯೆತ್ತುವುದನ್ನು ತಡೆಯಲು ಇಷ್ಟೆಲ್ಲಾ ಹರಸಾಹಸ! ಅಲ್ಲಿ ಸರಕಾರಕ್ಕೆ ವಿಪಕ್ಷವೆಂಬುದೇ ಇಲ್ಲ, ಯಾವ ಮಾಧ್ಯಮಗಳೂ ಸರಕಾರವನ್ನು ಟೀಕಿಸುವಂತಿಲ್ಲ. ತನ್ನ ವಿರುದ್ಧ ಸಣ್ಣದಾಗಿ ಅಸಮಾಧಾನ ವ್ಯಕ್ತಪಡಿಸಿದ್ದ ಅಲೀಬಾಬ ಸಂಸ್ಥೆಯ ಸಂಸ್ಥಾಪಕ ಜ್ಯಾಕ್ ಮಾ ಎಂಬಾತನಿಂದ ಸಂಸ್ಥೆಯ ಮಾಲೀಕತ್ವವನ್ನೇ ಕಿತ್ತುಕೊಂಡ ಚೀನಾ ಸರಕಾರ, ಉಯಿಘರ್ ಮುಸ್ಲಿಮರ ಮಸೀದಿಗಳನ್ನು ನಾಶಪಡಿಸಿದೆ. ಅತಿಹೆಚ್ಚು ಮರಣದಂಡನೆಗಳು ವಿಧಿಸಲ್ಪಡುವ ದೇಶಗಳಲ್ಲಿ ಚೀನಾ ಮುಂಚೂಣಿಯಲ್ಲಿದೆ.

ಇಂಥ ಅತಿರೇಕಗಳೇನೂ ಇಲ್ಲದ ಭಾರತದಲ್ಲಿ ಆರ್ಥಿಕ ಪ್ರಗತಿಯ ಯುಗ ಆರಂಭವಾಗಿದೆ. ನಮ್ಮ ಜಿಡಿಪಿ ಅಭಿವೃದ್ಧಿ ದರವು ಚೀನಾಕ್ಕಿಂತಲೂ ಮೇಲಿರುವುದು ಮಾತ್ರವಲ್ಲದೆ, ಜಗತ್ತಿನಲ್ಲೇ ಅತಿವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿ ಹೊರಹೊಮ್ಮಿದೆ ಭಾರತ. ಇಂದು ಜಾಗತಿಕವಾಗಿ 5ನೇ ಅತಿದೊಡ್ಡ ಆರ್ಥಿಕತೆ ಎನಿಸಿಕೊಂಡಿರುವ ಭಾರತ, ಮೊಬೈಲ್ ಫೋನ್, ಸೌರ ಉಪಕರಣಗಳು, ಇಲೆಕ್ಟ್ರಾನಿಕ್ಸ್, ಆಟೋಮೊಬೈಲ್, ಉಪಗ್ರಹ ಉಡಾವಣೆ, ರಕ್ಷಣಾ ಸಲಕರಣೆಗಳ ಉತ್ಪಾದನೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ವಿಯಾಗುತ್ತಿದೆ, ಸೆಮಿಕಂಡಕ್ಟರ್ ಕ್ಷೇತ್ರದಲ್ಲೂ ಮುಂಚೂಣಿಗೆ ಬರಲು ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳುತ್ತಿದೆ. ಡಿಜಿಟಲ್ ಪಾವತಿ ವಿಧಾನದಲ್ಲಿ ಭಾರತವು ಚೀನಾಕ್ಕಿಂತ ಎಷ್ಟೋ ಮುಂದಿದೆ. ವಿಪಕ್ಷಗಳ ಅಡ್ಡಗಾಲು ಸೇರಿದಂತೆ ಹತ್ತು ಹಲವು ಅಡೆತಡೆಗಳ ನಡುವೆಯೂ ಕಳೆದ 10 ವರ್ಷಗಳಲ್ಲಿ ದೇಶದ 11 ನಗರಗಳಲ್ಲಿ ಹೊಸದಾಗಿ ಮೆಟ್ರೋ ರೈಲುಸೇವೆ ಆರಂಭವಾಗಿದೆ. 8 ನಗರಗಳಲ್ಲಿ ಮೆಟ್ರೋ ಕಾಮಗಾರಿ ನಡೆಯುತ್ತಿದ್ದರೆ, ಇನ್ನೂ 27 ನಗರಗಳಲ್ಲಿ ಕಾಮಗಾರಿಗೆ ಅನುಮತಿ ಸಿಕ್ಕಿದೆ. ಪರಿಣಾಮವಾಗಿ, 4,000 ಕಿ.ಮೀ.ನಷ್ಟು ಉದ್ದದ ಮೆಟ್ರೋಜಾಲವನ್ನು ದೇಶ ಹೊಂದಲಿದೆ.

ಕಳೆದ 10 ವರ್ಷಗಳಲ್ಲಿ ದೇಶದ ವಿಮಾನ ನಿಲ್ದಾಣಗಳ ಸಂಖ್ಯೆ ದ್ವಿಗುಣಗೊಂಡಿದೆ, 25 ಕೋಟಿ ಜನರು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ಈ ವರ್ಷಾಂತ್ಯದೊಳಗಾಗಿ ಭಾರತವು ತನ್ನದೇ ಆದ ಕೃತಕ ಬುದ್ಧಿಮತ್ತೆ (ಎಐ) ತಂತ್ರಾಂಶವನ್ನು ಹೊಂದಲಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಅಶ್ವಿನ್ ವೈಷ್ಣವ್ ಹೇಳಿದ್ದಾರೆ. ಅಮೆರಿಕದ ನಂತರ ಅತಿಹೆಚ್ಚು 'ಎಐ' ತಂತ್ರಜ್ಞರನ್ನು ಹೊಂದಿರುವ ಭಾರತಕ್ಕೆ ತನ್ನದೇ ಆದ 'ಎಐ' ತಂತ್ರಜ್ಞಾನವನ್ನು ಹೊಂದುವುದು ಕಷ್ಟವೇನಲ್ಲ.

ಚೀನಾ ದೇಶವು ಆಯ್ದ ಅಂಕಿ-ಅಂಶಗಳನ್ನು ಮಾತ್ರವೇ ಪ್ರಕಟಿಸಿ ಮಹತ್ವದ ಅಂಶಗಳನ್ನು ಅಡಗಿಸಿಡುತ್ತದೆ. ಭಾರತದ ಸೈನಿಕರೊಡನೆ ನಡೆದ ಸಂಘರ್ಷದಲ್ಲಿ ತನ್ನ ಎಷ್ಟು ಮಂದಿ ಸೈನಿಕರು ಸಾವಿಗೀಡಾಗಿದ್ದಾರೆ ಎಂಬ ಸಂಗತಿಯನ್ನೂ ಚೀನಾ ಮುಚ್ಚಿಟ್ಟಿದೆ. ಕರೋನಾ ಸಾವುಗಳ ವಿಚಾರದಲ್ಲಿ ಚೀನಾ ಹಂಚಿಕೊಂಡ ಅಂಕಿ-ಅಂಶಗಳನ್ನು ಯಾರೂ ನಂಬುತ್ತಿಲ್ಲ. ಹೀಗಾಗಿ, ಸೀಮಿತ ದೃಷ್ಟಿಕೋನವಿಟ್ಟುಕೊಂಡು ಭಾರತವನ್ನು ಚೀನಾದೊಂದಿಗೆ ಹೋಲಿಸದೆ, ಬಹು ಆಯಾಮಗಳಿಂದ ವಿಶ್ಲೇಷಿಸಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

ಭಟ್ಟರ್ ಸ್ನ್ಯಾಕ್

- **ಶಿರೂರು ಶಾಮಣ್ಣ, ಮೈಸೂರು**
ಜಪಾನ್ ನೋಡಿ ಬಂದ ನಮ್ಮ ಭಟ್ರು ಪತ್ರಿಕೆಯಲ್ಲಿ ಬರೆದಿದ್ದೇ ಬರೆದಿದ್ದು. ಒಮಾನಿನಲ್ಲಿ ಏನಿದೆ ಬರೆಯಕ್ಕೆ?
– ಎಣ್ಣೆ ಬಾವಿಗಳು!

- **ಚಂದ್ರಶೇಖರ ನಾಗೂರು,**
(ಇಮೇಲ್ ಮೂಲಕ)
ಭಟ್ರೇ, ಮತ್ತೆ 'ಟ್ರಂಪ್' ಗೆದ್ದು ಬಂದಿದ್ದು ಮೂರನೇ ಮಹಾಯುದ್ಧದ ಮುನ್ಸೂಚನೆಯಾ?
– ಯುದ್ಧವೂ ಒಂದು ಬಿಜಿನೆಸ್ ಅಂತಾದರೆ ಟ್ರಂಪ್ ಅದಕ್ಕೂ ಸಿದ್ಧ!

- **ರುಕ್ಕು, ಚಾಮರಾಜಪೇಟೆ**
ತಿರುಗೋ ಭಟ್ಟರು ಜಪಾನ್‌ಗೆ ಹೋಗಿ ಬಂದು, ಒಮಾನ್ ಮುಗಿಸಿ ವಾಪಸ್ ಬಂದಾಯ್ತು. ಬರೆಯೋ ಭಟ್ರು ಇನ್ನು ಜಪಾನಿನಿಂದ ಕಾಲು ಕಿತ್ತಿಲ್ಲವಲ್ಲ?
– ಹೂಂ.. ಅದು ಮುಗಿದರೆ ಶ್ರೀಲಂಕಾ ಮತ್ತು ಒಮಾನ್ ಅಂತ ಶುರು ಹಚ್ಕೊಂಡ್ರೆ ಓದುಗರ ಗತಿ?!

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ರಾತ್ರಿಯಾಗಿದ್ರೂ ಕೂಲಿಂಗ್ ಗ್ಲಾಸ್ ಹಾಕೊತಾರಲ್ಲ?
– ಮಲಗುವಾಗ ತೆಗೆಯುತ್ತಾರಾ, ಇಲ್ಲವಾ ನೋಡಬೇಕಿತ್ತು!

- **ಎಂ, ಪರಮೇಶ್ವರ, ಮದ್ದಿಹಳ್ಳಿ**
ಭಟ್ರೇ, ಮಾಡೋದು ಹೋಟೆಲ್‌ನಲ್ಲಾದರೂ 'ಮನೆ ಊಟ' ಅಂತ ಬೋರ್ಡ್ ಹಾಕಿಕೊಂಡಿರುತ್ತಾರಲ್ಲ?
– ಅಂಥವರು ಹೋಟೆಲನ್ನೂ ಮನೆ ಎಂದು ಭಾವಿಸಿರುತ್ತಾರೆ!

- **ರಾಜು, ಪಾವಗಡ**
ಭಟ್ರೇ, ಮೇಕಪ್ ಇಲ್ಲದೇ ಹೆಂಗಸರನ್ನು ನೋಡಲು ಆಗುವುದಿಲ್ಲವಲ್ಲ?
– ಕೆಲವು ಹೆಂಗಸರನ್ನು ಮೇಕಪ್ ಮಾಡಿಕೊಂಡರೂ ನೋಡಲಾಗುವುದಿಲ್ಲ!

- **ಸಂದೇಶ ನಾಯಕ, ಬೆಂಗಳೂರು**
ಭಟ್ರೇ, ಕೆಲವರು ನಮ್ಮ ಬದುಕಿಗೆ ಬಂದು ಅಚ್ಚು ಒತ್ತುತ್ತಾರೆ, ಉಳಿದವರು?
– ಅವರ ಮುಖ ಅಥವಾ ಮತ್ತೆಲ್ಲೋ ನಾವು ಅಚ್ಚು ಒತ್ತಬೇಕಾಗುತ್ತದೆ!

- **ರಘು ಬೈಂದೂರು, ಮಂಗಳೂರು**
ಭಟ್ರೇ, ಶಾಪಿಂಗ್ ಮಾಡಲು ಇಷ್ಟ, ಆದ್ರೆ ಹಣ ಖರ್ಚು ಮಾಡಲು ಇಷ್ಟವಿಲ್ಲ ಏನು ಮಾಡಲಿ?
– ವಿಂಡೋ ಶಾಪಿಂಗ್ ಮಾಡಬಹುದಲ್ಲ?!

- **ರವಿ ಸುಬ್ಬರಾವ್**
ಭಟ್ರೇ, ತಿನ್ನುವ ಆಸೆ, ಆದರೆ ಡಯಟ್ ಬಿಡೋ ಹಾಗಿಲ್ಲ, ಏನು ಮಾಡಲಿ?
– ತಿಂದು, ನುಂಗದೇ, ಹಾಗೆ ಉಗುಳಬಹುದು!

- **ಶ್ರೀನಿವಾಸ ಸೊನ್ನದ, ಬಾಗಲಕೋಟ**
ಭಟ್ರೇ, ನಮ್ಮ ಹೃದಯ ಹೇಳಿದಂತೆ ಕೇಳಬೇಕು ಅಂತಾರಲ್ಲ?
– ಅದೇ ಸಮಸ್ಯೆ, ಅದು ಬಾರ್‌ಗೆ ಹೋಗೋಣ ಅಂತ ಹೇಳುತ್ತದೆ!

- **ಘಂಟಿ ರಾಮಾಚಾರ್, ಮೈಸೂರು**
ಭಟ್ರೇ, ಕೆಲವರ ಬಾಯಲ್ಲಿ ಬರೀ ಹೊಲಸು ಮಾತುಗಳೇ ಉದುರುತ್ತವೆ, ಅಂಥವರಿಗೆ ಯಾವ ಚಿಕಿತ್ಸೆ ಕೊಡಿಸೋಣ?
– ಅಂಥವರ ನಾಲಗೆಯನ್ನು ಹಾರ್ಪಿಕ್‌ನಿಂದ ಶುದ್ಧಗೊಳಿಸಬೇಕಷ್ಟೆ!

ಬೇಸಿಗೆಯಲ್ಲಿ ಮಜ್ಜಿಗೆ ಕುಡಿಯುವ ಅಭ್ಯಾಸವಿದೆಯಾ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಐದು ಜನರ ಕುಟುಂಬವೊಂದು ಕ್ಲಿನಿಕ್ಕಿಗೆ ಭೇಟಿ ನೀಡಿತ್ತು. ಐದು ಜನರಿಗೂ ಬೇರೆ ಬೇರೆ ರೀತಿಯ ಸಮಸ್ಯೆಗಳು. ಮಗಳಿಗೆ ಮುಟ್ಟಿನ ಸಮಸ್ಯೆಯಾದರೆ, ಮಗನಿಗೆ ಸದಾ ನೆಗಡಿ ಮತ್ತು ಕಫದ ಸಮಸ್ಯೆ. ತಂದೆಗೆ ಚರ್ಮದ ತೊಂದರೆ ಕಸಿವಿಸಿ ಮಾಡುತ್ತಿದ್ದರೆ, ತಾಯಿಗೆ ಪದೇ ಪದೇ ಬಿಟ್ಟು ಬಿಟ್ಟು ಬರುವ ಜ್ವರದ ಸಮಸ್ಯೆ. ಇನ್ನು, ಮನೆ ಹಿರಿಯರಾದ ಅತ್ತೆಗೆ ಡಯಾಬಿಟಿಸ್‌ನ ಸಮಸ್ಯೆಯಿಂದ ತಲೆಬಿಸಿಯಾಗಿತ್ತು. ಒಂದೇ ಕುಟುಂಬ ಎಂದರೆ ಸಾಮಾನ್ಯವಾಗಿ ಎಲ್ಲರ ಆಹಾರವೂ ಒಂದೇ ಬಗೆಯದ್ದಾಗಿರುತ್ತದೆ. ಆದ್ದರಿಂದ, ಒಂದೇ ರೀತಿಯ ಅಪಥ್ಯವಾದದ್ದೇನೋ ಇವರ ಕುಟುಂಬದಲ್ಲಿ ಅನುಸರಣೆಯಲ್ಲಿರಬೇಕು ಎಂದು ಅನುಮಾನಿಸಿ ಅವರ ಆಹಾರದ ಬಗ್ಗೆ ಸಂಪೂರ್ಣ ವಿವರಗಳನ್ನು ತೆಗೆದುಕೊಂಡಾಗ ಕಾರಣ ತಿಳಿಯಿತು. ಎಲ್ಲರಿಗೂ, ನಿತ್ಯವೂ, ಮೂರು ಹೊತ್ತೂ ಆಹಾರದಲ್ಲಿ ಆಗಷ್ಟೇ ಫ್ರಿಜ್‌ನಿಂದ ತೆಗೆದ ಗಟ್ಟಿ ಮೊಸರು ಬೇಕೇ ಬೇಕು. ತಿಂಡಿಯ ಹೊತ್ತಿನಲ್ಲಿ ಚಪಾತಿ, ಅವಲಕ್ಕಿ, ಉಪ್ಪಿಟ್ಟು, ಪರಾಠ, ದೋಸೆ, ರೊಟ್ಟಿ- ಎಲ್ಲದಕ್ಕೂ ಮೊಸರು ಬೇಕು. ಮಧ್ಯಾಹ್ನವು ಊಟದ ಕೊನೆಯಲ್ಲಿ ಅನ್ನದ ಜತೆ ಮೊಸರು ಮತ್ತು ಉಪ್ಪಿನಕಾಯಿ ಸೇವಿಸುವುದು ಫೇವರಿಟ್! ಮತ್ತೆ ರಾತ್ರಿ ಊಟವಾದ ನಂತರ ಒಂದು ಕಪ್ ಮೊಸರಿಗೆ ಸಕ್ಕರೆಯನ್ನು ಸೇರಿಸಿ ನಿತ್ಯವೂ ಸೇವಿಸುವ ಅಭ್ಯಾಸ. ಈ ರೀತಿ ದಿನನಿತ್ಯವೂ ಶಾರೀರಿಕ ಶ್ರಮವಿಲ್ಲದಿದ್ದಾಗಲೂ ಆಹಾರ ಕಾಲದಲ್ಲಿ ಗಟ್ಟಿ ಮೊಸರನ್ನು ಸೇವಿಸುವುದರ ಪರಿಣಾಮವಾಗಿ ದೇಹದಲ್ಲಾಗುತ್ತಿದ್ದ ಪಿತ್ತ-ಕಫ-ರಕ್ತಗಳ ವಿಕೃತಿಯು ಅವರ ಆರೋಗ್ಯದ ಈ ಏರುಪೇರುಗಳಿಗೆ ಕಾರಣ ಎಂದು ನನಗೆ ಖಾತರಿಯಾಯಿತು.

ಆಯುರ್ವೇದ ವೈದ್ಯರಾದ ಮೇಲೆ ಕೇವಲ ಔಷಧಗಳ ಪಟ್ಟಿಯನ್ನು ಕೊಟ್ಟು ಕಳಿಸುವುದಷ್ಟೇ ನಮ್ಮ ಜವಾಬ್ದಾರಿ ಅಲ್ಲ. ಬದಲಿಗೆ, ರೋಗಗಳ ಕಾರಣವನ್ನು ತಿಳಿಸಿ ಅವರ ಜೀವನದಿಂದ ಆ ಕಾರಣಗಳನ್ನು ನಿವಾರಿಸುವುದೇ ಬಹುದೊಡ್ಡ ಜವಾಬ್ದಾರಿ. ಇದು ಚಿಕಿತ್ಸೆಯ ಬಹುಮುಖ್ಯ ಭಾಗ. ಈ ನಿಟ್ಟಿನಲ್ಲಿ ನಾನು ಅವರಿಗೆ ''ಆಯುರ್ವೇದದ ಪ್ರಕಾರ ನಿತ್ಯವೂ ಮೊಸರಿನ ಬಳಕೆ, ಅದೂ ಮೂರೂ ಆಹಾರ ಕಾಲಗಳಲ್ಲಿ ನಿಷಿದ್ಧ'' ಎಂದು ತಿಳಿಸಿದೆ. ''ಮೊಸರು ಆರೋಗ್ಯಕರವಾದರೂ ಅದನ್ನು ಕೆಲವು ವಿಶಿಷ್ಟ ನಿಯಮಗಳೊಂದಿಗೆ ಸೇವಿಸಬೇಕು. ಇಲ್ಲವಾದರೆ, ಅದು ಈ ರೀತಿಯ ಆರೋಗ್ಯ ಸಮಸ್ಯೆಗಳನ್ನು ನೀಡುವುದು ಖಂಡಿತ. ಹಾಗಾಗಿ ಇನ್ನು ಮುಂದೆ ಮೊಸರಿನ ಬದಲು ಮಜ್ಜಿಗೆಯನ್ನು ಸೇವಿಸಬೇಕು'' ಎಂದು ಹೇಳಿದೆ. ಅವರು ಬಂದು ಆಗಲೇ ಸುಮಾರು ಹೊತ್ತು ಆಗಿದ್ದರಿಂದ, ಸಮಯದ ಅಭಾವದಿಂದ ನಾನು ಅವರಿಗೆ ಈ ವಿಷಯದ ಕುರಿತು ಹೆಚ್ಚಾಗಿ ವಿವರಿಸಲಿಲ್ಲ. ಅವರು ''ಖಂಡಿತ ಡಾಕ್ಟರೇ'' ಎಂದು ಹೇಳಿ ಮನೆಗೆ ತೆರಳಿದರು.

ಅದಾದ ನಂತರ ಕೆಲವು ವಾರಗಳ ಕಾಲ, ಔಷಧಿಗಳನ್ನು ಸೇವಿಸುವುದರ ಬಗ್ಗೆ ಫೋನಿನಲ್ಲಿ ವಿಚಾರಿಸಿ ಎಲ್ಲರಿಗೂ ಆರಾಮವಾದ ಮೇಲೆ ಔಷಧಿಗಳನ್ನು ನಿಲ್ಲಿಸಬಹುದು ಎಂದು ನಾನು ಹೇಳಿದೆ. ಇದಾದ ಮೇಲೆ ನನಗೂ ಅವರ ಬಗ್ಗೆ ಹೆಚ್ಚೇನೂ ನೆನಪಿರಲಿಲ್ಲ. ಆದರೆ, ಮತ್ತೆ ಮೂರು ತಿಂಗಳ ನಂತರ ಕ್ಲಿನಿಕ್ಕಿಗೆ ಬಂದಿದ್ದರು. ಮತ್ತೆ ಎಲ್ಲರಿಗೂ ಅದೇ ಸಮಸ್ಯೆಗಳು ಉಲ್ಬಣವಾಗಿದ್ದವು. ನನಗೂ ಇದನ್ನು ಕೇಳಿ ಸ್ವಲ್ಪ ಆಶ್ಚರ್ಯವೇ ಆಯಿತು. ಸರಿ, ಎಂದು ಪುನಃ ಅವರ ಆಹಾರದ ಬಗ್ಗೆ ವಿಚಾರಿಸತೊಡಗಿದೆ. ಅವರು ತಕ್ಷಣವೇ ''ಡಾಕ್ಟರೇ, ನೀವು ಕಳೆದ ಬಾರಿ ಹೇಳಿದ ನಂತರ ನಾವೆಲ್ಲರೂ ಮಜ್ಜಿಗೆಯನ್ನೇ ಬಳಸುತ್ತಿದ್ದೇವೆ. ಮೊಸರನ್ನು ಸಂಪೂರ್ಣವಾಗಿ ನಿಲ್ಲಿಸಿದ್ದೇವೆ'' ಎಂದು ಹೇಳಿದರು. ಆಗಂತೂ ನನಗೆ ಇನ್ನೂ ಹೆಚ್ಚು ಆಶ್ಚರ್ಯವಾಯಿತು. ಇವರ ರೋಗೋತ್ಪತ್ತಿಗೆ ಇದ್ದ ಮುಖ್ಯ ಕಾರಣವೇ ಅನಿಯಮಿತ ಮೊಸರಿನ ಸೇವನೆ. ಅದನ್ನು ನಿಲ್ಲಿಸಿದರೂ ಇವರಿಗೆ ಮತ್ತೆ ತೊಂದರೆಗಳು ಶುರುವಾಗಿವೆಯಲ್ಲಾ ಎಂದು ಯೋಚನೆ ಮಾಡತೊಡಗಿದೆ. ಆಗ, ತಕ್ಷಣವೇ ಅವರನ್ನು ಮತ್ತೊಂದು ಪ್ರಶ್ನೆ ಕೇಳಿದೆ- ''ಮೊಸರಿನಿಂದ ಮಜ್ಜಿಗೆಯನ್ನು ಹೇಗೆ ತಯಾರು ಮಾಡ್ತಾ ಇದ್ದೀರಾ.. ಸ್ವಲ್ಪ ವಿವರಿಸಿ?'' ಅಂತ. ಆಗ ಅವರು ಹೇಳಿದರು ''ಫ್ರಿಜ್ಜಿನಿಂದ ತೆಗೆದ ಮೊಸರಿಗೆ ಸ್ವಲ್ಪ ನೀರನ್ನು ಬೆರೆಸುತ್ತೇವೆ, ತದನಂತರ ಆ ಮಜ್ಜಿಗೆಯನ್ನು ನಾವು ಆಹಾರದೊಟ್ಟಿಗೆ ಸೇವಿಸುತ್ತೇವೆ'' ಎಂದು. ಆಗ, ಮತ್ತೆ ಏಕೆ ಇವರಿಗೆ ಎಲ್ಲಾ ತೊಂದರೆಗಳು ಮರುಕಳಿಸಿವೆ ಎಂಬುದು ಸ್ಪಷ್ಟವಾಯಿತು.

ಸ್ನೇಹಿತರೆ, ಮೊಸರಿಗೆ ಕೇವಲ ನೀರನ್ನು ಸೇರಿಸುವುದರಿಂದ ಅದು ಮಜ್ಜಿಗೆಯಾಗುವುದಿಲ್ಲ. ನೆನಪಿಡಿ, ಮೊಸರನ್ನು ಕಡೆಯುವುದರಿಂದ ಮಾತ್ರ ಮೊಸರಿನ ಅವಗುಣಗಳು ಹೋಗಿ ಅದು ಮಜ್ಜಿಗೆಯಾಗುವುದು. ಮಥಿಸುವಿಕೆಯಿಂದ ಮಾತ್ರ ಮಜ್ಜಿಗೆ ಆಗುತ್ತದೆ. ಮಂಥನದ ಈ ಸಂಸ್ಕಾರದಿಂದ ಮಜ್ಜಿಗೆಯು ಮೊಸರಿಗಿಂತ ವಿಭಿನ್ನವಾಗಿ ನಿತ್ಯವೂ ಆಹಾರದೊಟ್ಟಿಗೆ ಸೇವಿಸಲು ಯೋಗ್ಯವಾದ ದ್ರವಾಹಾರವಾಗುತ್ತದೆ. ಆದರೂ ಮಜ್ಜಿಗೆಯ ಬಗ್ಗೆಯೂ ಸ್ವಲ್ಪ ತಿಳಿದುಕೊಂಡು ಉಪಯೋಗಿಸುವುದು ಕ್ಷೇಮ. ಹಾಗಾಗಿ, ಬನ್ನಿ ಈ ಲೇಖನದಲ್ಲಿ ಮಜ್ಜಿಗೆಯನ್ನು ಸೇವಿಸಿ ಆರೋಗ್ಯಕರವಾಗಿ ಇರುವುದು ಹೇಗೆ ಎಂಬುದನ್ನು ತಿಳಿದುಕೊಳ್ಳೋಣ.

ಮಜ್ಜಿಗೆಯನ್ನು ಭೂಲೋಕದ ಅಮೃತ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ, ಇದಕ್ಕೆ ಇರುವ ಅನೇಕ ಔಷಧೀಯ ಗುಣಗಳು. ಸಾಮಾನ್ಯವಾಗಿ, ಸಾಂಪ್ರದಾಯಿಕ ಊಟವು ತುಪ್ಪದಿಂದ ಆರಂಭವಾಗಿ ಮಜ್ಜಿಗೆಯಲ್ಲಿ ಕೊನೆಗೊಳ್ಳುತ್ತದೆ. ಅಂತೆಯೇ ನಿತ್ಯದ ಊಟದಲ್ಲೂ ಮಜ್ಜಿಗೆ ಅನ್ನ ಊಟ ಮಾಡಿದರೆ ಊಟ ಮುಗಿಯಿತು ಎಂದೇ ಅರ್ಥ. ಆಯುರ್ವೇದದಲ್ಲಿ ಮಜ್ಜಿಗೆಗೆ ತಕ್ರ, ಮಥಿತ, ಗೋಲ ಎಂಬ ಹೆಸರುಗಳಿವೆ. ನಾನು ಆಗಲೇ ಹೇಳಿದ ಹಾಗೆ ಮೊಸರಿಗೆ ನೀರು ಸೇರಿಸಿಬಿಟ್ಟರೆ ಅದು ಮಜ್ಜಿಗೆಯಾಗುತ್ತದೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ನೀರಾಗುವಿಕೆ ಅಥವಾ ಜಿಡ್ಡಿಲ್ಲದಿರುವಿಕೆ ಮಾತ್ರ ಮಜ್ಜಿಗೆಯ ಗುಣಗಳಲ್ಲ. ವಿಶಿಷ್ಟ ರೀತಿಯಲ್ಲಿ ತಯಾರಿಸಿದ ಮಜ್ಜಿಗೆಯಲ್ಲಿ ಮಾತ್ರ ಆಯುರ್ವೇದ ಗ್ರಂಥಗಳಲ್ಲಿ ಹೇಳಿರುವ ಮಜ್ಜಿಗೆಯ ಎಲ್ಲಾ ಗುಣಗಳನ್ನು ಕಾಣಬಹುದು. ಆಗ ಮಾತ್ರ ಇದು ಭೂಲೋಕದ ಅಮೃತವಾದೀತು. ಸರಿಯಾದ ಕ್ರಮದಲ್ಲಿ ತಯಾರಿಸಿ ಬಳಸಿದ ಮಜ್ಜಿಗೆಯು ರೋಗವನ್ನು ತಡೆಗಟ್ಟುವುದು ಮಾತ್ರವಲ್ಲದೆ ರೋಗದ ನಿರ್ಮೂಲನೆಯನ್ನೂ ಮಾಡುತ್ತದೆ. ಆಯುರ್ವೇದವು ಹೇಳಿದಂತೆ 'ನ ತಕ್ರದಗ್ಧಾಃ ಪ್ರಭವಂತಿ ರೋಗಾಃ' ಎಂದರೆ ಮಜ್ಜಿಗೆಯ ಸರಿಯಾದ ಉಪಯೋಗದಿಂದ ವಾಸಿಯಾದ ರೋಗವು ತಿರುಗಿ ಹುಟ್ಟದು.

ಮಜ್ಜಿಗೆಯ ಸೇವನೆಗೆ ಸೂಕ್ತ ಕಾಲವೆಂದರೆ ಚಳಿಗಾಲ ಮತ್ತು ಮಳೆಗಾಲ. ಇಂಥ ಸಮಯದಲ್ಲಿ ಮಜ್ಜಿಗೆಯ ಒಗ್ಗರಣೆಯ ಅಡುಗೆಗಳು ಹಿತಕರ. ಸ್ವಭಾವತಃ ಹಸಿವೆಯೇ ಕಡಿಮೆ ಇರುವವರಿಗೆ, ಸ್ಥೂಲಕಾಯದವರಿಗೆ, ಕಡಿಮೆ ಪ್ರಮಾಣದಲ್ಲಿ ಮುಟ್ಟು ಹೋಗುವವರಿಗೆ ಮಜ್ಜಿಗೆ ಒಳ್ಳೆಯದು. ರಕ್ತನಾಳಗಳಲ್ಲಿ ತಡೆ ಉಂಟಾಗುವಾಗ, ಕರುಳಿನಲ್ಲಿ ಚಲನೆಯು ನಿಧಾನವಾಗಿ ಆಗಿ ಮಲಬದ್ಧತೆ ಇದ್ದಾಗ ಮಜ್ಜಿಗೆಯ ಸೇವನೆ ಉಪಕಾರಿ. ಹೊಟ್ಟೆ ಉಬ್ಬರವಿದ್ದಾಗ ಒಗ್ಗರಣೆ ಮಾಡಿದ ಮಜ್ಜಿಗೆಯ ಅಡುಗೆಗಳು ಸೂಕ್ತ.

ಮಜ್ಜಿಗೆಯ ಗುಣ-ಕರ್ಮಗಳ ಬಗ್ಗೆ ಹೇಳಬೇಕಾದರೆ, ಮಜ್ಜಿಗೆಯು ರುಚಿಯಲ್ಲಿ ಸಿಹಿ, ಹುಳಿ ಮತ್ತು ಒಗರು ರಸಗಳನ್ನು ಹೊಂದಿದೆ. ಇದು ವೀರ್ಯದಲ್ಲಿ ಉಷ್ಣ ಅಂದರೆ- ಪಚನವಾದ ಮೇಲೆ ದೇಹದಲ್ಲಿ ಉಷ್ಣತೆಯನ್ನು ಉತ್ಪಾದಿಸುತ್ತದೆ- ಕೇಳಿ ಆಶ್ಚರ್ಯವಾಯಿತೇ? ಹೌದು ಸ್ನೇಹಿತರೆ, ನಮಗೆಲ್ಲ ಇರುವ ಸಾಮಾನ್ಯ ಭಾವನೆ ಎಂದರೆ ಮಜ್ಜಿಗೆ ತಂಪು ಎಂದು. ಆದರೆ, ಇದು ಪಚನಗೊಂಡ ಮೇಲೆ ದೇಹದಲ್ಲಿ ಉಷ್ಣಾಂಶವನ್ನು ಉತ್ಪತ್ತಿ ಮಾಡುವುದರಿಂದ ಇದನ್ನು ಬಿಸಿಲುಗಾಲದಲ್ಲಿ ಎಚ್ಚರಿಕೆಯಿಂದ ಉಪಯೋಗಿಸಬೇಕು.

ಅಂತೆಯೇ ಮಜ್ಜಿಗೆ ಅಗ್ನಿದೀಪಕ. ಅಂದರೆ ಹಸಿವೆಯನ್ನು ಹೆಚ್ಚು ಮಾಡುವ ಗುಣವುಳ್ಳದ್ದು. ಒಗರು, ಉಷ್ಣ ಮತ್ತು ಒಣಗಿಸುವ ಗುಣಗಳಿರುವ ಕಾರಣ ಇದು ಕಫವನ್ನು ಹೋಗಲಾಡಿಸುತ್ತದೆ. ಪಚನವಾದ ಮೇಲೆ ಸಿಹಿ ಸ್ವಭಾವವಾದ ಕಾರಣ ಇದು ಪಿತ್ತವನ್ನು ಶಮನಗೊಳಿಸುತ್ತದೆ.

ಮಜ್ಜಿಗೆಯು, ವಿಶೇಷವಾಗಿ ಅಜೀರ್ಣ, ಅತಿಸಾರ, ಪಾಂಡು, ಮೊಳಕೆ ರೋಗ, ಉದರ, ಗುಲ್ಮಾ, ವಿಷಮ ಜ್ವರ, ವಾಂತಿ, ಹೊಟ್ಟೆ ನೋವು, ಮೇದಸ್ಸು ಮತ್ತು ಕಫ-ವಾತಜ ರೋಗಗಳನ್ನು ನಿವಾರಿಸುತ್ತದೆ. ಮಜ್ಜಿಗೆಯು ಮಲ-ಮೂತ್ರಗಳ ವಿಸರ್ಜನೆಗೆ ಸಹಕರಿಸುತ್ತದೆ. ಇದನ್ನು ಊಟದ ಕೊನೆಯಲ್ಲಿ ಸೇವಿಸಿದಾಗ ಮೊದಲು ತಿಂದ ಎಲ್ಲಾ ಪದಾರ್ಥಗಳನ್ನು ಜೀರ್ಣ ಮಾಡಿ, ದೇಹ ಧಾತುಗಳ ಮಾರ್ಗವನ್ನು ಶುದ್ಧಿ ಮಾಡಿ, ಆ ಮೂಲಕ ಸಮನಾದ ಧಾತು ವೃದ್ಧಿಗೆ ಕಾರಣವಾಗುತ್ತದೆ. ಈ ರೀತಿಯ ಮಜ್ಜಿಗೆಯ ಸೇವನೆಯಿಂದ ವ್ಯಕ್ತಿಯು ದಪ್ಪನೂ ಆಗಲಾರ ತೆಳ್ಳಗೂ ಆಗಲಾರ.

ನಿತ್ಯೋಪಯೋಗಕ್ಕೆ ಮಜ್ಜಿಗೆಯನ್ನು ತಯಾರಿಸುವಾಗ ಈ ಅಂಶಗಳನ್ನು ನೆನಪಿಡಿ- ಹುಳಿ ಇರದ ಸಿಹಿ ಮೊಸರಿನ ಒಂದು ಭಾಗಕ್ಕೆ ಅರ್ಧಾಂಶ ಕಾದಾರಿದ ನೀರನ್ನು ಸೇರಿಸಿ ತಯಾರಿಸಬೇಕು (ಮಜ್ಜಿಗೆಯನ್ನು ಕಡೆಯುವಾಗ ತಣ್ಣೀರನ್ನು ಬಳಸುವುದರಿಂದ ನೆಗಡಿ, ಕೆಮ್ಮು, ಗಂಟಲುನೋವು ಕಾಣಿಸಿಕೊಳ್ಳಬಹುದು). ತಯಾರಿಕೆ ಎಂದರೆ ವಿಶೇಷವಾಗಿ ಇದನ್ನು ಕಡೆಯಬೇಕು. ಬೆಣ್ಣೆ ಬರುವವರೆಗೂ ಇದನ್ನು ಕಡೆಯಬೇಕು. ಬೆಣ್ಣೆಯನ್ನು ಬೇರ್ಪಡಿಸಿ ಸೇವಿಸಿದ ಮಜ್ಜಿಗೆಯು ಬೆಣ್ಣೆ ತೆಗೆಯದ ಮಜ್ಜಿಗೆಗಿಂತ ಬೇಗ ಜೀರ್ಣಕಾರಿ. ಜಿಡ್ಡು ಬೇರ್ಪಟ್ಟ ಮಜ್ಜಿಗೆಯು ನಿತ್ಯವೂ ಅನ್ನದೊಟ್ಟಿಗೆ, ಮಜ್ಜಿಗೆಯ ಅಡುಗೆಗೆ, ಸಾಮಾನ್ಯವಾಗಿ ಎಲ್ಲಾ ಬಳಕೆಗೂ ಹೊಂದುತ್ತದೆ. ಮೊಸರಿನ ಪ್ರಮಾಣದ ಅರ್ಧದಷ್ಟು ನೀರು ಹಾಕಿ ಕಡೆದರೆ ದಪ್ಪವೂ ಅಲ್ಲದ ತೆಳ್ಳಗೂ ಅಲ್ಲದ ಮಜ್ಜಿಗೆ ಸಿದ್ಧ. ಇದು ದಿನಚರಿಯ ಸೇವನೆಗೆ ಯೋಗ್ಯವಾದ ದ್ರವಾಹಾರ.

ಇನ್ನು ನೀರನ್ನೇ ಹಾಕದೆ ಕಡೆದರೆ ಜಿಡ್ಡು ಬೇರ್ಪಡುವುದಿಲ್ಲ. ಇಂಥ ಗಟ್ಟಿಮಜ್ಜಿಗೆಯು ಲಸ್ಸಿ ಎಂದು ಕರೆಯಲ್ಪಡುತ್ತದೆ. ಇದನ್ನು ಬಗೆ ಬಗೆಯ ರೀತಿಯಲ್ಲಿ ಸೇವಿಸಬಹುದು. ಆದರೆ, ಚೆನ್ನಾಗಿ ಜೀರ್ಣಕ್ರಿಯೆ ಇರುವ, ದೈಹಿಕ ಶ್ರಮ ವಹಿಸುವ, ಅತಿ ಶೀತ ಹವಾಮಾನದಲ್ಲಿ ವಾಸಿಸುವವರ ಸೇವನೆಗೆ ಇದು ಯೋಗ್ಯ. ಇದು ಶೀತ ಕಾಲದಲ್ಲಿ ಪೋಷಕ.

ಮೊಸರಿಗಿಂತ ಕಾಯಿಸಿ ಆರಿಸಿದ ನೀರನ್ನು ಹೆಚ್ಚಾಗಿ ಹಾಕಿ ಕಡೆಯಬಹುದು. ಮುಕ್ಕಾಲು ಭಾಗ ನೀರು, ಕಾಲು ಭಾಗ ಮೊಸರು. ಈ ಮಜ್ಜಿಗೆಯಲ್ಲಿ ನೀರಿನ ಪ್ರಮಾಣವೇ ಹೆಚ್ಚು. ಇದನ್ನು ಜೀರ್ಣಕಾರಿಯದ ಶುಂಠಿ, ಕೊತ್ತಂಬರಿ ಸೊಪ್ಪು, ಜೀರಿಗೆ, ಹಿಂಗು ಮೊದಲಾದ ಮಸಾಲೆಗಳಿಂದ ಒಗ್ಗರಿಸಬಹುದು. ಇದು ಅನ್ನದೊಟ್ಟಿಗೆ ಸೇವಿಸಲು ಯೋಗ್ಯವಾದ, ಜೀರ್ಣಕ್ಕೆ ಹಗುರವಾದ ಮಜ್ಜಿಗೆ. ಇದು ಬೇಸಿಗೆ ಕಾಲದಲ್ಲಿ ಹೆಚ್ಚು ಉತ್ತಮ

ನೆನಪಿಡಿ, ಹುಳಿಮಜ್ಜಿಗೆಯ ನಿತ್ಯ ಸೇವನೆಯಿಂದ ಪ್ರಮೇಹದಂಥ ಸಮಸ್ಯೆ, ಚರ್ಮ ಕಾಯಿಲೆ, ರಕ್ತಸ್ರಾವದ ತೊಂದರೆಗಳು ಆಗುವುದರಿಂದ ಸಿಹಿ ಮಜ್ಜಿಗೆಯನ್ನೇ ನಿತ್ಯ ಸೇವಿಸುವುದು ಒಳ್ಳೆಯದು. ಫ್ರಿಜ್ಜಿನಲ್ಲಿ ಶೇಖರಿಸಿದ್ದ ಮಜ್ಜಿಗೆಯ ಸ್ವಭಾವವೂ ಹುಳಿ ಮಜ್ಜಿಗೆಯದ್ದೇ ಆದ್ದರಿಂದ ಇದು ಸಹ ರಕ್ತ ಪಿತ್ತ ದುಷ್ಟಿಗೆ ಕಾರಣವಾಗಬಹುದು. ಬೇಸಿಗೆಯಲ್ಲಿ ಮಜ್ಜಿಗೆಯನ್ನು ಕುಡಿಯುವುದು ಒಳ್ಳೆಯದು ಎಂಬ ಭಾವನೆಯಲ್ಲಿ ಹಲವರು ಇರುತ್ತಾರೆ. ಆದರೆ, ಸ್ನೇಹಿತರೆ ಮಜ್ಜಿಗೆಯನ್ನು ಕುಡಿಯುವುದರಿಂದ ಗಂಟಲಿನಲ್ಲಿ, ದೇಹದ ಮೇಲ್ಭಾಗದಲ್ಲಿ ಸ್ರಾವ ಹೆಚ್ಚುತ್ತದೆ. ಆದ್ದರಿಂದ ನೆಗಡಿ, ಕೆಮ್ಮು, ತಲೆ ಭಾರವಿದ್ದಾಗ, ಕಫವು ಹರಿಯುತ್ತಿರುವವರಿಗೆ ಮಜ್ಜಿಗೆಯನ್ನು ಕುಡಿಯುವುದು ಅಥವಾ ರಾತ್ರಿಯ ಆಹಾರದ ಕೊನೆಯಲ್ಲಿ ಸೇವಿಸುವುದು ಮತ್ತಷ್ಟು ತೊಂದರೆಗೆ ಕಾರಣವಾಗುತ್ತದೆ. ಅಂತೆಯೇ ಉಷ್ಣಕಾಲದಲ್ಲಿ ಮಜ್ಜಿಗೆ ತಂಪು ಎಂದು ಭಾವಿಸಿ ಅತಿಯಾಗಿ ಕುಡಿದರೆ ಇದು ದೇಹದಲ್ಲಿ ಮತ್ತಷ್ಟು ಉಷ್ಣತೆಯನ್ನು ಹೆಚ್ಚಿಸಿ ತೊಂದರೆ ಮಾಡುತ್ತದೆ. ಅನ್ನದೊಟ್ಟಿಗೆ ಬೆರೆಸಿ ಕಲಸಿಕೊಂಡು ತಿನ್ನುವುದರಿಂದ ಮಜ್ಜಿಗೆಯ ಸುಗುಣಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದು.

ಇನ್ನು, ಮಜ್ಜಿಗೆಯ ಸೇವನೆಗೆ ಕೆಲವು ನಿಷೇಧಗಳಿವೆ. ಉಷ್ಣವಲಯದಲ್ಲಿ, ಬೇಸಿಗೆ ಕಾಲದಲ್ಲಿ, ಮಳೆಗಾಲದ ನಂತರದ ಬಿಸಿಲು ಕಾಲದಲ್ಲಿ ಮಜ್ಜಿಗೆಯ ಅತಿಯಾದ ಸೇವನೆ ರೋಗಕರ. ಮೂರ್ಛೆ ತಪ್ಪುವ ರೋಗ, ಕಣ್ಣು ಕತ್ತಲೆ ಬಂದು ತಲೆ ಸುತ್ತುವ ವ್ಯಕ್ತಿಗಳಿಗೂ ಮಜ್ಜಿಗೆ ಹೊಂದುವುದಿಲ್ಲ. ಯಾವುದೇ ರೀತಿಯ ಸುಟ್ಟ ಗಾಯ ಇರುವವರಿಗೆ ಮಜ್ಜಿಗೆ ನಿಷೇಧ. ಚರ್ಮದ ಕಾಯಿಲೆಗಳು, ಹುಳಿತೇಗು, ಎದೆ ಉರಿ ಮೊದಲಾದ ಪಿತ್ತದ ಸಮಸ್ಯೆ ಇರುವವರಿಗೆ, ಅತಿಯಾಗಿ ರಕ್ತವು ಒಸರುವ ಕಾಯಿಲೆಗಳಿರುವವರಿಗೆ ಮಜ್ಜಿಗೆ ತೊಂದರೆ ತರಬಹುದು.

ಮಜ್ಜಿಗೆಯ ಸೇವನೆಗೆ ಸೂಕ್ತ ಕಾಲವೆಂದರೆ ಚಳಿಗಾಲ ಮತ್ತು ಮಳೆಗಾಲ. ಇಂಥ ಸಮಯದಲ್ಲಿ ಮಜ್ಜಿಗೆಯ ಒಗ್ಗರಣೆಯ ಅಡುಗೆಗಳು ಹಿತಕರ. ಸ್ವಭಾವತಃ ಹಸಿವೆಯೇ ಕಡಿಮೆ ಇರುವವರಿಗೆ, ಸ್ಥೂಲಕಾಯದವರಿಗೆ, ಕಡಿಮೆ ಪ್ರಮಾಣದಲ್ಲಿ ಮುಟ್ಟು ಹೋಗುವವರಿಗೆ ಮಜ್ಜಿಗೆ ಒಳ್ಳೆಯದು. ರಕ್ತನಾಳಗಳಲ್ಲಿ ತಡೆ ಉಂಟಾಗುವಾಗ, ಕರುಳಿನಲ್ಲಿ ಚಲನೆಯು ನಿಧಾನವಾಗಿ ಆಗಿ ಮಲಬದ್ಧತೆ ಇದ್ದಾಗ ಮಜ್ಜಿಗೆಯ ಸೇವನೆ ಉಪಕಾರಿ. ಹೊಟ್ಟೆ ಉಬ್ಬರವಿದ್ದಾಗ ಒಗ್ಗರಣೆ ಮಾಡಿದ ಮಜ್ಜಿಗೆಯ ಅಡುಗೆಗಳು ಸೂಕ್ತ.

ಒಟ್ಟಾರೆ ಹೇಳಬೇಕೆಂದರೆ, ನಿತ್ಯ ಸೇವನೆಗೆ ಮತ್ತು ಆರೋಗ್ಯ ರಕ್ಷಣೆಗೆ ಮೊಸರನ್ನು ತ್ಯಜಿಸಿ ಮಜ್ಜಿಗೆಯನ್ನು ಸೇವಿಸಿ. ಮೊಸರು ಜೀರ್ಣಕ್ಕೆ ಜಡವಾದರೆ ಮಜ್ಜಿಗೆಯು ಜೀರ್ಣಕ್ಕೆ ಸುಲಭ. ಮೊಸರು ದೇಹದಲ್ಲಿ ಅವರೋಧ ಉಂಟುಮಾಡಿದರೆ, ಬೆಣ್ಣೆಯನ್ನು ಬೇರ್ಪಡಿಸಿದ ಮಜ್ಜಿಗೆಯು ರಕ್ತನಾಳಗಳನ್ನು ಶುದ್ಧಿ ಮಾಡುತ್ತದೆ. ಬಾವು ಉಂಟುಮಾಡುವ ಮೊಸರಿನ ಮಥನದಿಂದ ತಯಾರಾದ ಮಜ್ಜಿಗೆಯು ಬಾವು ನಿವಾರಕ. ಜ್ವರಕ್ಕೆ ಕಾರಣವಾದ ಮೊಸರು ಕಡೆದ ನಂತರ ವಿಷಮ ಜ್ವರದಲ್ಲಿ ಪಥ್ಯ. ಮೊಸರು ಮೇದಸ್ಸನ್ನು ಹೆಚ್ಚಿಸಿ ಬೊಜ್ಜಿಗೆ ಕಾರಣವಾದರೆ ಮಜ್ಜಿಗೆಯು ಮೇದಸ್ಸನ್ನು ಕರಗಿಸಿ ದೇಹವನ್ನು ಕೃಶವಾಗಿಸುತ್ತದೆ. ಆದ್ದರಿಂದಲೇ ಅಲ್ವಾ ಹೇಳೋದು 'ತಕ್ರಂ ಶಕ್ರಸ್ಯ ದುರ್ಲಭಮ್!'



ನಾರದ ಸಂಚಾರ

ಕಲಹಪ್ರಿಯ
naadigru@gmail.com

ನಿತೀಶರ ಉತ್ತರಾಧಿಕಾರಿ?

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಈ ದೇಶದ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರು. ಕಾಲಾನುಕಾಲಕ್ಕೆ ಮತ್ತು ಇಚ್ಛಾನುಸಾರವಾಗಿ ರಾಜಕೀಯ ಮೈತ್ರಿಪಾಳಯಗಳನ್ನು ಬದಲಿಸುವ ಕಾರಣದಿಂದ 'ಪಲ್ಟು ರಾಮ್' ಎಂಬ ಕುಖ್ಯಾತಿಯೂ ನಿತೀಶರ ಹೆಗಲೇರಿ ಬಿಟ್ಟಿದೆ. ಅಷ್ಟಕ್ಕೂ ಅದು ಅವರೇ ಮಾಡಿಕೊಂಡ ಯಡವಟ್ಟಾಗಿರುವುದರಿಂದ, ಇದರಲ್ಲಿ ಮಿಕ್ಕವರ ಕೈವಾಡವೇನೂ ಇಲ್ಲವೆನ್ನಿ!

ಇಂಥ ವಿಲಕ್ಷಣ ರಾಜಕಾರಣಿಯಾದ ನಿತೀಶರು ತಮ್ಮ ಏಕೈಕ ಪುತ್ರ ನಿಶಾಂತ್ ಕುಮಾರ್ ಅವರನ್ನು ರಾಜಕೀಯ ಕ್ಷೇತ್ರದಿಂದ ಮತ್ತು ಪ್ರಚಾರದ ಪ್ರಭಾವಲಯದಿಂದ ದೂರವಿರಿಸಿದ್ದುಂಟು. ಎಂಜಿನಿಯರಿಂಗ್ ಪದವಿ ಪಡೆದಿರುವ ಹೆಗ್ಗಳಿಕೆ ನಿಶಾಂತ್ ಅವರದ್ದು. ವಾಸ್ತವವಾಗಿ, ನಿಶಾಂತ್ ಅವರು ಜೀವನೋಪಾಯಕ್ಕಾಗಿ ಏನು ಮಾಡುತ್ತಾರೆ ಎಂಬುದು ಆ ರಾಜ್ಯದ ಬಹುತೇಕರಿಗೆ ತಿಳಿದಂತಿಲ್ಲ. ತಮಗೆ ಅಧ್ಯಾತ್ಮದತ್ತ ಒಲವಿದೆ ಎಂಬುದಾಗಿ ನಿಶಾಂತ್ ಅವರೇ ಒಮ್ಮೆ ಹೇಳಿಕೊಂಡಿದ್ದುಂಟು. ಇಂಥವರು ಕೆಲ ದಿನಗಳ ಹಿಂದೆ ಅಪರೂಪಕ್ಕೆ ಎಂಬಂತೆ ತಮ್ಮ ತಂದೆಯವರ ಜತೆ ಸಾರ್ವಜನಿಕವಾಗಿ ಕಾಣಿಸಿಕೊಂಡಾಗ ರಾಜಕೀಯದ ಪಡಸಾಲೆಗಳಲ್ಲಿ ಒಂದಷ್ಟು ಸಂಚಲನ ಮೂಡಿದ್ದುಂಟು. ಏಕೆಂದರೆ, ಆ ಸಂದರ್ಭದಲ್ಲಿ ಹಾಜರಿದ್ದ ಮಾಧ್ಯಮ ಮಿತ್ರರೊಂದಿಗೆ ನಿಶಾಂತರು ಹೀಗೆಯೇ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಾ, ತಂದೆ ನಿತೀಶರನ್ನೂ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಮ್ಮ ತಾತನನ್ನೂ ಬಾಯ್ತುಂಬಾ ಹೊಗಳಲು ಶುರುಮಾಡಿಬಿಟ್ಟರಂತೆ. ಈ ಬೆಳವಣಿಗೆಯನ್ನು ವಾರೆಗಣ್ಣಲ್ಲೇ ಗಮನಿಸಿದ ಬಿಜೆಪಿಯ ಒಂದಿಷ್ಟು ಕಾರ್ಯಕರ್ತರು, ''ನಿತೀಶರು ಈಚೀಚೆಗೆ ಸಾರ್ವಜನಿಕವಾಗಿ ಏನೇನೋ ಬಡ ಬಡಿಸುವುದು ಜಾಸ್ತಿಯಾಗುತ್ತಿರುವುದು ಗೊತ್ತಿರುವ ಸಂಗತಿಯೇ. ಸಾಲದೆಂಬಂತೆ, ಅವರು ಪ್ರತಿನಿಧಿಸುವ ಸಂಯುಕ್ತ ಜನತಾದಳ ಪಕ್ಷದ ವರ್ಚಸ್ಸೂ ಕ್ರಮೇಣ ಕುಗ್ಗುತ್ತಿದೆ. ಹೀಗಾಗಿ ಮಗ ನಿಶಾಂತ್‌ರನ್ನು ತಮ್ಮ ಉತ್ತರಾಧಿಕಾರಿಯಾಗಿ ಬಿಂಬಿಸಲು 'ಪಲ್ಟು ರಾಮ್' ನಿತೀಶರು ಏನೋ ಪ್ಲಾನ್ ಮಾಡಿರಬೇಕು. ಅದರ ಭಾಗವೇ ಈ ಎಲ್ಲ ಕಸರತ್ತುಗಳು'' ಎಂದು ತಮ್ಮ ತಮ್ಮಲ್ಲೇ ಗುಸುಗುಸು ಮಾತನಾಡಿಕೊಳ್ಳುತ್ತಿದ್ದಾರಂತೆ!!

ಬಿಜೆಪಿ ಕಾರ್ಯಕರ್ತರ ಊಹೆ ನಿಜವಿದ್ದರೂ ಇರಬಹುದು ಅಂತ ಕಲಹಪ್ರಿಯ ನಾರದರ ಜಿಜ್ಞಾಸೆ. ಯಾಕಂದ್ರೆ, ಬಿಹಾರ ರಾಜ್ಯದ ಸಚಿವರ ಲ್ಲೊಬ್ಬರಾದ ಶ್ರವಣ್ ಕುಮಾರ್ ಅವರು ಇತ್ತೀಚೆಗೆ ಮಾತನಾಡುತ್ತಾ, ''ಪಕ್ಷದ ಅಭಿವೃದ್ಧಿ ಕಾರ್ಯಸೂಚಿಯನ್ನು ಮುನ್ನಡೆಸಲು ಯುವ ನಾಯಕರೊಬ್ಬರ ಅಗತ್ಯವಿದೆ'' ಎಂಬ ಸೋಬಾನೆ ರಾಗ ಹಾಡಿದ್ದು ನಾರದರಿಗೆ ಕೇಳಿಸಿದೆ. ಹೀಗಾಗಿ, 'ಅಧ್ಯಾತ್ಮ-ಮುಖಿ'ಯಾಗಿದ್ದ ನಿಶಾಂತ್ ಕುಮಾರ್ ಅವರು ಸಾರ್ವಜನಿಕ ಸಭೆಗಳಲ್ಲಿ ಹೀಗೆ 'ಜನಮುಖಿ'ಯಾಗಿ ಮನಬಿಚ್ಚಿ ಮಾತನಾಡುತ್ತಿರುವುದು, ಅಪ್ಪನನ್ನು ಯದ್ವಾತದ್ವಾ ಹೊಗಳುತ್ತಿರುವುದು ಅವರು ರಾಜಕೀಯ ಪ್ರವೇಶಿಸುವುದರ 'ಮುಂಗಾರು ಮಳೆ'ಯ ಸೂಚನೆಯೇ ಎಂಬುದು ನಾರದರಿಗೆ ಖಾತ್ರಿಯಾಗಿದೆ. ಮುಂದಿನದನ್ನು ಬೆಳ್ಳಿತೆರೆಯ ಮೇಲೆ ನೋಡಿ ಆನಂದಿಸುವಿರಂತೆ, ಅಲ್ಲಿಯವರೆಗೂ ಸ್ವಲ್ಪ ಕಾದುಕೊಂಡಿರಿ!

ತಾವರೆಯೋ ಅರವಿಂದನೋ?

ದೆಹಲಿ ವಿಧಾನಸಭಾ ಚುನಾವಣೆ ಸಂಪನ್ನಗೊಂಡಿದೆ. ಮತದಾರರು ಇವಿಎಂ ಗುಂಡಿಯನ್ನು ಅದುಮಿ ಚಲಾಯಿಸಿದ ಮತಗಳು ಮತಯಂತ್ರದಲ್ಲೇ ಬೆಚ್ಚಗೆ ಕೂತಿದ್ದು ಫಲಿತಾಂಶವಿನ್ನೂ ಹೊರಬೀಳಬೇಕಿದೆ. ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಮುನ್ನುಡಿದಿರುವಂತೆ ದಿಲ್ಲಿ ಗದ್ದುಗೆಯ ಮೇಲೆ 'ತಾವರೆ' ಅರಳಲಿದೆ, ಅರ್ಥಾತ್ ಬಿಜೆಪಿಯು ಗೆಲುವಿನ ನಗೆ ಬೀರಲಿದೆ. ಆದರೆ ನಮ್ ಬ್ರಹ್ಮಾಂಡ ಗುರುಗಳು ಈ ಬಗ್ಗೆ ಮಾತನಾಡುತ್ತಾ, ''ಸಮೀಕ್ಷೆ ಮಾಡಿದೋರ ಮುಂಡಾಮೋಚ್ತು. ಆದರೆ 'ತಾವರೆ' ಅರಳಲಿದೆ ಅನ್ನೋದನ್ನ 'ಅರವಿಂದ' ಅರಳಲಿದೆ ಅಂತ ಯಾಕೆ ಅನ್ಕೋಬಾರ್ದು? ಹಾಗಾದಲ್ಲಿ 'ಅರವಿಂದ ಕೇಜ್ರಿವಾಲ್' ಅರಳಲಿದ್ದಾರೆ ಅಂತಾಯ್ತಲ್ಲ? ಇಷ್ಟಾಗಿಯೂ ಬಿಜೆಪಿಯೇ ಅರಳಿತು ಅಂತಿಟ್ಕೊಳ್ಳಿ, ಆಗ 'ಮುದುಡಿದ ತಾವರೆ ಅರಳಿತು' ಅಂದ್ರಾಯ್ತು, ಅಷ್ಟೇ…'' ಎಂದು ವಿಲಕ್ಷಣವಾಗಿ ವಿಶ್ಲೇಷಿಸಿ ವಜ್ರಮುನಿ ರೀತಿಯಲ್ಲಿ ಗಹಗಹಿಸಿ ನಕ್ಕರಂತೆ!

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್



ನೀ 'ನ್ಯಾಕೋ'? ನಿನ್ನ ಹಂಗ್ಯಾಕೋ? ನಾಮದ ಬಲವಿದ್ದರೆ ಸಾಕೋ!

ವಿಚಾರ ವೇದಿಕೆ

ತುರುವೇಕೆರೆ ಪ್ರಸಾದ್
vveditoped@gmail.com

'ಹರ ಕೊಲ್ಲಲ್ ಪರ ಕಾಯ್ವನೇ?' ಎಂಬಂತೆ, ಬೇಲಿಯೇ ಎದ್ದು ಹೊಲ ಮೇದಂತೆ, ಅಳತೆಕಲ್ಲೇ ಮೋಸ ಮಾಡಿದಂತೆ, ಚಿನ್ನವನ್ನು ಒರೆಗೆ ಹಚ್ಚುವ ಉಜ್ಜುಕಲ್ಲಿಗೇ ಜಿಡ್ಡು ಮೆತ್ತಿಕೊಂಡಂತೆ, ಗುರುವೇ ಶಿಷ್ಯನಿಗೆ ಅಡ್ಡದಾರಿ ತೋರಿದಂತೆ, ಶಿಕ್ಷಣದ ಮೌಲ್ಯ, ಶ್ರೇಷ್ಠತೆ, ಗುಣಮಟ್ಟವನ್ನು ಎತ್ತಿಹಿಡಿಯಲೆಂದು ರೂಪುಗೊಂಡಿರುವ 'ನ್ಯಾಕ್' (ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ) ಎಂಬ ಸಂಸ್ಥೆ ಮೈ ತುಂಬಾ ಮಸಿ ಬಳಿದುಕೊಂಡು ಮುಖ ತೋರಲಾಗದೆ ನಗೆಪಾಟಲಾಗಿ ಬೋರಲು ಬಿದ್ದಿದೆ. ಇದು ನಿಜಕ್ಕೂ ವ್ಯವಸ್ಥೆಯ ಒಂದು ಘೋರ ವ್ಯಂಗ್ಯವೋ, ದುರಂತವೋ? ಎಂಬ ಗೊಂದಲ ಕಾಡುತ್ತಿದೆ.

'ವಿದ್ಯಾ ದದಾತಿ ವಿನಯಂ ವಿನಯಾತ್ ಯಾತಿ ಪಾತ್ರತಾಮ್! ಪಾತ್ರತ್ವಾತ್ ಧನಮಾಪ್ನೋತಿ ಧನಾತ್ ಧರ್ಮ ತತಃ ಸುಖಂ!' ಅನ್ನೋ ಒಂದು ಸಂಸ್ಕೃತ ಸುಭಾಷಿತವಿದೆ. ವಿದ್ಯೆ ವಿನಯವನ್ನು ಕೊಡುತ್ತದೆ. ವಿನಯವು ಯೋಗ್ಯತೆ, ಅರ್ಹತೆಯನ್ನು ಕೊಡುತ್ತದೆ. ಆನಂತರ ಧನಾರ್ಜನೆ. ಹಾಗೆ ಸ್ವಂತ ಪರಿಶ್ರಮದಿಂದ ಗಳಿಸಿದ ಹಣದಿಂದ ಧರ್ಮಕಾರ್ಯಗಳು ನಡೆಯಬೇಕು, ಇದೇ ಪರಮಸುಖ ಕಂಡುಕೊಳ್ಳುವ ಒಂದು ದಾರಿ. ಹಾಗೇ ವಿವೇಕಾನಂದರು 'ಮನುಷ್ಯನಲ್ಲಿನ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ' ಎಂದು ಹೇಳಿದ್ದರು. ಆದರೆ ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ವಿದ್ಯೆಯು ವಿನಯ, ಅರ್ಹತೆಯನ್ನು ಕೊಡುತ್ತಿಲ್ಲ. ಅದು ಬದುಕಿನ ಮೌಲ್ಯಗಳನ್ನು, ಶಿಕ್ಷಣದ ಶ್ರೇಷ್ಠತೆಯನ್ನು ಕಾಪಾಡುತ್ತಿಲ್ಲ. ಅದು ಕೇವಲ ಉದ್ಯೋಗದ, ಉಪಭೋಗದ ಒಂದು ಯಾಂತ್ರಿಕ ಕೌಶಲವನ್ನು ನೀಡುವ ಸಾಧನವಾಗಷ್ಟೇ ಉಳಿದಿದೆ. ಯಾರು ಈ ವ್ಯವಸ್ಥೆಯ ದೌರ್ಬಲ್ಯಗಳನ್ನು, ಕಳ್ಳದಾರಿಗಳನ್ನು ಶೋಧಿಸಬಲ್ಲರೋ ಅವರಿಗೆ ಯಶಸ್ಸಿನ ಎಲ್ಲಾ ಮಾರ್ಗಗಳೂ ತೆರೆದುಕೊಳ್ಳುತ್ತವೆ. ನದಿಮೂಲವೇ ಭ್ರಷ್ಟ, ಕೊಳಕು ಎಂದ ಮೇಲೆ ಅದು ವಿವಿಧ ಪಾತ್ರಗಳಲ್ಲಿ ಹರಿವ ನೀರು ಸ್ವಚ್ಛವಾಗಿರಲು ಹೇಗೆ ಸಾಧ್ಯ? ಇಲ್ಲೂ ಹಾಗೇ ಆಗುತ್ತಿದೆ. ಶಿಕ್ಷಣದ ಶ್ರೇಷ್ಠ ಮಾನದಂಡಗಳನ್ನು ಎತ್ತಿಹಿಡಿದು ನಿಯಂತ್ರಣ ಮಾಡಬೇಕಾದ, ಮಾರ್ಗದರ್ಶನ ನೀಡಬೇಕಾದ ಶ್ರೇಷ್ಠ ಸಂಸ್ಥೆಗಳೇ ಎಂಜಲು ಕಾಸಿಗೆ ಕೈ ಒಡ್ಡಿ ನಿಂತ ಮೇಲೆ ಅದರಡಿಯ ವ್ಯವಸ್ಥೆಗಳ ಬಗ್ಗೆ ಹೇಳುವುದೇನಿದೆ? ಅವು ಪಾರದರ್ಶಕವಾಗಿರಬೇಕು, ಸಮರ್ಥವಾಗಿರಬೇಕು, ದಕ್ಷವಾಗಿರಬೇಕು ಎಂದು ನಿರೀಕ್ಷಿಸುವುದಾದರೂ ಹೇಗೆ? ಅದಕ್ಕೇ ಪರೀಕ್ಷೆಗೆ ಮುಂಚೆಯೇ ಪ್ರಶ್ನೆಪತ್ರಿಕೆಗಳು ಲೀಕಾಗುತ್ತವೆ, ಅಂಕಪಟ್ಟಿಗಳು ಫೇಕಾಗುತ್ತವೆ. ಈ ವಿಷವರ್ತುಲದಲ್ಲಿ ಶಿಕ್ಷಣ ವ್ಯವಸ್ಥೆ ಲಾಕಾಗಿ ವಿಲವಿಲ ಒದ್ದಾಡುತ್ತಿದೆ. ಶಿಕ್ಷಣದ ಮೌಲ್ಯಗಳು, ಅವುಗಳ ಮೂಲಕ ದಕ್ಕುವ ಕೌಶಲಗಳು, ಜೀವನೋಪಾಯಗಳು, ಜ್ಞಾನ ಶಾಖೆಗಳ ಉಪಯೋಗಗಳು ಎಲ್ಲವೂ ದುಡ್ಡಿಗೆ ಹರಾಜಿಗಿಟ್ಟ ಯಃಕಶ್ಚಿತ್ ಟೂಲ್‌ಕಿಟ್ ಎನ್ನುವಂತಾಗಿದೆ.

ಈ ರೆಡ್‌ಟೇಪಿಸಂ, ಭ್ರಷ್ಟಾಚಾರ, ಲಂಚಗುಳಿತನ ಕೆಲವು ಸರಕಾರಿ ಇಲಾಖೆಗಳಿಗೆ ಮಾತ್ರವೇ ಸೀಮಿತವಾಗಿತ್ತು. ಕಂದಾಯ, ಲೋಕೋಪಯೋಗಿ, ಕೈಗಾರಿಕೆ, ಗಣಿ ಮೊದಲಾದ ಇಲಾಖೆ ಗಳಲ್ಲಷ್ಟೇ ಲಂಚ, ರುಷುವತ್ತುಗಳು ತಾಂಡವವಾಡುತ್ತಿದ್ದವು. ಈಚೀಚೆಗೆ ಇದು ಆರೋಗ್ಯ ಮತ್ತು ಶಿಕ್ಷಣಕ್ಕೂ ಅಂಟಿಕೊಂಡು, ಮನುಕುಲವನ್ನು ಕಾಡಿದ ಕರೋನಾಗೂ ಮೀರಿದ ಭಯಾನಕ ವೈರಸ್ ಆಗಿಬಿಟ್ಟಿದೆ! ಈಚೆಗೆ ಲೋಕಾಯುಕ್ತ ದಾಳಿಯಲ್ಲಿ ಎಂಜಿನಿಯರ್, ಸಬ್ ರಿಜಿಸ್ಟ್ರಾರ್, ಗ್ರಾಮಲೆಕ್ಕಿಗರ ಜತೆ ದೊಡ್ಡ ದೊಡ್ಡ ಕಾಲೇಜುಗಳ ಪ್ರಾಧ್ಯಾಪಕರೂ ಸೇರುತ್ತಿದ್ದಾರೆ. ಇವರೆಲ್ಲಾ ಆದಾಯ ಮೀರಿದ ಆಸ್ತಿ ಮಾಡಿದ್ದಾರೆ. ಎಷ್ಟೋ ವಿಶ್ವವಿದ್ಯಾಲಯಗಳ ಕುಲಪತಿಗಳ ಮೇಲೆ ಅಧಿಕಾರ ದುರುಪಯೋಗ ಮಾಡಿದ ಆರೋಪವಿದೆ. ಎಷ್ಟೋ ಜನ ವಿಶ್ವವಿದ್ಯಾಲಯದ ದುಡ್ಡನ್ನೇ ನುಂಗಿ ನೀರು ಕುಡಿದಿದ್ದಾರೆ. ಇವೆಲ್ಲಾ ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ಮೀನುಗಳು ಎನ್ನುವಷ್ಟರಲ್ಲೇ 'ನ್ಯಾಕ್' ಎಂಬ ತಿಮಿಂಗಲವು ವ್ಯವಸ್ಥೆಯ ಬಲೆ ಹರಿದುಕೊಂಡು 'ಗಾಡ್‌ಜಿಲ್ಲಾ' ತರಹ ಶಿಕ್ಷಣದ ಅಂತಃಸತ್ವವನ್ನೇ ನುಂಗಿ ನೊಣೆಯಲು ಹೊರಟಿದೆ.

ಇಷ್ಟಕ್ಕೂ ಊರು ಎಂದ ಮೇಲೆ ಹೊಲಸು ಇರುತ್ತದೆ ನಿಜ. ಒಂದು ವ್ಯವಸ್ಥೆ ಅಂದ ಮೇಲೆ ಒಬ್ಬಿಬ್ಬರು ಭ್ರಷ್ಟರು ಇರಬಹುದು. ಆದರೆ ನ್ಯಾಕ್ ಪರಿಶೀಲನಾ ಸಮಿತಿಯ ಅಧ್ಯಕ್ಷರಾದಿಯಾಗಿ ಏಳು ಜನರಿಗೆ ಭ್ರಷ್ಟಾಚಾರದ ಆರೋಪ ಸುತ್ತಿಕೊಂಡಿದೆ. ನಿರ್ದೇಶಕರು, ಸಲಹೆಗಾರರು, ಕೋಆರ್ಡಿನೇಟರ್ ಸೇರಿ 10 ಜನ ಈ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಇವರೆಲ್ಲಾ ವಿದ್ಯಾವಂತರು, ಅದಕ್ಕಿಂತ ಹೆಚ್ಚಾಗಿ ಬುದ್ಧಿವಂತರು, ವಿಚಾರವಂತರು. ಒಬ್ಬೊಬ್ಬರೂ ಮೂರು ಮೂರು ಡಿಗ್ರಿ, ಪಿಎಚ್‌ಡಿ ಡಾಕ್ಟರೇಟ್ ಮಾಡಿರುವವರೇ. 20 ವರ್ಷದ ಮೇಲೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅನುಭವವಿರುವವರು, ವಿಶೇಷ ಜ್ಞಾನಾರ್ಜನೆ ಮಾಡಿ ವಿಷಯ ತಜ್ಞರು ಎನಿಸಿಕೊಂಡಿರುವವರು. ಹೊಸ ಹೊಸ ಸಂಶೋಧನೆ ಮಾಡಿರುವವರು, ತಮ್ಮ ಕೈಕೆಳಗಿನ ಹಲವು ಮಂದಿಗೆ ಪಿಎಚ್‌ಡಿ ಕೊಡಿಸಿರುವ ಪುಣ್ಯಾತ್ಮರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರೌಢ ಪ್ರಬಂಧಗಳನ್ನು ಮಂಡಿಸಿದವರು. ಪ್ರಶಸ್ತಿ, ಪುರಸ್ಕಾರ, ಗೌರವಗಳಿಗೆ ಪಾತ್ರರಾದ ವರು. ಇವರಲ್ಲಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಪರಿಣತರಿದ್ದಾರೆ. ಕಾನೂನು ಪದವೀಧರರಾಗಿದ್ದು ಹತ್ತಾರು ದೇಶಗಳಲ್ಲಿ ಪಾಠ ಹೇಳಿ ಬಂದವರಿದ್ದಾರೆ. ಒಟ್ಟಾರೆ ಹೇಳುವುದಾದರೆ, ಇವರೆಲ್ಲಾ ಬದುಕಲ್ಲಿ ಶಾಶ್ವತ ನೆಲೆಕಂಡ, 'ವೈಟ್ ಕಾಲರ್' ಎನ್ನಬಹುದಾದ ಹುದ್ದೆಗಳಲ್ಲಿರುವವರೇ!

ಇವರಿಗೆಲ್ಲಾ ಪ್ರತಿತಿಂಗಳು ಲಕ್ಷಾಂತರ ರುಪಾಯಿ ಸಂಬಳ ಬರುತ್ತದೆ. 'ನಾಳೆ ಹೇಗಪ್ಪಾ?' ಎಂದು ಯೋಚಿಸುವಂತಿಲ್ಲ. ಮಕ್ಕಳು ಮರಿಮಕ್ಕಳಿಗೂ ಆಗುವಷ್ಟು ಆಸ್ತಿ ಇದೆ. ಜೀವನ ಭದ್ರತೆ ಇದೆ. ಬಂಗಲೆ, ಕಾರು, ಮೋಜು, ಮಸ್ತಿ ಎಂದು ಐಷಾರಾಮಿ ಜೀವನಶೈಲಿಗೂ ಯಾವ ಕೊರತೆಯೂ ಇರಲಾರದು. ಸಂತೃಪ್ತ ಜೀವನದ ಪರಮೋಚ್ಚ ಸ್ಥಿತಿ ತಲುಪಬೇಕಾದ ಇಂಥವರಿಗೂ ದುಡ್ಡಿನ ಮೋಹ ಹೋಗಿಲ್ಲ, ಲಂಚದಾಸೆ ಬಿಟ್ಟಿಲ್ಲ. ಹಣ, ಒಡವೆ ಎಂದು ತಮ್ಮ ವ್ಯಕ್ತಿತ್ವವನ್ನೇ ಹರಾಜಿಗಿಟ್ಟುಕೊಂಡು ತಮ್ಮ ಜೀವಿತದ ಸಾಧನೆಗೆಲ್ಲಾ ಮಸಿ ಬಳಿದುಕೊಂಡಿದ್ದಾರೆ. ಅಷ್ಟೇ ಅಲ್ಲ, ದೇಶದ ಕೀರ್ತಿಗೂ ಮಸಿ ಬಳಿದಿದ್ದಾರೆ. ಈ ಪ್ರಜ್ಞಾವಂತ ಜನರೇ ಈ ಸ್ಥಿತಿಗೆ ಇಳಿದ ಮೇಲೆ ಸಾಮಾನ್ಯರಿಗೆ ಹೇಳುವುದೇನಿದೆ? ಹಾಗಾದರೆ ಇವರ ಡಾಕ್ಟರೇಟ್, ಎಂಫಿಲ್‌ಗಳು ಇವರಿಗೆ ಕಲಿಸಿದ್ದೇನು? ಇವರು ಇಷ್ಟು ವರ್ಷ ತಮ್ಮ ವಿದ್ಯಾರ್ಥಿಗಳಿಗೆ ಕಲಿಸಿದ್ದೇನು? ಪ್ರಾಮಾಣಿಕತೆ, ದಕ್ಷತೆ, ನಿಸ್ಪೃಹ ಸೇವೆ ಇವನ್ನೆಲ್ಲಾ ಇವರ ಉನ್ನತ ಶಿಕ್ಷಣ ಇವರಿಗೆ ಕಲಿಸಲೇ ಇಲ್ಲವೇ? ಇಂಥ ಮೇಧಾವಿಗಳಿಗೆ, ಘನವಿದ್ವಾಂಸರಿಗೆ ಇವರ ಸಾಲುಸಾಲು ಡಿಗ್ರಿಗಳು ಇಂಥ ಜೀವನ ಮೌಲ್ಯಗಳನ್ನು, ಸಂಸ್ಕಾರಗಳನ್ನು ಕಲಿಸಿಲ್ಲ ಎಂದ ಮೇಲೆ ಅದೆಂಥ ಶಿಕ್ಷಣ?! ಕ್ಯಾರೆಕ್ಟರ್ರೇ ಇಲ್ಲದ ಇವರ ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳು ರದ್ದಿಗೆ ಹಾಕಲೂ ನಾಲಾಯಕ್ಕು! ಇಂಥ ಸಂಪನ್ಮೂಲ ವ್ಯಕ್ತಿಗಳು ತಮ್ಮ ವಿದ್ಯಾರ್ಥಿಗಳಿಗೆ, ತಾವು ಸೇವೆ ಮಾಡುವ ಸಂಸ್ಥೆಯ ತಮ್ಮ ಕೈಕೆಳಗಿನವರಿಗೆ, ತಮ್ಮಲ್ಲೇ ಇಲ್ಲದ ಯಾವ ಮೌಲ್ಯಗಳನ್ನು ಹೇಳಿಕೊಟ್ಟಾರು? ಇವರು ಹೇಳಿಕೊಡುತ್ತಾರೆಂದು ನಿರೀಕ್ಷಿಸುವುದಾದರೂ ಹೇಗೆ? ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವ ವಿಶ್ವವಿದ್ಯಾಲಯಗಳ ಲಕ್ಷಾಂತರ ವಿದ್ಯಾರ್ಥಿಗಳಿಗೆ ಯಾವ ವ್ಯಕ್ತಿ 'ರೋಲ್ ಮಾಡೆಲ್' ಆದಾನು? ಯಾವ ಮೌಲ್ಯ ಆದರ್ಶಮೌಲ್ಯ ಎನಿಸೀತು?

ಶಿಕ್ಷಣವೆಂದರೆ ದ್ವಂದ್ವಾತೀತ ಸಮಗ್ರತೆಯ ಜ್ಞಾನ ಸಂಪಾದನೆ. ಪೂರ್ಣದೃಷ್ಟಿಯ ಸಂತೃಪ್ತಿಯಿಂದ ಬರುವ ಆನಂದವೇ ಶಿಕ್ಷಣದ ಗುರಿ. ನಿಸರ್ಗಾನುಸಂಧಾನವಿಲ್ಲದೆ ಪ್ರಜ್ಞೆಯ ಪೂರ್ಣವಿಕಾಸ ಮತ್ತು ಯಾವುದೇ ವಿಷಯದ ಸಮಗ್ರ ಅರಿವು ಸಾಧ್ಯವಿಲ್ಲ ಎಂದು ಖ್ಯಾತ ಚಿಂತಕ ಜಿಡ್ಡು ಕೃಷ್ಣಮೂರ್ತಿ ಅಭಿಪ್ರಾಯ ಪಡುತ್ತಾರೆ. ಶಿಕ್ಷಣ ಕೇವಲ ಒಂದು ಪುಸ್ತಕದ ಓದು ಅಲ್ಲ, ಮಾಹಿತಿಯನ್ನು ಗಿಳಿಪಾಠ ಮಾಡುವುದೂ ಅಲ್ಲ, ಅದು ಜಗತ್ತನ್ನು ಹೇಗೆ ನೋಡಬೇಕು, ಪುಸ್ತಕ ಹೇಳುವುದನ್ನು ಹೇಗೆ ಆಲಿಸಬೇಕು? ಮತ್ತು ಅಲ್ಲಿ ಬರೆದದ್ದು ಎಷ್ಟು ಸತ್ಯ ಎಂದು ವಿವೇಚಿಸುವ ಆಲೋಚನಾ ಕ್ರಮವನ್ನು ರೂಢಿಸಬೇಕು. ಪರೀಕ್ಷೆಯಲ್ಲಿ ಪಾಸು ಮಾಡುವುದು, ಪದವಿಗಳನ್ನು ಪಡೆಯುವುದು, ಕೆಲಸ ಗಿಟ್ಟಿಸು ವುದು ಮತ್ತು ಐಷಾರಾಮಿ ಜೀವನದ ಖಾತರಿ ಗಳಿಸುವುದು ಇಷ್ಟೇ ಶಿಕ್ಷಣದ ಗುರಿಯಲ್ಲ. ನಾವು ಬೆಳೆದಂತೆಲ್ಲಾ ಎಲ್ಲವನ್ನೂ ಆಲಿಸುವ, ಕುತೂಹಲದಿಂದ ಕಾಣುವ ಮನೋಧರ್ಮ ಮಾಯವಾಗುವುದು ದುರ್ದೈವವೇ ಸರಿ! ನಮ್ಮನ್ನು ಮುಂದೆ ಹಲವು ಚಿಂತೆಗಳು ಆವರಿಸುತ್ತವೆ. ಹೆಚ್ಚು ಹೆಚ್ಚು ಹಣ ಗಳಿಸಬೇಕು, ಹೊಸ ನಮೂನೆಯ ಕಾರು ಬೇಕು, ಮನೆ, ಮಕ್ಕಳು ಎಲ್ಲವೂ ಬೇಕು ಇತ್ಯಾದಿ ಮಿತಿ ಇಲ್ಲದ ವಾಂಛೆಗಳು ಮುತ್ತಿಗೆ ಹಾಕುತ್ತವೆ. ನಾವು ಈರ್ಷ್ಯೆಯ, ಮಹತ್ವಾಕಾಂಕ್ಷೆಯ, ದುರಾಸೆಯ ಮತ್ತು ದ್ವೇಷದ ಸಾಕಾರಮೂರ್ತಿಯಾಗುತ್ತೇವೆ. ಶಿಕ್ಷಣ ಎಂಬ ಹೆಸರಿನಲ್ಲಿ ನಾವು ಈ ವಿಕಾರ ಹಂತವನ್ನು ತಲುಪುವುದಾರೆ ಶಿಕ್ಷಣದ ಸಾರ್ಥಕ್ಯವಾದರೂ ಏನು? ಈ ಮಹಾನುಭಾವರ ಮನಸಾಕ್ಷಿ ಎಂದೂ ಇಂಥ ಪ್ರಶ್ನೆ ಕೇಳಲೇ ಇಲ್ಲವಾ?

ಇನ್ನೊಂದೆಡೆ ವಿದ್ಯಾಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ವಿದ್ಯಾಲಯದ ಕುಲಸಚಿವರು, ನಿರ್ದೇಶಕರು ಕೋಟಿ ಕೋಟಿ ಹಣದ ಥೈಲಿ ಹಿಡಿದುಕೊಂಡು ಗ್ರೇಡ್ ಖರೀದಿಗೆ ಹೊರಡುತ್ತಾರೆ. ಇವರದ್ದು ಡಿಗ್ರಿ ಮಾರುವ ಮೀಡಿಯೇಟರ್‌ಗಳ ಕೆಲಸ. ಇವರ ದೃಷ್ಟಿಯಲ್ಲಿ ವಿದ್ಯಾರ್ಥಿಗಳು ಪೋಷಕರು ಕೇವಲ ಇವರ ಬ್ರಾಂಡ್ ಡಿಗ್ರಿ ಕೊಳ್ಳುವ ಖರೀದಿದಾರರು ಅಷ್ಟೇ! ಇವರಿಗೂ ಮಾರುಕಟ್ಟೆ ದಳ್ಳಾಳಿಗಳಿಗೂ ಏನು ವ್ಯತ್ಯಾಸ? ಒಂದೆಡೆ ಶಿಕ್ಷಣದಲ್ಲಿನ ತರತಮ ನೀತಿಯ ಕಂದಕ ಹೆಚ್ಚಾಗುತ್ತಿದೆ. ದುಡ್ಡಿಲ್ಲದವರು ಸರಕಾರಿ ಕಾಲೇಜು ಸೇರಿ ಅಷ್ಟೋ ಇಷ್ಟೋ ಓದಿ ಫ್ಯಾಕ್ಟರಿ, ಗಾರ್ಮೆಂಟು ಎಂದು ಜೀವನ ಸವೆಸುತ್ತಿದ್ದಾರೆ. ಕೆಲವರಷ್ಟೇ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಸಿಕ್ಕಷ್ಟೇ ಸೀರುಂಡೆ ಎಂದು ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ. ದುಡ್ಡಿದ್ದವರು ಡಿಗ್ರಿ, ಉದ್ಯೋಗ ಎಲ್ಲವನ್ನೂ ಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾಲಯಗಳು ಇಂಥ ಅನೈತಿಕ ಕೆಲಸಕ್ಕೆ ಮಣೆ ಹಾಕಿ ನಿಂತುಬಿಟ್ಟರೆ ಶಿಕ್ಷಣದ ಶ್ರೇಷ್ಠತೆಯ ಗತಿ ಏನು? ಎಲ್ಲಕ್ಕಿಂತ ಗಾಬರಿ ಪಡಿಸುವ ಸಂಗತಿ ಎಂದರೆ ಲಂಚ, ಭ್ರಷ್ಟಾಚಾರ ಸಮೂಹ ಸನ್ನಿಯಾಗುತ್ತಿರುವುದು, ಅಥವಾ ವ್ಯಕ್ತಿಗತ ಧೋರಣೆಯಿಂದ ಸಾಂಸ್ಥಿಕ ಧೋರಣೆಗೆ ರೂಪಾಂತರ ಹೊಂದುತ್ತಿರುವುದು. ಇದು ತುಂಬಾ ಅಪಾಯಕಾರಿ ಪ್ರವೃತ್ತಿ. ಒಬ್ಬರೋ, ಇಬ್ಬರೋ ಲಂಚಕೋರರಿದ್ದರೆ ನಿಯಂತ್ರಿಸಬಹುದು. ಇಡೀ ಸಂಸ್ಥೆ, ವ್ಯಕ್ತಿಗಳ ಸಮೂಹವೇ ಕುಲಗೆಟ್ಟು ಹೋದರೆ ಅದನ್ನು ರಿಪೇರಿ ಮಾಡುವುದು ಹೇಗೆ? ಇದು ವ್ಯವಸ್ಥೆಗೆ ಅಂಟಿದ ಗ್ಯಾಂಗ್ರಿನ್! ಕೊಳೆತ ಬೆರಳ ಬದಲು ಕಾಲನ್ನೇ ಕತ್ತರಿಸಿ ಹಾಕಬೇಕಾದ ಕರ್ಮಕಾಂಡ! ಇದಕ್ಕೆ ಕಾನೂನು, ಶಿಕ್ಷೆ ಏನು ಮಾಡೀತು? ಇಂಥ ಭ್ರಷ್ಟರು ರಕ್ತ ಬೀಜಾಸುರರಂತೆ ಮತ್ತೆ ಮತ್ತೆ ಹುಟ್ಟಿ ಬರುತ್ತಲೇ ಇರುತ್ತಾರೆ. ಬದುಕೆಂಬುದು ಮೆಕಾಲೆ ಶಿಕ್ಷಣದಿಂದ ಗುರುಕುಲ ಶಿಕ್ಷಣಕ್ಕೆ, ಸಂಸ್ಕಾರದ ಮಾರ್ಗಕ್ಕೆ, ಸ್ವಯಂ ನಿಯಂತ್ರಣದ ಪರಿಧಿಗೆ ಮತ್ತೆ ಹೊರಳಿದರಷ್ಟೇ ಭಾರತಕ್ಕೊಂದು ಭವ್ಯ ಭವಿಷ್ಯದ ಹೊಳಹು ಕಂಡೀತು. ಕಾಲಾಯ ತಸ್ಮೈ ನಮಃ!

(ಲೇಖಕರು ಹವ್ಯಾಸಿ ಪತ್ರಕರ್ತರು ಮತ್ತು ಕಿರುತೆರೆ ಸಂಭಾಷಣೆಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:10, Issue: 25

ಸಮಾಚಾರ ಸಣ್ಣದಲ್ಲ

ದೆಹಲಿ, ನೋಯ್ಡಾದ 2 ಶಾಲೆಗೆ ಬಾಂಬ್ ಬೆದರಿಕೆ

ದೆಹಲಿ: ದೆಹಲಿಯಲ್ಲಿನ ಶಾಲೆಗಳಿಗೆ ಮತ್ತೆ ಬಾಂಬ್ ಬೆದರಿಕೆ ಶುರುವಾಗಿದೆ. ಪೂರ್ವ ದೆಹಲಿಯ ಅಲ್ಕಾನ್ ಶಾಲೆಗೆ ಮತ್ತು ನೋಯ್ಡಾದ ಶಿವ ನಾಡರ್ ಶಾಲೆಗೆ ಬಾಂಬ್ ಬೆದರಿಕೆ ಕರೆ ಬಂದಿದೆ. ಎಲ್ಲಾ ವಿದ್ಯಾರ್ಥಿಗಳನ್ನು ತಕ್ಷಣವೇ ಮನೆಗೆ ಕಳುಹಿಸಿ ಸದ್ಯ ಶಾಲೆಗಳಿಗೆ ರಜೆ ನೀಡಲಾಗಿದೆ. ಪೊಲೀಸರು ಸ್ಥಳ ಪರಿಶೀಲನೆ ಆರಂಭಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳ ಸ್ಥಳದಲ್ಲಿವೆ. ಅಗ್ನಿಶಾಮಕ ದಳ ಮತ್ತು ಬಿಡಿಡಿಎಸ್ ತಂಡ ಕೂಡಾ ಸ್ಥಳದಲ್ಲಿವೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದಾರೆ. ಇ-ಮೇಲ್‌ನಲ್ಲಿ ಬಂದ ಬೆದರಿಕೆ ಇ ಮೇಲ್‌ಗಳನ್ನು ಸೈಬರ್ ತಂಡ ತನಿಖೆ ನಡೆಸುತ್ತಿದೆ. ಫೆ.6ರಂದು ನೋಯ್ಡಾದ ಸ್ಟೆಪ್ ಬೈ ಸ್ಟೆಪ್ ಸ್ಕೂಲ್, ದಿ ಹೆರಿಟೇಜ್ ಸ್ಕೂಲ್, ಜ್ಞಾನಶ್ರೀ ಸ್ಕೂಲ್ ಮತ್ತು ಮಯೂರ್ ಸ್ಕೂಲ್‌ಗೆ ಸ್ಪ್ಯಾಮ್ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿತ್ತು.

ನಟ ಸೋನುಸೂದ್ ವಿರುದ್ಧ ವಾರಂಟ್

ಕೋಲ್ಕತ್ತ: ವಂಚನೆ ಪ್ರಕರಣದಲ್ಲಿ ಸಾಕ್ಷ್ಯ ಹೇಳಲು ಬರುವಂತೆ ಬಾಲಿವುಡ್ ನಟ ಸೋನುಸೂದ್ ವಿರುದ್ಧ ಪಂಜಾಬ್‌ನ ಲುಧಿಯಾನದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಬಂಧನ ವಾರಂಟ್ ಹೊರಡಿಸಿದೆ. ಮ್ಯಾಜಿಸ್ಟ್ರೇಟ್ ರಮಣಪ್ರೀತ್ ಕೌರ್ ವಾರಂಟ್ ಹೊರಡಿಸಿದ್ದಾರೆ.



ಲುಧಿಯಾನದ ವಕೀಲ ರಾಜೇಶ್ ಖನ್ನಾ ಎಂಬವರು ಮೋಹಿತ್ ಶುಕ್ಲಾ ಎಂಬವರ ವಿರುದ್ಧ 10 ಲಕ್ಷ ರು. ವಂಚನೆ ಪ್ರಕರಣ ದಾಖಲಿಸಿದ್ದು, ನಕಲಿ ರಿಜಿಕಾ ನಾಣ್ಯದಲ್ಲಿ ಹೂಡಿಕೆ ಮಾಡಿಸಿ ವಂಚಿಸಲಾಗಿದೆ ಎಂದು ಆರೋಪಿಸಿದ್ದಾರೆ. ಪ್ರಕರಣದಲ್ಲಿ ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಬರುವಂತೆ ಸೋನು ಸೂದ್ ಅವರಿಗೆ ಸೂಚಿಸಲಾಗಿತ್ತು. ಆದರೆ ಅವರು ಹಾಜರಾಗದ ಕಾರಣ ಬಂಧನ ವಾರಂಟ್ ಹೊರಡಿಸಲಾಗಿದೆ. ಸೋನು ಸೂದ್ ಅವರನ್ನು ಬಂಧಿಸಿ ಕರೆತಂದು ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಮುಂಬೈನ ಅಂಧೇರಿ ಪಶ್ಚಿಮದ ಓಶಿವಾರಾ ಪೊಲೀಸ್ ಠಾಣೆ ಅಧಿಕಾರಿಗೆ ಲುಧಿಯಾನ ನ್ಯಾಯಾಲಯ ನಿರ್ದೇಶನ ನೀಡಿದೆ. ವಿಚಾರಣೆ ಫೆ.10ಕ್ಕೆ ನಡೆಯಲಿದೆ.

ಟೋಲ್ ದರ ಶೀಘ್ರ ಇಳಿಕೆ: ಗಡ್ಕರಿ

ದೆಹಲಿ: ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಗೆ ಅನುಕೂಲವಾಗುವಂತೆ ಕೇಂದ್ರ ಸರಕಾರ ಏಕರೂಪದ ಟೋಲ್ ನೀತಿ ರೂಪಿಸುತ್ತಿದ್ದು, ಶೀಘ್ರವೇ ಜಾರಿಗೆ ತರಲಾಗುವುದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ 'ಜಾಗತಿಕ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ' (ಜಿ ಎನ್ ಎಸ್ ಎಸ್) ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ತರಲು ಪ್ರಯತ್ನ ನಡೆಯುತ್ತಿದೆ. ಇದು ಟೋಲ್ ಸಂಗ್ರಹಕ್ಕೆ ಹೆದ್ದಾರಿಗಳಲ್ಲಿ ವಾಹನ ಸಂಚಾರ ವೇಳೆ ಪದೇ ಪದೇ ತಡೆ ಆಗುವುದನ್ನು ನಿವಾರಿಸುತ್ತದೆ. ಹೆದ್ದಾರಿಯಲ್ಲಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದರು. ವಾಹನ ಸವಾರರು 'ಟೋಲ್' ವಿಚಾರದಲ್ಲಿ ಸ್ವಲ್ಪ ಕೋಪಗೊಂಡಿದ್ದಾರೆ. 'ಟೋಲ್' ವಿಚಾರವಾಗಿ ಅನೇಕರು ನನ್ನನ್ನು 'ಟ್ರೋಲ್' ಮಾಡುತ್ತಾರೆ. ಟೋಲ್‌ಗೆ ಸಂಬಂಧಿಸಿದ ಕೋಪ ಸದ್ಯದಲ್ಲೇ ಇಲ್ಲವಾಗಲಿದೆ ಎಂದು ಲಘು ದಾಟಿಯಲ್ಲಿ ಹೇಳಿದ್ದಾರೆ.

64,809 ಕೋಟಿ: ಭಾರತ ವಿಶ್ವದಲ್ಲೇ ಅತಿದೊಡ್ಡ ರಸ್ತೆ ಜಾಲವಿರುವ ಎರಡನೇ ದೇಶವಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಉದ್ದ 1,46,195 ಕಿಮೀಗಳಷ್ಟಿದೆ. ಟೋಲ್ ಸಂಗ್ರಹ 2023-24ರಲ್ಲಿ 64,809 ಕೋಟಿ ರು.ಗಳಾಗಿದೆ. ಹಿಂದಿನ ವರ್ಷಕ್ಕಿಂತ ಇದು ಶೇ.35ರಷ್ಟು ಅಧಿಕವಾಗಿದೆ.

ಕುಂಭಮೇಳದಲ್ಲಿ ಮತ್ತೆ ಅಗ್ನಿ ಅವಘಡ

ಪ್ರಯಾಗ್‌ರಾಜ್: ಮಹಾಕುಂಭ ಮೇಳದಲ್ಲಿ ಮತ್ತೆ ಅಗ್ನಿ ಅವಘಡವಾಗಿದೆ. ಓಲ್ಡ್ ಜಿಟಿ ರಸ್ತೆಯ ತುಳಸಿ ಛೇದಕ ಬಳಿಯ ಶಿಬಿರದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಹರಿಹರಾನಂದ ಸ್ವಾಮೀಜಿ ಉಳಿದುಕೊಂಡಿದ್ದ ಟೆಂಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಅವಘಡದಲ್ಲಿ ಯಾವುದೇ ಸಾವು ನೋವು ಉಂಟಾಗಿಲ್ಲ, ಬೆಂಕಿಗೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

{ **ಅರವಿಂದ್ ಕೇಜ್ರಿವಾಲ್** } ಎಎಪಿ ಸಂಚಾಲಕ

ಸತತ ಮನವಿ ಮಾಡಿದ್ದರೂ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆವಾರು ಮತಗಳ ಸಂಖ್ಯೆ, ಫಾರ್ಮ್ 17ಸಿ ಅಪ್‌ಲೋಡ್‌ಗೆ ಚುನಾವಣಾ ಆಯೋಗ ನಿರಾಕರಿಸಿದೆ. ಹಾಗಾಗಿ 'ಟ್ರಾನ್ಸಪರೆಂಟ್ ಎಲೆಕ್ಷನ್ ಡಾಟ್ ಇನ್' ಎಂಬ ವೆಬ್‌ಸೈಟನ್ನು ಎಎಪಿ ಆರಂಭಿಸಿದೆ. ಅದರಲ್ಲಿ ಫಾರ್ಮ್ 17ಸಿ ಅಪ್‌ಲೋಡ್ ಮಾಡಿದ್ದೇವೆ. ಈ ಫಾರ್ಮ್ ಪ್ರತಿಬೂತ್‌ನ ಚಲಾವಣೆ ಮತ ವಿವರ ಹೊಂದಿದೆ.

ಇಂದು ದೆಹಲಿ ವಿಧಾನಸಭೆ ಭವಿಷ್ಯ

13,766 ಮತಗಟ್ಟೆ ಮತ ಎಣಿಕೆ ಬೆಳಗ್ಗೆ 8ಕ್ಕೆ ಆರಂಭ | 699 ಅಭ್ಯರ್ಥಿಗಳಲ್ಲಿ ಗೆಲ್ಲುವ 70 ಮಂದಿ ಯಾರು?

3 ಪಕ್ಷಗಳ ಸ್ಪರ್ಧಾಕಣದಲ್ಲಿ ಅಧಿಕಾರಕ್ಕೇರುವ ಪಕ್ಷ? | ಮತದಾನೋತ್ತರ ಸಮೀಕ್ಷೆ ಈ ಬಾರಿ ನಿಜ ಆಗುವುದೇ?

ದೆಹಲಿ: ಕೇಂದ್ರಾಡಳಿತ ಪ್ರದೇಶವಾದ ದೆಹಲಿಯ ವಿಧಾನಸಭೆಗೆ ಫೆ.5ರ ಬುಧವಾರ ಶೇ.60.42ರಷ್ಟು ಮತದಾನವಾಗಿದ್ದು, ಶನಿವಾರ ಮತ ಎಣಿಕೆ ನಡೆಯಲಿದೆ. ಶನಿವಾರ ಬೆಳಗ್ಗೆ 8ಕ್ಕೆ 70 ವಿಧಾನಸಭಾ ಕ್ಷೇತ್ರಗಳ ವಿದ್ಯುನ್ಮಾನ ಮತಯಂತ್ರಗಳನ್ನು ತೆರೆದು ದತ್ತಾಂಶಗಳನ್ನು ದಾಖಲಿಸಿಕೊಂಡು ಮತಗಟ್ಟೆವಾರು ಮತ ಎಣಿಕೆ ನಡೆಸಲಾಗುತ್ತದೆ.

ಮತ ಎಣಿಕೆಗೆ ಚುನಾವಣಾ ಆಯೋಗ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದು, ಪ್ರತಿ ಗಂಟೆ ಗೊಮ್ಮೆ ಮತ ಎಣಿಕೆಯ ಅಂಕಿ ಅಂಶಗಳನ್ನು ಪ್ರಕಟಿಸಲಿದೆ. 70 ಕ್ಷೇತ್ರಗಳ ಮತ ಎಣಿಕೆ ಮಧ್ಯಾಹ್ನದ ವೇಳೆಗೆಲ್ಲಾ ಕೊನೆಗೊಳ್ಳುವ ನಿರೀಕ್ಷೆ ಇದೆ.

70 ಸದಸ್ಯ ಬಲದ ದೆಹಲಿ ವಿಧಾನಸಭೆಯಲ್ಲಿ 36 ಕ್ಷೇತ್ರಗಳಲ್ಲಿ ವಿಜಯಿಯಾದ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ. 2020ರ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) 62 ಕ್ಷೇತ್ರಗಳಲ್ಲಿ ವಿಜಯಿಯಾಗಿದ್ದರೆ, ಬಿಜೆಪಿ 8 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಕಾಂಗ್ರೆಸ್ ಪಕ್ಷ ಒಂದೂ ಕ್ಷೇತ್ರಗಳಲ್ಲಿ ಗೆದ್ದಿರಲಿಲ್ಲ. 2015ರ ಚುನಾವಣೆಯಲ್ಲಿಯೂ ಎಎಪಿ ಪಕ್ಷವೇ ವಿಜಯ ಸಾಧಿಸಿ ಮೊದಲ ಬಾರಿಗೆ ಅಧಿಕಾರಕ್ಕೇರಿತ್ತು. ಅದಕ್ಕೂ ಮುನ್ನ ಸತತ 3 ಅವಧಿಗಳಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತವಿತ್ತು. ಪ್ರಸ್ತುತ ಎಎಪಿ ಹ್ಯಾಟ್ರಿಕ್ ಗೆಲುವಿನ ಕನಸು ಕಾಣುತ್ತಿದ್ದರೆ, 27 ವರ್ಷಗಳ ಬಳಿಕ ಮರಳಿ ಅಧಿಕಾರಕ್ಕೇರುವ ಕನಸು ಕಾಣುತ್ತಿದೆ ಬಿಜೆಪಿ. ಮತದಾ ನೋತ್ತರ ಸಮೀಕ್ಷೆಗಳೂ ಬಿಜೆಪಿ ಪರವಾಗಿಯೇ ಇವೆ. ಕೆಲವೇ ಗಂಟೆಗಳಲ್ಲಿ ದೆಹಲಿ ಗದ್ದುಗೆ ಯಾರಿಗೆ ಎನ್ನುವುದು ತಿಳಿಯಲಿದೆ.

ಬಿಜೆಪಿಗೆ 51 ಸ್ಥಾನ: ಟುಡೇಸ್ ಚಾಣಕ್ಯ

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 50ಕ್ಕೂ ಅಧಿಕ ಸ್ಥಾನ ಗೆಲ್ಲಲಿದೆ ಎಂದು ಟುಡೇಸ್ ಚಾಣಕ್ಯ ಸಮೀಕ್ಷೆ ತಿಳಿಸಿದೆ. ಬಿಜೆಪಿ ಮೈತ್ರಿಕೂಟ 51(ಪ್ಲಸ್ ಅಥವಾ ಮೈನಸ್ 6), ಎಎಪಿ 19(+/-6), ಇತರರು 0 ಅಥವಾ 3 ಸ್ಥಾನ ಗೆಲ್ಲಬಹುದೆಂದು ಭವಿಷ್ಯ ನುಡಿದಿದೆ. ಬಿಜೆಪಿ ಶೇ.49, ಎಎಪಿ ಶೇ.41, ಇತರರು ಶೇ.10ರಷ್ಟು ಮತ ಪಡೆಯುವ ಸಾಧ್ಯತೆ ಇದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ದೆಹಲಿ ವಿಧಾನಸಭೆ ಚುನಾವಣೆ ಸಂಬಂಧ ಈವರೆಗೆ ಒಟ್ಟು 12 ಸಮೀಕ್ಷೆಗಳು ಪ್ರಕಟವಾಗಿದ್ದು, 9 ಸಮೀಕ್ಷೆಗಳು ಬಿಜೆಪಿಗೆ ಸ್ಪಷ್ಟ ಬಹುಮತ ಸಿಗಲಿದೆ ಎಂದಿದ್ದರೆ, 2 ಸಮೀಕ್ಷೆಗಳು 'ಎಎಪಿ'ಗೇ ಬಹುಮತ ಎಂದಿವೆ. ಮಾಟ್ರಿಜ್ ಸಮೀಕ್ಷೆ ಮಾತ್ರ ಎಎಪಿ ಮತ್ತು ಬಿಜೆಪಿ ನಡುವೆ ಸಮಬಲದ ಹೋರಾಟ ಕಾಣಬರುತ್ತಿದೆ ಎಂದು ಭಿನ್ನ ಅಂಕಿ ಅಂಶ ನೀಡಿದೆ.

ಮುಖ್ಯಮಂತ್ರಿ ಆಕಾಂಕ್ಷಿಗಳು ಯಾರು?

ಎಎಪಿಯಿಂದ ಕೇಜ್ರಿವಾಲ್, ಬಿಜೆಪಿಯಿಂದ ರಮೇಶ್?

ದೆಹಲಿ: 11 ಮತದಾನೋತ್ತರ ಸಮೀಕ್ಷೆಗಳಲ್ಲಿ 7 ಸಮೀಕ್ಷೆಗಳು ಬಿಜೆಪಿಗೆ ಸ್ಪಷ್ಟ ಬಹುಮತದ ಗೆಲುವು ಸಿಗಲಿದೆ ಎಂದೇ ಭವಿಷ್ಯ ನುಡಿದಿವೆ. ಮತದಾನೋತ್ತರ ಸಮೀಕ್ಷೆ ನಂಬಿ ಬಿಜೆಪಿ ಒಳಗೆ ಅದಾಗಲೇ ಮುಖ್ಯಮಂತ್ರಿ ಅಭ್ಯರ್ಥಿಯ ಶೋಧ ಕಾರ್ಯ ಶುರುವಾಗಿದೆ. ಸಮೀಕ್ಷೆ ಏನೇ ಹೇಳಿರಲಿ, ಪಕ್ಷದ ನಾಯಕರ ಮಟ್ಟದಲ್ಲಿ ಏನೇ ಚರ್ಚೆ ನಡೆದಿರಲಿ, ಬಿಜೆಪಿ ಬಹಳಷ್ಟು ಬಾರಿ ಅಚ್ಚರಿ ಉಂಟಾಗುವಂತೆ ಮುಖ್ಯಮಂತ್ರಿ ಆಗಲಿರುವವರನ್ನು ಘೋಷಿಸುತ್ತದೆ. ಇನ್ನು ಎಎಪಿಯಲ್ಲಿ ಆಯ್ಕೆ, ಘೋಷಣೆಗೆ ಅವಕಾಶವೇ ಇಲ್ಲ. ಆ ಪಕ್ಷದಲ್ಲಿ ಅದಾಗಲೇ ಅರವಿಂದ್ ಕೇಜ್ರಿವಾಲ್ ಸಿಎಂ, ಮನೀಶ್ ಸಿಸೋಡಿಯ ಡಿಸಿಎಂ ಎಂಬುದು ನಿಗದಿಯಾಗಿಬಿಟ್ಟಿದೆ.

ಅರವಿಂದ್ ಕೇಜ್ರಿವಾಲ್: ಆಮ್ ಆದ್ಮಿ ಪಕ್ಷದ(ಎಎಪಿ) ಸಂಸ್ಥಾಪಕ, ರಾಷ್ಟ್ರೀಯ ಸಂಚಾಲಕ, ದೆಹಲಿಯಲ್ಲಿ 2 ಬಾರಿ ಮುಖ್ಯಮಂತ್ರಿಯಾಗಿದ್ದ ಮಾಜಿ ಐಆರ್‌ಎಸ್ ಅಧಿಕಾರಿ ಅರವಿಂದ್ ಕೇಜ್ರಿವಾಲ್, ಮತ್ತೊಮ್ಮೆ ದೆಹಲಿ ಮುಖ್ಯಮಂತ್ರಿಯಾಗಲೇಬೇಕೆಂದು ಹಠ ತೊಟ್ಟಿದ್ದಾರೆ. ದೆಹಲಿ ಸರಕಾರದ ವಿವಾದಿತ ಅಬಕಾರಿ ನೀತಿಯಲ್ಲಿನ ಭ್ರಷ್ಟಾಚಾರ ಪ್ರಕರಣದಲ್ಲಿ ಕೇಂದ್ರ ತನಿಖಾ ದಳದಿಂದ (ಸಿಬಿಐ) ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಜಾರಿ ನಿರ್ದೇಶನಾಲಯ (ಇ.ಡಿ)ದಿಂದ ಬಂಧನಕ್ಕೊಳಗಾಗಿ 2024ರಲ್ಲಿ ಸತತ ಆರು ತಿಂಗಳುಗಳ ಕಾಲ ಸೆರೆ ಮನೆಯಲ್ಲಿದ್ದರು. ಜಾಮೀನಿನ ಮೇಲೆ ನ್ಯಾಯಾಂಗ ಬಂಧನದಿಂದ ಹೊರಬಂದ ಬಳಿಕ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ದೆಹಲಿ ಚುನಾವಣೆಗೆ ಸಿದ್ಧತೆ ಆರಂಭಿಸಿದರು. ಮುಖ್ಯಮಂತ್ರಿ ಪೀಠದಲ್ಲಿ ತಮ್ಮ ನಂಬಿಕಸ್ತ ಅನುಯಾಯಿ ಆತಿಶಿ ಅವರನ್ನು ಕುಳ್ಳಿರಿಸಿದರು. ಮರಳಿ ಚುನಾವಣೆಯಲ್ಲಿ ಗೆದ್ದ ಬಳಿಕವೇ ಮುಖ್ಯಮಂತ್ರಿಯಾಗಿ ವಿಧಾನಸೌಧಕ್ಕೆ ಬರುವೆ ಎಂದು ಶಪಥ ಮಾಡಿದರು. ಬಳಿಕ ಪೂರ್ಣ ಪ್ರಮಾಣದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿದರು.

ರಮೇಶ್ ಬಿಧುರಿ: ಸಾಮಾನ್ಯವಾಗಿ ವಿಧಾನಸಭಾ ಚುನಾವಣೆಗಳು ನಡೆದಾಗೆಲ್ಲಾ, ಪಕ್ಷ ಪ್ರಬಲವಾಗಿರುವ ರಾಜ್ಯಗಳಲ್ಲಿ ಚುನಾವಣೆಗೂ ಮುನ್ನವೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುತ್ತಿದ್ದ ಬಿಜೆಪಿ, ಈ ಬಾರಿ ದೆಹಲಿ ಚುನಾವಣೆಯಲ್ಲಿ ಆ ಕ್ರಮವನ್ನು ಕೈಬಿಟ್ಟಿದೆ. ಮುಖ್ಯಮಂತ್ರಿ ಅಭ್ಯರ್ಥಿ ಎಂದು ಯಾರನ್ನೂ ಘೋಷಿಸದೇ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿದೆ. ಪಕ್ಷದ ರಾಷ್ಟ್ರೀಯ ಮಟ್ಟದಿಂದಲೇ ದೆಹಲಿ ವಿಧಾನಸಭೆ ಚುನಾವಣೆ ಪ್ರಚಾರ ಕಾರ್ಯವನ್ನು ಬಿಜೆಪಿ ನಿರ್ವಹಿಸಿದೆ. ಹಾಗಿದ್ದೂ, ಪಕ್ಷದ ಕೆಲ ಮೂಲಗಳ ಪ್ರಕಾರ, ರಮೇಶ್ ಬಿಧುರಿ ಅವರು ದೆಹಲಿ ಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ. ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಸಾಧಿಸಿದ ಬಳಿಕ ಈ ಬಗ್ಗೆ ಶಾಸಕಾಂಗ ಪಕ್ಷ ನಿರ್ಧರಿಸಲಿದೆ.

ಕಾಂಗ್ರೆಸ್: ಚುನಾವಣೆ ಗೆಲುವಿನ ಬಗೆಗೇ ಅನುಮಾನದಲ್ಲಿರುವ ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವ ಗೋಜಿಗೇ ಹೋಗಿಲ್ಲ.

ಮಹಾರಾಷ್ಟ್ರದಲ್ಲಿ 39 ಲಕ್ಷ ಮತದಾರರು ಸೇರ್ಪಡೆ!

ಆಯೋಗದ ಬಗ್ಗೆ ರಾಹುಲ್ ಗಾಂಧಿ ಶಂಕೆ

ದೆಹಲಿ: ಮಹಾರಾಷ್ಟ್ರದಲ್ಲಿನ ಮತದಾರರ ಪಟ್ಟಿಯಲ್ಲಿ ಭಾರೀ ಅಕ್ರಮವಾಗಿದೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ನಡುವಿನ ಅವಧಿಯ ಐದು ತಿಂಗಳಲ್ಲೇ ರಾಜ್ಯದಲ್ಲಿ 39 ಲಕ್ಷ ಹೊಸ ಮತದಾರರ ಸೇರ್ಪಡೆಯಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ ಎಂದು 'ಮಹಾ ವಿಕಾಸ್ ಅಘಾಡಿ'(ಎಂವಿಎ) ಗಂಭೀರ ಆರೋಪ ಮಾಡಿದೆ.

ಕಾಂಗ್ರೆಸ್, ಶಿವಸೇನೆ (ಉದ್ಧವ್ ಬಣ), ಎನ್‌ಸಿಪಿ (ಶರದ್ ಬಣ) ಒಳಗೊಂಡ 'ಎಂವಿಎ' ಶುಕ್ರವಾರ ಜಂಟಿ ಸುದ್ದಿಗೋಷ್ಠಿ ನಡೆಸಿ ಆಯೋಗದ ವಿರುದ್ಧ ಕಿಡಿಕಾರಿದೆ.

ಮಹಾರಾಷ್ಟ್ರದಲ್ಲಿ ಮತದಾರರ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾದ ಒಟ್ಟು ಮತದಾರರ ಸಂಖ್ಯೆ ಹಿಮಾಚಲ ಪ್ರದೇಶದಂತಹ ರಾಜ್ಯದ ಜನಸಂಖ್ಯೆಗೆ ಸಮನಾಗಿದೆ. ಈ ಬಗ್ಗೆ ಮತದಾರರ ವಿವರಗಳನ್ನು ಆಯೋಗ ಒದಗಿಸಬೇಕು ಮತ್ತು ಈ ವಿಷಯದ ಬಗ್ಗೆ ಸ್ಪಷ್ಟ ಚಿತ್ರಣ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದರು.

2024ರ ವಿಧಾನಸಭೆ ಚುನಾವಣೆಯಲ್ಲಿ ಪ್ರತಿಪಕ್ಷಗಳ ಮತ ಗಳಿಕೆ 2019ರಲ್ಲಿದ್ದಷ್ಟೇ ಇದೆ. ಆದರೆ, ಹೊಸದಾಗಿ ಸೇರ್ಪಡೆಯಾದ ಮತದಾರರು ಬಿಜೆಪಿ ಪರ ಮತ ಚಲಾಯಿಸಿದ್ದಾರೆ. ಇದು ಅನುಮಾನಕ್ಕೆ ಕಾರಣವಾಗಿದೆ ಎಂದಿದ್ದಾರೆ.

2 ಚುನಾವಣೆಗಳಲ್ಲಿ ಮತದಾರರ ಸಂಖ್ಯೆ ಏರಿಕೆಯಲ್ಲಿ ವ್ಯತ್ಯಯ

ಮಹಾರಾಷ್ಟ್ರದಲ್ಲಿ 2024ರ ವಿಧಾನಸಭೆ ಚುನಾವಣೆ ವೇಳೆ ಕೇವಲ 5 ತಿಂಗಳಲ್ಲೇ ಹೊಸದಾಗಿ 39 ಲಕ್ಷ ಮತದಾರರು ಸೇರ್ಪಡೆಗೊಂಡಿದ್ದಾರೆ. ಆದರೆ, 2019-24ರ ನಡುವಿನ ಐದು ವರ್ಷಗಳ ಅವಧಿಯಲ್ಲಿ ಹೊಸದಾಗಿ ಮತದಾರರ ಪಟ್ಟಿ ಸೇರಿದವರ ಸಂಖ್ಯೆ ಕೇವಲ 32 ಲಕ್ಷ. ಇದು ಹೇಗೆ ಸಾಧ್ಯ? ವಿಧಾನಸಭೆ-ಲೋಕಸಭೆ ಚುನಾವಣೆ ಅವಧಿಯ ಮತದಾರರ ಪಟ್ಟಿಯ ವಿವರವನ್ನು ಚುನಾವಣಾ ಆಯೋಗ ನೀಡದಿದ್ದರೆ ಗಂಭೀರ ಪ್ರಶ್ನೆ ಎದುರಿಸಬೇಕಾಗುತ್ತದೆ ಎಂದು ರಾಹುಲ್ ಗಾಂಧಿ ಎಚ್ಚರಿಕೆ ನೀಡಿದ್ದಾರೆ.

ಸರಕಾರದ ಅಂಕಿ ಅಂಶ ಪ್ರಕಾರ ಮಹಾರಾಷ್ಟ್ರದಲ್ಲಿನ ವಯಸ್ಕ ಜನರ ಸಂಖ್ಯೆ 9.54 ಕೋಟಿ ಇದ್ದರೆ, ರಾಜ್ಯದ ಮತದಾರರ ಸಂಖ್ಯೆ ಅದನ್ನೂ ಮೀರಿದೆ. ರಾಜ್ಯದಲ್ಲಿ ಈಗಿನ ಅಂಕಿ ಅಂಶ ಪ್ರಕಾರ 9.70 ಕೋಟಿ ಮತದಾರರಿದ್ದಾರೆ. ಅಂದರೆ, ವಯಸ್ಕ ಜನಸಂಖ್ಯೆಗಿಂತಲೂ ಮತದಾರರ ಸಂಖ್ಯೆಯೇ ಅಧಿಕವಾಗಿದೆ. ಇದು ಹೇಗೆ ಸಾಧ್ಯ ಎಂದು ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಎನ್‌ಸಿಪಿ (ಶರದ್ ಬಣ)ದ ಸಂಸದೆ ಸುಪ್ರಿಯಾ ಸುಳೆ ಮತ್ತು ಶಿವಸೇನೆ (ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಜತೆಗಿದ್ದರು.

ಮಾಂಜಾ ಘಟಕ ಸ್ಫೋಟ, 3 ಸಾವು

ಬರೇಲಿ: ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ಕ್ವಿಲಾ ಪ್ರದೇಶದಲ್ಲಿ ಗಾಳಿಪಟ ದಾರ 'ಮಾಂಜಾ' ತಯಾರಿಕಾ ಘಟಕದಲ್ಲಿ ಶುಕ್ರವಾರ ಬೆಳಗ್ಗೆ 10 ಗಂಟೆಯಲ್ಲಿ ದಿಢೀರ್ ಸ್ಫೋಟ ಸಂಭವಿಸಿದ್ದು, ಘಟಕದ ಮಾಲೀಕ ಸೇರಿದಂತೆ ಮೂವರು ದುರ್ಮರಣಕ್ಕೀಡಾಗಿದ್ದಾರೆ.

ಮಾಂಜಾ ಗಾಳಿಪಟದ ದಾರ ತಯಾರಿಸಲು ದಾರಕ್ಕೆ ಸಲ್ಫರ್, ಪೊಟ್ಯಾಶ್ ಮತ್ತು ಗಾಜಿನ ಪುಡಿಯ ಮಿಶ್ರಣ ಅಂಟಿಸಲಾಗುತ್ತದೆ. ಈ ಮಿಶ್ರಣವನ್ನು ಕುಟ್ಟಿ ಪುಡಿ ಮಾಡಿ ಸಿದ್ಧಪಡಿಸುವ ಕೆಲಸದ ವೇಳೆ ಸ್ಫೋಟವಾಗಿದೆ. ಎಂದು ಪೊಲೀಸ್ ವರಿಷ್ಠಾಧಿಕಾರಿ(ಸಂಚಾರ) ತಿಳಿಸಿದ್ದಾರೆ. ಘಟನೆಯಲ್ಲಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರೆ, ಮೂರನೇ ವ್ಯಕ್ತಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಮೃತರನ್ನು ಮಾಂಜಾ ಘಟಕದ ಮಾಲೀಕ ಅತಿಕ್ ರಜಾಖಾನ್(45) ಮತ್ತು ಕಾರ್ಮಿಕರಾದ ಫೈಜಾನ್(25) ಮತ್ತು ಸರ್ತಾಜ್(20) ಎಂದು ಗುರುತಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಆಂಧ್ರ ಪೊಲೀಸರಿಂದ 'ಆರ್‌ಜಿವಿ' ವಿಚಾರಣೆ

ಅಮರಾವತಿ: ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಮತ್ತಿತರರ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದ ಆರೋಪದಡಿ ಖ್ಯಾತ ಚಲನಚಿತ್ರ ನಿರ್ದೇಶಕ-ನಿರ್ಮಾಪಕ ರಾಮ್‌ಗೋಪಾಲ್ ವರ್ಮಾ(ಆರ್‌ಜಿವಿ) ವಿರುದ್ಧ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿ ಆರ್‌ಜಿವಿಯನ್ನು ಶುಕ್ರವಾರ ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಪೊಲೀಸರು ನೀಡಿದ್ದ ನೋಟಿಸ್ ಅನುಸರಿಸಿ ರಾಮ್‌ಗೋಪಾಲ್ ವರ್ಮಾ ಪ್ರಕಾಶಂ ಜಿಲ್ಲೆಯ ಅಮರಾವತಿ ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾಗಿದ್ದರು. ಆಂಧ್ರದಲ್ಲಿ 2024ರಲ್ಲೇ ಆರ್‌ಜಿವಿ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ. ಸಿಎಂ ನಾಯ್ಡು, ಡಿಸಿಎಂ-ನಟ ಪವನ್ ಕಲ್ಯಾಣ್ ಮತ್ತು ಅವರ ಕುಟುಂಬ ಸದಸ್ಯರ ಅಸಭ್ಯ ರೀತಿ ಮಾರ್ಫ್ ಮಾಡಿದ ಫೋಟೋಗಳನ್ನು ಜಾಲತಾಣದಲ್ಲಿ ಆರ್‌ಜಿವಿ ಹಂಚಿಕೊಂಡಿದ್ದರು. ಈ ಪ್ರಕರಣದಲ್ಲಿಯೇ ವರ್ಮಾ ವಿಚಾರಣೆ ನಡೆದಿದೆ. ಇದೇ ಪ್ರಕರಣದಲ್ಲಿ ವರ್ಮಾ ಆಂಧ್ರ ಹೈಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ.

2026ರಲ್ಲಿ 'ಗಗನಯಾನ', 2027ಕ್ಕೆ ಚಂದ್ರಯಾನ-4

ದೆಹಲಿ: ಹ್ಯುಮಾನಾಯ್ಡ್ ರೊಬೊ 'ವ್ಯೂಮಮಿತ್ರ'ನನ್ನು ಗಗನಯಾನಕ್ಕೆ ಕಳುಹಿಸುವ ಪ್ರಯೋಗ ಇದೇ ವರ್ಷ ನಡೆಯಲಿದೆ. 2026ರಲ್ಲಿ ಮಾನವ ಸಹಿತ ಗಗನಯಾನ ಹಾಗೂ ಸಮುದ್ರಯಾನ ಯೋಜನೆಗಳೂ ಕಾರ್ಯರೂಪಕ್ಕೆ ಬರಲಿವೆ. ಚಂದ್ರನ ಮೇಲ್ಮೈನ ಕೆಲವು ಶಿಲೆಗಳನ್ನು ಭೂಮಿಗೆ ತರುವ ಚಂದ್ರಯಾನ-4 ಮಿಷನ್ 2027ರಲ್ಲಿ ಕಾರ್ಯಗತವಾಗಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಸಚಿವರು, 2027ರಲ್ಲಿ ಎರಡು ಪ್ರತ್ಯೇಕ ರಾಕೆಟ್‌ಗಳ ಉಡ್ಡಯನ ಮಾಡಲಾಗುವುದು. ಒಂದು ಯೋಜನೆ ಚಂದ್ರನಿಂದ ಶಿಲೆಗಳನ್ನು ಹೊತ್ತು ತರುವುದಾಗಿದ್ದರೆ, ಮತ್ತೊಂದು ಶಕ್ತಿಶಾಲಿ ರಾಕೆಟ್ ಉಡಾವಣೆ. ಅದರಲ್ಲಿ ಭಾರತದ ಅಂತರಿಕ್ಷ ನಿಲ್ದಾಣಕ್ಕೆ ಜೋಡಿಸಲು ಬೇಕಾದ 5 ಬಿಡಿಭಾಗಗಳು ಇರಲಿವೆ. ಅವನ್ನು ನಂತರದ ದಿನಗಳಲ್ಲಿ ಪರಸ್ಪರ ಜೋಡಿಸಲಾಗುತ್ತದೆ. ಸಮುದ್ರಯಾನದಲ್ಲಿ 6 ಸಾವಿರ ಮೀ. ಆಳಕ್ಕೆ ಮೂವರು ವಿಜ್ಞಾನಿಗಳು ತೆರಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

1969ರಲ್ಲಿ ಇಸ್ರೊ ಸ್ಥಾಪನೆಯಾಗಿದ್ದು, ಅದರ ಪ್ರಥಮ ಉಡಾವಣೆ ಕೇಂದ್ರ 1993ರಲ್ಲಿ ಸ್ಥಾಪನೆಯಾಯಿತು. ಇಸ್ರೊ ಸ್ಥಾಪನೆಯಿಂದ 2014ರವರೆಗೆ ಭಾರತೀಯ ಬಾಹ್ಯಾಕಾಶ ಕ್ಷೇತ್ರದ ಅಭಿವೃದ್ಧಿ ವೇಗ ಮಂದಗತಿಯಲ್ಲಿದ್ದರೆ, ಕಳೆದ 10 ವರ್ಷಗಳಲ್ಲಿ ವೇಗವಾಗಿ ಪ್ರಗತಿ ನಡೆದಿದೆ ಎಂದಿದ್ದಾರೆ.

ಕುಂಭಮೇಳ: ಡಿಕೆಶಿ ಪುತ್ರಿ ಐಶ್ವರ್ಯ ಪುಣ್ಯಸ್ನಾನ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪುತ್ರಿ ಐಶ್ವರ್ಯ ಭಾಗಿಯಾಗಿದ್ದು, ಗಂಗಾ-ಯಮುನಾ-ಸರಸ್ವತಿ ನದಿಗಳ ತ್ರಿವೇಣಿ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ. ಕುಂಭಮೇಳದಲ್ಲಿ ಕಂಡ ಅದ್ಭುತ ದೃಶ್ಯಗಳ ವಿಡಿಯೊವನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಐಶ್ವರ್ಯ ಹಂಚಿಕೊಂಡಿದ್ದಾರೆ. ತಂದೆ ಡಿಕೆಶಿ ಮಹಾ ಕುಂಭಮೇಳಕ್ಕೆ ಭೇಟಿ ನೀಡುವ ಮುನ್ನವೇ ಐಶ್ವರ್ಯ ಪುಣ್ಯಸ್ನಾನ-ಕುಂಭಮೇಳ ದರ್ಶನ ಮುಗಿಸಿದ್ದಾರೆ. ಫೆ.9-10ರಂದು ಕುಂಭಮೇಳಕ್ಕೆ ಹೋಗುವುದಾಗಿ ಡಿಕೆಶಿ ಹೇಳಿದ್ದರು.

ಹಮಾಸ್ ಉಗ್ರನಿಗೆ ಪಿಒಕೆ ವಿಐಪಿ ಸ್ವಾಗತ

ಮುಝಫರಾಬಾದ್: ಪಾಕಿಸ್ತಾನ ಆಕ್ರಮಿತ ಪ್ರದೇಶ (ಪಿಒಕೆ)ದಲ್ಲಿ ಹಮಾಸ್ ಉಗ್ರ ಸಂಘಟನೆಯ ನಾಯಕನಿಗೆ ಮಹಾಗಣ್ಯರಿಗೆ ಸಿಗುವಂತಹ(ವಿಐಪಿ) ಸ್ವಾಗತ ಸಿಕ್ಕಿದೆ. ಉಗ್ರ ಸಂಘಟನೆ ಸದಸ್ಯರು, ಬೆಂಬಲಿಗರು ಇದೇ ವೇಳೆ ಭಾರತ ವಿರೋಧಿ ರ‍್ಯಾಲಿಯನ್ನೂ ನಡೆಸಿದ್ದಾರೆ. ರ‍್ಯಾಲಿಯಲ್ಲಿ ಜೈಶ್ ಎ ಮೊಹಮ್ಮದ್ ಹಾಗೂ ಲಷ್ಕರ್ ಎ ತಯ್ಯಬಾ ಭಯೋತ್ಪಾದಕರು ಕಾರು-ಬೈಕ್ ರ‍್ಯಾಲಿ ಮತ್ತು ಕುದುರೆ ಸವಾರಿ ನಡೆಸಿದ್ದಾರೆ. ಈ ಸಂದರ್ಭದ ವಿಡಿಯೊ ವೈರಲ್ ಆಗಿದೆ.

ಹಮಾಸ್ ನಾಯಕ ಡಾ. ಖಾಲಿದ್ ಖಡ್ಡುಮಿ ಮತ್ತು ಜಮಾತ್ ಮುಖ್ಯಸ್ಥ ಮೌಲಾನಾ ಫಝುಲ್-ಉರ್-ರೆಹಮಾನ್ ಪರಸ್ಪರ ಭೇಟಿಯಾಗಿದ್ದಾರೆ. ಹಮಾಸ್ ಉಗ್ರ ಸಂಘಟನೆ ನಾಯಕರು ಐಷಾರಾಮಿ ಸ್ಪೋರ್ಟ್ ಯುಟಿಲಿಟಿ (ಎಸ್‌ಯು) ವಾಹನಗಳಲ್ಲಿ ಶಹೀದ್ ಸಬೀರ್ ಕ್ರೀಡಾಂಗಣಕ್ಕೆ ಹೋಗುತ್ತಿರುವ, ಪ್ಯಾಲಿಸ್ತೀನ್ ಧ್ವಜಗಳು ಹಾರಾಡುತ್ತಿರುವ ವಿಡಿಯೊ ವೈರಲ್ ಆಗಿದೆ. ಹಮಾಸ್ ನಾಯಕನ ಆಗಮನ ವೇಳೆ ಹೂಮಳೆ ಸುರಿಸಲಾಗಿದೆ. ಫೆ.5ರಂದು ಪಾಕಿಸ್ತಾನದಲ್ಲಿ ಅಲ್ ಅಕ್ಸಾ ಫ್ಲಡ್ ಕಾನ್ಫರೆನ್ಸ್ ಆಯೋಜಿಸಿದ್ದ ದೃಶ್ಯವೂ ಇದೆ. ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ ತಲ್ಹಾ ಸೈಫ್ ಮತ್ತು ಜೈಶ್ ಕಮಾಂಡರ್ ಅಸ್ಗರ್ ಖಾನ್ ಪಿಒಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಅತ್ಯಾಚಾರ: ತಕ್ಷಣ ಠಾಣೆಗೆ ಬಂದು ದೂರು ನೀಡಬೇಕೆ?

ಮುಂಬೈ: ಅತ್ಯಾಚಾರ ಕೃತ್ಯ ನಡೆದ ತಕ್ಷಣವೇ ಸಂತ್ರಸ್ತೆ ಪೊಲೀಸ್ ಠಾಣೆಗೆ ಬಂದು ದೂರು ನೀಡಬೇಕು ಎಂದು ಅಪೇಕ್ಷಿಸುವುದೇ ತಪ್ಪು ಎಂದು ಬಾಂಬೆ ಹೈಕೋರ್ಟ್ ಪೀಠ ಅಭಿಪ್ರಾಯಪಟ್ಟಿದೆ.

35 ವರ್ಷದ ಮಹಿಳೆಯ ಅತ್ಯಾಚಾರ ಪ್ರಕರಣದಲ್ಲಿ ಅಮರಾವತಿ ಸೆಷನ್ಸ್ ನ್ಯಾಯಾಲಯ ನೀಡಿದ್ದ ತೀರ್ಪನ್ನು ಬಾಂಬೆ ಹೈಕೋರ್ಟ್ ಎತ್ತಿಹಿಡಿದಿದೆ. ಅತ್ಯಾಚಾರ ಕೃತ್ಯದ ಅಪರಾಧಿ ರಾಹುಲ್ ಲೋಖಂಡೆಗೆ ಸೆಷನ್ಸ್ ನ್ಯಾಯಾಲಯ 10 ವರ್ಷಗಳ ಶಿಕ್ಷೆ ನೀಡಿರುವುದು ಸರಿಯಾಗಿಯೇ ಇದೆ ಎಂದು ತೀರ್ಪನ್ನು ಎತ್ತಿ ಹಿಡಿದಿದೆ.

ಮೇಲ್ಮನವಿ ವಿಚಾರಣೆ ವೇಳೆ, ಆರೋಪಿ ಪರ ವಕೀಲರು ಸಂತ್ರಸ್ತೆ ದೂರು ನೀಡಿರುವುದು ತಡವಾಗಿದೆ. ಎಫ್‌ಐಆರ್ ದಾಖಲಿಸುವಲ್ಲಿ ವಿಳಂಬವಾಗಿದೆ ಎಂದು ತಕರಾರು ಎತ್ತಿದ್ದರು. ರಾತ್ರಿ ಅತ್ಯಾಚಾರ ನಡೆದಿದ್ದರೆ ಸಂತ್ರಸ್ತೆ ರಾತ್ರಿಯೇ 15 ಕಿ.ಮೀ ದೂರದಲ್ಲಿನ ಪೊಲೀಸ್ ಠಾಣೆಗೆ ಬಂದು ದೂರು ನೀಡಬೇಕಿತ್ತು ಎಂದು ನಿರೀಕ್ಷಿಸುವುದೇ ತಪ್ಪು ಎಂದಿದೆ. ಒಬ್ಬಂಟಿ ಮಹಿಳೆಯ ನೋವು, ಸಂಕಟ ಅರ್ಥ ಮಾಡಿಕೊಳ್ಳಬೇಕು. ಸಂತ್ರಸ್ತೆಯ ಸಾಕ್ಷ್ಯ ದೃಢವಾಗಿದೆ, ವಿಶ್ವಾಸಾರ್ಹವೂ ಆಗಿದೆ ಎಂದು ಹೇಳಿದೆ.

ಬಾಂಗ್ಲಾದಲ್ಲಿ ನಟಿ ಮೆಹರ್ ಸೆರೆ

ಢಾಕಾ: ಬಾಂಗ್ಲಾದೇಶದಲ್ಲಿ ಮತ್ತೆ ಗಲಭೆ, ಹಿಂಸಾಚಾರ ಆರಂಭಗೊಂಡಿದೆ. ಢಾಕಾವಷ್ಟೇ ಅಲ್ಲದೇ, ಇಡೀ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವಿದೆ. ಇದೇ ವೇಳೆ ಅತ್ಯುತ್ತಮ ಗೀತಗಾಯನಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದ ಹೆಸರಾಂತ ಚಿತ್ರನಟಿ ಮೆಹರ್ ಅಫ್ರೋಜ್ ಷವಾನ್ ಅವರನ್ನು ದೇಶದ್ರೋಹ ಆರೋಪದಡಿ ಬಂಧಿಸಲಾಗಿದೆ. ನಟಿ ಮಧ್ಯಂತರ ಸರಕಾರವನ್ನು ಜಾಲತಾಣಗಳಲ್ಲಿ ಕಟುವಾಗಿ ಟೀಕಿಸುತ್ತಿದ್ದರು.

ಮೆಹರ್ ಅಫ್ರೋಜ್ ಚಿತ್ರನಟಿಯಷ್ಟೇ ಅಲ್ಲ, ಸಿನಿಮಾ ನಿರ್ದೇಶಕಿ, ನೃತ್ಯಗಾರ್ತಿ, ಹಿನ್ನೆಲೆ ಗಾಯಕಿಯೂ ಆಗಿದ್ದಾರೆ. 'ಕೃಷ್ಣೊಪೊಕ್ಕೊ' (2016) ಚಿತ್ರದಲ್ಲಿನ ಗಾಯನಕ್ಕಾಗಿ ಮೆಹರ್ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ಬಹುಮುಖ ಪ್ರತಿಭಾವಂತೆ ಮೆಹರ್ ಬಂಧನ, ದೇಶದ್ರೋಹದ ಆಪಾದನೆ ಹೊರಿಸಿರುವುದು ಅಭಿಮಾನಿಗಳ ಆತಂಕಕ್ಕೆ ಕಾರಣವಾಗಿದೆ.

ಸರಕಾರದ ವಿರುದ್ಧವೇ ಸಂಚು ನಡೆಸಿದ್ದಾರೆ ಎಂಬ ಆರೋಪದಡಿ ನಟಿ ಅಫ್ರೋಜ್‌ರನ್ನು ಗುರುವಾರ ರಾತ್ರಿ ಬಂಧಿಸಲಾಗಿದೆ. ಸದ್ಯ ಪೊಲೀಸರು ರಹಸ್ಯ ಸ್ಥಳದಲ್ಲಿ ನಟಿಯ ವಿಚಾರಣೆ ನಡೆಸಲಾಗುತ್ತಿದೆ ಎಂದು ಎಸಿಪಿ ರೆಜಾಲ್ ಕರೀಂ ಮಲ್ಲಿಕ್ ಹೇಳಿದ್ದಾರೆ. ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರವನ್ನು ನಟಿ ಟೀಕಿಸಿದ್ದರು. ಹಾಗಾಗಿ ಬಂಧನವಾಗಿರಬೇಕು ಎನ್ನಲಾಗಿದೆ.

ಬಂಧನಕ್ಕೂ ಮುನ್ನ ಬಾಂಗ್ಲಾದ ಜಮಾಲ್‌ಪುರದಲ್ಲಿನ ಮೆಹರ್ ಮನೆ ಮೇಲೆ ದಾಳಿ ನಡೆಸಲಾಗಿದೆ. ಸ್ಥಳೀಯರು ಹಾಗೂ ವಿದ್ಯಾರ್ಥಿಗಳು ಮನೆ ಬಳಿ ಬಂದು ಅಂಗಳದಲ್ಲಿದ್ದ ವಸ್ತುಗಳನ್ನು ಹಾಳು ಮಾಡಿದ್ದಾರೆ. ಮನೆಯಲ್ಲಿ ಮೆಹರ್ ಕುಟುಂಬದವರಿದ್ದರು.

43 ವರ್ಷದ ಮೆಹರ್ ಕಿರುತೆರೆಯಲ್ಲಿ ಹೆಚ್ಚು ಕಾಣಿಸಿಕೊಂಡಿದ್ದಾರೆ. 1988ರಿಂದ ಕಿರುತೆರೆ ಜತೆ ನಂಟು ಜೋಡಿದ್ದರು. 2004ರಲ್ಲಿ ವಿವಾಹವಾದರು. 2012ರಲ್ಲಿ ಪತಿ ನಿಧನರಾದರು. ಮೆಹರ್‌ಗೆ ಇಬ್ಬರು ಮಕ್ಕಳಿದ್ದಾರೆ.

'ಜೀರೊಕ್ಲಿಕ್'ನಿಂದ ವಾಟ್ಸಾಪ್ ಹ್ಯಾಕ್ ಭೀತಿ

ಇಸ್ರೇಲ್ ಸ್ಪೈವೇರ್ ದಾಳಿಗೆ ಪತ್ರಕರ್ತರೂ ಗುರಿ | ಲಿಂಕ್ ಕ್ಲಿಕ್ ಮಾಡದಿದ್ದರೂ ಸ್ಪೈವೇರ್ ಪ್ರವೇಶ

ವಾಷಿಂಗ್ಟನ್: ಇಸ್ರೇಲ್ ದೇಶದ ಸ್ಪೈವೇರ್ ಕಂಪನಿ 'ಪ್ಯಾರಗನ್ ಸಲ್ಯೂಷನ್ಸ್' ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ಹ್ಯಾಕಿಂಗ್ ಉಪಕರಣಕ್ಕೆ 25ಕ್ಕೂ ಅಧಿಕ ದೇಶಗಳಲ್ಲಿ 100 ವ್ಯಕ್ತಿಗಳು ಬಲಿಯಾಗಿದ್ದಾರೆ ಎಂದು 'ವಾಟ್ಸಾಪ್' ಕಳವಳ ವ್ಯಕ್ತಪಡಿಸಿದೆ. ಈ ಸ್ಪೈವೇರ್‌ನಿಂದ ಹ್ಯಾಕಿಂಗ್‌ಗೆ ಗುರಿಯಾದ ವ್ಯಕ್ತಿಗಳಲ್ಲಿ ಪತ್ರಕರ್ತರು ಹೆಚ್ಚಿನವರಾಗಿದ್ದಾರೆ. ನಾಗರಿಕ ಸಮಾಜದ ಸೇವಾ ವಲಯದವರೂ ಸೇರಿದ್ದಾರೆ. ಸ್ಪೈವೇರ್ ದಾಳಿ ಮೂಲಕ ವೈಯಕ್ತಿಕ ಗೌಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ ಒಡ್ಡಲಾಗುತ್ತಿದೆ.

ಜೀರೋಕ್ಲಿಕ್ ಹ್ಯಾಕ್: ವಾಟ್ಸಾಪ್ ಅಪ್ಲಿಕೇಷನ್ ಹ್ಯಾಕಿಂಗ್‌ನ ಈ ದಾಳಿಯಲ್ಲಿ ಅತ್ಯಂತ ಅಪಾಯಕಾರಿ ಅಂಶವೆಂದರೆ 'ಜೀರೋಕ್ಲಿಕ್'. ಪ್ಯಾರಗನ್ ಕಂಪನಿಯ ಈ ಸ್ಪೈವೇರ್ ದಾಳಿಗೆ ಒಳಗಾದವರು ತಮ್ಮ ಸ್ಮಾರ್ಟ್‌ಫೋನ್‌ಗೆ ಬಂದ ಯಾವುದೇ ಲಿಂಕ್ ಮೇಲೆ ಕ್ಲಿಕ್ ಮಾಡದೇ ಇದ್ದರೂ, ಯಾವುದೇ ಸಂವಹನ ನಡೆಸದೇ ಇದ್ದರೂ ಹ್ಯಾಕಿಂಗ್ ದಾಳಿಗೆ ತುತ್ತಾಗುತ್ತಾರೆ. ಗುರಿ ಇಟ್ಟು ನಡೆಸಿದ ದಾಳಿಯಲ್ಲಿ ಮೊಬೈಲ್ ಅಥವಾ ಡಿಜಿಟಲ್ ಗ್ಯಾಜೆಟ್ ಒಳಗೆ ಯಾವುದೋ ಬಗೆಯಲ್ಲಿ ನುಸುಳುವ ಈ ಸ್ಪೈವೇರ್ ಅಪಾಯಕಾರಿ ರೀತಿ ದಾಳಿ ನಡೆಸುತ್ತದೆ. ಈ ಸ್ಪೈವೇರ್ ಹ್ಯಾಕರ್‌ಗಳಿಗೆ ಎನ್‌ಕ್ರಿಪ್ಟ್ ಮಾಡಿದ ಸಂದೇಶಗಳನ್ನು ಒಳಗೊಂಡಂತೆ ಸಾಧನದೊಳಕ್ಕೆ ಸರಾಗ ಪ್ರವೇಶಕ್ಕೆ ಅವಕಾಶ ಮಾಡಿಕೊಡುತ್ತದೆ. ಬಳಿಕ ವೈಯಕ್ತಿಕ ಮಾಹಿತಿಗಳನ್ನು ಸೋರಿಕೆ ಮಾಡುವ ಮೂಲಕ ವೈಯಕ್ತಿಕ ಮತ್ತು ವೃತ್ತಿ ಸಂಬಂಧಿತ ಭದ್ರತೆಗೆ ಅಪಾಯ ಉಂಟು ಮಾಡುತ್ತದೆ.

'ವಾಟ್ಸಾಪ್' ಕಂಪನಿ ತಂತ್ರಜ್ಞರು, ಈ ಸ್ಪೈವೇರ್‌ನ ದಾಳಿ ಅದರಿಂದಾಗುವ ಅಪಾಯಗಳನ್ನು ದೃಢಪಡಿಸಿದ್ದಾರೆ. ಇಂಥದೊಂದು ಸ್ಪೈ ವೇರ್ ದಾಳಿಯನ್ನು 2024ರ ಡಿಸೆಂಬರ್‌ನಲ್ಲಿ ಪತ್ತೆ ಹಚ್ಚಲಾಯಿತು.

ಹ್ಯಾಕಿಂಗ್ ತಡೆಗೆ ಯತ್ನ

ವಾಟ್ಸಾಪ್ ಬಳಕೆದಾರರು ಹ್ಯಾಕಿಂಗ್‌ಗೆ ಒಳಗಾಗುವುದನ್ನು ತಡೆದು ಹೆಚ್ಚಿನ ಭದ್ರತೆ ಒದಗಿಸಲು ಮೆಟಾ ಕಂಪನಿ ತಕ್ಷಣದ ಕ್ರಮಗಳನ್ನು ಕೈಗೊಂಡಿದೆ. ಸ್ಪೈವೇರ್ ದಾಳಿ ಪತ್ತೆ ಹಚ್ಚುವಲ್ಲಿ ಪರಿಣತಿಯಿರುವ ಕೆನಡಾದ ಇಂಟರ್ನೆಟ್ ಪ್ರೊಟೆಕ್ಷನ್ ಗ್ರೂಪ್ ಆದ 'ಸಿಟಿಜನ್ ಲ್ಯಾಬ್'ಗೆ ಈ ಸಮಸ್ಯೆಗೆ ಪರಿಹಾರ ಸೂಚಿಸಲು ವಹಿಸಿದ ಬಳಿಕ, ಪ್ಯಾರಗನ್ ಸಲ್ಯೂಷನ್ಸ್ ಕಂಪನಿಯ ಸ್ಪೈವೇರ್ ಈ ದಾಳಿಯ ಮೂಲ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಅದರ ಬೆನ್ನಲ್ಲೆ ಪ್ಯಾರಗನ್ ಸಲ್ಯೂಷನ್ಸ್ ಕಂಪನಿಗೆ ಹ್ಯಾಕಿಂಗ್ ಕೊನೆಗೊಳಿಸುವಂತೆ ಒತ್ತಾಯಿಸಲಾಗಿದೆ. ಅಷ್ಟೇ ಅಲ್ಲದೇ, ಗ್ರಾಹಕರ ಹಿತರಕ್ಷಣೆ ಕಾರ್ಯ ಮುಂದುವರಿಸಿದ್ದೇವೆ ಎಂದು ವಾಟ್ಸಾಪ್ ವಕ್ತಾರ ತಿಳಿಸಿದ್ದಾರೆ.

ಯುರೋಪ್‌ನಲ್ಲಿ ನೆಲೆಸಿರುವ 90 ಉನ್ನತ ವ್ಯಕ್ತಿಗಳನ್ನು ಗುರಿಯಾಗಿಸಿ ಸ್ಪೈವೇರ್ ಮೂಲಕ ದಾಳಿ ನಡೆಸಲಾಗಿತ್ತು. ಈ 90 ಮಂದಿ ಗ್ಯಾಜೆಟ್ ಬಳಕೆದಾರರು ನಿರ್ದಿಷ್ಟ ಗುರುತು, ಪಾಸ್‌ವರ್ಡ್ ಬಹಿರಂಗಪಡಿಸದೇ ಇದ್ದರೂ ಹ್ಯಾಕಿಂಗ್‌ಗೆ ತುತ್ತಾಗಿದ್ದರು. ಅವರಲ್ಲಿ ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರೂ ಸೇರಿದ್ದಾರೆ.

ಸಮಾಚಾರ ಸಣ್ಣದಲ್ಲ

ಉದ್ಧವ್ ಸಂಸದರು ಶಿಂದೆ ಶಿವಸೇನೆಗೆ?

ಮುಂಬೈ: ಮಹಾರಾಷ್ಟ್ರದಲ್ಲಿ ಮತ್ತೊಮ್ಮೆ ರಾಜಕೀಯ ಸ್ಥಿತ್ಯಂತರವಾಗಲಿದೆ. ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಬಣದ ಸಂಸದರು ಡಿಸಿಎಂ ಏಕನಾಥ ಶಿಂದೆ ನೇತೃತ್ವದ ಶಿವಸೇನೆ ಸೇರಲಿದ್ದಾರೆ ಎಂದು ಸಚಿವ ಉದಯ್ ಸಮಂತ್ ಮಾಹಿತಿ ನೀಡಿದ್ದಾರೆ. ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ್ದೇ ನೈಜ ಶಿವಸೇನೆ ಎಂಬುದನ್ನು ಎಲ್ಲರೂ ಈಗ ಅರಿತಿದ್ದಾರೆ. ಚುನಾವಣಾ ಆಯೋಗವೂ ಚಿಹ್ನೆ, ಲಾಂಛನವನ್ನು ನಮಗೇ ಕೊಟ್ಟಿದೆ. ಪಕ್ಷವು ಸಂಸ್ಥಾಪಕ ಬಾಳಾ ಠಾಕ್ರೆ ಅವರ ಆದರ್ಶ-ನಿಲುವುಗಳನ್ನು ಮುಂದುವರಿಸುತ್ತಿದೆ. ಹಾಗಾಗಿ, ಶಿವಸೇನೆ(ಉದ್ಧವ್ ಬಣ) ಹಲವು ನಾಯಕರು ಶಿವಸೇನೆ ಮುಖ್ಯಸ್ಥ ಏಕನಾಥ ಶಿಂದೆ ಸಂಪರ್ಕದಲ್ಲಿದ್ದಾರೆ. ಅವರಲ್ಲಿ 8 ಸಂಸದರೂ ಸೇರಿದ್ದಾರೆ. ಎಲ್ಲರನ್ನೂ ಹಂತ ಹಂತವಾಗಿ ಶಿವಸೇನೆಗೆ ಸೇರಿಸಿಕೊಳ್ಳಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಸಮಂತ್ ಅವರ ಹೇಳಿಕೆಯನ್ನು ಶಿವಸೇನೆ (ಉದ್ಧವ್ ಬಣ) ನಾಯಕರು ತಿರಸ್ಕರಿಸಿದ್ದಾರೆ.

ಕೋಲ್ಕತ್ತ: ಗಲ್ಲು ಶಿಕ್ಷೆಗೆ ಸಿಬಿಐ ಅರ್ಜಿ ಸ್ವೀಕೃತ

ಕೋಲ್ಕತ್ತ: ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿನ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿದ್ದ ಕಿರಿಯ ವೈದ್ಯೆ ಮೇಲಿನ 'ಅತ್ಯಾಚಾರ-ಕೊಲೆ' ಪ್ರಕರಣದಲ್ಲಿ ಸೀಲ್ದಾ ನ್ಯಾಯಾಲಯ ನೀಡಿರುವ ಜೀವಾವಧಿ ಶಿಕ್ಷೆ ಪ್ರಶ್ನಿಸಿ ಪಶ್ಚಿಮ ಬಂಗಾಳ ಸರಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಕೋಲ್ಕತ್ತ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ. ಇದೇ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಸಾಲದು, ಮರಣದಂಡನೆ ವಿಧಿಸಬೇಕು ಎಂದು ಕೋರಿ ಕೇಂದ್ರದ ತನಿಖಾ ದಳ(ಸಿಬಿಐ) ಸಲ್ಲಿಸಿರುವ ಮೇಲ್ಮನವಿಯನ್ನು ಹೈಕೋರ್ಟ್ ವಿಚಾರಣೆಗೆ ಸ್ವೀಕರಿಸಿದೆ. ಪ್ರಕರಣದಲ್ಲಿ ಸಿಬಿಐ ತನಿಖಾ ಸಂಸ್ಥೆಯಾಗಿದ್ದು, ಮೇಲ್ಮನವಿ ಸಲ್ಲಿಸುವ ಹಕ್ಕು ತನಗಷ್ಟೇ ಇರುವುದು ಎಂದು ಹಿಂದೆಯೇ ಸಿಬಿಐ ಹೇಳಿತ್ತು. ಪ್ರಕರಣದಲ್ಲಿ ಅಪರಾಧಿಗೆ ಮರಣದಂಡನೆ ವಿಧಿಸಬೇಕೆಂದು ಸಿಬಿಐ ಪರ ವಕೀಲರು ಸೆಷನ್ಸ್ ನ್ಯಾಯಾಲದಲ್ಲಿ ವಾದಿಸಿದ್ದರು. ಇದೇನೂ ಅಪರೂಪದ ಪ್ರಕರಣವಲ್ಲ. ಹಾಗಾಗಿ ಮರಣದಂಡನೆ ವಿಧಿಸಲು ಆಗುವುದಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದರು.

ಮಾತಂದ್ರೆ ಮಾತು

ಪ್ರಧಾನಿ ಮೋದಿ ಕೈ ಹಿಡಿದು ಮೇಕೆದಾಟು ಅಣೆಕಟ್ಟೆ ಯೋಜನೆಗೆ ಸಹಿ ಹಾಕಿಸುವೆ ಎಂದು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಹೇಳಿದ್ದರು. ಇನ್ನೂ ಯಾಕೆ ಸಹಿ ಹಾಕಿಸಿಲ್ಲ? ಅವರು ಕೇವಲ ಪ್ರಚಾರಕ್ಕೆ ಮಾತನಾಡದೆ, ರಾಜಕೀಯ ಬದ್ಧತೆ ಪ್ರದರ್ಶಿಸಲಿ. ತಮ್ಮ ಹಿರಿತನಕ್ಕಿರುವ ಗೌರವವನ್ನು ಉಳಿಸಿಕೊಳ್ಳಲಿ.

- ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಫನ್‌ತರಂಗ

- ರಘುಪತಿ ಶೃಂಗೇರಿ -



ಗರ್ಭಿಣಿಗೆ ಲೈಂಗಿಕ ಕಿರುಕುಳ ರೈಲಿನಿಂದ ದೂಡಿದ ದುರುಳರು

ಕೊಯಮತ್ತೂರು: ಮಹಿಳೆಯರಿಗೆ ಮೀಸಲಾದ ಬೋಗಿಯಲ್ಲಿ ಒಂಟಿಯಾಗಿ ಪ್ರಯಾಣಿಸುತ್ತಿದ್ದ 4 ತಿಂಗಳ ಗರ್ಭಿಣಿಗೆ ಲೈಂಗಿಕ ಕಿರುಕುಳ ನೀಡಿದ ದುರುಳರ ಗುಂಪು, ಪ್ರತಿರೋಧ ತೋರಿದ ಆಕೆಯನ್ನು ಚಲಿಸುತ್ತಿದ್ದ ರೈಲಿನಿಂದಲೇ ಹೊರಗೆ ತಳ್ಳಿ ಕ್ರೌರ್ಯ ಮೆರೆದ ಘಟನೆ ತಮಿಳುನಾಡಿನ ವೆಲ್ಲೂರು ಜಿಲ್ಲೆಯ ಕೆವಿ ಕುಪ್ಪಂ ಬಳಿ ಇಂಟರ್ ಸಿಟಿ ರೈಲಿನಲಿ ಶುಕ್ರವಾರ ನಡೆದಿದೆ. ವೇಗವಾಗಿ ಚಲಿಸುತ್ತಿದ್ದ ರೈಲಿನಿಂದ ಹೊರಗೆ ತಳ್ಳಲ್ಪಟ್ಟ ಮಹಿಳೆ ಕಲ್ಲುಗಳ ಮೇಲೆ ಬಿದ್ದಿದ್ದರಿಂದ ತಲೆಗೆ ಪೆಟ್ಟು ಬಿದ್ದಿದೆ. ಕೈ-ಕಾಲಿನ ಮೂಳೆಮುರಿದಿವೆ. ನರಳುತ್ತಾ ಹಳಿಪಕ್ಕ ಬಿದ್ದಿದ್ದ ಗರ್ಭಿಣಿಯನ್ನು ನೋಡಿದ ಜನರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಪೊಲೀಸರು ತನಿಖೆ ಆರಂಭಿಸಿದ್ದು, ಮಹಿಳೆ ನೀಡಿದ ಮಾಹಿತಿ ಆಧರಿಸಿ ಕೆ.ವಿ.ಕುಪ್ಪಂ ಪ್ರದೇಶದ ಪೂಂಚೋಲೈ ಗ್ರಾಮದ ಹೇಮರಾಜ್ ಎಂಬ ಯುವಕನನ್ನು ಬಂಧಿಸಿದ್ದಾರೆ. ಇನ್ನುಳಿದ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದು, ತನಿಖೆ ಮುಂದುವರಿದಿದೆ.

ಕಠಿಣ ಕ್ರಮಕ್ಕೆ ರಾಜ್ಯಸಭಾ ಸದಸ್ಯ ಸುಜೀತ್ ಕುಮಾರ್ ಒತ್ತಾಯ

ಜಂಕ್ ಫುಡ್ ಸೇವನೆ ಭಾರಿ ಪ್ರಮಾಣದಲ್ಲಿ ಏರಿಕೆ

ದೆಹಲಿ: ಜಂಕ್ ಫುಡ್ ಸೇವನೆ ಪ್ರಮಾಣವು ಕೆಲವು ವರ್ಷಗಳಿಂದ ಹಲವು ಪಟ್ಟು ಹೆಚ್ಚಾಗಿದೆ. ಇಂತಹ ಆಹಾರಗಳಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ಸರಕಾರವು ಬಿಗಿಗೊಳಿಸಬೇಕು ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಸುಜೀತ್ ಕುಮಾರ್ ಒತ್ತಾಯಿಸಿದ್ದಾರೆ.

ಸದನದಲ್ಲಿ ಶೂನ್ಯ ಅವಧಿಯಲ್ಲಿ ಈ ವಿಚಾರ ಪ್ರಸ್ತಾಪಿಸಿದ ಅವರು, ಸಕ್ಕರೆ, ಉಪ್ಪು ಹಾಗೂ ಕೊಬ್ಬಿನ ಪ್ರಮಾಣ ಅಧಿಕವಾಗಿದ್ದರೂ, ಕಡಿಮೆ ಪೌಷ್ಠಿಕಾಂಶ ಹೊಂದಿರುವ ಜಂಕ್ ಫುಡ್ ಸೇವನೆ ಆತಂಕಕಾರಿಯಾಗಿ ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಘಟನೆಯ (ಡಬ್ಲ್ಯುಎಚ್‌ಒ) 2023ರ ವರದಿಯನ್ನು ಉಲ್ಲೇಖಿಸಿರುವ ಅವರು, 2006ರಿಂದ 2019ರ ಅವಧಿಯಲ್ಲಿ ಪೊಟ್ಟಣಗಳಲ್ಲಿ ದೊರೆಯುವ ಜಂಕ್ ಫುಡ್ ಸೇವನೆ ಪ್ರಮಾಣ 40 ಪಟ್ಟು ಹೆಚ್ಚಾಗಿದೆ. ಜಂಕ್ ಫುಡ್ ಸೇವನೆಯ ಏರಿಕೆಯು ದೇಶದಲ್ಲಿ ಸಾಂಕ್ರಾಮಿಕವಲ್ಲದ ಕಾಯಿಲೆಗಳ ಹೆಚ್ಚಳಕ್ಕೆ ಕಾರಣವಾಗಬಹುದು. 1990ರಲ್ಲಿ ಇಂತಹ ಕಾಯಿಲೆಗಳಿಂದ ಮೃತಪಟ್ಟವರ ಪ್ರಮಾಣವು ಶೇ.37.9ರಿಂದ 2016ರ ಹೊತ್ತಿಗೆ ಶೇ.61.8ಕ್ಕೆ ಏರಿಕೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಉತ್ತಮ ಪದಾರ್ಥಗಳಿಂದ ತಯಾರಿಸಿ ಗುಣಮಟ್ಟದ ಆಹಾರ ಉತ್ಪನ್ನಗಳನ್ನು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಾರಾಟ ಮಾಡುವ ಬ್ರಾಂಡ್‌ಗಳೇ ಭಾರತದಲ್ಲಿ ಅಗ್ಗದ ಉತ್ಪನ್ನಗಳನ್ನು ಬಿಕರಿ ಮಾಡುತ್ತಿವೆ. ನಮ್ಮ ನೀತಿ ನಿಯಮಗಳಲ್ಲಿನ ಲೋಪದೋಷಗಳ ಲಾಭ ಪಡೆಯುತ್ತಿರುವ ಇಂತಹ ಬ್ರಾಂಡ್‌ಗಳು, ಜನರ ಆರೋಗ್ಯಕ್ಕಿಂತಲೂ ಲಾಭ ಗಳಿಸುವುದಕ್ಕೆ ಒತ್ತು ನೀಡುತ್ತಿವೆ. ಸರಕಾರವು, ನಿಯಮಗಳನ್ನು ಬಿಗಿಗೊಳಿಸಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಭಾರತೀಯ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರವು ಕಠಿಣ ಕ್ರಮಕ್ಕೆ ಮುಂದಾಗಬೇಕು. ಜಂಕ್ ಫುಡ್‌ಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದನ್ನು ಪರಿಗಣಿಸಬೇಕು. ಯಾವೆಲ್ಲ ಪದಾರ್ಥಗಳನ್ನು ಬಳಸಲಾಗಿದೆ ಎಂಬುದನ್ನು ಪೊಟ್ಟಣಗಳ ಮೇಲೆ ಸ್ಪಷ್ಟವಾಗಿ ಕಾಣುವಂತೆ ನಮೂದಿಸುವುದನ್ನು ಕಡ್ಡಾಯಗೊಳಿಸಬೇಕು.
-ಸುಜೀತ್ ಕುಮಾರ್ ರಾಜ್ಯಸಭಾ ಸದಸ್ಯ

- ಜಾಹೀರಾತುಗಳು ಮಕ್ಕಳನ್ನು ಗುರಿಯಾಗಿಸುತ್ತಿವೆ. ಅದರಂತೆ ಮಕ್ಕಳೂ ಜಂಕ್ ಫುಡ್ ವ್ಯಸನಿಗಳಾಗುತ್ತಿರುವುದು ಆಘಾತಕಾರಿ
- ಜನಸಂಖ್ಯೆಯ ಶೇ.41ರಷ್ಟು ಮಕ್ಕಳೇ ಇದ್ದಾರೆ. ಮಕ್ಕಳು ಅನಾರೋಗ್ಯಪೀಡಿತ ನಾಗರಿಕರಾಗಿ ಬೆಳೆಯುವುದು ಅಪಾಯಕಾರಿ

ಶೇ.56ರಷ್ಟು ರೋಗಗಳು ಕೆಟ್ಟ ಆಹಾರ ಪದ್ಧತಿಯಿಂದ ಕಾಣಿಕೊಳ್ಳುತ್ತಿವೆ: ಏಮ್ಸ್ ವೈದ್ಯರು

ಭಾರತೀಯರಿಂದ ಅತಿ ಹೆಚ್ಚು ಆಹಾರ ಸೇವನೆ

ದೆಹಲಿ: ದೇಶದಲ್ಲಿ ಬಹುತೇಕ ಜನರು ಪೌಷ್ಟಿಕಾಂಶಯುಕ್ತ ಆಹಾರ ಸೇವನೆಗೆ ಗಮನ ಕೊಡದೇ ಹೆಚ್ಚೆಚ್ಚು ಆಹಾರವನ್ನು ಸೇವಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಭಾರತೀಯರಲ್ಲಿ ಶೇ.56 ರಷ್ಟು ರೋಗಗಳು ಕೆಟ್ಟ ಆಹಾರ ಪದ್ಧತಿಯಿಂದಲೇ ಕಾಣಿಸಿಕೊಳ್ಳುತ್ತಿವೆ ಎಂದು ದೆಹಲಿಯ ಏಮ್ಸ್ ವೈದ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

ಏಮ್ಸ್‌ನ ಮುಖ್ಯ ಆಹಾರತಜ್ಞೆ ಪರಮೀತ್ ಕೌರ್ ಅವರು ಸ್ಥೂಲಕಾಯತೆಯ ಪರಿಣಾಮದ ಬಗೆಗಿನ ಮಾಧ್ಯಮ ಸಂವಾದದಲ್ಲಿ ಮಾತನಾಡಿ, ಹೆಚ್ಚುತ್ತಿರುವ ಸ್ಥೂಲಕಾಯವು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಕ್ಯಾನ್ಸರ್‌ಗೂ ಪ್ರಮುಖ ಕಾರಣವಾಗಿ ಬದಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮುಂದುವರಿದ ಹಾಗೂ ಇತರ ಕೆಲ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತೀಯರು ಅತಿ ಹೆಚ್ಚು ಆಹಾರ ಸೇವಿಸುತ್ತಾರೆ. ಅಗತ್ಯ ಇಲ್ಲದಿದ್ದರೂ ತಿನ್ನುತ್ತಾರೆ. ಅದರಲ್ಲೂ ಬಹುತೇಕರು ಹೀಗೆ ತಿನ್ನುವಾಗ ಸಮತೋಲಿತ ಆಹಾರಕ್ಕೆ ಗಮನ ಕೊಡುವುದಿಲ್ಲ ಎಂದು ಹೇಳಿದ್ದಾರೆ.

ಧಾನ್ಯಗಳು, ಸೊಪ್ಪು, ತರಕಾರಿ, ಹಣ್ಣನ್ನು ಆಹಾರವಾಗಿ ಬಳಸುವವರ ಹಾಗೂ ಸಮರ್ಪಕವಾಗಿ ಪ್ರೊಟೀನ್ ಬಳಸುವ ಭಾರತೀಯರ ಪ್ರಮಾಣ ಇತ್ತೀಚೆಗೆ ತೀರಾ ಕಡಿಮೆಯಾಗುತ್ತಿದೆ. ಇದರಿಂದ ಭಾರತೀಯರಲ್ಲಿ ಶೇ.56 ರಷ್ಟು ರೋಗಗಳು ಕೆಟ್ಟ ಆಹಾರ ಪದ್ಧತಿಯಿಂದಲೇ ಕಾಣಿಸಿಕೊಳ್ಳುತ್ತಿವೆ ಎಂದು ಹೇಳಿದ್ದಾರೆ.

ಕರ್ನಾಟಕ ವೈಭವ ಸಮಾರಂಭದಲ್ಲಿ ಉಪ ರಾಷ್ಟ್ರಪತಿ ಧನಕರ್ ಕರೆ

ಭಾರತೀಯ ಸಂಸ್ಕೃತಿ ಉಳಿಸಿ, ಬೆಳೆಸಿ

ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ ನಡೆದ ಕರ್ನಾಟಕ ವೈಭವ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವದ ಮೂರನೇ ಆವೃತ್ತಿಯನ್ನು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ವಚನಾನಂದ ಸ್ವಾಮೀಜಿ ಇದ್ದರು.

ಹಾವೇರಿ: ನಾವೆಲ್ಲರೂ ಭಾರತೀಯರು. ಭಾರತೀಯತೆ, ರಾಷ್ಟ್ರವಾದ ನಮ್ಮ ಪ್ರೇಮ. ರಾಷ್ಟ್ರವಾದ ಗಂಗಾನದಿಯಂತೆ ಪವಿತ್ರ. ರಾಷ್ಟ್ರವಾದದಲ್ಲಿ ಎಲ್ಲ ಸಮಾಜಗಳೂ ಇವೆ. 5 ಸಾವಿರ ವರ್ಷಗಳಷ್ಟು ಹಳೆಯ ಸಂಸ್ಕೃತಿ ನಮ್ಮದು. ಇಂತಹ ಐತಿಹಾಸಿಕ ಸಂಸ್ಕೃತಿ ಉಳಿಸುವುದು ನಮ್ಮ ಕರ್ತವ್ಯ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಕರೆ ನೀಡಿದ್ದಾರೆ.

ರಾಣೆಬೆನ್ನೂರಿನಲ್ಲಿ ಶುಕ್ರವಾರ ಕರ್ನಾಟಕ ವೈಭವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಅರ್ಥವ್ಯವಸ್ಥೆಯಲ್ಲಿ ಭಾರತ ಇಂದು ಜಗತ್ತಿನ ಐದನೇ ಬಲಿಷ್ಠ ರಾಷ್ಟ್ರ. ಭವಿಷ್ಯದಲ್ಲಿ ಮೂರನೇ ಪ್ರಬಲ ದೇಶವಾಗಲಿದೆ. ಜಗತ್ತು ಭಾರತದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಿದೆ ಎಂದರು.

ಕಾಶ್ಮೀರದಲ್ಲಿ ಅಭಿವೃದ್ಧಿ: 370ನೇ ವಿಧಿ ರದ್ದಾದ ನಂತರ ಕಾಶ್ಮೀರದಲ್ಲಿ ಅಭಿವೃದ್ಧಿ ಕಾಣಿಸುತ್ತಿದೆ. ಎರಡು ಕೋಟಿ ಪ್ರವಾಸಿಗರು ಅಲ್ಲಿಗೆ ಭೇಟಿ ನೀಡಿದ್ದಾರೆ. ದೇಶದ ಕೊಡುಗೆಯಲ್ಲಿ ಕಾಶ್ಮೀರದ ಪಾಲೂ ಇದೆ. ರಾಷ್ಟ್ರೀಯ ಭಾವನೆ ಎಲ್ಲರಲ್ಲೂ ಮೂಡಬೇಕು. 10 ವರ್ಷಗಳ ಹಿಂದೆ ಭಾರತ ನಿರಾಶೆಯಿಂದ ಕೂಡಿದ ವ್ಯವಸ್ಥೆ ಆಗಿತ್ತು. ಈಗ ಸರಕಾರದ ಸಕಾರಾತ್ಮಕ ಕ್ರಮಗಳಿಂದ ಅಭಿವೃದ್ಧಿಯತ್ತ ಸಾಗಿದೆ ಎಂದರು.

ಜಗತ್ತಿನಲ್ಲೇ ಹೂಡಿಕೆ ಮತ್ತು ಅವಕಾಶಗಳಿಗೆ ಭಾರತ ಅತ್ಯುತ್ತಮವಾದ ದೇಶ. ಷಡ್ಯಂತ್ರ ಮಾಡುವವರಿಗೆ ವಿದೇಶಿ ಕಠಿಣ ಶಾಸನಗಳ ಮೂಲಕ ಕೇಂದ್ರ ಸರಕಾರ ಎಚ್ಚರಿಕೆ ಕೊಟ್ಟಿದೆ. ಭಾರತದಲ್ಲಿ ಪ್ರಸ್ತುತ ದೊಡ್ಡ ಯಜ್ಞ ನಡೆಯುತ್ತಿದೆ. ವಿಕಸಿತ ಭಾರತ ನಮ್ಮ ಕನಸಲ್ಲ, ಲಕ್ಷ್ಯ. ಇದು ನಿಶ್ಚಿತ. ಯಾರೂ ತಡೆಯಲಾಗುವುದಿಲ್ಲ. 2040ರೊಳಗೆ ಭಾರತ ವಿಕಸಿತ ಭಾರತ ಆಗುತ್ತದೆ. ಅದಕ್ಕೂ ಮುಂಚೆಯೇ ಆಗಬಹುದು.
-ಜಗದೀಪ್ ಧನಕರ್, ಉಪ ರಾಷ್ಟ್ರಪತಿ

ಗ್ಯಾರಂಟಿ: ವಿಶ್ವಸಂಸ್ಥೆ ಅಧಿಕಾರಿಯ ಮೆಚ್ಚುಗೆ

ಬೆಂಗಳೂರು: ಮಹಿಳಾ ಸಬಲೀಕರಣಕ್ಕೆ ರಾಜ್ಯ ಸರಕಾರವು ಕೈಗೊಂಡಿರುವ ವಿವಿಧ ಕ್ರಮಗಳು ಮತ್ತು ಯೋಜನೆಗಳ ಬಗ್ಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ನಗರಕ್ಕೆ ಭೇಟಿ ನೀಡಿದ್ದ ಅವರು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ರಾಜ್ಯ ಸರಕಾರದ ಕ್ರಮಗಳ ಬಗ್ಗೆ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಒಂದು ರಾಜ್ಯ, ಹಲವು ಜಗತ್ತು' ಕುರಿತಾದ ಪುಸ್ತಕವನ್ನು ಫಿಲೆಮನ್ ಅವರಿಗೆ ಉಡುಗೊರೆಯಾಗಿ ನೀಡಿದರು.

ಮಹಿಳಾ ಸಬಲೀಕರಣದಲ್ಲಿ ಗ್ಯಾರಂಟಿಗಳಾದ ಗೃಹಲಕ್ಷ್ಮಿ, ಶಕ್ತಿ ಮತ್ತು ಗೃಹಜ್ಯೋತಿ ಯೋಜನೆಗಳು ಹೇಗೆ ನೆರವಾಗುತ್ತಿವೆ ಎಂಬುದನ್ನು ಶಾಲಿನಿ ರಜನೀಶ್ ಅವರು ವಿವರಿಸಿದರು. ಫಿಲೆಮನ್ ಅವರು ರಾಜ್ಯದ ನವೀಕರಿಸಬಹುದಾದ ಮೂಲದ ಇಂಧನ ಉತ್ಪಾದನಾ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಎಂದು ಸರಕಾರದ ಪ್ರಕಟಣೆ ತಿಳಿಸಿದೆ.

ಮಾಹಿತಿ ತಂತ್ರಜ್ಞಾನ, ತಂತ್ರಾಂಶ ಅಭಿವೃದ್ಧಿ, ಕೃತಕಬುದ್ಧಿಮತ್ತೆ ಅಭಿವೃದ್ಧಿ ಕಾರ್ಯಗಳ ಉತ್ತೇಜನಕ್ಕೆ ರಾಜ್ಯ ಸರಕಾರದ ಕ್ರಮಗಳ ಬಗ್ಗೆ ಅವರು ಮಾಹಿತಿ ಪಡೆದುಕೊಂಡರು ಎಂದು ತಿಳಿಸಿದೆ.

ಎಸ್‌ಡಿಎಂ ಶಿಕ್ಷಣ ಸಂಸ್ಥೆಗೆ ರಾಷ್ಟಮಟ್ಟದ ಮನ್ನಣೆ

ಬೆಂಗಳೂರು: ಎಸ್‌ಡಿಎಂ (ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್) ಸಂಸ್ಥೆ ಬಿಎನ್‌ವೈಎಸ್ (ಬ್ಯಾಚುಲರ್ ಆಫ್ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್) ಕೋರ್ಸ್ ಕೇಂದ್ರ ನಿಯಂತ್ರಣದ ಹೋರಾಟದಲ್ಲಿ ಯಶಸ್ಸು ಗಳಿಸಿದೆ. 2025ರ ಜನವರಿಯಲ್ಲಿ ಧರ್ಮಸ್ಥಳದಲ್ಲಿ ನಡೆದ ಪ್ರಮುಖ ಸಭೆಯ ನಂತರ, ನವದೆಹಲಿಯ ನಿರ್ಮಾಣ ಭವನದಲ್ಲಿ 2025ರ ಫೆಬ್ರವರಿ 4ರಂದು ಎರಡನೆಯ ಪ್ರಮುಖ ಸಭೆ ಆಯೋಜಿಸಿತ್ತು . ಸಭೆಯಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಕ್ಕೆ ಕೇಂದ್ರ ನಿಯಂತ್ರಣದ ನಿಯಮ ಜಾರಿಗೊಳಿಸುವಂತೆ ಕೋರಿ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಮನವಿ ಮಾಡಿದ್ದು, ಕೇಂದ್ರ ಆಯುಷ್ ಮಂಡಲ ಸಂಪೂರ್ಣ ಸಮ್ಮತಿ ಸೂಚಿಸಿದೆ.

ಸಭೆಯ ಅಧ್ಯಕ್ಷತೆಯನ್ನು ಆಯುಷ್ ಮಂತ್ರಿ ಪ್ರತಾಪರಾವ್ ಗಣಪತರಾವ್ ಜಾಧವ್ ವಹಿಸಿದ್ದರು. ಆಯುಷ್ ಕಾರ್ಯದರ್ಶಿ, ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗದ ಸದಸ್ಯರು, ಪ್ರಮುಖ ಮುಖಂಡರು ಅಲ್ಲದೆ ರಾಜ್ಯಸಭಾ ಸದಸ್ಯ ಮತ್ತು ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಭಾಗವಹಿಸಿದ್ದರು.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ಜೀತ್ ಅದಾನಿ-ದಿವಾ ಶಾ

ಅದಾನಿ ಪುತ್ರನ ಸರಳ ವಿವಾಹ

ಅಹಮದಾಬಾದ್: ಉದ್ಯಮಿ ಗೌತಮ್ ಅದಾನಿ ಅವರ ಕಿರಿಯ ಪುತ್ರ ಜೀತ್ ಅದಾನಿ ಮತ್ತು ದಿವಾ ಶಾ ಅವರ ವಿವಾಹ ಸಮಾರಂಭವು ಶುಕ್ರವಾರ ಸರಳ, ಸಾಂಪ್ರದಾಯಿಕವಾಗಿ ನೆರವೇರಿತು. ಕುಟುಂಬಸ್ಥರು, ಸ್ನೇಹಿತರು ಹಾಗೂ ಆಪ್ತರು ಮಾತ್ರ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಾಂತಿಗ್ರಾಮದಲ್ಲಿ ಜೈನ ಸಂಪ್ರದಾಯದಂತೆ ವಿವಾಹ ಕಾರ್ಯಕ್ರಮವು ನೆರವೇರಿತು. ಯಾವುದೇ ಸೆಲೆಬ್ರಿಟಿಗೆ ಆಹ್ವಾನ ಇರಲಿಲ್ಲ. ನವಜೋಡಿಯ ಚಿತ್ರ ಹಂಚಿಕೊಂಡಿರುವ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ, 'ಸರ್ವಶಕ್ತ ದೇವರ ಆಶೀರ್ವಾದದೊಂದಿಗೆ ಜೀತ್ ಮತ್ತು ದಿವಾ ಇಂದು ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದಾರೆ' ಎಂದು ತಿಳಿಸಿದ್ದಾರೆ.

ಏಷ್ಯಾದ ಎರಡನೇ ಶ್ರೀಮಂತ ವ್ಯಕ್ತಿ ಆಗಿರುವ ಅದಾನಿಗೆ ಇಬ್ಬರು ಮಕ್ಕಳು. ಕರಣ್ ಮತ್ತು ಜೀತ್. ಕರಣ್ ಅದಾನಿ ಅವರು ಪರಿಧಿ ಅವರನ್ನು ವರಿಸಿದ್ದರು. ಜೀತ್ ಅದಾನಿ ಏರ್‌ಪೋರ್ಟ್ಸ್‌ನಲ್ಲಿ ನಿರ್ದೇಶಕರಾಗಿದ್ದಾರೆ. ದಿವಾ, ವಜ್ರದ ವ್ಯಾಪಾರಿ ಜೈಮಿನ್ ಶಾ ಅವರ ಪುತ್ರಿಯಾಗಿದ್ದಾರೆ. ಆಕೆ 'ಸಿ ದಿನೇಶ್ ಆ್ಯಂಡ್ ಕೊ ಪ್ರೈ. ಲಿಮಿಟೆಡ್'ನ ಸಹ ಮಾಲಕಿ ಆಗಿದ್ದಾರೆ.

₹10,000 ಕೋಟಿ ದೇಣಿಗೆ: ವಿವಾಹವನ್ನು ಸರಳವಾಗಿ ನಡೆಸುವ ಮೂಲಕ ಆರೋಗ್ಯ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಮೂಲಸೌಕರ್ಯ ಸೇರಿದಂತೆ ವಿವಿಧ ಸಾಮಾಜಿಕ ಸೇವೆಗಳಿಗಾಗಿ ಅದಾನಿ, ಬರೋಬ್ಬರಿ

₹10,000 ಕೋಟಿ ದೇಣಿಗೆಯಾಗಿ ನೀಡಿದ್ದಾರೆ. ಈ ದೇಣಿಗೆಯು ಕೈಗೆಟುಕುವ ದರದಲ್ಲಿ ವಿಶ್ವದರ್ಜೆಯ ಸೌಲಭ್ಯಗಳುಳ್ಳ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಉನ್ನತ ಶ್ರೇಣಿಯ ಕೆ-12 ಶಾಲೆಗಳು, ಜಾಗತಿಕ ಸುಧಾರಿತ ಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಮತ್ತು ಉದ್ಯೋಗಾವಕಾಶಗಳನ್ನು ಒಳಗೊಂಡಿರಲಿವೆ.

3 ವರ್ಷದಲ್ಲಿ 1,366 ಬಾಲಗರ್ಭಿಣಿಯರು!

ಕೊಪ್ಪಳ, ಬೆಂಗಳೂರಲ್ಲಿ ಅಧಿಕ । ಕೌಟುಂಬಿಕ ಸಮಸ್ಯೆ ಸೇರಿ ಹಲವು ಕಾರಣ

ಬೆಂಗಳೂರು: ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ 1,366 ಬಾಲಕಿಯರು ಗರ್ಭಿಣಿಯರಾಗಿದ್ದಾರೆ. ಕೊಪ್ಪಳ, ಬೆಂಗಳೂರು, ಚಿಕ್ಕಮಗಳೂರು, ಶಿವಮೊಗ್ಗ, ಗದಗ, ಮತ್ತು ಕೋಲಾರದಲ್ಲಿ ಅಧಿಕ ಬಾಲಗರ್ಭಿಣಿ ಪ್ರಕರಣಗಳು ವರದಿಯಾಗುತ್ತಿವೆ ಎಂಬುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೀಡಿರುವ ಅಂಕಿಅಂಶಗಳಿಂದ ಬಹಿರಂಗವಾಗಿದೆ.

2021-22ರಲ್ಲಿ 252, 2022-23ರಲ್ಲಿ 405 ಮತ್ತು 2023-24ರಲ್ಲಿ 709 ಸೇರಿ ಒಟ್ಟು 1,366 ಬಾಲಗರ್ಭಿಣಿ ಪ್ರಕರಣಗಳು ದಾಖಲಾಗಿವೆ. ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ 2023ರಲ್ಲಿ ಅಧಿಕ ಬಾಲಕಿಯರು ಗರ್ಭಿಣಿಯಾಗಿದ್ದಾರೆ.

ಕೌಟುಂಬಿಕ ಸಮಸ್ಯೆ, ಅಪ್ರಾಪ್ತ ವಯಸ್ಸಿನ ಮಕ್ಕಳಿಂದ ಅತಿಯಾಗಿ ಜಾಲತಾಣ ಬಳಕೆ, ಕೆಲ ಸಮುದಾಯಗಳಲ್ಲಿ ಆಚರಣೆಯಲ್ಲಿರುವ ಪದ್ಧತಿ, ಹದಿಹರೆಯದ ಮಕ್ಕಳಲ್ಲಿ ಹೆಚ್ಚುತ್ತಿರುವ ಪ್ರೀತಿ-ಪ್ರೇಮ, ಕುಟುಂಬದ ಸದಸ್ಯರ ಒತ್ತಡ, ಏಕ ಪೋಷಕತ್ವ, ಎಸ್‌ಎಸ್‌ಎಲ್‌ಸಿ ಮುಗಿಯುತ್ತಿದ್ದಂತೆ ಹೆಣ್ಣು ಮಕ್ಕಳಿಗೆ ಮದುವೆ ಮಾಡುತ್ತಿರುವುದೂ ಸೇರಿ ಇತರೆ ಕಾರಣಗಳಿಂದ ಬಾಲ್ಯವಿವಾಹಗಳು ಹೆಚ್ಚಾಗುತ್ತಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಹೇಗೆ ತಡೆಯಬಹುದು?: ರಾಜ್ಯದಲ್ಲಿ ಬಾಲ್ಯ ವಿವಾಹದಂತಹ ಪ್ರಕರಣಗಳಿಗೆ ಅಂಕುಶ ಹಾಕಲು ಸಾಕಷ್ಟು ಪ್ರಯತ್ನಿಸುತ್ತಿದ್ದರೂ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪೋಕ್ಸೊ ಕ್ರಮಗಳು ಇನ್ನಷ್ಟು ಬಿಗಿಯಾಗಬೇಕಿದೆ. ಬಾಲಗರ್ಭಿಣಿ ಪ್ರಕರಣಗಳು ಗೊತ್ತಾಗುತ್ತಿದ್ದಂತೆ ಅಂಗನವಾಡಿ, ಆಶಾ ಕಾರ್ಯಕರ್ತರು, ಆರೋಗ್ಯ ಇಲಾಖೆಯ ಅಧಿಕಾರಿಗಳು ಪೊಲೀಸ್ ಠಾಣೆಗೆ ದೂರು ನೀಡಬೇಕು. ತಾಯಿ ಕಾರ್ಡ್ ಕೊಡುವಾಗ ವಯಸ್ಸು ಗಮನಿಸಬೇಕು. ಅಪ್ರಾಪ್ತ ವಯಸ್ಸಿನವರು ಗರ್ಭವತಿಯಾದ ಬಗ್ಗೆ ನೋಂದಣಿ ಮಾಡುವ ಸಂದರ್ಭದಲ್ಲಿ ವಯಸ್ಸಿನ ನಿಖರತೆ ದೃಢಪಡಿಸಿಕೊಳ್ಳಬೇಕು. ಶಾಲಾ ದಾಖಲಾತಿ ಪ್ರಮಾಣ ಪತ್ರ ಅಥವಾ ಅಂಕಪಟ್ಟಿ ಹಾಗೂ ಅನಕ್ಷರಸ್ಥರಾದಲ್ಲಿ ವೈದ್ಯಕೀಯ ಮೂಲಗಳಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳುವಂತಾಗಬೇಕು.



ಜಿಲ್ಲಾವಾರು ಬಾಲ ಗರ್ಭಿಣಿ ವಿವರ

ಕೊಪ್ಪಳ 154, ಬೆಂಗಳೂರು 129, ಚಿಕ್ಕಮಗಳೂರು 118, ಶಿವಮೊಗ್ಗ 111, ಗದಗ 72, ಕೋಲಾರ 81, ತುಮಕೂರು 59, ಉಡುಪಿ 59, ಹಾವೇರಿ 55, ಚಿತ್ರದುರ್ಗ 54, ವಿಜಯನಗರ 49, ದ.ಕನ್ನಡ 48, ರಾಮನಗರ 48, ಉತ್ತರ ಕನ್ನಡ 43, ಚಾಮರಾಜನಗರ 40, ಚಿಕ್ಕಬಳ್ಳಾಪುರ 39, ಮೈಸೂರು 36, ಮಂಡ್ಯ 30, ದಾವಣಗೆರೆ 24, ಬೆಳಗಾವಿ 20, ಬಾಗಲಕೋಟೆ 18, ಬಳ್ಳಾರಿ 14, ಬೀದರ್ 14, ಬೆಂ. ಗ್ರಾಮಾಂತರ 11, ಕೊಡಗು 9, ವಿಜಯಪುರ 8, ರಾಯಚೂರು 7, ಯಾದಗಿರಿ 6, ಹಾಸನ 5, ಧಾರವಾಡ 4, ಕಲಬುರಗಿ 1.

ದಿಲ್ಲಿ ಸುಲ್ತಾನ ಯಾರು? ಕೇಜ್ರಿವಾಲ್‌ಗೆ ಅಗ್ನಿಪರೀಕ್ಷೆ

ದೆಹಲಿ ಚುನಾವಣೆ: ಇಂದು ಫಲಿತಾಂಶ

ದೆಹಲಿ: ಫೆ.5ರಂದು ನಡೆದ ದೆಹಲಿ ವಿಧಾನಸಭಾ ಚುನಾವಣೆಯ ಮತಗಳ ಎಣಿಕೆ ಶನಿವಾರ ಬೆಳಗ್ಗೆ 8ಗಂಟೆಗೆ ಆರಂಭವಾಗಲಿದ್ದು, ಮಧ್ಯಾಹ್ನದೊಳಗೆ ಫಲಿತಾಂಶದ ಚಿತ್ರಣ ಸ್ಪಷ್ಟವಾಗಲಿದೆ.

ಆಡಳಿತಾರೂಢ ಆಮ್ ಆದ್ಮಿ ಪಕ್ಷದ ವರಿಷ್ಠ , ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಹಾಗೂ ಬಿಜೆಪಿಗೆ ಪ್ರತಿಷ್ಠೆಯಾಗಿರುವ ಈ ಚುನಾವಣೆಯಲ್ಲಿ ಕಮಲ ಪಕ್ಷ ಗೆಲ್ಲಲಿದೆ ಎಂದು ಬಹುತೇಕ ಮತದಾನೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

70 ಕ್ಷೇತ್ರಗಳ ಮತಗಳ ಎಣಿಕೆಗೆ ಚುನಾವಣಾ ಆಯೋಗ ಸಕಲ ಸಿದ್ಧತೆ ಕೈಗೊಂಡಿದೆ. ಗಂಟೆಗೊಮ್ಮೆ ಮತ ಎಣಿಕೆಯ ಅಂಕಿ-ಅಂಶಗಳನ್ನು ಪ್ರಕಟಿಸಲಿದೆ. ಸಮೀಕ್ಷೆಗಳ ಪ್ರಕಾರ ಬಿಜೆಪಿ 36 ಕ್ಷೇತ್ರಗಳಲ್ಲಿ ಗೆದ್ದು ಮೂರನೇ ಬಾರಿಗೆ ಅಧಿಕಾರದ ಕನಸು ಕಾಣುತ್ತಿರುವ ಕೇಜ್ರಿವಾಲ್‌ಗೆ ಆಘಾತ ನೀಡಲಿದೆ. ಆದರೆ ಆಪ್ ಇದನ್ನು ಅಲ್ಲಗಳೆದಿದ್ದು, ತನಗೆ ಹ್ಯಾಟ್ರಿಕ್ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದೆ. ಕಳೆದ ಚುನಾವಣೆಯಲ್ಲಿ ಆಪ್ 62 ಕ್ಷೇತ್ರಗಳಲ್ಲಿ ಗೆದ್ದಿದ್ದರೆ, ಬಿಜೆಪಿ ಕೇವಲ ಎಂಟು ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಕಾಂಗ್ರೆಸ್ ಶೂನ್ಯ ಸಾಧನೆ ಮಾಡಿತ್ತು.

ನೆಲಬಾಂಬ್ ಮೇಲೆ ಕಾಲಿಟ್ಟು ಮಡಿದ 5 ಪಾಕ್ ಉಗ್ರರು

ಪೂಂಚ್: ಜಮ್ಮು-ಕಾಶ್ಮೀರ ಗಡಿಯಂಚಿನ ಪೂಂಚ್ ಜಿಲ್ಲೆಯ ಬಟ್ಟಲ್ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ನೆಲಬಾಂಬ್ ಮೇಲೆ ಕಾಲಿಟ್ಟಾಗ ಅದು ಸ್ಫೋಟಗೊಂಡಿದ್ದರಿಂದ ಐವರು ಪಾಕ್ ಉಗ್ರರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಿಂದ ಗಡಿದಾಟಿ ಕಳ್ಳಮಾರ್ಗದಲ್ಲಿ ಭಾರತ ಪ್ರವೇಶಿಸಲು ಯತ್ನಿಸುತ್ತಿದ್ದ ಉಗ್ರರಲ್ಲಿ ಒಬ್ಬ ಭಾರತದ ಸೇನೆ ಇರಿಸಿದ್ದ ನೆಲಬಾಂಬ್ ಮೇಲೆ ಕಾಲೂರಿದ್ದಾನೆ. ತಕ್ಷಣವೇ ಅದು ಸ್ಫೋಟಿಸಿದೆ.



ಹತರಾದ ಪಾಕ್ ಉಗ್ರರು ಬೆನ್ನ ಮೇಲಿನ ಚೀಲದಲ್ಲಿ 'ಐಇಡಿ'(ಸುಧಾರಿತ ಸ್ಫೋಟಕ) ಕೂಡಾ ಇರಿಸಿಕೊಂಡಿದ್ದರು. ನೆಲಬಾಂಬ್ ಸ್ಫೋಟದ ಬಳಿಕ ಐಇಡಿ ಸಹ ಸ್ಫೋಟಿಸಿದ್ದರಿಂದ ಉಗ್ರರ ದೇಹಗಳು ಛಿದ್ರವಾಗಿವೆ ಎಂದು ಬಿಎಸ್‌ಎಫ್ ಮೂಲಗಳು ತಿಳಿಸಿವೆ.

ಉಗ್ರರು ಭಾರತದೊಳಕ್ಕೆ ನುಸುಳುವ ಸಾಧ್ಯತೆ ಇರುವ ಕಡೆಗಳಲ್ಲಿ ಬಿಎಸ್‌ಎಫ್ ನೆಲಬಾಂಬ್‌ಗಳನ್ನು ಹುದುಗಿಸಿಡುತ್ತದೆ. ಕೆಲವೊಮ್ಮೆ ಮಳೆಯಿಂದ ಈ ನೆಲಬಾಂಬ್‌ಗಳು ಜಾರಿಕೊಂಡು ಬೇರೆಡೆ ಹೋಗಿರುತ್ತವೆ. ಅಂತಹುದೇ ಒಂದು ನೆಲಬಾಂಬ್ ಮೇಲೆ ಉಗ್ರ ಕಾಲಿಟ್ಟಿದ್ದಾನೆ ಎನಿಸುತ್ತದೆ ಎಂದು ಬಿಎಸ್‌ಎಫ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅವೈಜ್ಞಾನಿಕ ಪ್ರಸ್ತಾವನೆ ಕೈಬಿಡಲು ಜೈಭೀಮ್ ಜನಜಾಗೃತಿ ವೇದಿಕೆ ಆಗ್ರಹ

ಸ್ಥಳೀಯ ಸಂಸ್ಥೆಗಳ ಮೇಲ್ದರ್ಜೆ ಅವೈಜ್ಞಾನಿಕ

ಆನೇಕಲ್: ತಾಲೂಕಿನ 20 ಗ್ರಾಮ ಪಂಚಾಯಿತಿ, 3 ನಗರಸಭೆ, 5 ಪುರಸಭೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಮಾಡಿರುವ ಪ್ರಸ್ತಾವನೆಯು ಅವೈಜ್ಞಾನಿಕವಾಗಿದ್ದು ಈ ಕೂಡಲೇ ಕೈ ಬಿಡಬೇಕೆಂದು ಕರ್ನಾಟಕ ಜೈಭೀಮ್ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಡಾ. ವೈ. ಚಿನ್ನಪ್ಪ ಚಿಕ್ಕಹಾಗಡೆ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆನೇಕಲ್ ವಿಧಾನಸಭಾ ಕ್ಷೇತ್ರದ ದೊಮ್ಮಸಂದ್ರ-ಯಮರೆ-ಸರ್ಜಾಪುರ ಗ್ರಾಮ ಪಂಚಾಯಿತಿಗಳು, ಅತ್ತಿಬೆಲೆ ಪುರಸಭೆ, ನೆರಳೂರು, ಬಿದರಗುಪ್ಪೆ ಗ್ರಾಮ ಪಂಚಾಯಿತಿಗಳು ಹಾಗೂ ಆನೇಕಲ್ ಪುರಸಭೆ-ವಣಕನಹಳ್ಳಿ-ಸಮಂದೂರು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಒಟ್ಟಾರೆ 3 ನಗರಸಭೆಗಳನ್ನಾಗಿ ಉನ್ನತೀಕರಣಗೊಳಿಸುವುದು ಕರ್ಪೂರು-ಬ್ಯಾಗಡದೇನಹಳ್ಳಿ ಗ್ರಾ.ಪಂ., ಮುಗಳೂರು-ನೆರಿಗಾ ಗ್ರಾ.ಪಂ., ಬಳ್ಳೂರು-ಮಾಯಸಂದ್ರ-ಮರಸೂರು ಗ್ರಾ. ಮ ಪಂಚಾಯಿತಿ, ಹಂದೇನಹಳ್ಳಿ-ಬಿಲ್ಲಾಪುರ-ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಇಂಡ್ಲವಾಡಿ-ಹಾರಗದ್ದೆ ಗ್ರಾ. ಪಂ.ಗಳನ್ನು ಪುರಸಭೆಗಳನ್ನಾಗಿ ವಿಂಗಡಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಮತ್ತು ನಗರ ಜಿಪಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು,ತಾಪಂ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಗ್ರಾಪಂ ಗಳಿಗೆ ವರದಿ ಕೇಳಿರುವುದು ಗಮನಕ್ಕೆ ಬಂದಿದೆ ಎಂದರು.

ಹಲವು ಕ್ಷೇತ್ರಗಳು ರದ್ದು: ಮೇಲ್ದರ್ಜೆಗೆ ಏರಿಸುವುದರಿಂದ 515 ಗ್ರಾ.ಪಂ. 20 ತಾ.ಪಂ. 9 ಜಿ.ಪಂ ಕ್ಷೇತ್ರಗಳು ರದ್ದಾಗಲಿವೆ. ಮೀಸಲಾತಿಯಲಡಿ ಗೆದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಜಾತಿ, ಮಹಿಳೆಯರು ಸೇರಿದಂತೆ ಶೇ.60 ರಷ್ಟು ಮಂದಿಗೆ ಭಾರಿ ಅನ್ಯಾಯವಾಗಲಿದೆ.

ಕರ್ನಾಟಕ ಸರಕಾರವು 74ನೇ ಸಂವಿಧಾನಾತ್ಮಕ ತಿದ್ದುಪಡಿಯ ಅಧಿನಿಯಮದ ಪ್ರಕಾರ ಸ್ಥಳೀಯ ಸಂಸ್ಥೆಗಳನ್ನು ಜನಸಂಖ್ಯೆ ಮತ್ತು ಇತರ ಮಾನದಂಡಗಳ ಮೇಲೆ ಪಟ್ಟಣ ಪಂಚಾಯಿತಿ ರಚಿಸಲು 10,000 ದಿಂದ 20,000 ಜನಸಂಖ್ಯೆ, ಪುರಸಭೆಗೆ 20,000 ದಿಂದ 50,000 ಜನಸಂಖ್ಯೆ, ನಗರಸಭೆಗೆ 50,000 ದಿಂದ 05 ಲಕ್ಷ ಜನಸಂಖ್ಯೆ ಇರಬೇಕು ಅಲ್ಲದೇ ಒಂದು ಚದರ ಕಿ.ಮೀ ಪ್ರದೇಶದಲ್ಲಿ ಕನಿಷ್ಟ1500 ಜನರು ವಾಸವಾಗಿರಬೇಕು, ಶೇ.50 ರಷ್ಟು ಕೃಷಿಯೇತರ ಚಟುವಟಿಕೆಗಳು ಮತ್ತು ಶೇ.50 ರಷ್ಟು ಉದ್ಯೋಗದಾತರು ಇರಬೇಕೆಂದು ಕಾಯ್ದೆ ಹೇಳುತ್ತದೆ ಎಂದು ಚಿನ್ನಪ್ಪ ಚಿಕ್ಕಹಾಗಡೆ ಹೇಳಿದರು.

ಧನಬಲ, ತೋಳ್ಬಲ ಪಾರಮ್ಯ: ಗ್ರಾ.ಪಂ.ಗಳಲ್ಲಿ ಇದುವರೆವಿಗೂ ಪಕ್ಷಗಳ ಚಿಹ್ನೆ ಇಲ್ಲದೇ ಪಕ್ಷಾತೀತವಾಗಿ ಚುನಾವಣೆಗಳು ನಡೆಯುತ್ತಿತ್ತು. ಈಗ ನಗರಸಭೆ, ಪುರಸಭೆಗಳು ಅಸ್ತಿತ್ವಕ್ಕೆ ಬಂದರೆ ಪಕ್ಷಗಳ ಚಿಹ್ನೆ ಮೇಲೆ ಚುನಾವಣೆಗಳು ನಡೆಯುವುದರಿಂದ ರಾಜಕೀಯ ಶಕ್ತಿಗಳು ತಲೆಯೆತ್ತಲಿವೆ. ಇದರಿಂದ ಸಾಕಷ್ಟು ಮಂದಿ ಅರ್ಹರು, ಬಡವರು, ಪರಿಶಿಷ್ಟ ಜಾತಿ , ವರ್ಗ, ಹಿಂದುಳಿದ ಜಾತಿ ಮತ್ತು ಮಹಿಳೆಯರು ಚುನಾಯಿತ ಸದಸ್ಯರಾಗುವುದು ತಪ್ಪಿ, ಹಣವಂತರಿಗೆ,ಬಲಾಢ್ಯರಿಗೆ ಅಧಿಕಾರ ಸಿಕ್ಕಂತಾಗುತ್ತದೆ ಎಂದು ಚಿನ್ನಪ್ಪ ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿ ಯಲ್ಲಿ ಕರ್ನಾಟಕ ಜೈ ಭೀಮ್ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಡಾ. ವೈ. ಚಿನ್ನಪ್ಪ ಚಿಕ್ಕಹಾಗಡೆ ಮಾತನಾಡಿದರು.

ಸ್ಥಳೀಯ ಸಂಸ್ಥೆಗಳು ನಷ್ಟದಲ್ಲಿ

ಚಂದಾಪುರದ ಸಿ.ಆರ್.ವಿಜಯಕುಮಾರ್ ಮಾತನಾಡಿ, ಸುರಗಜಕ್ಕನಹಳ್ಳಿ, ಇಂಡ್ಲವಾಡಿ, ಬ್ಯಾಗಡದೇನಹಳ್ಳಿ, ವಣಕನಹಳ್ಳಿ, ಸಮಂದೂರು, ಕರ್ಪೂರು, ಮಾಯಸಂದ್ರ, ಮರಸೂರು, ಮುತ್ತಾನಲ್ಲೂರು, ಹಂದೇನಹಳ್ಳಿ ವ್ಯಾಪಿಯಲ್ಲಿ ಕೃಷಿ, ರೇಷ್ಮೆ, ತೋಟಗಾರಿಕೆ, ಹೈನುಗಾರಿಕೆ ಮುಂತಾದ ಉಪಕಸುಬುಗಳ ಮೂಲಕ ರೈತರು ಜೀವನ ನಡೆಸುತ್ತಿದ್ದಾರೆ. ಕೃಷಿಭೂಮಿಗಳಲ್ಲಿ ಸಣ್ಣಪುಟ್ಟ ತರಕಾರಿ, ಸೊಪ್ಪು ,ಹಣ್ಣುಗಳನ್ನು ಬೆಳೆದರೆ, ಕೆಲವೆಡೆ ಕೃಷಿ ಭೂಮಿಗಳಲ್ಲಿ ಸ್ವಂತಮನೆ, ರಸ್ತೆಬದಿಯಲ್ಲಿ ಬಾಡಿಗೆ ಕಟ್ಟಡ, ವಾಣಿಜ್ಯ ಮಳಿಗೆ, ಅಂಗಡಿ-ಮುಂಗಟ್ಟುಗಳನ್ನು ನಿರ್ಮಿಸಿದ್ದಾರೆ. ಭೂ ಪರಿವರ್ತನೆ ಆಗದ ಕಾರಣ ಸ್ಥಳೀಯ ಸಂಸ್ಥೆಗಳು ತೆರಿಗೆಯನ್ನು ವಿಧಿಸಲು ಸಾಧ್ಯವಾಗದೇ ನಷ್ಟ ದಲ್ಲಿದೆ ಎಂದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್ ಕುಮಾರಾಚಾರಿ, ರಾಜ್ಯ ಉಪಾಧ್ಯಕ್ಷ ಅತ್ತಿಬೆಲೆ ರವಿಕುಮಾರ್,ರಾಜ್ಯ ಖಜಾಂಚಿ ಕೆ. ಮಹೇಶ್ ಇದ್ದರು.

ವಿಜಯದ ಸಂಕೇತ ಹಿಡಿದು ವಾಪಸಾಗಿದ್ದೇವೆ: ಭಿನ್ನಬಣದ ನಾಯಕನ ಸ್ಪಷ್ಟನೆ । ವಿಜಯೇಂದ್ರ ವಿರೋಧಿಗಳ ಬೇಡಿಕೆಗೆ ವರಿಷ್ಠರ ಸ್ಪಂದನೆ

ದೆಹಲಿ ಭೇಟಿ ಫಲಪ್ರದವಾಗಿದೆ: ಶಾಸಕ ಬಸನಗೌಡ ಯತ್ನಾಳ

ವಿಜಯಪುರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆ ವಿಚಾರಕ್ಕೆ ದೆಹಲಿ ನಾಯಕರ ಭೇಟಿ ಬಳಿಕ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿಜಯಪುರದಲ್ಲಿ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.

ದೆಹಲಿಯಲ್ಲಿ ಯಾರೂ ನಮಗೆ ಭೇಟಿಯಾಗಿಲ್ಲ. ನಮ್ಮ ತಂಡಕ್ಕೆ ಭಯಂಕರ ಅವಮಾನ ಅಗಿದೆ ಎಂದು ಮಾಧ್ಯಮಗಳ ವರದಿ ಕುರಿತು ಯತ್ನಾಳ ವ್ಯಂಗ್ಯವಾಡಿ, ದೆಹಲಿ ಭೇಟಿ ಫಲಪ್ರದವಾಗಿದೆ. ನಮಗೆ ಅಪಮಾನ ಆಗಿಲ್ಲ. ವಿಜಯದ ಸಂಕೇತ ಹಿಡಿದು ವಾಪಸಾಗಿದ್ದೇವೆ. ಕೇಂದ್ರ ನಾಯಕರು ನಮಗೆ ಸ್ಪಂದಿಸಿದ್ದಾರೆ. ನಮ್ಮ ಭೇಟಿ ಬಗ್ಗೆ ಅಪಮಾನ ಮಾಡಿದರೆ ಖಂಡನೀಯ. ಯಾರ ಭೇಟಿ ಎಂಬುದು ಗುಪ್ತವಾಗಿಡುವಂತೆ ನಾಯಕರು ಹೇಳಿದ್ದಾರೆಂದು ಯತ್ನಾಳ ಹೇಳಿದರು.

ವಿಜಯೇಂದ್ರ ವಿರೋಧಿ ಬಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ, ವಿಜಯೆಂದ್ರ ಅನನುಭವಿ. ತಂದೆ ಹೆಸರು ಹೇಳಿಕೊಂಡು ಬರುತ್ತಿದ್ದಾನೆ. ಆತನಿಗೆ ನಯ-ವಿನಯ ಗೊತ್ತಿಲ್ಲ. ಪಕ್ಷ ಸಂಘಟನೆ ಬಗ್ಗೆ ಗೊತ್ತಿಲ್ಲ ಯಡಿಯೂರಪ್ಪ ಸಿಎಂ ಇದ್ದಾಗ ವಸೂಲಿ ಮಾಡಿಕೊಂಡು ಬಂದಿದ್ದಾನೆ ಎಂದು ಭಿನ್ನಬಣದ ನಾಯಕ ವ್ಯಂಗ್ಯವಾಡಿದರು.

ಭ್ರಷ್ಟ ಕುಟುಂಬದಿಂದ ಮುಕ್ತವಾಗಲಿ: ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಗೌರವ ಕೊಡುತ್ತಿದ್ದರು. ನಮ್ಮದು ಮೂರು ಬೇಡಿಕೆಗಳಿವೆ. ಬಿಜೆಪಿ ಕುಟುಂಬ ರಾಜಕಾರಣದಿಂದ ಬಿಜೆಪಿ ಮುಕ್ತವಾಗಬೇಕು, ಭ್ರಷ್ಟ ಕುಟುಂಬದಿಂದ ಬಿಜೆಪಿ ಮುಕ್ತ ಹಾಗೂ ಹಿಂದುತ್ವ ಆಧಾರ ಮೇಲೆ ರಾಜ್ಯದಲ್ಲಿ ಬಿಜೆಪಿ ಬೆಳೆಯಬೇಕು ಎಂಬುದೇ ನಮ್ಮ ಬೇಡಿಕೆಗಳು ಎಂದು ಯತ್ನಾಳ್ ಸ್ಪಷ್ಟಪಡಿಸಿದರು. ವಿಜಯೇಂದ್ರ ನನ್ನ ಬಗ್ಗೆ ಮಾತನಾಡಿದರೆ ಬಂಡ ವಾಳ ಬಿಚ್ಚಿಡುವೆ. ಎಲ್ಲಿ ಏನೇನಾಗಿದೆ ಎಲ್ಲವೂ ಗೊತ್ತು. ವಿಜೇಯೇಂದ್ರ ಬಳಿ ಬ್ಲಾಕ್ ಮೇಲ್ ಮಾಡೋ ಟೀಂ ಇದೆ. ಇವೆಲ್ಲ ನಾಟಕ, ಬೆದರಿಕೆ ಬಿಡ ಬೇಕು. ಹಾಗೇ ಮಾಡಿದರೆ ನಮ್ಮ ಬಳಿಯೂ ಇದೆ ಎಂದು ಎಚ್ಚರಿಕೆ ಕೊಟ್ಟರು.

ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ಸ್ಥಾನ ಹಾಗೂ ವಿರೋಧ ಪಕ್ಷದ ಸ್ಥಾನಗಳು ಬದಲಾಗುತ್ತವೆ ಎಂದು ಹೇಳಿರುವ ಕಾಂಗ್ರೆಸ್ ಶಾಸಕ ಲಕ್ಷ್ಮಣ್ ಸವದಿ, ಮೊದಲು ತಮ್ಮ ಪಕ್ಷದ ಉಸಾಬರಿ ನೋಡಿಕೊಳ್ಳಲಿ. ಕಾಂಗ್ರೆಸ್‌ನಲ್ಲಿ ದೊಡ್ಡ ಕತ್ತೆ ಬಿದ್ದಿದೆ. ನಮ್ಮ ತಟ್ಟೆಯಲ್ಲಿನ ನೊಣ ನೋಡುತ್ತಿದ್ದಾರೆ. ರಾಹುಲ್ ಹಿಂದೆ ಸಿಎಂ, ಸೋನಿಯಾ ಹಾಗೂ ಪ್ರಿಯಾಂಕಾ ಗಾಂಧಿ ಹಿಂದೆ ಡಿ.ಕೆ.ಶಿವಕುಮಾರ್ ಓಡಾಡುತ್ತಿದ್ದಾರೆ.
-ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ಶಾಸಕ

@vishwavaninews

ವಿಶ್ವವಾಣಿ ಆರಾಮ

ಬೆಂಗಳೂರು
ಶನಿವಾರ
08 | 02 | 2025

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಶಬ್ದ ಭಂಡಾರ

ನಾವು ನಿತ್ಯ ವ್ಯವಹಾರದಲ್ಲಿ ಬಳಸುವ ಪದಗಳೇ ನಮ್ಮ ವ್ಯಾವಹಾರಿಕ ಜೀವನವನ್ನು ನಿರ್ದೇಶಿಸುತ್ತಿರುತ್ತವೆ. ಹಾಗೆಯೇ ವೈಯಕ್ತಿಕ ಜೀವನವೂ ನಾವು ಬಳಸುವ ಪದಗಳನ್ನು ಆಧರಿಸಿ ನಿರ್ಮಾಣವಾಗುತ್ತಿರುತ್ತದೆ. ನಿರಂತರವಾಗಿ ಬಳಸುವ ಶಬ್ದ ಕೋಶವೇ ಗಮ್ಯವನ್ನು ನಿರ್ಧರಿಸುತ್ತದೆ ಅನ್ನುವುದನ್ನು ಹಲವರ ಜೀವನದ ಗತಿಯನ್ನು ನೋಡಿ ತಿಳಿಯಬಹುದು. ನಾವು ಏನನ್ನು ಮಾತನಾಡುತ್ತಿರುತ್ತೇವೆಯೋ ಅದೇ ಸಂಭವಿಸುತ್ತಾ ಹೋಗುತ್ತದೆ. ಇಲ್ಲಿ ಅನ್ವಯ ಆಗುವುದು ಆಕರ್ಷಣೆಯ ನಿಯಮ. ನಾವು ಹೊರಗೆ ಆಡುವ ಮಾತುಗಳು ಕೇವಲ ನಾಲಿಗೆಯಿಂದ ಹುಟ್ಟಿ, ಪರಿಸರಕ್ಕೆ ಹೋಗುವಂತದ್ದಲ್ಲ. ನಿರಂತರವಾಗಿ ನಮ್ಮ ಮನಸ್ಸಿನಲ್ಲಿ ನಾವು ಆಡಿಕೊಳ್ಳುವ ಮಾತುಗಳೇ ಅವು ಆಗಿರುತ್ತವೆ. ನಾವು ಬೇರೆಯವರೊಂದಿಗೆ ಆಡುವುದಷ್ಟೇ ಮಾತಲ್ಲ. ನಮ್ಮ ಮನಸ್ಸಿನೊಂದಿಗೆ ನಾವು ಸಂವಹಿಸುತ್ತಾ ಇರುವುದು ಸಹ ಮಾತೇ ಆಗುತ್ತದೆ. ಇವು ಅತ್ಯಂತ ಪ್ರಭಾವಶಾಲಿ ಮಾತುಗಳು. ಈ ಮಾತುಗಳು ಮೂಡುವುದು ನಮ್ಮ ನಿರಂತರ ಚಿಂತನೆಗಳಿಂದ. ಮನಸ್ಸಿಗೆ ನಾವು ಎಂತಹ ಆಹಾರ ನೀಡುತ್ತೇವೆಯೋ, ಅಂತಹುದೇ ಚಿಂತನೆಗಳ ಅಲೆಗಳು ಮನದಲ್ಲಿ ಎದ್ದು, ಅದೇ ದಿಕ್ಕಿಗೆ ನಮ್ಮನ್ನು ನಡೆಸಿಬಿಡುತ್ತವೆ. ಮಾಹಿತಿ ಎನ್ನುವ ಹೆಸರಿನಲ್ಲಿ ನಾವಿಂದು ನಮ್ಮ ಮೆದುಳಿಗೆ ನೀಡುತ್ತಿರುವುದು ನಕಾರಾತ್ಮಕವಾದ ಆಹಾರವನ್ನೇ. ಇಂತಹ ವಿಚಾರಗಳಿಂದ ಪುಷ್ಟಿಗೊಂಡ ಚಿಂತನೆಗಳು ಸ್ಫುರಿಸುವುದು ನಕಾರಾತ್ಮಕ ಸಾಧ್ಯತೆಗಳನ್ನೇ. ಬಾಹ್ಯದ ಯಾವುದೇ ಘಟನೆಗಳನ್ನು ಸಹ ನೇತ್ಯಾತ್ಮಕ ದೃಷ್ಟಿಯಲ್ಲಿ ನೋಡುವಂತೆ ಮನಸ್ಸು ಪ್ರೇರೇಪಿಸಿ ಬಿಡುತ್ತದೆ. ಆಗ ಮನ ದಾಳದಲ್ಲಿ ಮೂಡುವ ಚಿಂತನೆಗಳು ನಕಾರಾತ್ಮಕ ಮಾತುಗಳಾಗಿಯೇ ಹೊರಗೆ ಬಂದುಬಿಡುತ್ತವೆ. ಹೀಗೆ ಒಳ ಹೊರಗುಗಳನ್ನೆಲ್ಲ ನಕಾರಾತ್ಮಕ ಅಂಶಗಳೇ ತುಂಬಿದಾಗ, ಬಾಹ್ಯದಲ್ಲಿ ಸಂಭವಿಸುವ ಎಲ್ಲಾ ಘಟನೆಗಳು ಸಹ ನಕಾರಾತ್ಮಕವಾಗಿ ಪರಿವರ್ತಿತವಾಗಿ ಬಿಡುತ್ತವೆ. ಒಳ ಮನಸ್ಸಿನ ಮೌನದ ಮಾತುಗಳು ಅತ್ಯಂತ ಸಶಕ್ತವಾಗಿ ಧ್ವನಿಸಿ ಗಮ್ಯವನ್ನು ಸೇರಿಸಿಬಿಡುತ್ತವೆ. ಒಳ ಮಾತುಗಳು ಅಂದವಾಗಿದ್ದಾಗ ಚಂದದ ಗಮ್ಯ ಸೇರಲು ಸಾಧ್ಯ.

• ಮಾಯಾ ಬಾಲಚಂದ್ರ

ಹನಿಮಳೆ

ಅವಕಾಶ

ಅವಳು ತವರಿಗೆ ಹೋದರೆ
ಬಲು ದೊಡ್ಡ ಅವಕಾಶ
ಹೊರಗೆ ಬರುತ್ತವೆ ಬಾಟಲಿ
ಅವನಿಗೆ ಎಲ್ಲಿಲ್ಲದ ಸ್ವಾತಂತ್ರ್ಯ
ಕಾಣಸಿಗುವುದು ಮನಬಿಚ್ಚಿ
ಹೊರಗೆ ಬರುವ ಮಾತಲಿ

• ಮಹಾಂತೇಶ ಮಾಗನೂರ

ನೇಪಥ್ಯಕ್ಕೆ ಸರಿಯುತ್ತಿರುವ ಕಾವಿ ಕಲೆ

• ಪ್ರೊ. ವಿ. ಎಸ್. ನಾಯಕ ಬಳಕೂರು

ಕಲೆ ಎಂಬುದು ಹೇಗೆಲ್ಲಾ ಜನರನ್ನು ಆಕರ್ಷಿಸುತ್ತದೆ ಎಂಬುದಕ್ಕೆ ನಮ್ಮ ನಾಡಿನ ಪ್ರಾಚೀನ ಕಲೆಗಳಲ್ಲಿ ಒಂದಾದ ಕಾವಿ ಕಲೆಯೇ ಸಾಕ್ಷಿ. ಇದು ಸುಮಾರು 16 ನೇ ಶತಮಾನದಲ್ಲಿ ಗೋವಾದಲ್ಲಿ ಬಹಳ ಪ್ರಚಲಿತದಲ್ಲಿತ್ತು. ಸಾಮಾನ್ಯವಾಗಿ ಸಾರಸ್ವತ ದೇವಾಲಯ ಗಳಲ್ಲಿ ಮತ್ತು ಮನೆಮಠಗಳಲ್ಲಿ ಇದು ಬಹಳ ಪ್ರಚಲಿತದಲ್ಲಿ ಇತ್ತು. ಆದರೆ ವರ್ಷ ಗತಿಸಿದ ಹಾಗೆ ಹೊಸ ವಿಭಿನ್ನ ಕಲಾ ಪ್ರಕಾರಗಳು ಬಂದ ನಂತರ ಈ ಪ್ರಾಚೀನ ಕಲಾ ಪ್ರಕಾರವಾದ ಖಾ ವಿ ಕಲೆಯು ನಮ್ಮಿಂದ ಮರೆಯಾಗುತ್ತಿರುವುದು ಬಹಳ ಬೇಸರದ ಸಂಗತಿಯಾಗಿದೆ.

ಕಾವಿ ಕಲೆಯು ಕರಾವಳಿಯ ದೇಗುಲಗಳಲ್ಲಿ ಹೆಚ್ಚಾಗಿ ಪ್ರದರ್ಶನಗೊಳ್ಳುತ್ತಿದೆ. ಕಾವಿ ಬಣ್ಣವನ್ನು ಬಳಸಿ ಪುರಾಣದ ಮತ್ತು ಇತರ ಸನ್ನಿವೇಶಗಳನ್ನು ಚಿತ್ರಿಸುವ ಈ ಕಲೆಯು, ಸಾಂಪ್ರದಾಯಿಕ ಶೈಲಿಯನ್ನು ಅನುಸರಿಸುತ್ತದೆ. ಇದನ್ನು ಇಂದಿನ ದಿನಗಳಲ್ಲಿ ಚಿತ್ರಿಸುತ್ತಿರುವ ಕಲಾವಿದರೊಬ್ಬರ ಪರಿಚಯ ಇಲ್ಲಿದೆ.

ನಮ್ಮ ನಾಡಿನ ಪ್ರಖ್ಯಾತ ಕಲಾವಿದರಲ್ಲಿ ಒಬ್ಬರಾದ ರವಿ ಗುನುಗಾ ರವರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ವರು. ಇವರು ಇಂದಿನ ದಿನಗಳಲ್ಲಿ ಕಾವಿ ಕಲೆಯನ್ನು ಬೇರೆ ಬೇರೆ ಕಡೆ ಚಿತ್ರಿಸಿ ಜನಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೊಡ್ಲಮನೆ ಮಹಾ ವಿಷ್ಣು ದೇವಾಲಯ ಬಳಕೂರು ಇಲ್ಲಿ ಇವರು ರಚಿಸಿರುವ ಕಾವಿ ಕಲೆಯ ಚಿತ್ರಗಳು ಒಂದಕ್ಕಿಂತ ಒಂದು ವಿಭಿನ್ನವಾಗಿವೆ.

ವಿವಿಧ ಅವತಾರಗಳ ಚಿತ್ರ: ದೇವಾಲಯವನ್ನು ಪ್ರವೇಶ ಮಾಡುತ್ತಿದ್ದಂತೆ ಅಲ್ಲಿನ ಗೋಡೆಗಳ ಮೇಲೆ ದಶಾವತಾರ ದೃಶ್ಯಗಳು ಒಂದು ವಿಸ್ಮಯಕಾರಿ ಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ಇದರಲ್ಲಿ ಮತ್ಸ್ಯ ಅವತಾರ, ಕೂರ್ಮ ಅವತಾರ, ವರಾಹ ಅವತಾರ, ನರಸಿಂಹ ಅವತಾರ, ವಾಮನ ಅವತಾರ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿಯ ಅವತಾರಗಳು ತಕ್ಷಣ ಗಮನ ಸೆಳೆಯುತ್ತವೆ.

ಸಾಮಾನ್ಯವಾಗಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ದೇವಾಲಯಗಳ ಗೋಡೆಗಳ ಮೇಲೆ ಕಾವಿ ಕಲೆಯನ್ನು ಇಂದಿಗೂ ಕೂಡ ನೋಡಬಹುದು. ಇದರ ಜೊತೆಗೆ ಸಾಮಾನ್ಯವಾಗಿ ನಾವು ಕಾವಿಕಲೆಯಲ್ಲಿ ಸೂರ್ಯ ಮಂಡಲ, ಚಂದ್ರಮಂಡಲ, ಸಪ್ತ ಮಾತೃಕೆಯರು, ನಾಟ್ಯ ಗಣೇಶ, ಮೂಷಿಕ ವಾಹನ, ಇದರ ಜೊತೆಗೆ ಪುರಾಣ ಪುಣ್ಯ ಕಥೆಗಳಲ್ಲಿ ಬರುವ ವಿಭಿನ್ನ ಸನ್ನಿವೇಶಗಳನ್ನು ನೋಡಬಹುದು.

ಕಲಾವಿದ ರವಿ ಗುನಗ ರವರು ರಚಿಸಿರುವ ಕಾವಿ ಕಲೆ ಚಿತ್ರಗಳು ನಮ್ಮ ನಾಡಿನ ಹಲವಾರು ದೇವಾಲಯಗಳಲ್ಲಿ ಜನಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಾರೆ ಕಾವಿ ಕಲೆಯು ಪ್ರಾಚೀನ ವಿಭಿನ್ನ ಶೈಲಿಯ ಕಲಾ ಪ್ರಕಾರವಾಗಿದ್ದು ಈ ಚಿತ್ರಗಳಲ್ಲಿ ಅದ್ಭುತ ಬಣ್ಣಗಳ ಸಂಯೋಜನೆ, ಅರ್ಥಪೂರ್ಣ ವಿನ್ಯಾಸ, ಮನ ಸೆಳೆಯುವ ರೀತಿಗಳ ಮೋಡಿ, ಚಿತ್ರಗಳಿಗೆ ತಕ್ಕಂತೆ ಚೌಕಟ್ಟಿನ ರಚನೆ, ಕಲಾಕೃತಿಗಳಿಗೆ ತಕ್ಕಂತೆ ಬಣ್ಣಗಳ ಲೇಪನ, ಚಿತ್ತಾಕರ್ಷಕ ಬಣ್ಣಗಳ ಪ್ರತಿಫಲನ, ಪುರಾಣ ಪುಣ್ಯ ಕಥೆಗಳನ್ನು ತೆರೆದಿಟ್ಟಂತೆ ಕಾಣುವ ಅದ್ಭುತ ಶೈಲಿ, ಗಮನ ಸೆಳೆಯುವ ಕಲಾಕೃತಿಗಳ ಸೆಳೆತ, ಎಲ್ಲವೂ ಈ ಕಾವಿ ಕಲೆಯಲ್ಲಿ ಎದ್ದು ಕಾಣುತ್ತದೆ.

ಕಲಾವಿದ ರವಿ ಗುನಗರವರು ಹೇಳುವ ಪ್ರಕಾರ 'ಪ್ರಾಚೀನ ಕಲಾ ಪ್ರಕಾರವಾದ ಕಾವಿ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ನನ್ನ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇನೆ. ಪುರಾಣ ಪುಣ್ಯ ಕಥೆಗಳಲ್ಲಿ ಬರುವ ಸನ್ನಿವೇಶಗಳನ್ನು ಕಾವಿ ಕಲೆಗಳ ಮೂಲಕವಾಗಿ ಚಿತ್ರಿಸುವುದರಿಂದ ಎಲ್ಲಾ ವಿಷಯಗಳನ್ನು ಜನಮಾನಸದಲ್ಲಿ ತುಂಬ ಕೆಲಸ ಮಾಡಬಹುದು. ಇದರಿಂದ ನನಗೆ ಬಹಳ ಸಂತೃಪ್ತಿ ಇದೆ' ಎಂದು ಹೇಳುತ್ತಾರೆ.ಡಿ

ದೇಗುಲಗಳ ಭಿತ್ತಿಗಳಲಿ!

ಕಾವಿ ಕಲೆಯ ಶೈಲಿಯಲ್ಲಿ ಹಲವು ಚಿತ್ರಗಳನ್ನು ದೇಗುಲಗಳ ಭಿತ್ತಿಗಳಲ್ಲಿ ರಚಿಸಿರುವುದನ್ನು ಕಾಣಬಹುದು. ಮುಖ್ಯವಾಗಿ ಪೌರಾಣಿಕ ಸನ್ನಿವೇಶಗಳನ್ನು ಚಿತ್ರಿಸಲು ಈ ಕಲೆ ಬಳಕೆಯಾಗುತ್ತದೆ. ಕರಾವಳಿಯ ಹಲವು ದೇಗುಲಗಳ ಭಿತ್ತಿಗಳಲ್ಲಿ ಕಾವಿ ಕಲೆಯನ್ನು ಕಾಣಬಹುದು. ಇಂದಿನ ತಲೆಮಾರಿನ ಕಲಾವಿದರು, ಈ ಕಲೆಯನ್ನು ಉಪಯೋಗಿಸಿ ಆಧುನಿಕ ಚಿತ್ರಗಳನ್ನು ರಚಿಸುವ ಪ್ರಯೋಗವನ್ನು ಅಲ್ಲಲ್ಲಿ ಮಾಡಿದ್ದುಂಟು.

ಸಾಹಿತ್ಯ ಪ್ರಕಾಶನವೇ ಇವರ ಹವ್ಯಾಸ!

• ಡಾ.ಶರಣು ಹುಲ್ಲೂರು

ಹಲವು ಉದಯೋನ್ಮುಕ ಲೇಖಕರ ಪುಸ್ತಕಗಳನ್ನು ಪ್ರಕಟಿಸಿರುವ ನಿಡಸಾಲೆ ಪುಟ್ಟಸ್ವಾಮಯ್ಯ ಅವರಿಗೆ 75 ವರ್ಷ! ವೃತ್ತಿಯ ನಡುವೆಯೂ ಹಲವು ಪ್ರಕಾಶನ ಸಂಸ್ಥೆಗಳನ್ನು ಹುಟ್ಟು ಹಾಕುವ ಮೂಲಕ ಹಲವು ಲೇಖಕರ ನೂರಾರು ಪುಸ್ತಕಗಳನ್ನು ಪ್ರಕಟಿಸಿ, ಸಾಹಿತಿಗಳಿಗೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ನಿಡಸಾಲೆ ಪುಟ್ಟಸ್ವಾಮಯ್ಯ ಅವರಿಗೆ, ಪುಸ್ತಕ ಪ್ರಕಾಶನ ಒಂದು ಹವ್ಯಾಸ. ಯುವ ಸಾಹಿತಿಗಳಿಂದ ಹಿಡಿದು ಹೆಸರಾಂತ ಸಾಹಿತಿಗಳ ಪುಸ್ತಕಗಳು ಇವರ ಪ್ರಕಾಶನ ಸಂಸ್ಥೆಯಿಂದ ಹೊರ ಬಂದಿವೆ.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಸ್ಥೆಯನ್ನು ಹುಟ್ಟು ಹಾಕಿ, ಅದರ ಅಧ್ಯಕ್ಷರಾಗಿ ಸತತ 20 ವರ್ಷಗಳಿಂದಲೂ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ಪ್ರಕಾಶಕರ ಸಂಘದಿಂದ ಒಂಬತ್ತು ಜಿಲ್ಲೆಗಳ ಒಂಬೈನೂರು ಸರಕಾರಿ ಶಾಲೆಗಳಿಗೆ 90 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಕೊಡುಗೆಯಾಗಿ ನೀಡಲಾಗಿದೆ.

ಇವರ ನೇತೃತ್ವದಲ್ಲಿ ಸ್ಥಾಪನೆ ಆಗಿರುವ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಉದಯೋನ್ಮುಖ ಬರಹಗಾರರ ಎಂಟು ಕೃತಿಗಳನ್ನು ಹೊರತಂದಿದೆ. ಪ್ರತಿ ವರ್ಷವೂ ಸಾಹಿತ್ಯ ರತ್ನ, ಪುಸ್ತಕ ರತ್ನ, ಯುವ ಸಾಹಿತ್ಯ ರತ್ನ, ಮುದ್ರಣ ರತ್ನ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಾ ಬಂದಿದ್ದಾರೆ. ಇವೆಲ್ಲವುಗಳ ಜೊತೆಗೆ ಸರಕಾರದ ಜೊತೆ ಸದಾ ಹೋರಾಟ ಮಾಡುತ್ತಲೇ ಪ್ರಕಾಶಕರಿಗೆ ಸಿಗಬೇಕಾದ ಸಲವತ್ತುಗಳನ್ನು ಕೊಡಿಸುವಲ್ಲಿ ಇವರ ಪಾತ್ರ ದೊಡ್ಡದು.

ಸಿನಿಮಾ ಕ್ಷೇತ್ರದಲ್ಲಿ: ಸಾಹಿತ್ಯದ ಜೊತೆ ಜೊತೆಗೆ ಕಿರುತೆರೆ ಮತ್ತು ಹಿರಿತೆರೆಯಲ್ಲೂ ನಿಡಸಾಲೆ ಪುಟ್ಟಸ್ವಾಮಯ್ಯ ಅವರ ಹೆಸರು ದಾಖಲಾಗಿದೆ. 40ಕ್ಕೂ ಹೆಚ್ಚು ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸಿ, ಸ್ವತಃ ನಿರ್ದೇಶನವನ್ನೂ ಮಾಡಿದ್ದಾರೆ. ಬೆಂಗಳೂರಿನ ದೂರದರ್ಶನದಲ್ಲಿ ಇವರ ಸಾಕಷ್ಟು ಸಾಕ್ಷ್ಯ ಚಿತ್ರಗಳು ಪ್ರಸಾರಗೊಂಡಿವೆ. ಕಿರುತೆರೆಯಲ್ಲಿ ಪ್ರಸಾರವಾದ ಕೂಡಿ ಬಾಳೋಣ, ಅನಿರೀಕ್ಷಿತ, ವಿಚಾರಣೆ, ಬಾಳತರಂಗ, ಮನೆ ಮಾಡಿ ನೋಡು, ಚಂದ್ರಬಿಂಬ ಸೇರಿದಂತೆ ಹಲವಾರು ಧಾರಾವಾಹಿಗಳಲ್ಲೂ ಪುಟ್ಟಸ್ವಾಮಿಯ್ಯನವರು ನಟಿಸಿದ್ದಾರೆ. ತಮ್ಮದೇ ಚಿಗುರು ಕ್ರಿಯೇಷನ್ಸ್ ನಿರ್ಮಾಣ ಸಂಸ್ಥೆಯಿಂದ ಸಿದ್ದಗಂಗಾ, ವ್ಹಾವ್ ಮುರುಗೇಶ್, ನೀರು ತಂದವರು, ಅನುತ್ತರ ಹಾಗೂ ಅಗ್ನಿವರ್ಷ ಹೆಸರಿನಲ್ಲಿ ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ.

ಗೌರವಗಳು: ಸಾಹಿತ್ಯ, ರಂಗಭೂಮಿ, ಸಿನಿಮಾ, ಸಂಘಟನೆ ಹೀಗೆ ನಾನಾ ನಿಡಸಾಲೆ ಪುಟ್ಟಸ್ವಾಮಿಯ್ಯ ತೊಡಗಿಸಿಕೊಂಡಿದ್ದಾರೆ. ಬಿಬಿಎಂಪಿ ನೀಡುವ ಕೆಂಪೇಗೌಡ ಪ್ರಶಸ್ತಿ, ಸೇವಾರತ್ನ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ, ಕನ್ನಡ ರಾಜಾರಾಜೇಶ್ವರಿ ಪ್ರಶಸ್ತಿ, ಮಾಸ್ತಿ ಕಥಾ ಪುರಸ್ಕಾರ, ಮೇಘ ಮೈತ್ರಿ ಪುಸ್ತಕ ಪ್ರಶಸ್ತಿ ಸೇರಿದಂತೆ ಸಾಕಷ್ಟು ಗೌರವಗಳು ಇವರಿಗೆ ಸಂದಿವೆ. ಆರ್.ಆರ್. ನಗರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿಯೂ ಇವರು ಆಯ್ಕೆಯಾಗಿದ್ದಾರೆ.

75 ವರ್ಷಾಚರಣೆ: ಪುಸ್ತಕ ಪ್ರಕಾಶಕ, ಲೇಖಕ, ನಿರ್ಮಾಪಕ ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ನಿಡಸಾಲೆ ಪುಟ್ಟಸ್ವಾಮಯ್ಯ ಅವರಿಗೆ 75 ವರ್ಷಗಳು ತುಂಬಿರುವ ಸಂದರ್ಭದಲ್ಲಿ ಫೆಬ್ರವರಿ 8ರಂದು ಬೆಂಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅಮೃಥ ಕಥನ ಅಭಿನಂದನಾ ಗ್ರಂಥ, ಸ್ನೇಹಮೇರು ಸ್ಮರಣ ಸಂಚಿಕೆ, ತೋರಿದ ದಾರಿ ಸಾಕ್ಷ್ಯ ಚಿತ್ರ ಹಾಗೂ 75 ಪ್ರಾತಿನಿಧಿಕ ಕಿರುಕಥೆಗಳ ಸಂಕಲನಗಳು ಬಿಡುಗಡೆ ಆಗಲಿವೆ.

ಐಸ್ ಹಲ್ವಾ!

ಇದನ್ನು ತಯಾರಿಸುವವರು ಅಪೂರ್ವ!

• ಕೆ.ಎಸ್.ಸೋಮೇಶ್ವರ

ಇದೊಂದು ವಿಶಿಷ್ಠ ರೀತಿಯ ಸಿಹಿ ತಿನಿಸು. ಬಾಲ್ಯದಿಂದಲೂ ನನಗೆ ಇದು ಅಚ್ಚುಮೆಚ್ಚು! ಅದಕ್ಕೆ ಆ ಹೆಸರು ಯಾಕೆ ಇಟ್ಟಿದ್ದಾರೆ ಎಂಬುದು ಈಗಲೂ ಸಸ್ಪೆನ್ಸ್. ನನಗೆ ತಿಳಿದಿರುವಂತೆ ಅದರ ಮೂಲ ತಯಾರಕರು ಮೋಹನಲಾಲ್ ಎಸ್. ಮಿಠಾಯಿವಾಲ, ಮುಂಬೈ. ಅತಿ ತೆಳುವಾದ ಚಚ್ಚೌಕದ ಚಪಾತಿಯಂತಿರುತ್ತಿತ್ತು. ಅದರ ಅಳತೆ ಸುಮಾರು 6 ಇಂಟು 6 ಅಂಗುಲ ಇರುತ್ತಿತ್ತು. ಒಂದು ಸಣ್ಣ ಪೆಟ್ಟಿಗೆಯಲ್ಲಿ ಸುಮಾರು ಹತ್ತು ಅಂತಹ ತೆಳು ಐಸ್ ಹಲ್ವಾಗಳು ಒಂದರ ಮೇಲೊಂದು ಇರುತ್ತಿದ್ದವು. ಒಂದಕ್ಕೊಂದು ಅಂಟದಂತೆ ಅವುಗಳ ಮಧ್ಯೆ ತೆಳುವಾದ ತುಪ್ಪದ ಹಾಳೆ (ಬಟರ್ ಪೇಪರ್) ಹಾಕಿರುತ್ತಿದ್ದರು.

ನಾನು ತಿಳಿದಂತೆ ಇದು ಸಾಮಾನ್ಯವಾಗಿ ತಯಾರಾಗುವುದು ಶುದ್ಧ ತುಪ್ಪ, ಸಕ್ಕರೆ ಮತ್ತು ಜೋಳದ ಹಿಟ್ಟುಮತ್ತಿತರ ವ್ಯಂಜನಗಳನ್ನು ಬಳಸಿ ಹದವಾಗಿ ತಯಾರಾಗುತ್ತದೆ. ಇದರ ರುಚಿ ಹೊರತಾಗಿ ಇದರ ತೆಳುವಾದ ಹಾಳೆ ನಮಗೆ ಹೆಚ್ಚಿನ ಆನಂದ ನೀಡುತ್ತಿದ್ದವು. ಇದು ಸುಮಾರು ಅರುವತ್ತರ ದಶಕದಲ್ಲೇ ಗೊತ್ತಿತ್ತು. ನಮ್ಮ ಬೆಂಗಳೂರಿನಲ್ಲೇ ಸಿಗಬಹುದೇ ಎಂದು ವಿಚಾರಿಸಿದಾಗ, ಗಾಂಧಿ ನಗರದಲ್ಲಿದ್ದ ಸಂಗಂ ಸ್ವೀಟ್ಸ್‌ನಲ್ಲಿ ಟ್ರೈ ಮಾಡಿ ಎಂದರು; ಹಲವು ವರ್ಷಗಳ ಹಿಂದಿನ ಮಾತಿದು. ಇತ್ತೀಚೆಗೆ ಇದು ತಯಾರಾಗುತ್ತಿಲ್ಲ ಎನಿಸುತ್ತದೆ.

ಮುಂಬೈನ ಮೋಹನಲಾಲ ಎಸ್. ಮಿಠಾಯಿವಾಲ ರವರ ಸಂಸ್ಥೆಯನ್ನು ಸಂಪರ್ಕಿಸಿ ಒಂದೆರಡು ವಿಧದ 'ಐಸ್ ಹಲ್ವಾ' ತರಿಸಿ ಇತ್ತೀಚೆಗೆ ನನ್ನ ಪ್ರೀತಿ ಪಾತ್ರರಿಗೆ ಹಂಚಿದೆ. ನನ್ನ ಅಭಿಪ್ರಾಯದಲ್ಲಿ ಐಸ್ ಹಲ್ವಾವು, ಸಿಹಿ ತಿಂಡಿಗಳ ಚಕ್ರವರ್ತಿ!

ಸಂಬಂಧಿಸಿದ್ದು ಮತ್ತು ಸಂಬಂಧವಿಲ್ಲದ್ದು

ಯಾವುದೇ ಮೋಹವಿಲ್ಲದೆ ಕಾರ್ಯ ಮಾಡಿದ ವ್ಯಕ್ತಿ ಅಂತಿಮ ಸ್ಥಿತಿಯನ್ನು ತಲುಪುತ್ತಾನೆ ಎಂದು ಕೃಷ್ಣ ಭರವಸೆ ನೀಡುತ್ತಾನೆ(3.19). ಇದಕ್ಕೆ ಕೇವಲ ಕಾರ್ಯದಿಂದ ಮಾತ್ರ ಈ ಮಟ್ಟಕ್ಕೆ ಹೋದ ರಾಜಾ ಜನಕನ ಉದಾಹರಣೆಯನ್ನು ಕೊಡುತ್ತಾನೆ.(3.20)

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ವೈಭವದಲ್ಲಿ ಜೀವಿಸುವ ಹಾಗೂ ಅನೇಕ ಹೊಣೆ ಗಾರಿಕೆಗಳನ್ನು ನಿರ್ವಹಿಸುವ ರಾಜನು ಕೂಡ ಮೋಹವಿಲ್ಲದೆ ಕಾರ್ಯಗಳನ್ನು ಮಾಡಿದಾಗ ಪರಮ ಪದವಿಯನ್ನು ಪಡೆಯಲು ಸಾಧ್ಯ ಎಂಬುದನ್ನು ಕೃಷ್ಣ ಒತ್ತಿ ಹೇಳುತ್ತಾನೆ. ನಮ್ಮ ಪರಿಸರ ಏನೇ ಇದ್ದರೂ ಅಂತ ಕಾರ್ಯಗಳನ್ನು ಮಾಡಿ ನಾವು ಕೂಡ ಪರಮ ಪದವಿಯನ್ನು ಪಡೆಯಲು ಸಾಧ್ಯ ಎಂಬುದು ಇದರ ಅರ್ಥ.

ಎರಡು ಮಹಾಜ್ಞಾನಿಗಳು ಪರಸ್ಪರ ಪ್ರತಿಕ್ರಿಯಿಸಿದ ಉದಾಹರಣೆಗಳು ಇತಿಹಾಸದಲ್ಲಿ ತುಂಬಾ ವಿರಳ. ಅಂಥ ಸಂಭಾಷಣೆ ರಾಜಾ ಜನಕ ಹಾಗೂ ಸಂತ ಅಷ್ಟವಕ್ರರ ಮಧ್ಯೆ ನಡೆದಿದೆ. ಇದನ್ನು 'ಅಷ್ಟಾವಕ್ರ ಗೀತೆ' ಎಂದು ಕರೆಯುತ್ತಾರೆ. ಸಾಧಕರಿಗೆ ಈ ಸಂಭಾಷಣೆ ಅತ್ಯುತ್ತಮ ಮಾರ್ಗದರ್ಶಿ ಎಂದು ಪರಿಗಣಿಸಲಾಗಿದೆ.

ಪುರಾಣದ ಪ್ರಕಾರ ಒಮ್ಮೆ ಒಬ್ಬ ಗುರುವು ತನ್ನ ಸಭ್ಯ ಶಿಷ್ಯನಿಗೆ ಕೇವಲ ಕೆಲವು ಕೌಪೀನಗಳನ್ನು ಹಾಗೂ ಒಂದು ಬಿಕ್ಷಾ ಪಾತ್ರೆಯನ್ನು ಕೊಟ್ಟು ಅಂತಿಮ ಪಾಠಕ್ಕಾಗಿ ಜನಕ ಮಹಾರಾಜನ ಬಳಿ ಕಳುಹಿಸಿದ. ಅರಮನೆಯಲ್ಲಿ ವೈಭವದಿಂದ ಜೀವಿಸುವ ಜನಕನ ಬಳಿಗೆ ತನ್ನನ್ನುಗುರು ಯಾಕೆ ಕಳಿಸಿದ ಎಂದು ಆ ಶಿಷ್ಯನಿಗೆ ಆಶ್ಚರ್ಯವಾಗುತ್ತದೆ. ಒಂದು ದಿನ ಬೆಳಿಗ್ಗೆ ಜನಕನು ಅವನನ್ನು ಕರೆದುಕೊಂಡು ಸ್ನಾನಕ್ಕಾಗಿ ನದಿಗೆ ಬರುತ್ತಾನೆ. ಸ್ನಾನ ಮಾಡುವಾಗ ಅರಮನೆಯು ಸುಟ್ಟು ಹೋಯಿತೆಂಬ ಸುದ್ದಿ ಬರುತ್ತದೆ. ಆ ಶಿಷ್ಯನಿಗೆ ತನ್ನ ಕೌಪೀನದ ಬಗ್ಗೆ ಚಿಂತೆಯಾಗಿತ್ತು. ಆದರೆ ಜನಕ ಶಾಂತವಾಗಿಯೇ ಇದ್ದ. ಆಗ ಆ ಶಿಷ್ಯನಿಗೆ ತನ್ನ ಕೌಪೀನದ ಮೋಹವೂ ಮೋಹವೇ ಎಂಬ ಅರಿವಾಗುತ್ತದೆ ಇದನ್ನು ಕೂಡ ಬಿಡಬೇಕೆಂದು ತಿಳಿಯುತ್ತಾನೆ.

ಮೋಹವಿಲ್ಲದೆ ಕಾರ್ಯ ಮಾಡುವುದೇ ಗೀತೆಯ ತಿರುಳಾಗಿದೆ. ಇದು ಸಂಬಂಧಿಸಿದ ಸ್ಥಿತಿಯೂ ಹೌದು ಸಂಬಂಧಿಸಿರದ ಸ್ಥಿತಿಯೂ ಹೌದು. ಈ ಭೌತಿಕ ಜಗತ್ತಿನಲ್ಲಿ ವ್ಯಕ್ತಿಯು ಕಾಳಜಿ ಹೊಂದಿರುತ್ತಾನೆ ಮತ್ತು ತನಗೆ ಸಾಧ್ಯವಾದಲ್ಲಿ ಮಾಡುತ್ತಾನೆ. ಅದೇ ಸಮಯದಲ್ಲಿ ಆಂತರಿಕವಾಗಿ ತನಗೆ ಸಂಬಧವಿಲ್ಲದಂತೆ ಇರುತ್ತಾನೆ. ಯಾಕೆಂದರೆ ಅಂತಹವುಗಳು ಅವನ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡುವು ದಿಲ್ಲ. ಇದರ ಪರಿಣಾಮ ಪ್ರಯತ್ನದಲ್ಲಿ ಇರಬಹುದು ಅಥವಾ ಸಂಪೂರ್ಣವಾಗಿ ಇದರ ವಿರುದ್ಧ ಇರಬಹುದು. ಅವನಿಗೆ ಅದು ಸಂಬಂಧಿಸಿಲ್ಲ ಮತ್ತು ಅದರಿಂದ ಅವನು ತೊಂದರೆ ಗೀಡಾಗಿಲ್ಲ ಕಾರ್ಯಜೀವನದ ಸಮತೋಲನ ಕಾಪಾಡಲು ಇದೇ ಕೀಲಿ ಕೈ ಆಗಿದೆ.

ಹಾಸ್ಯವೇ ಬಂಡವಾಳ!

• ವಿದ್ಯಾಪ್ರಸಾದ್, ಪುತ್ತೂರು

ಜೀವನದಲ್ಲಿನ ಹಲವಾರು ಸವಾಲುಗಳನ್ನು ಎದುರಿಸಿ ಧೈರ್ಯದಿಂದ ಹಾಸ್ಯ ಕ್ಷೇತ್ರವನ್ನು ಆಯ್ಕೆ ಮಾಡಿ ತನ್ನ ಹಾಸ್ಯ ನಟನೆಯ ಮೂಲಕ ಕರ್ನಾಟಕದ ಮನೆ ಮನಗಳಿಗೆ ಪರಿಚಯವಾದ ಹಾಸ್ಯ ಕಲಾವಿದರೇ ಗಣರಾಜ್ ಭಂಡಾರಿ. ಇವರು ತಮ್ಮ ತಂದೆ ವಸಂತ ಭಂಡಾರಿ ಮತ್ತು ತಾಯಿ ಕುಮುದಾಕ್ಷಿ ಹಾಗೂ ತಮ್ಮ ಕಿರಿಯ ಸಹೋದರನಾದ ಮಹೇಶ್ ಭಂಡಾರಿ ಇವರೊಂದಿಗೆ ದಕ್ಷಿಣ ಕನ್ನಡದ, ಪುತ್ತೂರಿನ ಬನ್ನೂರು ಎಂಬಲ್ಲಿ ಪ್ರಸ್ತುತವಾಗಿ ವಾಸವಾಗಿದ್ದಾರೆ.

ಪುತ್ತೂರಿನ ಹಳ್ಳಿಯೊಂದರಲ್ಲಿರುವ ಗಣರಾಜ್ ಭಂಡಾರಿ ಅವರಿಗೆ ಹಾಸ್ಯವೇ ಬಂಡವಾಳ! ನಟನೆ, ಕಾಮಿಡಿ ಶೋ, ಹಾಸ್ಯದ ರೀಲ್ಸ್ ಮೂಲಕ ತಮ್ಮ ಪ್ರತಿಭೆಯನ್ನು ತೋರುತ್ತಿದ್ದಾರೆ.

ಅಂತೆಯೇ ಇವರ ಹಾಸ್ಯ ನಟನಾ ಬದುಕಿಗೆ ಇವರ ಗುರುಗಳೇ ಸ್ಫೂರ್ತಿ. 10 ವರ್ಷದ ಹಿಂದೆ ಇವರ ಗುರುಗಳಾದ ನಾಗೇಶ್ ಬಲ್ನಾಡು ಎಂಬುವವರು ತಮ್ಮ ನಾಟಕ ತಂಡದಲ್ಲಿ ಸೇರಿಸುವ ಮೂಲಕ ಹಾಸ್ಯ ನಟನೆಗೆ ಇವರನ್ನು ಪರಿಚಯಿಸಿದರು. 12 ವರ್ಷದಿಂದ 'ಸಂಸಾರ ಕಲಾವಿದೆರ್' ಎಂಬ ನಾಟಕ ತಂಡದಲ್ಲಿ ಇಂದಿಗೂ ಕಲಾವಿದರಾಗಿದ್ದಾರೆ. ಸಾಮಾಜಿಕ ಜಾಲಾತಾಣದಲ್ಲಿಯೂ ತಮ್ಮ ಹಾಸ್ಯ ವಿಡಿಯೋ, ರೀಲ್ಸ್ ಗಳನ್ನು ಹಂಚಿಕೊಳ್ಳುವ ಮೂಲಕ ಜನರನ್ನು ತಲುಪಿದ್ದಾರೆ.

ಇವರ ಮೊದಲ ರಂಗ ಪ್ರವೇಶ ಸುಮಾರು 10 ವರ್ಷಕ್ಕಿಂತ ಮೊದಲು 'ಬದಿಕೆರೆ ಕಲ್ಪಿ' ಎಂಬ ತುಳು ನಾಟಕದಿಂದ ಶುರುವಾಯಿತು. ಸಾಮಾಜಿಕ ಜಾಲತಾಣದಲ್ಲಿ ರೀಲ್ಸ್ ಜನಪ್ರಿಯತೆ ಕಂಡು, ಇವರೂ ರೀಲ್ಸ್ ಮಾಡತೊಡಗಿದರು. ಮೊದಲು ಅವರ ಅಣ್ಣ ಧನು ಮತ್ತು ಅಕ್ಕ ದೀಕ್ಷಾ ಜತೆ, ಶ್ರೀಲಂಕಾ ಎಂಬ ಹಾಡನ್ನು 'ಎನ್ನ ಲಂಗೋನು ಕಂಡಿಯನ' ಎಂದು ತುಳು ಭಾಷೆಯಲ್ಲಿ ಸಾಹಿತ್ಯ ಬರೆದು ರೀಲ್ಸ್ ಮಾಡಿದರು; ಅದು ಜನಪ್ರಿಯ ವಾಯಿತು. ಕನ್ನಡ ಕಾಮಿಡಿ ಕಿಲಾಡಿ ಶೋದಲ್ಲೂ ಇವರು ಭಾಗವಹಿಸಿದ್ದಾರೆ.



ಇವರ ಪ್ರತಿಭೆಗೆ ಹಲವಾರು ಕಡೆಗಳಲ್ಲಿ ಪ್ರಶಸ್ತಿ, ಸನ್ಮಾನದ ಮೂಲಕ ಪ್ರೋತ್ಸಾಹ ದೊರಕಿದೆ. ಇವರಿಗೆ ಉತ್ತಮ ಹಾಸ್ಯಗಾರ ಎಂಬ ಪ್ರಶಸ್ತಿ ಮತ್ತು ಕಾಮಿಡಿ ಶೋ ರನ್ನರ್ ಅಪ್ ಎಂಬ ಪ್ರಶಸ್ತಿ ದೊರಕಿದೆ.

ದೋಣಿಗಳ ಮೆರವಣಿಗೆ!

• ಶಶಾಂಕ್ ಮುದೂರಿ

ನಮ್ಮ ರಾಜ್ಯದಲ್ಲಿ ಹಲವು ಕಡೆ ಬೀಚ್‌ಗಳಿವೆ, ಕಡಲ ಕಿನಾರೆಗಳಿವೆ; ಸಮುದ್ರದ ಅಲೆಗಳು ದಡಕ್ಕೆ ಬಂದು ಬಡಿಯುವುದನ್ನು ನೋಡುತ್ತಾ ಇರುವುದೆಂದರೆ, ಬಹು ಆಪ್ತ ಅನುಭವ. ಕೆಲವು ಕಡೆ ಬಹು ಸುಂದರ ಬೀಚ್‌ಗಳಿರುತ್ತವೆ. ಮರಳ ಹಾಸು, ಬಂಡೆಕಲ್ಲಿನ ವಿನ್ಯಾಸ, ಎತ್ತರದಿಂದ ನೋಡುವ ಅವಕಾಶ, ನದಿ ಸಂಗಮ ಪ್ರದೇಶ – ಇಂತಹ ಭೌಗೋಳಿಕ ವಿದ್ಯಮಾನಗಳಿಂದಾಗಿ, ಕೆಲವು ಬೀಚ್‌ಗಳು ಬಹು ಸುಂದರವಾಗಿ ಕಾಣಬಹುದು.

ಅಂತಹ ಬೀಚ್‌ಗಳಲ್ಲಿ, ಉಡುಪಿ ಜಿಲ್ಲೆಯ ಸೋಮೇಶ್ವರ ಬೀಚ್ ಒಂದು. ಉಡುಪಿ ಜಿಲ್ಲೆಯ ಉತ್ತರ ತುದಿಯಲ್ಲಿರುವ ಬೈಂದೂರು ಪಟ್ಟಣದ ಸನಿಹದಲ್ಲಿರುವ ಈ ಸಮುದ್ರ ಕಿನಾರೆಯು, ಬಹು ಸುಂದರ, ಮೋಹಕ, ಒಮ್ಮೆ ನೋಡಿದರೆ ಮನದಲ್ಲಿ ಅಚ್ಚು ಹೊಡೆದಂತಹ ಆಪ್ತ ಅನುಭವ ನೀಡಬಲ್ಲ ತಾಣ. ಇಲ್ಲಿ ಅಲೆಗಳ ಹೊಡೆತ ಕಡಿಮೆ; ಆದ್ದರಿಂದ, ತುಸು ಜಾಗ್ರತೆ ವಹಿಸಿ ನೀರಿಗೆ ಇಳಿಯಬಹುದು. ಆದರೆ, ಸ್ವಲ್ಪ ಎಡಭಾಗದಲ್ಲಿ ರಭಸವಾದ ಅಲೆಗಳಿದ್ದು, ಅಲ್ಲಿ ನೀರಿಗೆ ಇಳಿಯಬಾರದು ಎಂಬ ಫಲಕ ಹಾಕಿದ್ದಾರೆ.

ಇಲ್ಲಿನ ಸಮುದ್ರದ ತಟದಲ್ಲಿ ಒಂದು ಭಾಗದಲ್ಲಿ ಮರಳಿನ ಹಾಸು ಹರಡಿದ್ದರೆ, ಅಲ್ಲೇ ಇನ್ನೊಂದು ಭಾಗದಲ್ಲಿ ಬಂಡೆಗಲ್ಲುಗಳು ಬಿದ್ದುಕೊಂಡಿವೆ! ಅಲೆಗಳು ಆ ಬಂಡೆಗಳಿಗೆ ಹೊಡೆಯುವಾಗ ಸಿಡಿದೇಳುವ ನೊರೆಯು ಮೋಹಕ ನೋಟವನ್ನು ನೀಡುತ್ತದೆ.

ನದಿಸಾಗರ ಸಂಗಮ

ನಿರಂತರವಾಗಿ ದಡಕ್ಕೆ ಬಡಿಯುವ ಸಮುದ್ರದ ಅಲೆಗಳನ್ನು ನೋಡಿ ಕಂಗಳಿಗೆ ಬೇಸರ ಎನಿಸಿದರೆ, ದಕ್ಷಿಣ ದಿಕ್ಕಿಗೆ ದಿಟ್ಟಿ ಹಾಯಿಸಬಹುದು; ಅಲ್ಲೊಂದು ರಮ್ಯ ನೋಟ ಕಾದಿದೆ! ಅದೇ, ನದಿ ಸಾಗರ ಸಂಗಮ! ಪುಟ್ಟ ನದಿಯೊಂದ ತೆಂಗಿನ ಮರಗಳ ಸಂದಿಯಿಂದ ಹರಿದು ಬಂದು, ನಿಧಾನವಾಗಿ ಸಮುದ್ರವನ್ನು ಸೇರುವ ನೋಟವದು.

ಈ ನಡುವೆ, ಆ ಜಾಗದಲ್ಲಿ ಮೀನು ಹಿಡಿಯಲು ಹೊರಡುವ ದೋಣಿಗಳ ಸಾಲು ನಿಧಾನವಾಗಿ ಕಡಲನ್ನು ಸೇರುವ ನೋಟವೂ ಅಲ್ಲಿ ಲಭ್ಯವಾಗಬಹುದು. ಭರತ ಮತ್ತು ಇಳಿತವನ್ನು ಅವಲಂಬಿಸಿ, ಕೆಲವು ದಿನ ಸೂರ್ಯಾಸ್ತದ ಸಮಯದಲ್ಲಿ, ಅತ್ತ ಸೂರ್ಯ ಸಮುದ್ರದ ಹಿಂದೆ ಮರೆಯಾಗುತ್ತಿರುವಂತೆಯೇ, ಒಂದರ ಹಿಂದ ಒಂದರಂತೆ ನೂರಾರು ದೋಣಿಗಳು ಸಮುದ್ರವನ್ನು ಪ್ರವೇಶಿಸುವ ನೋಟವನ್ನೂ ಇಲ್ಲಿ ನೋಡಬಹುದು. ದೂರದಲ್ಲಿ ಸಾಗುವ ಆ ದೋಣಿಗಳ ಮೆರವಣಿಗೆಯು, ಈ ಬೀಚ್‌ನ ಕಾವ್ಯಾತ್ಮಕ ಅನುಭವಕ್ಕೆ ಇನ್ನೊಂದೇ ಆಯಾಮವನ್ನು ನೀಡಬಲ್ಲವು!

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
08.02.2025 ಶನಿವಾರ
vishwavani.news

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಏಕಾದಶಿ ತಿಥಿ, ಶುಕ್ಲ ಪಕ್ಷ, ಮೃಗಶಿರ ನಕ್ಷತ್ರ, ರವಿ ಯೋಗ, ರಾಹುಕಾಲ ಬೆಳಗ್ಗೆ 9ರಿಂದ 10.30, ಅಭಿಜಿತ್ ಲಗ್ನ ಅಪರಾಹ್ನ 12.13ರಿಂದ 12.57

ಮನೆಮದ್ದು

ಅತಿಯಾದ ಕೊಲೆಸ್ಟ್ರಾಲ್ ಸಮಸ್ಯೆಯಿಂದ ಬಳಲುವವರು ರಾತ್ರಿ ಮಲಗುವ ಮುನ್ನ ಕೊತ್ತಂಬರಿ ಮತ್ತು ಮೆಂತ್ಯ ಬೀಜಗಳನ್ನು ಒಂದು ಲೋಟ ನೀರಿನಲ್ಲಿ ನೆನೆಸಿಟ್ಟು, ಮರುದಿನ ಬೆಳಗ್ಗೆ ಆ ನೀರನ್ನು ಚೆನ್ನಾಗಿ ಕುದಿಸಿ, ನಂತರ ಶೋಧಿಸಿ ಸ್ವಲ್ಪ ದಿನ ತಪ್ಪದೆ ಕುಡಿದರೆ ಕೊಲೆಸ್ಟ್ರಾಲ್ ಮಟ್ಟ ಇಳಿಮುಖವಾಗುತ್ತದೆ.

ಸೌಂದರ್ಯ ಸೂತ್ರ

ಪಾದಗಳ ಸೌಂದರ್ಯವನ್ನು ಹೆಚ್ಚಿಸಲು 2 ಚಮಚ ಸಾಸಿವೆ ಎಣ್ಣೆ, 2 ಚಮಚ ತೆಂಗಿನ ಎಣ್ಣೆ, 1 ಚಮಚ ವ್ಯಾಸಲಿನ್, 1/2 ಚಮಚ ಕರ್ಪೂರ ಪೌಡರ್ ಅನ್ನು ಒಂದು ಬಟ್ಟಲಿಗೆ ಹಾಕಿ ಬಿಸಿನೀರಿನಲ್ಲಿ ಇಡಿ. ಎಲ್ಲ ಪದಾರ್ಥಗಳು ಸರಿಯಾಗಿ ಮಿಶ್ರಣವಾದ ನಂತರ ತೆಗೆದಿಡಿ. ಸ್ವಲ್ಪ ತಣ್ಣಗಾದ ನಂತರ ದಿನಕ್ಕೆ ಕನಿಷ್ಠ 2 ಬಾರಿಯಾದರೂ ಪಾದಗಳಿಗೆ ಹಚ್ಚಿದರೆ ಸಮಸ್ಯೆ ಪರಿಹಾರ ಖಚಿತ.

ದಿನ ಭವಿಷ್ಯ

ಮೇಷ
ಹಣದ ವಿಷಯ ಬದಿಗಿಟ್ಟು ಇನ್ನಿತರ ವಿಷಯಗಳ ಕಡೆ ಗಮನಕೊಡಿ, ನಿಮಗೆ ಎಲ್ಲಾ ವಿಷಯ ಗೊತ್ತೆಂಬ ಭ್ರಮೆ ಬೇಡ.

ವೃಷಭ
ಇಂದು ನಿಮಗೆ ಅತ್ಯುತ್ತಮ ದಿನ, ಯಾವುದೇ ಹಿನ್ನಡೆ ಆಗದಿದ್ದೂ ಅಹಂಕಾರದಿಂದ ಮೆರೆದರೆ ಶಾಸ್ತಿ ಖಚಿತ.

ಮಿಥುನ
ಏನೂ ಸಾಧಿಸುತ್ತಿಲ್ಲ ಎಂಬ ಭಾವನೆಯನ್ನು ಬಿಟ್ಟು, ನಿಮ್ಮ ಕೈಲಾಗುವ ಪ್ರಯತ್ನ ಮಾಡಿ ಗುರಿಯೆಡೆಗೆ ಸಾಗಲು ನೋಡಿ.

ಕಟಕ
ನಿಮಗೀಗ ಸಂಕಷ್ಟ ಕಾಲ ಮುಗಿಯಿತೆಂದೇ ಭಾವಿಸಿ, ನಿರಾಳತೆಯಿಂದ ಮುಂದಿನ ಕಾರ್ಯಗಳಿಗೆ ಸದಾ ಸಿದ್ಧರಾಗಿ.

ಸಿಂಹ
ಅತಿಯಾದ ನಿರೀಕ್ಷೆ ನಿಮ್ಮ ಸಮಸ್ಯೆ ಯಾಗಿರುವುದರಿಂದ ಪ್ರಯತ್ನಕ್ಕೆ ತಕ್ಕಂತೆ ಮಾತ್ರ ಫಲ ಸಿಗುವುದು ಎಂಬ ವಿಚಾರ ನೆನಪಿನಲ್ಲಿರಲಿ.

ಕನ್ಯಾ
ಏಕಾಗ್ರತೆಯಿಂದ ಕಾರ್ಯನಿರ್ವಹಿಸದಿದ್ದರೆ ತಪ್ಪುಗಳಾಗುವ ಸಾಧ್ಯತೆ ಹೆಚ್ಚು, ಹಾಗಾಗಿ ಮನಸ್ಸನ್ನು ಹದ್ದುಬಸ್ತಿನಲ್ಲಿಡಿ.

ತುಲಾ
ನಿಮ್ಮ ಸಂತೋಷ-ದು:ಖ ಆತ್ಮೀಯರ ಜೊತೆ ಹಂಚಿಕೊಂಡರೆ ಉತ್ತಮ, ಇಲ್ಲದಿದ್ದರೆ ನೀವೊಬ್ಬರೇ ಕೊರಗಬೇಕಾದೀತು.

ವೃಶ್ಚಿಕ
ಕಾರ್ಯಕ್ಷೇತ್ರದಲ್ಲಿ ಅನುಕೂಲ ಪರಿಸ್ಥಿತಿಯನ್ನು ನೀವೇ ಸೃಷ್ಟಿಸಲು ಪ್ರಯತ್ನಿಸಿದರೆ ಈ ಸಕಲ ಉತ್ತಮ ಭವಿಷ್ಯ ನಿಮ್ಮದಾಗಲಿದೆ.

ಧನು
ಸಮಸ್ಯೆಯೊಂದು ಪರಿಹಾರ ಕಾಣುವ ಸಾಧ್ಯತೆ ಹೆಚ್ಚಿದೆ, ಹಾಗಾಗಿ ಎಲ್ಲರೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವಲ್ಲಿ ಗಮನಿಸಿ.

ಮಕರ
ನಿಮ್ಮ ಆತ್ಮವಿಶ್ವಾಸವೇ ನಿಮಗೆ ಆನೆಬಲ, ಹಾಗಾಗಿ ಬಂಧುಗಳ ಸಹಕಾರ ದೊರೆಯಲಿದ್ದು ಉತ್ತಮ ಕಾರ್ಯದಲ್ಲಿ ನಿರತರಾಗಿ.

ಕುಂಭ
ವೃತ್ತಿ ಬದುಕಿನಲ್ಲಿ ಯಶಸ್ಸು ನಿಮ್ಮದಾಗಲಿದೆ, ಮಿತವ್ಯಯದಿಂದ ಇನ್ನು ಕೆಲವು ತಿಂಗಳ ಕಾಲ ನೀವು ಸಾಧಿಸುವುದು ಬಹಳಷ್ಟಿದೆ.

ಮೀನ
ಆತ್ಮೀಯರ ಬೆಂಬಲ ನಿಮ್ಮ ಕಾರ್ಯಕ್ಕೆ ಸಿಗಲಿದೆ, ಆರೋಗ್ಯ ಏರುಪೇರಾಗದಂತೆ ನೋಡಿಕೊಂಡರೆ ಏನೂ ಚಿಂತೆಯಾಗದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1897: ಭಾರತದ ಮಾಜಿ ರಾಷ್ಟ್ರಪತಿ ಜಾಕೀರ್ ಹುಸೇನ್ ಅವರ ಜನ್ಮದಿನ
- 1926: ಬ್ರದರ್ಸ್ ಕಾರ್ಟೂನ್ ಸ್ಟುಡಿಯೋದ ಹೆಸರು ವಾಲ್ಟ್ ಡಿಸ್ನಿ ಸ್ಟುಡಿಯೋ ಎಂದು ಪುನರ್ ನಾಮಕರಣ.
- 1994: ಭಾರತದ ಮಾಜಿ ಕ್ರಿಕೆಟಿಗ ಕಪಿಲ್‌ದೇವ್ ಟೆಸ್ಟ್ ಕ್ರಿಕೆಟ್‌ನಲ್ಲಿ 432 ವಿಕೆಟ್ ಪಡೆದು ಹೊಸ ದಾಖಲೆ ಸೃಷ್ಟಿಸಿದರು.

ಚಿತ್ರಸ್ಫೂರ್ತಿ

ಹ್ಯಾಪಿ ರೋಸ್ ಡೇ ಪ್ರಯುಕ್ತ ಶುಕ್ರವಾರ ಮಾರುಕಟ್ಟೆಯಲ್ಲಿ ಕಂಡುಬಂದ ಗುಲಾಬಿ ಗೊಂಚಲು

ಕೈಲಾಗದ ಮಕ್ಕಳ ಮೇಲೆ ತಂದೆ-ತಾಯಿಗೆ ಪ್ರೀತಿ ಹೆಚ್ಚು

ಒಮ್ಮೆ ದೃತರಾಷ್ಟ್ರನ ಹತ್ತಿರ ವೇದವ್ಯಾಸರು ಬಂದು, 'ನೋಡು ದೃತರಾಷ್ಟ್ರ, ನಿನ್ನ ಮಕ್ಕಳಾದ ದುರ್ಯೋಧನ, ದುಶ್ಯಾಸನ ಹಾಗೂ ನಿನ್ನ ಭಾವಮೈದುನ ಶಕುನಿ, ಇವರು ಪಾಂಡು ಮಕ್ಕಳಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ. ನೀನು ಅವರಿಗೆ ಸ್ವಲ್ಪ ಬುದ್ಧಿ ಹೇಳಬಾರದೇ?' ಎಂದು ಕೇಳಿದರು. ಇದರಿಂದ ದೃತರಾಷ್ಟ್ರನಿಗೆ ಬೇಸರವಾಯಿತು. 'ನೀವು ಯಾವಾಗಲೂ ನನ್ನ ಮಕ್ಕಳಿಗೇ ಬುದ್ಧಿ ಹೇಳುವಂತೆ ಹೇಳುತ್ತೀರಿ. ನೀವು ಪಾಂಡು ಮಕ್ಕಳ ಮೇಲೆ ಹೆಚ್ಚು ವಾತ್ಸಲ್ಯ ಪ್ರೀತಿ ತೋರಿಸುತ್ತೀರಿ. ಯಾಕೆ ನನ್ನ ಮಕ್ಕಳು ನಿಮಗೆ ಮೊಮ್ಮಕ್ಕಳಲ್ಲವೇ? ಪಾಂಡು ಮಕ್ಕಳು ಮಾತ್ರ ಮೊಮ್ಮಕ್ಕಳಾ?' ಎಂದು ಸಿಟ್ಟಿನಲ್ಲೇ ಹೇಳಿದ.

ಇದನ್ನು ಕೇಳಿದ ವ್ಯಾಸರು ಒಂದು ಕಥೆ ಹೇಳುತ್ತಾರೆ. ಒಮ್ಮೆ ದೇವಲೋಕದಲ್ಲಿ ಕಾಮಧೇನು ಅಳುತ್ತಿದ್ದಳು. ಅಲ್ಲಿಗೆ ಬಂದ ಇಂದ್ರದೇವ ಯಾಕೆ ಅಳುತ್ತಾ ಇರುವೆ? ನಮ್ಮಿಂದ ಏನಾದರೂ ತಪ್ಪಾಯ್ತೇ ಅಥವಾ ಯಾರಾದರೂ ನಿನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡಿದರಾ? ಕಾಮಧೇನು ಇಂದ್ರನಿಗೆ ಅಲ್ಲಿನೋಡು ಎಂದು ಭೂಮಿ ಕಡೆ ತೋರಿಸಿದಳು, ಇಂದ್ರನು ನೋಡಿದ. ಅದೊಂದು ಹಳ್ಳಿ, ಅಲ್ಲಿ ಸ್ವಲ್ಪ ಗದ್ದೆ ಇತ್ತು, ಅದು ಬಡ ರೈತನ ಗದ್ದೆಯಾಗಿತ್ತು. ರೈತನು ಅವನ ಹತ್ತಿರವಿದ್ದ ಎರಡು ಎತ್ತುಗಳನ್ನು ನೊಗಕ್ಕೆ ಕಟ್ಟಿ ಗದ್ದೆಯಲ್ಲಿ ಕೆಲಸ ಮಾಡಿಸುತ್ತಿದ್ದ.

ಅವು ಮುಂದೆ ಹೋಗದಿದ್ದರೆ ಬಾರುಕೋಲಿನಿಂದ ಅವುಗಳಿಗೆ ಹೊಡೆಯುತ್ತಿದ್ದ. ಆ ಎತ್ತುಗಳು ಸರಿಯಾಗಿ ಹೊಟ್ಟೆಗೆ ಇಲ್ಲದೆ, ಚರ್ಮ ಮೂಳೆ ಮಾತ್ರ ಕಾಣುತ್ತಿತ್ತು. ಅವುಗಳಿಗೆ ನೊಗ ಎಳೆಯಲು ಆಗದೆ ಕಣ್ಣೀರು ಸುರಿಯುತ್ತಿತ್ತು. ಎತ್ತುಗಳನ್ನು ತೋರಿಸಿದ ಕಾಮಧೇನು, 'ದೇವರಾಜ ನನ್ನ ಮಕ್ಕಳು ಹೇಗೆ ಅಳುತ್ತಿವೆ ಅವುಗಳ ಕಷ್ಟ ನನ್ನಿಂದ ನೋಡಲಾಗುತ್ತಿಲ್ಲ ಏನಾದರೂ ಮಾಡಿ ಅವುಗಳ ಕಷ್ಟವನ್ನು ಪರಿಹರಿಸು' ಎಂದು ಕೇಳಿಕೊಂಡಿತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅದಕ್ಕೆ ಇಂದ್ರನು, 'ಏನಮ್ಮ ಕಾಮಧೇನು, ನಿನಗೆ ಇವೇ ಎರಡು ಮಕ್ಕಳಾ? ಎತ್ತು, ಹಸುಗಳು ಸೇರಿ ಕೋಟಿ ಕೋಟಿ ಮಕ್ಕಳಿದ್ದಾರೆ. ಅವುಗಳನ್ನೆಲ್ಲಾ ಬಿಟ್ಟು ಈ ಎರಡು ಮಕ್ಕಳ ಮೇಲೆ ಮಾತ್ರ ಅಷ್ಟೊಂದು ಪ್ರೀತಿ ಯಾಕೆ?' ಎಂದು ಕೇಳಿದ. ಆಗ ಕಾಮಧೇನು ಹೇಳಿದಳು. ಅವುಗಳೆಲ್ಲ ಸುಖವಾಗಿ ಇವೆ. ಕಲ್ಲಿನಂತೆ ಗಟ್ಟಿಯಾಗಿರುವ ಭೂಮಿಯನ್ನು ನೇಗಿಲಿನಿಂದ ಎಳೆಯಲು ಹೊಟ್ಟೆಗೂ ಹಾಕದೆ ನಿತ್ರಾಣವಾಗಿರುವ ಈ ಎರಡು ಮಕ್ಕಳಿಂದ ಮಾತ್ರ ಆ ರೈತ ಕೆಲಸ ಮಾಡಿಸುತ್ತಾನೆ, ಕೆಲಸ ಮಾಡಲು ಆಗದೆ ರೈತನ ಕೈಯಲ್ಲಿ ಹೊಡೆಸಿಕೊಳ್ಳುತ್ತಾ ನಿತ್ಯವೂ ಕಣ್ಣೀರು ಹಾಕುತ್ತವೆ. ಇದನ್ನು ನನ್ನಿಂದ ನೋಡಲಾಗುವುದಿಲ್ಲ ಹಾಗಾಗಿ ಹೇಳಿದೆ ಎಂದಿತು. ಕನಿಕರಗೊಂಡ ಇಂದ್ರನು ಕಾಮಧೇನು ನಿನ್ನ ಮಕ್ಕಳ ಮೇಲಿರುವ ಪ್ರೀತಿ ನನಗೆ ಅರ್ಥವಾಯಿತು ಎನ್ನುತ್ತಾ, ಬಡ ರೈತನ ಗದ್ದೆ ಸೇರಿದಂತೆ ಸುತ್ತಮುತ್ತ ಮಳೆ ಸುರಿಸಿದನು. ಇದರಿಂದ ಭೂಮಿಯೆಲ್ಲಾ ಒದ್ದೆಯಾಗಿ ಮಣ್ಣು ಮೃದುವಾಯಿತು. ಎತ್ತುಗಳು ಸರಾಗವಾಗಿ ನೇಗಿಲನ್ನು ಎಳೆದವು. ಇದು ಕಾಮಧೇನುವಿಗಿರುವ ಪುತ್ರ ವಾತ್ಸಲ್ಯ ಎಂದು ಕತೆ ಹೇಳಿ ಮುಗಿಸಿದರು ವ್ಯಾಸರು.

ನಂತರ 'ನೋಡು ದೃತರಾಷ್ಟ್ರ ನೀನು ಪಾಂಡು ಮತ್ತು ನಿಮ್ಮಿಬ್ಬರ ಮಕ್ಕಳ ಮೇಲೂ ನನಗೆ ಸಮಾನವಾದ ಪ್ರೀತಿ ಇದೆ. ಆದರೆ ಯಾವ ಮಕ್ಕಳು ಹೆಚ್ಚು ಕಷ್ಟಪಡುತ್ತಿರುತ್ತಾರೋ, ಅವರ ಬಗ್ಗೆ ಹೆತ್ತ ತಂದೆ ತಾಯಿಗೆ ಕನಿಕರ , ಪ್ರೀತಿ ಜಾಸ್ತಿ, ಅದು ಸಹಜವೂ ಕೂಡ. ಆದುದರಿಂದ ನಿನ್ನ ಮಕ್ಕಳು ಪಾಂಡು ಮಕ್ಕಳಿಗೆ ತೊಂದರೆ ಕೊಡದಂತೆ ತಿದ್ದಿ ಬುದ್ಧಿ ಹೇಳು. ತಂದೆ ಇಲ್ಲದ ಅವರನ್ನು ನಿನ್ನ ಮಕ್ಕಳಂತೆಯೇ ಪಾಲಿಸಬೇಕು, ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಎಂದು ತಾರತಮ್ಯ ತೋರಬೇಡ ಭಗವಂತ ಮೆಚ್ಚುವುದಿಲ್ಲ ಎಂದು ಬುದ್ಧಿವಾದ ಹೇಳಿದರು.

ಮನೆಯಲ್ಲೂ ತಂದೆ ತಾಯಿಗಳಿಗೆ ಸಹಜವಾಗಿ ದುರ್ಬಲ ಮಕ್ಕಳ ಬಗ್ಗೆ ಪ್ರೀತಿ ಹೆಚ್ಚು. ಅದನ್ನು ಅರ್ಥ ಮಾಡಿಕೊಳ್ಳುವ ಮನಸ್ಸು ಮಕ್ಕಳಿಗಿರಬೇಕಷ್ಟೇ.

ಪ ದ ಬಂ ಧ



ಎಡದಿಂದ ಬಲಕ್ಕೆ:

3. ಕಟ್ಟುಪಾಡಿಗೆ ಮತ್ತೊಂದು ಹೆಸರು (4)
5. ಪರರಿಗೆ ಮಾಡುವ ನೆರವು (4)
6. ಕಾವ್ಯವನ್ನು ರಾಗಬದ್ಧವಾಗಿ ಹಾಡುವುದು (3)
9. ಮನ ಮತ್ತು ಮತ್ತೊಂದು ಹಸು ಸೇರಿ ಬಂದಿರುವ ಮನ್ಮಥ (3)
12. ರೀತಿಗೆ ಮತ್ತೊಂದು ಹೆಸರು (3)
13. ಕೀಳುಮಟ್ಟದವನು ಅಥವಾ ದಾಸ (3)
14. ಬಳಿ ಬಂದಾಗ ಜ್ಞಾನ ತಪ್ಪುವುದು (3)
16. ದುಃಖಿಸುವುದು ಎನ್ನುತ್ತಾ ಬಂದ ಸೂರ್ಯ (3)
19. ತ್ವರೆ, ಅವಸರ (4)
20. ರಾಜ, ರಾಣಿಯರ ವಾಸದ ಮನೆ (4)

ಮೇಲಿನಿಂದ ಕೆಳಕ್ಕೆ:

1. ಅಳೆಯುವಿಕೆ ಮಾನದ ಮಧ್ಯೆ ಇದೆ (3)
2. ಮುಖದ ಹೋಲಿಕೆಗೆ ಬೇಕಾಗುವ ತಾವರೆ (4)
3. ಅಧಿಕಾರಿಗಳ ಸಮಿತಿ (3)
4. ಸಾಕಷ್ಟು ಹಣವಿರುವಾತ (3)
7. ಮರೆಯುವ ಸ್ವಭಾವದವನು (4)
8. ಸಾರದ ಮಧ್ಯೆ ಇರುವ ಸಹಸ್ರ (3)
9. ಚಿತ್ತಗಳ ನಡುವಿನ ದ್ವೇಷ (4)
10. ಮುಸಲ್ಮಾನ ದೊರೆಗೆ ಒಂದು ಹೆಸರು (3)
11. ಸಂಪೂರ್ಣವಾದುದು (3)
15. ವಕೀಲನ ಕೆಲಸ (4)
16. ತಾಯಿ ಮನೆಯನ್ನು ನೆನಪಿಸುವ ಒಂದು ಬಗೆಯ ಲೋಹ (3)
17. ಇದೊಂದು ಬಗೆಯ ಮಾದರಿ (3)
18. ಮತ್ತೊಂದು ಶಕ್ತಿಯಿರುವ ಒಂದು ಬಗೆಯ ಚರ್ಮ ವಾದ್ಯ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ವರಾತ 4. ವಾನರ 6. ಕನಕದಾಸ 7. ವಸೂಲಿ 8. ನೆಹಸ 10. ಹಕಲ 12. ತರಕಾರಿ 14. ವಿದೂಷಕ 16. ತವಕ 18. ಮಾನಿನಿ 20. ನೆರವು 21. ಗಗನಯಾನ 22. ವರದಿ 23. ಪುಕಾರು

ಎಡದಿಂದ ಬಲಕ್ಕೆ: 2. ತಕಲಿ 3. ಆಕರ್ಷಕ 4. ವಾಸನೆ 5. ರಭಸ 7. ವಸಂತ 9. ಹರುಷ 10. ಹರಿತ 11. ಲವಿಕ 13. ರದನಿ 15. ಕಟಾವು 17. ವರನಟ 18. ಮಾನವ 19. ನಿಗದಿ 20. ನೆನಪು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಉಲಿಹಕ್ಕಿ

ತೋಟದ ಪೊದೆಗಳ ಮರೆಯಲ್ಲಿ ಕುಳಿತು ಕೂಗುವ ಹಕ್ಕಿಯೇ ಉಲಿಹಕ್ಕಿ. ಅದರ ನೀನಾದದಿಂದಾಗಿಯೇ ಅದಕ್ಕೆ ಆ ಹೆಸರು ಬಂದಿದೆ. ಆಶಿ ಪ್ರಿನಿಯಾ ಎಂಬ ಆಂಗ್ಲ ಹೆಸರುಳ್ಳ ಈ ಹಕ್ಕಿಯ ವೈಜ್ಞಾನಿಕ ನಾಮಧೇಯ ಪ್ರಿನಿಯಾ ಸೊಸಿಯಾಲಿಸ್.

ಇದ್ದಕ್ಕಿದ್ದಂತೆ ನಮ್ಮ ಮನೆಯಂಗಳಕ್ಕೆ ಧಾವಿಸಿ ಕೆಲವು ಕ್ಷಣ ನೆಗೆದಾಡಿ, ಆನಂತರ ಥಟ್ಟನೇ ಕಾಲುಗಳನ್ನು ಕುಪ್ಪಳಿಸುತ್ತ ಸ್ವಲ್ಪ ಎತ್ತರದಲ್ಲಿ ಹಾರಿ ತದನಂತರ ಸಮೀಪದ ಗಿಡಗಂಟಿ, ಪೊದೆಯೊಳಗೆ ಸೇರಿ ಮಾಯವಾಗುವ ಈ ಹಕ್ಕಿಗಳು ಭಾರತದ ಜೌಗುಪ್ರದೇಶಗಲ್ಲಿ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶದ ಹುಲ್ಲುಗಾವಲುಗಳಲ್ಲಿ ಮತ್ತು ತೋಟಗಳ ಸಮೀಪ ಒಂಟಿಯಾಗಿ ಇಲ್ಲವೇ ಜೋಡಿಯಾಗಿ ಕಾಣಸಿಗುತ್ತವೆ. ಹಿಮಾಲಯದಲ್ಲಿಯೂ ಸುಮಾರು 1500 ಮೀಟರುಗಳಷ್ಟು ಎತ್ತರದವರೆಗೂ ಇವು ಕಂಡುಬಂದ ಉದಾಹರಣೆಗಳಿವೆ. ಆಗಿಂದಾಗ್ಗೆ ತನ್ನ ಬಾಲವನ್ನು ಮೇಲಕ್ಕೆತ್ತಿ ಸದಾ ವಿಶ್ರಾಂತಿ ರಹಿತವಾಗಿ ಟುವ್ವಿ ಟುವ್ವಿ ಎಂದು ಕೂಗುತ್ತಿರುವ ಈ ಹಕ್ಕಿಗಳು ಕ್ರಿಮಿಕೀಟಗಳನ್ನು ಹಾಗೂ ಇನ್ನಿತರೆ ಸಣ್ಣಗಾತ್ರದ ಜೀವಿಗಳನ್ನು ಹಿಡಿದು ತಿನ್ನುತ್ತವೆ.

ಗುಬ್ಬಿಯಷ್ಟು ಗಾತ್ರವಿರುವ ಹೆಣ್ಣು ಮತ್ತು ಗಂಡು ಹಕ್ಕಿಗಳ ದೇಹ ರಚನೆಯಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಮೈಬಣ್ಣ ಬೂದು ಮಿಶ್ರಿತ ಸ್ಲೇಟ್ ಬಣ್ಣದಿಂದ ಕೂಡಿದ್ದರೆ, ಕೆಳಮೈ ಕಂದು ಮಿಶ್ರಿತ ಬಿಳಿ ಬಣ್ಣ ಹೊಂದಿರುತ್ತದೆ. ಸದಾಕಾಲ ಮೇಲೆದ್ದಿರುವಂತೆ ಕಾಣುವ ಬಾಲದ ತುದಿಗಳು ಕರಿ ಮತ್ತು ಬಿಳಿ ಪಟ್ಟಿಗಳನ್ನು ಹೊಂದಿರುತ್ತವೆ. ಚಳಿಗಾಲದ ಸಮಯದಲ್ಲಿ ಮೈಮೇಲಿನ ಸ್ಲೇಟ್ ಬಣ್ಣವು ಕುಂದಿದಂತಾಗಿ ಕಂದು ಬಣ್ಣವು ಎದ್ದು ಕಾಣುತ್ತಿರುತ್ತದೆ. ಟುವ್ವಿ ಹಕ್ಕಿಗಳ ಬಣ್ಣ ಹಾಗೂ ಗಾತ್ರದಲ್ಲಿನ ವ್ಯತ್ಯಾಸದ ಆದಾರದ ಮೇಲೆ ಇವುಗಳನ್ನು ನಾಲ್ಕು ಪ್ರಬೇಧಗಳನ್ನಾಗಿ ವರ್ಗೀಕರಿಸಲಾಗಿದೆ.

ಪುಸ್ತಕ ಲೋಕ

ಕಲ್ಲು ನೆಲದ ಹಾಡುಪಾಡು



ನೋಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ಜೆ.ಎಂ. ಕಟ್ ಸೆ ಬರೆದ ಈ ಕಾದಂಬರಿಯ ಕನ್ನಡ ಅನುವಾದವನ್ನು ಮಾಡಿದವರು ಹಿರಿಯ ಲೇಖಕರಾದ ಎಚ್.ಎಸ್. ರಾಘವೇಂದ್ರ ರಾವ್ ಅವರು. ಈ ಕಾದಂಬರಿಯು ದಕ್ಷಿಣ ಆಫ್ರಿಕಾದ ವರ್ಣಬಯಲಿನಲ್ಲಿ ನೆಲೆಸಿದ ಒಂಟಿ ಹೆಣ್ಣಿನ ಆತ್ಮಕಥೆಯಂತೆ ಭಾಸವಾದರೂ ಎಲ್ಲ ಕಾಲದ, ಎಲ್ಲಾ ಸಂದರ್ಭಗಳ, ಪಿತೃ ಪ್ರಧಾನ ಸಮಾಜಗಳ ಕ್ರೌರ್ಯ ಮತ್ತು ದಮನಗಳ ನಡುವೆ ಮುರುಟಿ ಹೋಗುವ ಹೆಣ್ಣುಮಕ್ಕಳ ನೋವಿನ ಯಾತನೆಗೆ ಕನ್ನಡಿ ಹಿಡಿಯುತ್ತದೆ. ಆಫ್ರಿಕಾದ ವರ್ಣಭೇದ ನೀತಿಯ ನೊಗದ ಕೆಳಗೆ ನಲುಗುವ ಕಪ್ಪು ಜನರ ಅಸ್ತಿತ್ವದ ಒಳ-ಹೊರಗನ್ನೂ ಈ ಕಾದಂಬರಿ ಚಿತ್ರಿಸುತ್ತದೆ. ಅಚ್ಚುಕಟ್ಟಾದ ಮುದ್ರಣ ವಿನ್ಯಾಸದಿಂದ ಹೊರಬಂದಿರುವ ಈ ಪುಸ್ತಕವನ್ನು ಪ್ರಕಟಿಸಿದವರು ಬೆಂಗಳೂರಿನ ನುಡಿ ಪುಸ್ತಕ.

ಬದುಕಲ್ಲಿ ಸಹಜತೆ ಇರಲಿ

ಮಹಾದೇವ ಬಸರಕೋಡ, ಅಮೀನಗಡ

ನಮ್ಮ ಯೋಚನೆಗಳ ಮತ್ತು ನಿರೀಕ್ಷೆಗಳ ಭಾರ ಬದುಕನ್ನು ಚಡಪಡಿಸುವಂತೆ ಮಾಡುತ್ತದೆ. ನಮ್ಮ ಮನಸ್ಸು ನಾಳೆಗಾಗಿ ನೂರೆಂಟು ಯೋಜನೆಗಳನ್ನು ಹುಟ್ಟು ಹಾಕುತ್ತಲೇ ಇರುತ್ತದೆ. ಕೆಲವು ಬಾರಿ ಹಿಂದಿನ ಹೆಜ್ಜೆಗಳಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೇ ಅಲ್ಲಿಯೇ ಸಿಲುಕುತ್ತದೆ. ಇಂತಹ ನಮ್ಮ ನಡೆ ಯಿಂದಾಗಿ ನಾವು ಸಹಜತೆಯ ತಾಜಾತನವನ್ನು ಅನುಭವಿಸಲು ಸಾಧ್ಯವಾಗುವುದೆ ವಿಭಜನೆಗಳಲ್ಲಿ ಸಿಲುಕಿ ಹಾಕಿಕೊಂಡು ನಲಗುತ್ತೇವೆ, ಆ ಮೂಲಕ ಸಹಜತೆಯ ಘನತೆಯನ್ನು ದರ್ಶಿಸುವಲ್ಲಿ ಹಿನ್ನಡೆಯನ್ನು ಅನುಭವಿಸುತ್ತೇವೆ.

ಒಮ್ಮೆ ಝೆನ್ ಗುರುಗಳೊಬ್ಬರು ದಾರಿಯಲ್ಲಿ ತನ್ನ ಕೆಲವು ಶಿಷ್ಯರು ಸೈಕಲ್ ಸವಾರಿ ಮಾಡುತ್ತ ಬರುವುದನ್ನು ಗಮನಿಸಿದರು. ಅವರೆಲ್ಲರೂ ಸೈಕಲ್ ಸವಾರಿ ಮುಗಿಸಿ ಗುರುಗಳ ಬಳಿ ಬಂದರು. ಸೈಕಲ್ ಸವಾರಿ ಮಾಡುತ್ತಿದ್ದ ಉದ್ದೇಶವೇನೆಂದು ಗುರುಗಳು ಪ್ರಶ್ನಿಸಿದರು. ಒಬ್ಬ ಶಿಷ್ಯ ಭಾರವಾದ ಮೂಟೆಯನ್ನು ಹೆಗಲ ಮೇಲೆ ಹೊತ್ತು ತರುವುದು ಕಷ್ಟದ ಕೆಲಸವಲ್ಲವೇ? ಅದಕ್ಕೆ ಸೈಕಲ್ ಸವಾರಿ ಎಂದ. ನಿಜ ನೀನು ತುಂಬ ಜಾಣ, ಮುಂದಾಗುವ ತೊಂದರೆಯನ್ನು ಈಗಲೇ ತಡೆಯಬಲ್ಲ ನಿನ್ನ ಯೋಜನೆ ನಿಜಕ್ಕೂ ಮೆಚ್ಚತಕ್ಕದ್ದೇ. ನಾನು ನನ್ನ ಯೌವನಾವಸ್ಥೆಯಲ್ಲಿ ನಿನ್ನಂತೆ ನಡೆದಿದ್ದರೆ ನನಗೆ ಈ ರೀತಿಯ ಗೂನುಬೆನ್ನು ನನಗೆ ಇರುತ್ತಿರಲಿಲ್ಲ ಎಂದರು. ಎರಡನೆಯ ಶಿಷ್ಯ, ನನ್ನ ತಂದೆಯ ದಾರಿಯ ಬದಿಯಲ್ಲಿ ಸುಂದರವಾಗಿ ಬೆಳೆದು ಫಲ-ಪುಷ್ಪ ಹೊತ್ತು ನಿಂತ ಮರಗಳ ಸೌಂದರ್ಯ ಸವಿಯಬೇಕು ಅಂತ ಹೇಳಿದ ನೆನಪು, ಅದಕ್ಕಾಗಿ ನಾನು ಸೈಕಲ್ ಸವಾರಿ ಮಾಡುತ್ತಲೇ ಪ್ರಕೃತಿಯ ಸೌಂದರ್ಯ ಅನುಭವಿಸುತ್ತಿದ್ದೆ. ನನಗೂ ಅದು ತುಂಬ ಇಷ್ಟವಾದ ಸಂಗತಿ ಎಂದ. ನೀನು ಕೂಡ ತುಂಬ ಜಾಣ, ಸುತ್ತಲಿನ ಸಂಗತಿಗಳಲ್ಲಿ ಸಂತಸ ಹುಡುಕುವ ನಿನ್ನ ಗುಣ ನಿಜಕ್ಕೂ ಒಪ್ಪುವಂತಹದ್ದೇ ಎಂದರು. ಮೂರನೆಯ ಶಿಷ್ಯನು ಸೈಕಲ್ ಸವಾರಿ ಮಾಡಲಿಕ್ಕೆಂದೇ ನಾನು ಸೈಕಲ್ ಮೇಲೆ ಸವಾರಿ ಮಾಡಿದೆ ಎಂದ. ತಕ್ಷಣಕ್ಕೆ ಗುರು ಶಿಷ್ಯನ ಕಾಲ ಬಳಿ ಕುಳಿತುಕೊಂಡು ದಯಮಾಡಿ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸು ಎಂದು ವಿನಂತಿಸಿದರು.

ನಿಜವಾಗಿಯೂ ಪ್ರಕೃತಿಯಲ್ಲಿ ಅತ್ಯಂತ ಸಹಜವಾಗಿ, ಸರಳವಾಗಿ, ಸುಂದರವಾಗಿ ತನ್ನಷ್ಟಕ್ಕೆ ತಾನು ಘಟಿಸುತ್ತಲೇ ಹೋಗುತ್ತದೆ. ಹೂವು ನಿಧಾನವಾಗಿ ತನ್ನ ಮೊಗ್ಗಿನ ಸೆರೆಯಿಂದ ಬಿಡಿಸಿಕೊಂಡು, ನಗು ನಗುತ್ತಾ ಸುತ್ತಲೂ ಸೌಗಂಧ ಸೂಸಿ ಸಂಜೆ ಭುವಿಗೆ ಸೇರಿ ಬಿಡುತ್ತದೆ. ರೈತನೊಬ್ಬ ತನ್ನ ಜಮೀನಿನಲ್ಲಿ ಬೀಜವನ್ನು ಬಿತ್ತಿ ಅದು ಯಾವಾಗ ಮೊಳಕೆಯೊಡೆಯುತ್ತದೆ ಎನ್ನುವ ಚಡಪಡಿಕೆಯಲ್ಲಿ ಬೀಜದ ಮೇಲಿನ ಮಣ್ಣನ್ನು ಮತ್ತೆ ಮತ್ತೆ ತಗೆದು ನೋಡಿದರೆ ಅದೆಂದೂ ಮೊಳಕೆಯೊಡೆಯುವುದೇ ಇಲ್ಲ, ಬೀಜದ ಶಕ್ತಿಯೆಲ್ಲವೂ ಹಾಳಾಗಿ ಹೋಗುತ್ತದೆ. ನಾವು ಅನಗತ್ಯ ಸಂಗತಿಗಳಿಂದ ಒಂದಷ್ಟು ದೂರ ಸರಿದು ಸುಮ್ಮನೆ ಸಾಗುತ್ತ ಹೋಗಬೇಕು, ಅದು ಬದುಕಿಗೊಂದು ಘನತೆಯನ್ನು ತಂದು ಕೊಡುತ್ತದೆ.

ಪರೀಕ್ಷಾ ಪೇ ಚರ್ಚೆ: ವಿನೂತನ ಪ್ರಯೋಗ

ಸುರೇಂದ್ರ ಪೈ, ಭಟ್ಕಳ



ಪರೀಕ್ಷೆ ಎಂದಾಕ್ಷಣ ವಿದ್ಯಾರ್ಥಿಗಳು ಗಲಿಬಿಲಿಯಾಗುವುದೂ ಉಂಟು. ವರ್ಷಪೂರ್ತಿ ಅಧ್ಯಯನ ಮಾಡಿ, ಎಲ್ಲಾ ರೀತಿಯ ತಯಾರಿಯನ್ನು ಮಾಡಿದ್ದರೂ ಸಹ 'ಪರೀಕ್ಷೆ' ಎಂದೊಡನೆ ಹೆಚ್ಚಿನ ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗುತ್ತಾರೆ. ಅವರ ಭವಿಷ್ಯದ ಕುರಿತಾಗಿ ನಾವು ಹೊಂದಿರುವ ಅತಿಯಾದ ಅಪೇಕ್ಷೆಯೇ ಒತ್ತಡಕ್ಕೆ ನೇರ ಅಥವಾ ಪರೋಕ್ಷ ಕಾರಣವಾಗಿರಬಹುದು. ಶಿಕ್ಷಣದ ಉದ್ದೇಶ ಮಗುವಿಗೆ ಉಲ್ಲಾಸದಾಯಕ, ಧನಾತ್ಮಕ ಮನೋಭಾವನೆ ಬೆಳೆಸುವಕೊಳ್ಳುವ ಒಂದು ವೇದಿಕೆ ಆಗಿರಬೇಕಿತ್ತು, ಆದರೆ ಇಂದು ಸ್ಪರ್ಧಾತ್ಮಕ ಜಗತ್ತಿನ ಪೈಪೋಟಿಗೆ ಮಗುವನ್ನು ತಯಾರು ಮಾಡುವುದೊಂದೇ ಮೂಲ ಉದ್ದೇಶವೆಂಬಂತೆ ನಾವು ಅವರೊಂದಿಗೆ ನಡೆದುಕೊಳ್ಳುತ್ತಿದ್ದೇವೆ. ಇದರ ಫಲವಾಗಿ ಪರೀಕ್ಷೆಯ ಒತ್ತಡ ತಾಳಲಾರದೇ ಅದೆಷ್ಟೋ ವಿದ್ಯಾರ್ಥಿಗಳು ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ಪ್ರತಿ ವರ್ಷವು ನಡೆಯುತ್ತಲೇ ಇದೆ.

ಅಂದು ಹನುಮಂತನು ಲಕ್ಷ್ಮಣನಿಗೆ ಸಂಜೀವಿನಿಯನ್ನು ನೀಡಿ, ಜೀವ ತುಂಬಿದಂತೆ ಇಂದು ಪರೀಕ್ಷೆಯ ಸಮಯದಲ್ಲಿ ಒತ್ತಡದಿಂದ ಕುಗ್ಗಿರುವ ವಿದ್ಯಾರ್ಥಿಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪರೀಕ್ಷೆಯನ್ನು ಒಂದು ಹಬ್ಬದಂತೆ ಹೇಗೆ ಆಚರಿಸಬೇಕು ಹಾಗೂ ಒತ್ತಡರಹಿತವಾಗಿ, ನಿರ್ಭೀತಿಯಿಂದ ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎಂದು ದೇಶದ ಎಲ್ಲಾ ಹದಿಹರೆಯದ ಭವಿಷ್ಯದ ಪ್ರಜೆಗಳಾಗಿರುವ ಹತ್ತನೇ ಮತ್ತು ಹನ್ನೆರಡನೇ ತರಗತಿಯ ವಾರ್ಷಿಕ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ 2018ರಿಂದ 'ಪರೀಕ್ಷಾ ಪೇ ಚರ್ಚೆ' ಎಂಬ ವಿನೂತನವಾದ ಅಭಿಯಾನವನ್ನು ನಡೆಸುತ್ತಾ ಬಂದಿರುತ್ತಾರೆ. ಇಲ್ಲಿ ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ಭಾಗವಹಿಸಿ ತಮ್ಮ ಮನದಲ್ಲಿರುವ ಪ್ರಶ್ನೆಗಳನ್ನು ಪ್ರಧಾನಿಯವರ ಬಳಿ ಕೇಳಿ ಸಂವಾದದ ಮೂಲಕ ಉತ್ತರ ಪಡೆಯಲು ಅವಕಾಶ ಇರುತ್ತದೆ. ಪರೀಕ್ಷಾ ಪೇ ಚರ್ಚೆ ಕಾರ್ಯಕ್ರಮ ಪ್ರಾರಂಭವಾಗಿ 7 ವರ್ಷ ಕಳೆದಿದೆ. ಕರೋನಾ ಸಮಯದಲ್ಲಿ ಕಂಗಾಲಾಗಿದ್ದ ಮಕ್ಕಳಿಗೆ ಪರೀಕ್ಷಾ ಪೇ ಚರ್ಚಾ ದಿವ್ಯ ಸಂಜೀವಿನಿಯಂತೆ ಕೆಲಸ ಮಾಡಿದಂತೂ ಸುಳ್ಳಲ್ಲ. ಅಂದಿನಿಂದ ಇಂದಿನವರೆಗೂ ವಿದ್ಯಾರ್ಥಿಗಳು ಒಂದು ಹೊಸ ಆತ್ಮವಿಶ್ವಾಸದಿಂದ, ಸಂತಸದಿಂದ ಪರೀಕ್ಷೆಯನ್ನು ಹಬ್ಬದಂತೆ ಆಚರಿಸಿ ಸಂಭ್ರಮಿಸುತ್ತಿದ್ದಾರೆ. ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿದ್ದು ಭವಿಷ್ಯದ ಬಗ್ಗೆ ಹೊಸ ಕನಸುಗಳನ್ನು ಹೊತ್ತಿರುವ ಯುವ ಮನಸ್ಸುಗಳ ಮುಖದಲ್ಲಿ ನೆಮ್ಮದಿಯ ನಿಟ್ಟುಸಿರು ಕಾಣಲು ಸಿಗುತ್ತದೆ.

ಈ ವಿನೂತನ ಕಾರ್ಯಕ್ರಮದ 8ನೇ ಸಂಚಿಕೆಯು ಇದೇ ಬರುವ ಫೆಬ್ರವರಿ 10ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲ್ಲಿದ್ದು ಎಲ್ಲಾ ವಿದ್ಯಾರ್ಥಿಗಳು ಪ್ರಧಾನಿಯವರ ಮಾತುಗಳನ್ನು ಆಲಿಸಲು ಅತ್ಯಂತ ಉತ್ಸುಕತೆಯಿಂದ ಕಾಯುತ್ತಿದ್ದಾರೆ. ಪರೀಕ್ಷೆಯನ್ನು ಒಂದು ಹಬ್ಬದಂತೆ ಈ ಸಲವೂ ವಿದ್ಯಾರ್ಥಿಗಳು ಆಚರಿಸಬೇಕಿದೆ!

ಶಮ-ದಮಗಳ ಲಗಾಮು

-ವಿದ್ಯಾಶಂಕರ ಶರ್ಮ

ವಿದ್ಯಾರ್ಜನೆಯು ನಮ್ಮ ವ್ಯಕ್ತಿತ್ವಕ್ಕೆ ಸರಿಯಾದ ರೂಪ ಕೊಡಲು ಅತ್ಯಂತ ಅವಶ್ಯಕ. ಅಕ್ಷರದ ತಿಳುವಳಿಕೆಯಿಂದ ನಾವು ಹೇಗೆ ಮಾತನಾಡಬೇಕು, ಹೇಗೆ ವರ್ತಿಸಬೇಕು, ವ್ಯವಹಾರ ಮಾಡಬೇಕು ಎಂಬುದನ್ನು ಅರಿಯುತ್ತೇವೆ. ಇದು ನಮ್ಮ ಸಾಮಾನ್ಯ ಕಲಿಕಾ ಮಾದರಿಯಲ್ಲಿ ನಾವು ಕಂಡುಕೊಳ್ಳುವ ಸಾಮಾನ್ಯ ಜ್ಞಾನ. ಆದರೆ ಈ ಸಾಮಾನ್ಯ ಜ್ಞಾನಕ್ಕೆ ಒಂದು ಮಿತಿ ಇದ್ದಂತೆ ಭಾಸವಾಗುತ್ತದೆ. ಇದು ಯಾವ ದೃಷ್ಟಿಯಲ್ಲಿ ಎಂದರೆ ನಮಗೆ ಪದವಿಗಳು ಲಭಿಸುತ್ತವೆ, ಆದರೆ ಇವು ನಮಗೆ ಉದ್ಯೋಗದ ಅನ್ವೇಷಣೆಯಲ್ಲಿ ಸಹಕಾರಿಯಾಗಬಹುದು, ಇದಕ್ಕೆ ಹೊರತಾಗಿ ಈ ಪದವಿಗಳಿಂದ ನಮಗೆ ಬೇರೆ ಯಾವ ಪ್ರಯೋಜನಗಳೂ ಕಾಣದು. ಈ ರೀತಿಯ ವಿಚಾರಧಾರೆಗೆ ಬಲವಾದ ಕಾರಣಗಳಿವೆ. ರಾಶಿ ರಾಶಿ ಪದವಿ ಪತ್ರಗಳ ಒಡೆಯರಾದರೂ ತಮ್ಮ ಬದುಕಿನ ಯಜಮಾನಿಕೆಯಲ್ಲಿ ಸಂಪೂರ್ಣ ವಿಫಲರಾದ ವಿಪ್ಲವಗಳನ್ನು ನಾವು ದಿನವೂ ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ. ಅಂದರೆ ನಾವು ಕಲಿತ ವಿದ್ಯೆ ನಮ್ಮನ್ನು ಸಾಕ್ಷರರನ್ನಾಗಿ ಮಾಡುವುದಕ್ಕಷ್ಟೇ ಸೀಮಿತ ಎಂಬ ಅನಿಸಿಕೆಯೂ ಸಹಜ.

ಇಂತಹ ವಿಶ್ಲೇಷಣೆಯ ತಳಹದಿಯ ಮೇಲೆ ನಾವು ಮುಂದುವರೆದು ಅನ್ವೇಷಣೆ ಮಾಡಿದಾಗ, ನಮಗೆ ಗೊತ್ತಿರುವ ಸಾಮಾನ್ಯ ಕಲಿಕೆಗಿಂತ ಬಹು ಭಿನ್ನವಾದ ಜ್ಞಾನದೆಡೆಗೆ ನಮ್ಮ ದೃಷ್ಟಿ ಬೀಳುತ್ತದೆ, ಅದೇ ಆಧ್ಯಾತ್ಮ ವಿದ್ಯೆ. ಆಧ್ಯಾತ್ಮವೆಂದರೆ ಸರ್ವವ್ಯಾಪಿಯಾದ ಆತ್ಮನನ್ನು ತಿಳಿಯುವುದು ಎಂದರ್ಥ. ನಮ್ಮ ಇರುವಿಕೆಯು ಅನಿತ್ಯ, ಕ್ಷಣಿಕ ಎಂಬ ಪರಮ ಸತ್ಯವನ್ನು ನಾವು ಅಧ್ಯಾತ್ಮ ವಿದ್ಯೆಯಿಂದ ಅರಿಯಬಹುದು.

ನಾವು ಹೇಗೆ ಬಾಲವಿಹಾರದ ನಂತರ ಮೊದಲನೇ ತರಗತಿಯಿಂದ ಹೇಗೆ ಹಂತ ಹಂತವಾಗಿ ಪದವಿ ತರಗತಿಗೆ ಹೋಗುತ್ತೇವೆಯೋ, ಅದೇ ಮಾದರಿಯಲ್ಲಿ, ಆಧ್ಯಾತ್ಮ ಸಾಧನೆಯ ದಾರಿಗೆ ತೆರಳಲು ಕೆಲವು ಅರ್ಹತೆಗಳನ್ನು ವೇದಾಂತ ನಿಪುಣರು ಹೇಳಿದ್ದಾರೆ. ಅವುಗಳ ಪಟ್ಟಿಯಲ್ಲಿ ಶಮ ಮತ್ತು ದಮ ಎಂಬ ಗುಣಗಳು ಪ್ರಸ್ತಾವನೆಗೆ ಯೋಗ್ಯವೆನಿಸುತ್ತವೆ. ಈ ಎರಡು ಗುಣಗಳ ವಿಶೇಷತೆಯೆಂದರೆ, ಇವು ಲೌಕಿಕ ಮತ್ತು ಆಧ್ಯಾತ್ಮಿಕ ಸಾಧನೆಗಳಿಗೆ ಇರಲೇ ಬೇಕಾದ ಅಂಶಗಳು.

ಶಮವೆಂದರೆ ಮನಸ್ಸಿನ ನಿಯಂತ್ರಣ. ನಮ್ಮ ಮನಸ್ಸು ಹುಲಿಯು ಬೆನ್ನಟ್ಟಿ ಬಂದಾಗ ದಿಕ್ಕು ತಪ್ಪಿ ಓಡುವ ಹುಲ್ಲೆಯಂತಿರುತ್ತದೆ, ಹಾಗಾಗಿ ಇದಕ್ಕೆ ಕಡಿವಾಣ ಹಾಕುವುದು ನಿಜಕ್ಕೂ ಸವಾಲೇ ಸರಿ. ಮುಗಿಯದ ಬಯಕೆಗಳ ಹಿಂದೆ ಓಡುವ ನಮ್ಮ ಮನಸ್ಸನ್ನು ಕಟ್ಟಿಹಾಕದೇ ಇದ್ದರೆ ಯಾವ ಸಾಧನೆಗಳೂ ನಮಗೆ ಒಲಿಯಲಾರದು. ಯಾವುದೇ ಗುರಿಯಾಗಲಿ ಅದರೆಡೆಗೆ ಅತ್ತಿತ್ತ ಓಲಾಡದ ಮನಸ್ಸನ್ನು ಇಡಬೇಕಾಗುತ್ತದೆ, ಹಾಗಾಗಿ ಶಮ ಎಂಬುದು ಸರ್ವೇಸಾಧಾರಣವಾಗಿ ನಮ್ಮ ಗುಣವಾಗಲೇ ಬೇಕು. ಹಾಗಲ್ಲದಿದ್ದಲ್ಲಿ ಗುರಿಯಿಲ್ಲದ ಬಿಟ್ಟ ಬಾಣವು ಎಲ್ಲಿಯೋ ಹೋಗಿ ಬೀಳುವಂತೆ, ನಮ್ಮ ಬದುಕು ಹಾದಿ ತಪ್ಪಿ ಅದರಿಂದ ನಾವು ಪಡಬಾರದ ಸಂಕಷ್ಟಕ್ಕೆ ಈಡಾಗುತ್ತೇವೆ.

ದಮವೆಂದರೆ ನಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿ ಇಡುವುದಾಗಿದೆ. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ವಿಭಾಗ ಮಾಡಿರುವ ಹಿರಿಯರು, ಕ್ರಮವಾಗಿ ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಇವುಗಳ ನಿಗ್ರಹವನ್ನು ದಮ ಎಂದಿದ್ದಾರೆ. ಈ ಬಾಹ್ಯೇಂದ್ರಿಯಗಳನ್ನು ಚಪಲತೆಯ ಬಲೆಯಿಂದ ರಕ್ಷಿಸುವುದು ಹೇಳಿದಷ್ಟು ಸರಳವಲ್ಲ. ಇದು ಕೂಡ ಎಡಬಿಡದ ಪರಿಶ್ರಮದಿಂದಲೇ ನಮಗೆ ಒಲಿಯಲು ಸಾಧ್ಯ. ಶಮ-ದಮಗಳ ನಿಗ್ರಹ ಲೌಕಿಕ ಮತ್ತು ಪಾರಮಾರ್ಥಿಕ ಎರಡರಲ್ಲೂ ಅತ್ಯಂತ ಪ್ರಸ್ತುತವಾಗಿವೆ. ಇವುಗಳ ಮೇಲಿನ ಹಿಡಿತ ನಮಗೆ ಬದುಕಿನ ಎಲ್ಲ ಪ್ರಬಲ ಪ್ರಹಾರಗಳನ್ನು ಎದುರಿಸುವ ಪ್ರೇರಣಶಕ್ತಿಯಾಗಿ ನಮಗೆ ಬೆನ್ನೆಲುಬಾಗುತ್ತದೆ.

ಸಮಾಚಾರ ಸಣ್ಣದಲ್ಲ

ಜಂಬೋ ದಾಖಲೆಗೆ 26 ವರ್ಷದ ನೆನಪು

ಬೆಂಗಳೂರು: ಸರಿಯಾಗಿ 26 ವರ್ಷಗಳ ಹಿಂದೆ, 1999 ಫೆ.7ರಂದು ಹಿಂದೆ, ಜಂಬೋ ಎಂದೇ ಖ್ಯಾತಿ ಪಡೆದಿರುವ ಭಾರತ ತಂಡದ ಮಾಜಿ ಸ್ಪಿನ್ನರ್ ಹಾಗೂ ಕನ್ನಡಿಗ ಅನಿಲ್ ಕುಂಬ್ಳೆ ಅವರು ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ ಇನಿಂಗ್ಸ್ ಒಂದರ 10 ವಿಕೆಟ್ ಕಿತ್ತು ಮಿಂಚಿದ ದಿನವಿದು. ಈ ಐತಿಹಾಸಿಕ ಕ್ಷಣವನ್ನು ಮತ್ತೊಮ್ಮೆ ಭಾರತೀಯ ಅಭಿಮಾನಿಗಳು ನೆನಪಿಸಿಕೊಂಡಿದ್ದಾರೆ. 1999ರಲ್ಲಿ ದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ನಡೆದಿದ್ದ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅನಿಲ್ ಕುಂಬ್ಳೆ ಎಲ್ಲಾ ಹತ್ತು ವಿಕೆಟ್ ಕಬಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದರು. ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಇಂಗ್ಲೆಂಡ್‌ನ ಮಾಜಿ ಬೌಲರ್ ಜಿಮ್ ಲೇಕರ್ ಬಳಿಕ ಈ ಸಾಧನೆ ಮಾಡಿದ ವಿಶ್ವದ ಎರಡನೇ ಬೌಲರ್ ಎಂದೆನಿಸಿದರು.

600 ವಿಕೆಟ್ ಕ್ಲಬ್‌ಗೆ ರವೀಂದ್ರ ಜಡೇಜಾ

ನಾಗ್ಪುರ: ಟೀಮ್ ಇಂಡಿಯಾದ ಆಲ್ ರೌಂಡರ್ ರವೀಂದ್ರ ಜಡೇಜಾ ಗುರುವಾರ ನಡೆದ ಇಂಗ್ಲೆಂಡ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ 3 ವಿಕೆಟ್ ಪಡೆಯುವ ಮೂಲಕ ಹೊಸ ಮೈಲುಗಲ್ಲು ಸಾಧಿಸಿದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 600 ವಿಕೆಟ್ ಕ್ಲಬ್‌ಗೆ ಸೇರ್ಪಡೆಗೊಂಡರು. ಇದರೊಂದಿಗೆ ಈ ಸಾಧನೆ ಮಾಡಿದ ಭಾರತದ 5ನೇ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. 36 ವರ್ಷದ ಜಡೇಜಾ 88 ಟೆಸ್ಟ್ ಪಂದ್ಯಗಳಲ್ಲಿ 323, 74 ಅಂತಾರಾಷ್ಟ್ರೀಯ ಟಿ20ಯಲ್ಲಿ 54 ಹಾಗೂ 198 ಏಕದಿನದಲ್ಲಿ 223 ವಿಕೆಟ್ ಪಡೆದಿದ್ದಾರೆ. ಕರ್ನಾಟಕದ ಅನಿಲ್ ಕುಂಬ್ಳೆ ಒಟ್ಟು 953 ವಿಕೆಟ್‌ಗಳೊಂದಿಗೆ ಭಾರತೀಯ ಆಟಗಾರರ ಪೈಕಿ ಅಗ್ರಸ್ಥಾನದಲ್ಲಿದ್ದಾರೆ. ಆರ್.ಅಶ್ವಿನ್ 765, ಹರ್ಭಜನ್ ಸಿಂಗ್ 707, ಕಪಿಲ್ ದೇವ್ 687 ವಿಕೆಟ್ ಪಡೆದಿದ್ದು, ಆ ನಂತರದ ಸ್ಥಾನಗಳಲ್ಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಟೀಂ ಇಂಡಿಯಾ-ಇಂಗ್ಲೆಂಡ್ 2ನೇ ಏಕದಿನ | ಸರಣಿ ಗೆಲ್ಲುವ ತವಕದಲ್ಲಿ ಭಾರತ

ಭಾನುವಾರ ಕೊಹ್ಲಿ ಕಣಕ್ಕೆ

ಕಟಕ್: ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯವನ್ನು 4 ವಿಕೆಟ್‌ಗಳಿಂದ ಗೆದ್ದುಕೊಂಡಿರುವ ಟೀಂ ಇಂಡಿಯಾ ಇದೀಗ ಭಾನುವಾರದಂದು ಇಲ್ಲಿ ನಡೆಯಲಿರುವ ಎರಡನೇ ಏಕದಿನ ಪಂದ್ಯವನ್ನು ಗೆದ್ದು ಸರಣಿಯನ್ನು ತನ್ನದಾಗಿಸಿಕೊಳ್ಳಲು ಎದುರು ನೋಡುತ್ತಿದೆ. ಅತ್ತ ಇಂಗ್ಲೆಂಡ್ ಕೂಡ ಆ ಪಂದ್ಯವನ್ನು ಗೆಲ್ಲುವ ಮೂಲಕ ಸರಣಿಯನ್ನು 1-1 ಅಂತರದಿಂದ ಸಮಬಲಗೊಳಿಸಬೇಕೆಂದು ಬಯಸುತ್ತಿದೆ. ಈ ನಡುವೆ ಟೀಂ ಇಂಡಿಯಾಕ್ಕೆ ಕೊಂಚ ಸಮಾಧಾನಕರ ಸುದ್ದಿ ಸಿಕ್ಕಿದ್ದು, ಗಾಯದಿಂದಾಗಿ ಮೊದಲ ಪಂದ್ಯದಿಂದ ಹೊರಗುಳಿದಿದ್ದ ವಿರಾಟ್ ಕೊಹ್ಲಿ, ಎರಡನೇ ಪಂದ್ಯಕ್ಕೆ ಸಂಪೂರ್ಣ ಫಿಟ್ ಆಗಿದ್ದು, ತಂಡದಲ್ಲಿ ಆಡುವುದು ಖಚಿತ ಎಂದು ವರದಿಯಾಗಿದೆ.

ವಾಸ್ತವವಾಗಿ ನಾಗ್ಪುರ ಏಕದಿನ ಪಂದ್ಯಕ್ಕೂ ಮುನ್ನ ಅಭ್ಯಾಸದ ವೇಳೆ ವಿರಾಟ್ ಕೊಹ್ಲಿ ಮೊಣಕಾಲಿಗೆ ಗಂಭೀರ ಗಾಯವಾಗಿದೆ ಎಂಬ ಮಾಹಿತಿ ಹೊರಬಿದ್ದಿತ್ತು. ಆ ಬಳಿಕ ಪಂದ್ಯದಿಂದ ಹೊರಗುಳಿದಿದ್ದ ಕೊಹ್ಲಿ ಅವರ ಕಾಲಿಗೆ ಬ್ಯಾಂಡೇಜ್ ಸುತ್ತಿರುವುದು ಕೂಡ ಫೋಟೋ ಹಾಗೂ ವಿಡಿಯೋ ಮೂಲಕ ವೈರಲ್ ಆಗಿತ್ತು. ಮೊದಲ ಪಂದ್ಯದ ಟಾಸ್ ವೇಳೆ ಈ ಬಗ್ಗೆ ಮಾತನಾಡಿದ್ದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಬಲಗಾಲಿನ ನೋವಿನಿಂದ ಬಳಲುತ್ತಿದ್ದು,

ಅವರಿಗೆ ಮೊದಲ ಏಕದಿನ ಪಂದ್ಯದಿಂದ ವಿಶ್ರಾಂತಿ ನೀಡಲಾಗಿದೆ ಎಂದಿದ್ದರು.

ಕೊಹ್ಲಿಗೆ ಈ ಸರಣಿ ಬಹಳ ಅವಶ್ಯಕ: ಕೊಹ್ಲಿ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ಎರಡನೇ ಏಕದಿನ ಪಂದ್ಯಕ್ಕೆ ಲಭ್ಯರಾಗಲಿದ್ದಾರೆ ಎಂದು ತಿಳಿದುಬಂದಿದೆ. ಚಾಂಪಿಯನ್ಸ್ ಟ್ರೋಫಿ ಇನ್ನು ಕೆಲವೇ ದಿನಗಳಲ್ಲಿ ಆರಂಭವಾಗುವುದರಿಂದ ಕೊಹ್ಲಿ ಎರಡನೇ ಏಕದಿನ ಪಂದ್ಯವನ್ನು ಆಡುವುದು ಮಹತ್ವವಾಗಿದೆ. ಕೊಹ್ಲಿ ಕೂಡ ತಂಡದ ನಾಯಕ ರೋಹಿತ್‌ರಂತೆ ಕಳೆದ ಕೆಲವು ದಿನಗಳಿಂದ ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದಾರೆ. ಹೀಗಾಗಿ ಉಳಿದಿರುವ ಎರಡು ಪಂದ್ಯಗಳಲ್ಲಿ ಕೊಹ್ಲಿ ಆಡುವ ಮೂಲಕ ತಮ್ಮ ಹಳೆಯ ಲಯಕ್ಕೆ ಮರಳಲಿ ಎಂಬುದು ಅಭಿಮಾನಿಗಳ ಆಶಯವಾಗಿದೆ.

ಜೈಸ್ವಾಲ್ ಹೊರಗುಳಿಯುವ ಸಾಧ್ಯತೆ: ಸದ್ಯದ ಮಾಹಿತಿ ಪ್ರಕಾರ ವಿರಾಟ್ ಕೊಹ್ಲಿ ಎರಡನೇ ಏಕದಿನ ಪಂದ್ಯದಲ್ಲಿ ಆಡುವುದು ಖಚಿತವಾದರೆ, ತಂಡದಲ್ಲಿ ಬದಲಾವಣೆಯಾಗುವುದು ಖಚಿತ. ಮೊದಲನೇ ಏಕದಿನ ಪಂದ್ಯದಲ್ಲಿ ಚೊಚ್ಚಲ ಪಂದ್ಯವನ್ನಾಡುವ ಅವಕಾಶ ಪಡೆದಿದ್ದ ಯುವ ಆರಂಭಿಕ ಯಶಸ್ವಿ ಜೈಸ್ವಾಲ್ ತಂಡದಿಂದ ಹೊರಗುಳಿಯಬೇಕಾಗುತ್ತದೆ. ಮೊದಲ ಪಂದ್ಯದಲ್ಲಿ ಜೈಸ್ವಾಲ್‌ಗೆ ಗಮನಾರ್ಹ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಇದರ ಜೊತೆಗೆ ಜೈಸ್ವಾಲ್ ಹೊರತುಪಡಿಸಿ ಟಾಪ್ 4ರಲ್ಲಿ ಆಡುವ ಉಳಿದ ಆಟಗಾರರು ಉತ್ತಮ ಫಾಮ್‌ನಲ್ಲಿದ್ದಾರೆ. ಹೀಗಾಗಿ ಜೈಸ್ವಾಲ್‌ರನ್ನು ತಂಡದಿಂದ ಹೊರಗಿಟ್ಟು ಕೊಹ್ಲಿಗೆ ಅವಕಾಶ ನೀಡಬೇಕಾಗುತ್ತದೆ.

ರೋಹಿತ್ ಬಗ್ಗೆ ಅಶ್ವಿನ್‌ಗೆ ನಿರೀಕ್ಷೆ

ಒಬ್ಬ ಕ್ರಿಕೆಟರ್ ಆಗಿ ರೋಹಿತ್ ಶರ್ಮಾ ಅವರಿಗೆ ಏನಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತೇನೆ. ಇದು ನಿಜಕ್ಕೂ ಸುಲಭವಲ್ಲ, ಈ ಸರಣಿಯ ಮುಂದಿನ ಪಂದ್ಯಗಳಲ್ಲಿ ಅವರು ಶತಕ ಸಿಡಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ ಎಂದು ಸ್ಪಿನ್ ದಿಗ್ಗಜ ಆರ್. ಅಶ್ವಿನ್ ತಮ್ಮ ಯೂ ಟ್ಯೂಬ್ ಚಾನೆಲ್‌ನಲ್ಲಿ ತಿಳಿಸಿದ್ದಾರೆ.

ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆಯಲಿರುವ ಕ್ರಿಕೆಟ್

ಭಾರತ-ಶ್ರೀಲಂಕಾ ದಿಗ್ಗಜರ ಪಂದ್ಯ

ಚಿಕ್ಕಬಳ್ಳಾಪುರ: ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಶನಿವಾರ ಭಾರತ-ಶ್ರೀಲಂಕಾ ದಿಗ್ಗಜ ಆಟಗಾರರ ನಡುವಿನ ಕ್ರಿಕೆಟ್ 'ಒನ್ ವರ್ಲ್ಡ್ ಒನ್ ಫ್ಯಾಮಿಲಿ ಕಪ್-2025' ನಡೆಯಲಿದೆ. ಈ ಕ್ರಿಕೆಟ್ ಪಂದ್ಯವನ್ನು ಭಾರತೀಯ ಕ್ರಿಕೆಟ್ ದಂತಕತೆ ಸುನಿಲ್ ಗವಾಸ್ಕರ್ ಅವರ ನೇತೃತ್ವದಲ್ಲಿ ಸಂಘಟಿಸಲಾಗಿದೆ. ಸದ್ಗುರು ಮಧುಸೂಧನ್ ಸಾಯಿ ಅವರ ಮಾನವೀಯತೆಯ ಅಭಿಯಾನದ ಪ್ರೇರಣೆಗಾಗಿ ಈ ಪಂದ್ಯ ನಡೆಯುತ್ತಿದೆ.

ಈ ಪಂದ್ಯವನ್ನು ಸದ್ಗುರು ಶ್ರೀಮಧುಸೂದನ ಸಾಯಿ ಅವರ ಮಾನವೀಯತೆಯ ಅಭಿಯಾನದ ಏಕತೆಗೆ ಸಮರ್ಪಿಸಲಾಗಿದೆ ಎಂದು ಶ್ರೀಮಧುಸೂದನ್ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕುಲಾಧಿಪತಿ ನರಸಿಂಹಮೂರ್ತಿ ತಿಳಿಸಿದ್ದಾರೆ. ಜಾಗತಿಕ ಮಾನವತಾ ಅಭಿಯಾನದ ರೂವಾರಿಯಾಗಿ ವಿಶ್ವದಾದ್ಯಂತ 80 ರಾಷ್ಟ್ರಗಳಲ್ಲಿ ಶಿಕ್ಷಣ, ಪೌಷ್ಟಿಕತೆ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಅವರ ಸೇವೆ ಶ್ಲಾಘನೀಯ ಎಂದಿದ್ದಾರೆ.

ಭಾರತದ ಕ್ರಿಕೆಟ್ ದಿಗ್ಗಜರಾದ ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ವೆಂಕಟೇಶ್ ಪ್ರಸಾದ್ ಮುಂತಾದ ಖ್ಯಾತನಾಮರು ಹಾಗೂ ಶ್ರೀಲಂಕಾದ ಕ್ರಿಕೆಟ್ ದಿಗ್ಗಜರಾದ ಅರವಿಂದ ಡಿ ಸಿಲ್ವಾ, ಮುತ್ತಯ್ಯ ಮುರಳೀಧರನ್, ಮತ್ತು ಟಿ.ಎಂ.ದಿಲ್ಶಾನ್ ಇಲ್ಲಿನ ಕ್ರಿಕೆಟ್ ಮೈದಾನದಲ್ಲಿ ಆಡಲಿದ್ದಾರೆ.

ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಬಾಲಕರಿಗಾಗಿ ಗವಾಸ್ಕರ್-ವಿಶ್ವನಾಥ್ ಹೆಸರಿನಲ್ಲಿ ಕ್ರಿಕೆಟ್ ಅಕಾಡೆಮಿಯನ್ನು ಸ್ಥಾಪಿಸಲಾಗುವುದು ಎಂದು ಸದ್ಗುರು ಮಧುಸೂದನ ಸಾಯಿ ಅವರು ಈಗಾಗಲೇ ಘೋಷಿಸಿದ್ದಾರೆ. ಹೆಸರಾಂತ ಕ್ರಿಕೆಟ್ ಆಟಗಾರರು ಕ್ಯಾಂಪಸ್‌ನಲ್ಲಿ ಇದ್ದು ತರಬೇತಿ ನೀಡಲಿದ್ದಾರೆ ಅಲ್ಲದೆ, ಬಾಲಕರನ್ನು ಅರ್ಹತೆಗೆ ಅನುಗುಣವಾಗಿ ಆರಿಸಿ ತರಬೇತಿಗೊಳಿಸಲಾಗುವುದು. ಯಾವುದೇ ಶುಲ್ಕ ಪಡೆಯದೆ ಸಂಪೂರ್ಣ ಉಚಿತವಾಗಿ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಅಕಾಡೆಮಿಯ ಹೆಸರಿನಲ್ಲಿ ಆಟಗಾರರನ್ನು ಗೌರವಿಸಲಾಗುವುದು, ಅರ್ಹತೆಯ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುತ್ತದೆ ಎಂದೂ ಹೇಳಿದ್ದಾರೆ.

ಸತ್ಯಸಾಯಿ ಗ್ರಾಮದಲ್ಲಿ ಸತತ ಎರಡನೇ ಬಾರಿಗೆ ಇಂತಹ ಸೌಹಾರ್ದ ಪಂದ್ಯಾಟವನ್ನು ಆಯೋಜಿಸಲಾಗುತ್ತಿದೆ. ವಿಶ್ವವಿಖ್ಯಾತ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದ ಈ ಪ್ರದೇಶವು ಕಳೆದ 12 ವರ್ಷಗಳಲ್ಲಿ ಅನೇಕ ದಾಖಲೆಗಳಿಗೆ ಸಾಕ್ಷಿಯಾಗಿದೆ.

ಬಿಎಂಜಿಆರ್-ಫೈರಿ ಫಾಲ್ಕನ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಬಿ.ಆರ್. ಶ್ರೀಧರ್ ಒಡೆತನದ ಬಿಎಂಆರ್‌ಜಿ-ಫೈರಿ ಫಾಲ್ಕನ್ಸ್ ಇತ್ತೀಚೆಗೆ ಮುಕ್ತಾಯಗೊಂಡ ಸದಾಶಿವನಗರ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ತೀವ್ರ ಪೈಪೋಟಿಯಿಂದ ಕೂಡಿದ್ದ ಫೈನಲ್‌ನಲ್ಲಿ ಥಂಡರ್ ಡ್ರಾಗನ್ಸ್ ತಂಡವನ್ನು 3-1 ಅಂತರದಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. ಎರಡೂ ತಂಡಗಳು ತಮ್ಮೆಲ್ಲ ಕೌಶಲಗಳನ್ನು ಒರೆಗೆ ಹಚ್ಚಿದ್ದ ಪಂದ್ಯವು ಕೊನೆ ಕ್ಷಣದವರೆಗೂ ಪ್ರೇಕ್ಷಕರನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡಿತು. ಚಾಂಪಿಯನ್‌ಶಿಪ್ ಗೆಲ್ಲಲೇಬೇಕೆಂಬ ಕೆಚ್ಚಿನಿಂದ ಹೋರಾಡಿದ ನಾಯಕ ರಿತೇಶ್ ಸುರೇಶ್ ನೇತೃತ್ವದ ತಂಡ ಅಂತಿಮವಾಗಿ ಪ್ರಾಬಲ್ಯ ಮೆರೆಯಿತು. ಅಮೋಘ ಪ್ರತಿ ಹೋರಾಟ ಸಂಘಟಿಸಿ ಫಾಲ್ಕನ್ಸ್‌ಗೆ ಮೊದಲ ಡಬಲ್ಸ್ ಜೋಡಿಯು ಮೂರನೇ ಸೆಟ್‌ನಲ್ಲಿ ಪಂದ್ಯವನ್ನು ಗೆಲುವಿನ ನಗೆ ಬೀರಿತು. ವೆಂಕಟೇಶ್, ಧಾರಿಣಿ, ವಿಜಯ್, ರಿತೇಶ್, ನಿರ್ಮಲಾ, ತನುಷ್, ಶಶಿಕಾಂತ್, ಹರ್‌ಪ್ರೀತ್, ಸತೀಶ್, ಅಶೋಕ್ ಶೆಟ್ಟಿ ಮತ್ತು ರವಿಶಂಕರ್ ಫಾಲ್ಕನ್ಸ್ ತಂಡವನ್ನು ಪ್ರತಿನಿಧಿಸಿದ್ದರು.

ಶ್ರೀಲಂಕಾ-ಆಸ್ಟ್ರೇಲಿಯಾ ಎರಡನೇ ಟೆಸ್ಟ್ | ಆಸ್ಟ್ರೇಲಿಯಾಕ್ಕೆ ಮುನ್ನಡೆ

ವಿಕೆಟ್ ಕೀಪರ್ ಅಲೆಕ್ಸ್ ಕೇರಿ ದಾಖಲೆಯಾಟ

ಗಾಲೆ: ಆಸ್ಟ್ರೇಲಿಯಾ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಅಲೆಕ್ಸ್ ಕೇರಿ ಶ್ರೀಲಂಕಾ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಶತಕವನ್ನು ಸಿಡಿಸಿದ್ದಾರೆ, ಆ ಮೂಲಕ ಏಷ್ಯಾ ನೆಲದಲ್ಲಿ ಟೆಸ್ಟ್ ಶತಕ ಸಿಡಿಸಿದ ಆಸ್ಟ್ರೇಲಿಯಾದ ಎರಡನೇ ವಿಕೆಟ್ ಕೀಪರ್ ಎಂಬ ದಾಖಲೆಯನ್ನು ಅಲೆಕ್ಸ್ ಕೇರಿ ಬರೆದಿದ್ದಾರೆ. ಅದ್ಭುತ ಬ್ಯಾಟ್ ಮಾಡಿದ ಅಲೆಕ್ಸ್ ಕೇರಿ 118 ಎಸೆತಗಳಲ್ಲಿ ಮೂರಂಕೆಯ ವೈಯಕ್ತಿಕ ಮೊತ್ತವನ್ನು ಕಲೆ ಹಾಕಿದ್ದಾರೆ. ಇದರೊಂದಿಗೆ ಮಾಜಿ ವಿಕೆಟ್ ಕೀಪರ್ ಆಡಮ್ ಗಿಲ್‌ಕ್ರಿಸ್ಟ್ ಒಳಗೊಂಡ ಎಲೈಟ್ ಲಿಸ್ಟ್‌ಗೆ ಸೇರ್ಪಡೆಯಾಗಿದ್ದಾರೆ. ಆಡಮ್ ಗಿಲ್‌ಕ್ರಿಸ್ಟ್ ಅವರು ತಮ್ಮ ಟೆಸ್ಟ್ ವೃತ್ತಿ ಜೀವನದಲ್ಲಿ ಒಟ್ಟು 4 ಶತಕಗಳನ್ನು ಸಿಡಿಸಿದ್ದಾರೆ.

2022ರ ಡಿಸೆಂಬರ್‌ನಲ್ಲಿ ಮೊದಲ ಶತಕ ಸಿಡಿಸಿದ್ದ ಬಳಿಕ ಅಲೆಕ್ಸ್ ಕೇರಿ ಅವರು ಎರಡನೇ ಟೆಸ್ಟ್ ಶತಕವನ್ನು ಪೂರ್ಣಗೊಳಿಸಿದ್ದಾರೆ. ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡ 25ನೇ ಓವರ್‌ಗಳಲ್ಲಿ 91 ರನ್‌ಗಳಿಂದ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಸಂದರ್ಭದಲ್ಲಿ ಅಲೆಕ್ಸ್ ಕೇರಿ ಕ್ರೀಸ್‌ಗೆ ತೆರಳಿದ್ದರು.

ಟ್ರಾವಿಸ್ ಹೆಡ್, ಉಸ್ಮಾನ್ ಖವಾಜ ಮತ್ತು ಮಾರ್ನಸ್ ಲಾಬುಶೇನ್ ವಿಕೆಟ್ ಒಪ್ಪಿಸಿದ ಬಳಿಕ ಆಸ್ಟ್ರೇಲಿಯಾ ತಂಡದ ಮೇಲೆ ಒತ್ತಡ ಹೆಚ್ಚಾಗಿತ್ತು. ಈ ವೇಳೆ ಜವಾಬ್ದಾರಿಯುತ ಬ್ಯಾಟ್ ಮಾಡಿದ ಸ್ಟೀವನ್ ಸ್ಮಿತ್ ಹಾಗೂ ಅಲೆಕ್ಸ್ ಕೇರಿ ತಲಾ ಶತಕಗಳನ್ನು ಸಿಡಿಸಿ ಮೂರನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಅಲೆಕ್ಸ್ ಕೇರಿ ಕ್ರೀಸ್‌ಗೆ ಬಂದಾಗ ಶ್ರೀಲಂಕಾ ಸ್ಪಿನ್ನರ್‌ಗಳು ಒತ್ತಡವನ್ನು ಹೇರಿದ್ದರು. ಧನಂಜಯ್ ಡಿ.ಸಿಲ್ವಾ ಮತ್ತು ರಮೇಶ್ ಮೆಂಡಿಸ್‌ಗೆ ಬೌಂಡರಿಗಳನ್ನು ಹೊಡೆಯುವ ಮೂಲಕ ಕೇರಿ ವಿಶ್ವಾಸವನ್ನು ಹೆಚ್ಚಿಸಿಕೊಂಡಿದ್ದರು. ಅಲ್ಲದೆ, ರಮೇಶ್ ಮೆಂಡಿಸ್‌ಗೆ ಸಿಕ್ಸರ್ ಬಾರಿಸುವ ಮೂಲಕ ಆಸ್ಟ್ರೇಲಿಯಾ ಮೇಲಿದ್ದ ಒತ್ತಡವನ್ನು ಅಲೆಕ್ಸ್ ಕೇರಿ ಕಡಿಮೆ ಮಾಡಿದರು. ಸ್ಟೀವನ್ ಸ್ಮಿತ್ ಅವರು 69 ಎಸೆತಗಳಲ್ಲಿ ಅರ್ಧಶತಕವನ್ನು ಪೂರ್ಣಗೊಳಿಸಿದ್ದರು. ಕೇರಿ ಮತ್ತು ಸ್ಮಿತ್ ಮುರಿಯದ ನಾಲ್ಕನೇ ವಿಕೆಟ್‌ಗೆ 150 ರನ್‌ಗಳನ್ನು ಕಲೆ ಹಾಕಿದ್ದರು. ಸ್ಮಿತ್ ತಮ್ಮ ಟೆಸ್ಟ್ ವೃತ್ತಿ ಜೀವನದ 36ನೇ ಶತಕವನ್ನು ಪೂರ್ಣಗೊಳಿಸಿದ್ದರು.

ಆಸ್ಟ್ರೇಲಿಯಾ ತಂಡ ಎರಡನೇ ದಿನದಾಟದ ಅಂತ್ಯಕ್ಕೆ 80 ಓವರ್‌ಗಳಿಗೆ 3 ವಿಕೆಟ್‌ಗಳ ನಷ್ಟಕ್ಕೆ 330 ರನ್‌ಗಳನ್ನು ಕಲೆ ಹಾಕಿದೆ. ಆ ಮೂಲಕ 73 ರನ್‌ಗಳ ಮುನ್ನಡೆಯನ್ನು ಪಡೆದಿದೆ. ಇದಕ್ಕೂ ಮುನ್ನ ಶ್ರೀಲಂಕಾ ತಂಡ ಪ್ರಥಮ ಇನಿಂಗ್ಸ್‌ನಲ್ಲಿ 97.4 ಓವರ್‌ಗಳಿಗೆ 257 ರನ್‌ಗಳನ್ನು ಕಲೆ ಹಾಕಿ ಔಟ್ ಆಗಿತ್ತು. ಕುಸಾಲ್ ಮೆಂಡಿಸ್ ಅಜೇಯ 85 ರನ್‌ಗಳನ್ನು ಗಳಿಸಿದ್ದರೆ, ದಿನೇಶ್ ಚಾಂಡಿಮಾಲ್ 74 ರನಗಳನ್ನು ಗಳಿಸಿದ್ದರು.

ಲಾಂಗ್ ಹಿಡಿದಾಗ ಕಾಡಿದ ನೋವು-ನಲಿವು

ಭೂಗತ ಲೋಕದ ಕುರಿತ ಹಲವು ಸಿನಿಮಾಗಳು ಈಗಾಗಲೇ ತೆರೆಗೆ ಬಂದಿವೆ. ಅದೆಲ್ಲಿಯೂ ಈ ವಾರ ತೆರೆಗೆ ಬಂದ ತಲ್ವಾರ್ ಒಂದಷ್ಟು ಹೊಸತನದ ಕಥೆ ಹೊತ್ತು ಬಂದಿದೆ. ಆತ ಸತ್ಯ, ಎಲ್ಲರೂ ಅವನನ್ನು ತಲ್ವಾರ್ ಅಂತಲೇ ಕರೆಯುತ್ತಾರೆ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಸತ್ಯನಿಗೆ ಆಸರೆಯಾಗುವುದು, ಅಂಡರ್ ವರ್ಲ್ಡ್

ಡಾನ್ ಭಾಯ್. ಭೂಗತ ಲೋಕಕ್ಕೆ ಎಂಟ್ರಿಕೊಟ್ಟ ಸತ್ಯ, ಅನಿವಾರ್ಯವಾಗಿ ತಲ್ವಾರ್ ಹಿಡಿಯಬೇಕಾಗುತ್ತದೆ. ಮುಂದೆ ಅದೇ ಪರಿಪಾಠವಾಗುತ್ತದೆ. ತನ್ನ ಬಾಸ್ ಹೇಳಿದಂತೆ ನಡೆದುಕೊಳ್ಳುತ್ತಾನೆ. ಅಲ್ಲಿಂದ ಅವನು ತಲ್ವಾರ್ ಅಂತಲೇ ಪ್ರಸಿದ್ಧಿ ಪಡೆಯುತ್ತಾನೆ. ಹೆಸರಿಗೆ ತಕ್ಕಂತೆ ಸದಾ ತಲ್ವಾರ್ ಹಿಡಿದೆ ಸುತ್ತಾಡುತ್ತಾನೆ. ಈ ನಡುವೆ ಸತ್ಯನಿಗೆ ನಾಯಕಿಯ ಮೇಲೆ ಮನಸಾಗುತ್ತದೆ. ಅಮ್ಮನ ಪ್ರೀತಿ ಕಳೆದುಕೊಂಡ ಸತ್ಯ, ಬಯಸಿದ ಹುಡಗಿಯಲ್ಲಿ ಪ್ರೀತಿ ಅರಸಿ ಹೋಗುತ್ತಾನೆ. ಇಲ್ಲಿಂದ ಸತ್ಯನಿಗೆ ಒಂದೊಲ್ಲೊಂದು ವಿಘ್ನಗಳು ಕಾಡುತ್ತವೆ. ಅವಘಡಗಳು ಸಂಭವಿಸುತ್ತವೆ. ಅದು ಹೇಗೆ, ಏನು ಎಂಬುದನ್ನು ಚಿತ್ರ ನೋಡಿ ತಿಳಿಯಬೇಕು.

ತಲ್ವಾರ್ ಹಳೆಯ ಕಥೆ ಎನಿಸಿದರೂ, ಅದನ್ನು ಹೊಸತಾಗಿ ನಿರೂಪಿಸುವಲ್ಲಿ ನಿರ್ದೇಶಕ ಮುರುಳಿ ಯಶಸ್ವಿಯಾಗಿದ್ದಾರೆ. ಇದರ ಜತೆಗೆ ಒಂದಷ್ಟು ಭೂಗತ ಲೋಕದ ರೋಚಕ ಸನ್ನಿವೇಶಗಳನ್ನು ಬೆರೆಸಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ. ಇಷ್ಟು ದಿನ ಲವ್ವರ್ ಬಾಯ್ ಆಗಿ ಮಿಂಚಿದ್ದ ಧರ್ಮ ಕೀರ್ತಿ, ಇಲ್ಲಿ ತಲ್ವಾರ್ ಹಿಡಿದು ಅಬ್ಬರಿಸಿದ್ದಾರೆ. ಅದಿತಿ ಹಾಗೇ ಬಂದು ಮರೆಯಾದರೂ ಸಿಕ್ಕ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಶರತ್ ಲೋಹಿತಾಶ್ವ, ಭೂಗತ ಲೋಕದ ಬಾಯ್ ಆಗಿ ಮೆಚ್ಚುಗೆಯಾಗುತ್ತಾರೆ.

ಚಿತ್ರ: ತಲ್ವಾರ್
ನಿರ್ದೇಶನ: ಮುರಳಿ
ನಿರ್ಮಾಣ: ಸುರೇಶ್ ಬೈರಸಂದ್ರ
ತಾರಾಗಣ: ಧರ್ಮ ಕೀರ್ತಿರಾಜ್, ಅದಿತಿ, ಶರತ್ ಲೋಹಿತಾಶ್ವ ಇತರರು.
ರೇಟಿಂಗ್ : ★★★

ಕಾಡಿನ ನಿಗೂಢ ರಹಸ್ಯ

ಕರಾವಳಿಯ ಸೊಗಡಿನ ಕಥೆಗಳು ಎಂದರೆ ಅಲ್ಲಿ ಏನಾದರೂ ವಿಶೇಷತೆ ಇದ್ದೇ ಇರುತ್ತದೆ. ಅದು ಅಧಿಪತ್ರದಲ್ಲಿಯೂ ಇದೆ. ಇಲ್ಲಿ ಕಥೆಗೆ ಹೆಚ್ಚು ಒತ್ತು ನೀಡಲಾಗಿದ್ದು, ಕರಾವಳಿಯ ಸೊಗಡಿನ ಘಮಲು ಪ್ರೇಕ್ಷಕರನ್ನು ಸೆಳೆಯುತ್ತದೆ. ದಟ್ಟ ಕಾನದಲ್ಲಿ ಎಲ್ಲರನ್ನೂ ಕಾಡುವ ಅದೊಂದು ನಿಗೂಢತೆಯನ್ನು ಭೇದಿಸಲು ಪೊಲೀಸ್ ಆಫೀಸರ್ ಬರುತ್ತಾನೆ. ಅಷ್ಟಕ್ಕೂ ಆ ಕಾನನದಲ್ಲಿ ಯಾರೂ ಭೇದಿಸಲಾಗದ ವಿಚಾರ ಏನು ಎಂಬುದೇ ಚಿತ್ರದ ಸಸ್ಪೆನ್ಸ್. ಅದನ್ನು ಸಿನಿಮಾ ನೋಡಿ ತಿಳಿದರೆ ಚೆಂದ. ಇನ್ನು ಚಿತ್ರಕ್ಕೆ ಅಧಿಪತ್ರ ಎಂದು ಶೀರ್ಷಿಕೆ ಇಡಲು ಕಾರಣ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಅಧಿಪತ್ರದಲ್ಲಿ ಕಥೆಗೆ ಹೆಚ್ಚು ಒತ್ತು ನೀಡಲಾಗಿದೆ. ಸಾಮಾನ್ಯವಾಗಿ ಸೂಪರ್ ಕಾಪ್ ಸಿನಿಮಾಗಳು ಎಂದರೆ ಅಲ್ಲೊಂದಷ್ಟು ಬಿಲ್ಡಪ್ ಇದ್ದೇ ಇರುತ್ತದೆ. ಆದರೆ ಇಲ್ಲಿ ನೈಜತೆಗೆ ಹೆಚ್ಚು ಒತ್ತು ನೀಡಲಾಗಿದ್ದು, ಕಥೆಯೇ ಇಲ್ಲಿ ಪ್ರಮುಖವಾಗಿದೆ. ಅದರ ಸುತ್ತ ಎಲ್ಲಾ ಪಾತ್ರಗಳನ್ನು ಹೆಣೆಯಲಾಗಿದೆ. ಸಸ್ಪೆನ್ಸ್, ಥ್ರಿಲ್ಲರ್, ಕೊಂಚ ಆ್ಯಕ್ಷನ್ ಇವೆಲ್ಲವನ್ನೂ ಹದವಾಗಿ ಬೆರಸಿ ಎಲ್ಲರಿಗೂ ಒಪ್ಪುಗೆಯಾಗುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ಚಯನ್ ಶೆಟ್ಟಿ ಗೆದ್ದಿದ್ದಾರೆ. ತಿಳಿ ಹಾಸ್ಯದ ಸನ್ನಿವೇಶಗಳು ಪ್ರೇಕಕ್ಷಕರಿಗೆ ಇಷ್ಟವಾಗುತ್ತವೆ. ಕರಾವಳಿಯ ಸಂಸ್ಕೃತಿ, ಭಾಷೆ, ಸೊಗಡು ಎಲ್ಲವೂ ಚಿತ್ರದಲ್ಲಿ ಬೆರೆತಿದೆ.

ಪೊಲೀಸ್ ಆಫೀಸರ್ ಆಗಿ ರೂಪೇಶ್ ಶೆಟ್ಟಿ

ಗಮನಸೆಳೆಯುತ್ತಾರೆ. ಅವರ ಪಾತ್ರ ಗಂಭೀರವಾಗಿದ್ದರೂ ಬಲು ನೈಜತೆಯಿಂದ ಕೂಡಿದೆ. ಜಾಹ್ನವಿ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಪ್ರಕಾಶ್ ತಮ್ಮಿನಾಡು, ರಘು ಪಾಂಡೇಶ್ವರ್ ಜೋಡಿ ಕಾಮಿಡಿ ಮೋಡಿ ಮಾಡುತ್ತದೆ. ಒಟ್ಟಾರೆ ಅಧಿಪತ್ರ ಮನೆಮಂದಿಯೆಲ್ಲಾ ಕುಳಿತು ನೋಡುವ ಮನರಂಜನೆ ಬೆರೆತ ಸಿನಿಮಾವಾಗಿದೆ.

ಚಿತ್ರ: ಅಧಿಪತ್ರ
ನಿರ್ದೇಶನ: ಚಯನ್ ಶೆಟ್ಟಿ
ನಿರ್ಮಾಣ: ದಿವ್ಯಾ ನಾರಾಯಣ್, ಕುಲದೀಪ್, ರಾಘವ
ತಾರಾಗಣ: ರೂಪೇಶ್ ಶೆಟ್ಟಿ, ಜಾಹ್ನವಿ, ಪ್ರಕಾಶ್ ತುಮಿನಾಡು, ರಘು ಪಾಂಡೇಶ್ವರ್, ದೀಪಕ್ ರೈ ಪಣಾಜೆ ಮುಂತಾದವರು.
ರೇಟಿಂಗ್ : ★★★

ಛಲಗಾರ ಭಗೀರಥ

ಅಂದುಕೊಂಡನ್ನು ಸಾಧಿಸಲು ಛಲಬೇಕು, ಅಚಲ ವಿಶ್ವಾಸವೂ ಬೇಕು. ಅದೆರಡು ಬೆರೆತ ಭಗೀರಥ ತೆರೆಯಲ್ಲಿ ಪ್ರೇಕ್ಷಕರ ಮನಗೆದ್ದಿದ್ದಾನೆ. ಜನಪರ ಕಾಳಜಿ ಹೊತ್ತ ನಾಯಕ ಸೂರಿಗೆ ಸರ್.ಎಂ. ವಿಶ್ವೇಶ್ವರಯ್ಯ ಅವರೇ ಸ್ಫೂರ್ತಿ. ಅವರಂತೆಯೇ ಸಮಾಜಕ್ಕೆ ನೆರವಾಗಲು, ಜನತೆಗೆ ಉಪಯೋಗವಾಗಬೇಕು ಎಂಬ ನಿಟ್ಟಿನಲ್ಲಿ ಅಣೆಕಟ್ಟೆ ಕಟ್ಟಲು ಮುಂದಡಿ ಇಡುತ್ತಾನೆ. ಆದರೆ ಅದಕ್ಕೆ ಹತ್ತು ಹಲವು ಸವಾಲುಗಳು ಎದುರಾಗುತ್ತವೆ. ಸಮಾಜದ ಅಭಿವೃದ್ಧಿಗೆ ನೆರವಾಗಬೇಕಿದ್ದ ರಾಜಕಾರಣಿಗಳೇ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಗಾಲಾಗಿರುತ್ತಾರೆ. ಅವರನ್ನು ನಾಯಕ ಹೇಗೆ ಎದಿರಿಸಿ ಮಟ್ಟ ಹಾಕುತ್ತಾನೆ. ಅಂದುಕೊಂಡಿದ್ದನ್ನು ಹೇಗೆ ಸಾಧಿಸುತ್ತಾನೆ. ನಾಯಕನ ಈ ಕಾರ್ಯಕ್ಕೆ ನಾಯಕಿ ಗಾಯತ್ರಿ ಹೇಗೆ ನೆರವಾಗುತ್ತಾಳೆ ಎಂಬುದನ್ನು ಬಲು ರೋಚಕವಾಗಿ ಕಟ್ಟಿಕೊಡಲಾಗಿದೆ.

ಪ್ರಸ್ತುತ ಕಾಡುತ್ತಿರುವ ಸಮಸ್ಯೆಗಳು, ಅದಕ್ಕೆ ಕಾರಣವಾದ ಭ್ರಷ್ಟ ರಾಜಕಾರಣಿಗಳು ಇದೆಲ್ಲವೂ ಚಿತ್ರದಲ್ಲಿ ಬೆರೆತಿದೆ. ಅದಕ್ಕೆ ಮನರಂಜನೆ ಬೆರೆಸಿ ಎಲ್ಲರಿಗೂ ಇಷ್ಟವಾಗುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ರಾಮ್ ಜನಾರ್ಧನ್ ಯಶಸ್ವಿಯಾಗಿದ್ದಾರೆ. ಸೂರಿಯ ಪಾತ್ರದಲ್ಲಿ ಜಯಪ್ರಕಾಶ್ ನಟಿಸಿದ್ದು, ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಂದನಾ ರಾಘವೇಂದ್ರ ಪತ್ರಕರ್ತೆಯ ಪಾತ್ರದಲ್ಲಿ ಅಭಿನಯಿಸಿದ್ದು, ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ನಿಸರ್ಗಾ ಅಣ್ಣಪ್ಪ ಗ್ಲಾಮರ್‌ನಲ್ಲಿ ಮಿಂಚಿದ್ದಾರೆ. ರವಿಕಾಳೆ, ಬಲರಾಜವಾಡಿ ಖಳನ ಪಾತ್ರದಲ್ಲಿ ಖದರ್ ತೋರಿದ್ದಾರೆ.

ಚಿತ್ರದ ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಚಿತ್ರದ ಹಿನ್ನೆಲೆ ಸಂಗೀತಕ್ಕೆ ಇನ್ನೂ ಒಂದಷ್ಟು ಒತ್ತು ನೀಡಿದ್ದಾರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ. ಒಟ್ಟಾರೆ ಭಗೀರಥ ಎಲ್ಲಾ ಕಾಲಕ್ಕೂ ಹೊಂದುವ ಕಥೆಯಾಗಿದ್ದು ಮನೆಮಂದಿಯೆಲ್ಲಾ ಕುಳಿತು ನೋಡುವ ಚಿತ್ರವಾಗಿ ಮೂಡಿಬಂದಿದೆ.

ಚಿತ್ರ : ಭಗೀರಥ
ನಿರ್ದೇಶನ : ರಾಮ್ ಜನಾರ್ಧನ್
ನಿರ್ಮಾಣ : ಸಾಯಿ ರಮೇಶ್ ಪ್ರೊಡಕ್ಷನ್
ತಾರಾಗಣ : ಜಯಪ್ರಕಾಶ್, ಚಂದನಾ, ನಿಸರ್ಗಾ, ರೂಪಶ್ರೀ, ಸುಧಾಬೆಳವಾಡಿ ಮುಂತಾದವರು.
ರೇಟಿಂಗ್ : ★★★

ಕಲ್ಟ್‌ಗೆ ಕೆವಿಎನ್ ಸಾಥ್

ಬನಾರಸ್ ಮೂಲಕ ಚಂದನವನಕ್ಕೆ ಎಂಟ್ರಿಕೊಟ್ಟ ಝೈದ್ ಖಾನ್, ಈಗ ಕಲ್ಟ್ ಚಿತ್ರದ ಮೂಲಕ ಮಿಂಚಲು ಸಿದ್ಧವಾಗುತ್ತಿದ್ದಾರೆ. ರಚಿತಾ ರಾಮ್ ಹಾಗೂ ಮಲೈಕಾ ವಸುಪಾಲ್ ನಾಯಕಿಯರಾಗಿ ನಟಿಸುತ್ತಿದ್ದು, ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಸದ್ಯ ಈ ಚಿತ್ರದ ಬಿಗ್ ಅಪ್‌ಡೇಟ್ ಹೊರ ಬಿದ್ದಿದ್ದು, ಕುತೂಹಲ ಗರಿಗೆದರುವಂತೆ ಮಾಡಿದೆ. ಲೋಕಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದ್ದು, ಇದೀಗ ಕೆವಿಎನ್ ಸಂಸ್ಥೆ ಕಲ್ಟ್ ಸಿನಿಮಾದ ಭಾಗವಾಗಿದೆ. ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಅರ್ಪಿಸುತ್ತಿದೆ.

ಇದೇ 11 ರಂದು ಝೈದ್‌ಖಾನ್ ಹುಟ್ಟು ಹಬ್ಬ ಅದೇ ದಿನದಂದು ಕಲ್ಟ್ ಚಿತ್ರದ ಟೀಸರ್ ರಿಲೀಸ್ ಮಾಡಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಎಲ್ಲಾ ಅಂದುಕೊಂಡಂತೆ ಆದರೆ ಜೂನ್ ಮೊದಲ ವಾರದಲ್ಲಿ ಕಲ್ಟ್ ಅದ್ದೂರಿಯಾಗಿ ತೆರೆಗೆ ಬರಲಿದೆ. ಅನಿಲ್ ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಕಲ್ಟ್ ಫಸ್ಟ್‌ಲುಕ್ ಪೋಸ್ಟರ್‌ನಿಂದಲೇ ಸಖತ್ ಸದ್ದು ಮಾಡುತ್ತಿದೆ. ಇದು ಆ್ಯಕ್ಷನ್-ರೊಮ್ಯಾಂಟಿಕ್ ಜಾನರ್ ಚಿತ್ರವಾಗಿದ್ದು, ಆರಂಭದಿಂದಲೂ ನಿರೀಕ್ಷೆ ಹೆಚ್ಚಿಸಿದೆ. ಝೈದ್ ಖಾನ್ ಮಾಸ್ ಹಾಗೂ ರಗಡ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಜೆ.ಎಸ್. ವಾಲಿ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.